ಗುರುವಾರ, ಆಗಸ್ಟ್ 10, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 221 | ಪುಟ 14

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
11 ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ 3049 ಹುದ್ದೆಗಳು



ಆಳ-ಅಗಲ: ಕಲುಷಿತ ನೀರಿಗೆ ಕವಾಡಿಗರಹಟ್ಟಿ ತಲ್ಲಣ

4 ವರ್ಷ ಸಸಿ ನೆಟ್ಟು ಪೋಷಿಸಿದರೆ 5 ಅಂಕ 4

ಪಟ್ಟು ಸಡಿಲಿಸದ ಬಿಜೆಪಿ– 'ಇಂಡಿಯಾ' 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
65,995 ▲	19,632 ▲	₹61,120 (ಬೆಂಗಳೂರು) ▼	₹72,600 (ಬೆಂಗಳೂರು) ▼	82,86 ▲

ರಾವಣನಿಗೆ ಮೋದಿ ಹೋಲಿಕೆ: ಪ್ರಧಾನಿ ಮೌನಕ್ಕೆ ಕಾಂಗ್ರೆಸ್ ನಾಯಕ ರಾಹುಲ್ ತರಾಟೆ

ಮಣಿಪುರದಲ್ಲಿ ಭಾರತಾಂಬೆ ಕಗ್ಗೊಲೆ

ಪ್ರಜಾವಾಣಿ ವಾರ್ತೆ

ನವದೆಹಲಿ: 'ನನ್ನ ಒಬ್ಬ ತಾಯಿ (ಸೋನಿಯಾ ಗಾಂಧಿ) ಸದನದಲ್ಲಿ ಕುಳಿತಿದ್ದಾರೆ. ಬಿಜೆಪಿಯ ರಾಜಕೀಯಕ್ಕೆ ಮಣಿಪುರದಲ್ಲಿ ನನ್ನ ಮತ್ತೊಬ್ಬ ತಾಯಿಯಾದ 'ಭಾರತ ಮಾತೆ'ಯ ಕಗ್ಗೊಲೆಯಾಗಿದೆ. ಅಲ್ಲಿ ಭಾರತದ ಧ್ವನಿಯೂ ಅಡಗಿದೆ. ನೀವು ನಿಜವಾದ ದೇಶಭಕ್ತರಲ್ಲ; ದೇಶದ್ರೋಹಿಗಳು...'

–ಮಣಿಪುರ ಹಿಂಸಾಚಾರ ತಡೆಗೆ ನಿರ್ಲಕ್ಷ್ಯ ವಹಿಸಿರುವ ಕೇಂದ್ರ ಸರ್ಕಾರ ಹಾಗೂ ಬಿಜೆಪಿಯನ್ನು ಕಾಂಗ್ರೆಸ್ ನಾಯಕ, ಸಂಸದ ರಾಹುಲ್ ಗಾಂಧಿ ಅವರು, ಕಲಾಪದಲ್ಲಿ ತಮ್ಮ ಹರಿತ ಮಾತುಗಳಿಂದ ತಿವಿದಿದ್ದು ಹೀಗೆ.

ಲೋಕಸಭೆಯಲ್ಲಿ ಬುಧವಾರ ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಅರ್ಧಗಂಟೆ ಕಾಲ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಜೆಪಿ ವಿರುದ್ಧ ಹರಿಹಾಯ್ದರು.

ರಾಹುಲ್ ಹೇಳಿಕೆಗೆ ತೀವ್ರ ವಿರೋಧ ವ್ಯಕ್ತಪಡಿಸಿದ ಕೇಸರಿ ಪಾಳಯ ಸದಸ್ಯರು ಗದ್ದಲ, ಕೋಲಾಹಲ ಎಬ್ಬಿಸಿದರು. ಇದರ ನಡುವೆಯೇ ರಾಹುಲ್ ಅವರು, ಸದನದ ಮುಂದೆ ಕಣಿವೆ ರಾಜ್ಯದ ಮಹಿಳೆಯರು ಅನುಭವಿಸುತ್ತಿರುವ ಯಾತನೆಯನ್ನೂ ಎಳೆಎಳೆಯಾಗಿ ಬಿಡಿಸಿಟ್ಟರು.

ಮಣಿಪುರ ಹೊತ್ತಿ ಉರಿಯುತ್ತಿದ್ದರೂ ಇಂದಿಗೂ ಅಲ್ಲಿಗೆ ಭೇಟಿ ನೀಡಿ ಸಂತ್ರಸ್ತರ ನೋವು ಆಲಿಸದೆ ಮೌನಕ್ಕೆ ಜಾರಿರುವ ಮೋದಿ ಅವರನ್ನು ತೀವ್ರ ತರಾಟೆಗೆ ತೆಗೆದುಕೊಂಡ ಅವರು, 'ಪ್ರಧಾನಿ ಅವರು ಮಣಿಪುರವನ್ನು ಭಾರತದ ಅವಿಭಾಜ್ಯ ಅಂಗವೆಂದು ಪರಿಗಣಿಸಿಲ್ಲ; ಅದಕ್ಕಾಗಿಯೇ ಅಲ್ಲಿಗೆ ತೆರಳಲು ಅವರಿಗೆ ಮನಸ್ಸಿಲ್ಲ' ಎಂದು ಛೇಡಿಸಿದರು.

'ನಾನು ಮಾತಿನಲ್ಲಷ್ಟೇ ಮಣಿಪುರ ಎಂಬ ಪದ ಬಳಸುತ್ತಿದ್ದೇನೆ. ವಾಸ್ತವವಾಗಿ ಅಲ್ಲಿ ಮಣಿಪುರ ಉಳಿದಿಲ್ಲ. ಅದನ್ನು ನೀವು (ಬಿಜೆಪಿ) ಎರಡು ಹೋಳಾಗಿಸಿ ಛಿದ್ರಗೊಳಿಸಿದ್ದೀರಿ. ನಿಮ್ಮ ರಾಜಕೀಯವು ಮಣಿಪುರವನ್ನಷ್ಟೇ ಕೊಂದಿಲ್ಲ. ಅಲ್ಲಿನ ಹಿಂದೂಸ್ತಾನದ ಹತ್ಯೆಗೈದಿದೆ' ಕಿಡಿಕಾರಿದರು.

ನೋವಿನ ಕಥೆ: ಸಂಘರ್ಷ ಪೀಡಿತ ನೆಲಕ್ಕೆ ಭೇಟಿ ನೀಡಿ ಅಲ್ಲಿನ ಪರಿಹಾರ ಶಿಬಿರಗಳಲ್ಲಿ ಆಶ್ರಯ ಪಡೆದಿರುವ ಮಹಿಳೆಯರು ಮತ್ತು ಮಕ್ಕಳ ನೋವಿನ ಕಥೆಗಳನ್ನು ಆಲಿಸಿದ್ದನ್ನು ರಾಹುಲ್ ಅವರು ಮೆಲುಕು ಹಾಕಿದರು.

'ನನ್ನ ಒಬ್ಬನೇ ಪುತ್ರ ಕಣ್ಣ ಮುಂದೆಯೇ ಗುಂಡೇಟಿಗೆ ಬಲಿಯಾದ. ಇಡೀ ರಾತ್ರಿ ಆತನ ಶವದೊಟ್ಟಿಗೆ ಕಳೆದೆ. ಕೊನೆಗೆ, ನನಗೂ ಜೀವಭಯ ಕಾಡಿದ್ದರಿಂದ ತೊಟ್ಟಬಟ್ಟೆ ಹಾಗೂ ಮಗನ ಫೋಟೊದೊಂದಿಗೆ ಮನೆಯಿಂದ ಹೊರಬಿದ್ದೆ' ಎಂದು ಶಿಬಿರದಲ್ಲಿದ್ದ ಸಂತ್ರಸ್ತೆಯೊಬ್ಬರು ಹೇಳಿದ ನೋವಿನ ಕಥೆಯನ್ನು ರಾಹುಲ್ ಸದನದಲ್ಲಿ ಹಂಚಿಕೊಂಡರು.

11ನೇ ಪುಟ ನೋಡಿ

ಲೋಕಸಭೆಯಲ್ಲಿ ಬುಧವಾರ ರಾಹುಲ್ ಗಾಂಧಿ ಮಾತನಾಡಿದರು –ಪಿಟಿಐ ಚಿತ್ರ

> **ಮಣಿಪುರ ಸಂಘರ್ಷದ ಬಗ್ಗೆ ರಾಹುಲ್ ಗಾಂಧಿ ಅವರು ಇಡೀ ದೇಶದ ಜನರ ಧ್ವನಿಯಾಗಿ ಲೋಕಸಭೆಯಲ್ಲಿ ಮಾತನಾಡಿದ್ದಾರೆ. ಸಂವೇದನಾಶೀಲತೆ ಕಳೆದುಕೊಂಡಿರುವ ಬಿಜೆಪಿಯಿಂದ ಅಲ್ಲಿನವರು ತೊಂದರೆಗೆ ಸಿಲುಕಿದ್ದಾರೆ**
> **ಮಲ್ಲಿಕಾರ್ಜುನ ಖರ್ಗೆ,** ಅಧ್ಯಕ್ಷ, ಎಐಸಿಸಿ

ಫ್ಲೈಯಿಂಗ್ ಕಿಸ್: ಸ್ಪೀಕರ್‌ಗೆ ದೂರು

ನವದೆಹಲಿ (ಪಿಟಿಐ): ರಾಹುಲ್ ಗಾಂಧಿ ಅವರು ಸದನದಿಂದ ತೆರಳುತ್ತಿದ್ದ ವೇಳೆ ಬಿಜೆಪಿ ಸಂಸದೆಯರತ್ತ 'ಫ್ಲೈಯಿಂಗ್ ಕಿಸ್' ನೀಡಿದ್ದಾರೆ ಎಂಬ ಆರೋಪ ಸಂಬಂಧ ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರಿಗೆ ದೂರು ಸಲ್ಲಿಸಲಾಗಿದೆ.

20 ಸಂಸದೆಯರು ಈ ಪತ್ರಕ್ಕೆ ಸಹಿ ಹಾಕಿದ್ದು, ಅನುಚಿತ ಹಾಗೂ ಅಸಭ್ಯ ವರ್ತನೆ ತೋರಿರುವ ಅವರ ವಿರುದ್ಧ ಕಠಿಣ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ. ರಾಹುಲ್ ಅವರು ಸಂಸದೆಯರ ಗೌರವಕ್ಕಷ್ಟೇ ಚ್ಯುತಿ ತಂದಿಲ್ಲ. ಭಾರತೀಯರ ಅಭ್ಯುದಯದ ಬಗ್ಗೆ ಚರ್ಚಿಸುವ ಸಂಸತ್‌ಗೂ ಅವಿಧೇಯತೆ ಹಾಗೂ ಅಗೌರವ ತೋರಿದ್ದಾರೆ ಎಂದು ದೂರಿದ್ದಾರೆ.

ಸದನದಲ್ಲಿ ಮಾತನಾಡಿದ ಸಚಿವೆ ಸ್ಮೃತಿ ಇರಾನಿ ಅವರು, ರಾಹುಲ್ ವಿರುದ್ಧ ಕೆಂಡಾಮಂಡಲ ವಾದರು. 'ಸ್ತ್ರೀ ದ್ವೇಷಿಯಾದವರಷ್ಟೇ ಇಂತಹ ವರ್ತನೆ ತೋರಲು ಸಾಧ್ಯ. ಸದನವು ಹಿಂದೆಂದೂ ಇಂತಹ ಪ್ರಸಂಗಕ್ಕೆ ಸಾಕ್ಷಿಯಾಗಿರಲಿಲ್ಲ. ಇಡೀ ದೇಶಕ್ಕೆ ಆ ಕುಟುಂಬ (ಗಾಂಧಿ) ಎಂತಹ ಸಂಸ್ಕೃತಿ ಹೊಂದಿದೆ ಎಂಬ ಅರಿವಿದೆ. ಈಗ ಅದು ಬಹಿರಂಗಗೊಂಡಿದೆ' ಎಂದು ಟೀಕಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವೆ ಶೋಭಾ ಕರಂದ್ಲಾಜೆ, 'ಸ್ಮೃತಿ ಅವರ ಮಾತುಗಳನ್ನು ಆಲಿಸುವಂತೆ ನಾವು ರಾಹುಲ್‌ಗೆ ಕೋರಿದೆವು. ಆಗ ಹತ್ತಿರ ಬಂದ ಅವರು ಫ್ಲೈಯಿಂಗ್ ಕಿಸ್ ನೀಡಿದರು. ಸದನದ ಸಿ.ಸಿ.ಟಿ.ವಿಯಲ್ಲಿ ಈ ದೃಶ್ಯಗಳು ಸೆರೆಯಾಗಿದ್ದು, ಪರಿಶೀಲಿಸಿ ಕ್ರಮಕೈಗೊಳ್ಳಬೇಕಿದೆ' ಎಂದು ಒತ್ತಾಯಿಸಿದರು. 'ಅವರು ಕಣ್ಸನ್ನೆ ಮಾಡಿದ್ದನ್ನೂ ಸಂಸದೆಯರು ಗಮನಿಸಿದ್ದಾರೆ' ಎಂದರು.

ಕೈಮುಗಿವೆ; ಹಿಂಸಾಚಾರ ನಿಲ್ಲಿಸಿ: ಶಾ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಕೈ ಮುಗಿದು ಕೇಳಿಕೊಳ್ಳುವೆ, ಮಣಿಪುರದಲ್ಲಿ ಕಳೆದ ಮೂರು ತಿಂಗಳಿನಿಂದ ನಡೆಯುತ್ತಿರುವ ಹಿಂಸಾಚಾರ ನಿಲ್ಲಿಸಿ' ಎಂದು ಕುಕಿ ಮತ್ತು ಮೈತೇಯಿ ಸಮುದಾಯಗಳಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಲೋಕಸಭೆಯಲ್ಲಿ ಬುಧವಾರ ಮನವಿ ಮಾಡಿದರು.

ರಾಜ್ಯದಲ್ಲಿ ಶಾಂತಿ ಸ್ಥಾಪನೆಗಾಗಿ ಮಾತುಕತೆ ನಡೆಸುವಂತೆ ಈ ಎರಡು ಸಮುದಾಯಗಳನ್ನು ಒತ್ತಾಯಿಸಿದರು.

ಮಣಿಪುರ ವಿದ್ಯಮಾನ ಕುರಿತು ಎರಡು ಗಂಟೆಗಳಷ್ಟು ಮಾತನಾಡಿದ ಶಾ, ರಾಜ್ಯದಲ್ಲಿ ಶಾಂತಿ ಸ್ಥಾಪಿಸುವ ಪ್ರಯತ್ನಗಳಿಗೆ ಸಂಬಂಧಿಸಿ ಮುಖ್ಯಮಂತ್ರಿ ಬಿರೇನ್ ಸಿಂಗ್ ಕೇಂದ್ರದೊಂದಿಗೆ ಸಹಕರಿಸುತ್ತಿದ್ದಾರೆ. ಹೀಗಾಗಿ ಅವರನ್ನು ಬದಲಿಸುವ ಪ್ರಶ್ನೆಯೇ ಇಲ್ಲ ಎಂದು ಸ್ಪಷ್ಟಪಡಿಸಿದರು.

ಮುಖ್ಯಮಂತ್ರಿ ಬಿರೇನ್ ಸಿಂಗ್ ಅವರನ್ನು ಶಾ ಸಮರ್ಥಿಸಿಕೊಂಡರು.

11ನೇ ಪುಟ ನೋಡಿ

ಆನೆಗಳ ಸಂಖ್ಯೆ: ರಾಜ್ಯವೇ ಪ್ರಥಮ

ಈ ಬಾರಿ ಕರ್ನಾಟಕ, ಕೇರಳ, ತಮಿಳುನಾಡು ಮತ್ತು ಆಂಧ್ರಪ್ರದೇಶ ರಾಜ್ಯಗಳು ತಾವಾಗಿಯೇ ಆನೆಗಳ ಗಣತಿ ನಡೆಸಿವೆ. ಆಂಧ್ರಪ್ರದೇಶ ಹೊರತುಪಡಿಸಿ ಮೂರು ರಾಜ್ಯಗಳ ವರದಿಗಳು ಬಂದಿವೆ. ಕರ್ನಾಟಕ ದೇಶದಲ್ಲೇ ಅತ್ಯಧಿಕ ಆನೆಗಳನ್ನು ಹೊಂದಿರುವುದು ಗಣತಿಯಲ್ಲಿ ದೃಢಪಟ್ಟಿದೆ.

ಆನೆಗಳ ಸಂಖ್ಯೆಯಲ್ಲಿ ನಿರಂತರ ಏರಿಕೆ



ಗಣತಿಯಲ್ಲಿ ರಾಜ್ಯವಾರು ವಿವರ



ಈ ವರ್ಷದ ಗಣತಿ

23 ವಿಭಾಗಗಳಲ್ಲಿ ಆನೆಗಳ ಪತ್ತೆ | **0.34** ಆನೆ ವಾಸ್ತವ್ಯದ ಸಾಂದ್ರತೆ | **6,395** ರಾಜ್ಯದಲ್ಲಿರುವ ಒಟ್ಟು ಆನೆಗಳು

ಪ್ರಜಾವಾಣಿ ಗ್ರಾಫಿಕ್ಸ್

ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ವಿರುದ್ಧ ದೂರು

ಸಿಐಡಿ ತನಿಖೆ ಚುರುಕು

ಪ್ರಜಾವಾಣಿ ವಾರ್ತೆ

ಮಂಡ್ಯ/ಮೈಸೂರು: ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಅವರ ವಿರುದ್ಧ ಇಲಾಖೆಯ ಸಹಾಯಕ ನಿರ್ದೇಶಕರು ರಾಜ್ಯಪಾಲರಿಗೆ ನೀಡಿದ್ದಾರೆನ್ನಲಾದ ದೂರಿನ ಸಂಬಂಧ ತನಿಖೆ ನಡೆಸಲು ಸಿಐಡಿ ಅಧಿಕಾರಿಗಳ ತಂಡ ಮಂಡ್ಯದ ಕೃಷಿ ಇಲಾಖೆ ಕಚೇರಿ ಹಾಗೂ ಮೈಸೂರಿನ ಸರಸ್ವತಿಪುರಂ ಅಂಚೆ ಕಚೇರಿಗೆ ಬುಧವಾರ ಭೇಟಿ ನೀಡಿ ವಿಚಾರಣೆ ನಡೆಸಿತು.

ಸಿಐಡಿ ಐಜಿ ಪ್ರವೀಣ್ ಮಧುಕರ್ ಪವಾರ್ ನೇತೃತ್ವದ ತಂಡ, ಮಂಡ್ಯ ಜಿಲ್ಲಾಧಿಕಾರಿ ಕಚೇರಿ ಸಂಕೀರ್ಣದಲ್ಲಿರುವ ಕೃಷಿ ಜಂಟಿ ನಿರ್ದೇಶಕರ ಕಚೇರಿಗೆ ಭೇಟಿ ನೀಡಿತು. ಜಂಟಿ ನಿರ್ದೇಶಕ ವಿ.ಎಸ್.ಅಶೋಕ್ ಅವರೊಂದಿಗೆ ಅಧಿಕಾರಿಗಳು ಮಾಹಿತಿ ಪಡೆದರು.

ನಂತರ, ಪತ್ರ ಬರೆದಿದ್ದಾರೆ ಎನ್ನಲಾದ ಎಲ್ಲಾ ಏಳು ಸಹಾಯಕ ನಿರ್ದೇಶಕ ಜೊತೆ ಅಧಿಕಾರಿಗಳು ಪ್ರತ್ಯೇಕವಾಗಿ ಚರ್ಚಿಸಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್. ಯತೀಶ್ ಜೊತೆಯಲ್ಲಿದ್ದರು. ಒಂದು ಗಂಟೆಗೂ ಹೆಚ್ಚು ಕಾಲ ಅಧಿಕಾರಿಗಳು ವಿಚಾರಣೆ ನಡೆಸಿದರು. ಪತ್ರವು ಮೈಸೂರಿನ ಸರಸ್ವತಿಪುರಂ ಅಂಚೆ ಕಚೇರಿಯಿಂದ ರವಾನೆಯಾಗಿದ್ದರಿಂದ ಅಲ್ಲಿಗೂ, ಅಧಿಕಾರಿಗಳ ತಂಡ ಮಧ್ಯಾಹ್ನ 2.30ಕ್ಕೆ ಭೇಟಿ ನೀಡಿ ವಿಚಾರಣೆ ನಡೆಸಿ, ಮಾಹಿತಿ ಸಂಗ್ರಹಿಸಿತು.

ಉಡುಪಿ ಪ್ರಕರಣ: ಸನ್ನಿವೇಶ ಮರುಸೃಷ್ಟಿ

ಉಡುಪಿ: ಇಲ್ಲಿನ ನೇತ್ರಜ್ಯೋತಿ ಪ್ಯಾರಾ ಮೆಡಿಕಲ್ ಕಾಲೇಜಿನ ಶೌಚಾಲಯದಲ್ಲಿ ನಡೆದಿದೆ ಎನ್ನಲಾದ ವಿಡಿಯೊ ಚಿತ್ರೀಕರಣ ಪ್ರಕರಣದ ತನಿಖೆ ನಡೆಸಲು ಸಿಐಡಿ ಎಸ್‌ಪಿ ರಾಘವೇಂದ್ರ ಹೆಗಡೆ ನೇತೃತ್ವದ ತಂಡ ಬುಧವಾರ ಕಾಲೇಜಿಗೆ ಭೇಟಿ ನೀಡಿ ವಿಚಾರಣೆ ನಡೆಸಿತು. ಸಿಐಡಿ ಅಧಿಕಾರಿಗಳು ಕಾಲೇಜಿನ ಆಡಳಿತ ಮಂಡಳಿಯ ಮುಖ್ಯಸ್ಥರು, ಸಂತ್ರಸ್ತ ವಿದ್ಯಾರ್ಥಿನಿ ಹಾಗೂ ಆಕೆಯ ಸಹಪಾಠಿಗಳ ಹೇಳಿಕೆ ದಾಖಲಿಸಿಕೊಂಡರು. ಆಳೆತ್ತರದ ಗೊಂಬೆಯನ್ನು ಕಾಲೇಜಿನ ಶೌಚಾಲಯದ ಎದುರು ನಿಲ್ಲಿಸಿ ಸನ್ನಿವೇಶವನ್ನು ಮರುಸೃಷ್ಟಿ ಮಾಡಲಾಯಿತು. ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದ ಮಹಿಳಾ ಪಿಎಸ್‌ಐ ಅವರಿಂದ ಮಾಹಿತಿ ಪಡೆಯಲಾಯಿತು. ಈಗಾಗಲೇ ಸಿಐಡಿ ತಂಡ ಹಿಂದಿನ ತನಿಖಾಧಿಕಾರಿಗಳಿಂದ ಪ್ರಕರಣದ ವಿವರ ಹಾಗೂ ದಾಖಲೆಗಳನ್ನು ಪಡೆದುಕೊಂಡಿದೆ ಎಂದು ಮೂಲಗಳು ತಿಳಿಸಿವೆ.

ಒಳಪುಟಗಳು
ಕೇರಳ ಸಿ.ಎಂ ಪುತ್ರಿ ವಿರುದ್ಧ ಆರೋಪ 07
ಸ್ಪಂದನಾಗೆ ಭಾವಪೂರ್ಣ ವಿದಾಯ 04
ವಿಧಾನಸಭೆಯ ವಿವಿಧ ಸ್ಥಾಯಿ ಸಮಿತಿಗಳಿಗೆ ನೇಮಕ 06
ಟೊಮೆಟೊ ಹಾರ ಧರಿಸಿ ರಾಜ್ಯಸಭೆಗೆ ಬಂದ ಎಎಪಿ ಸಂಸದ 11

ಚಿನಕುರಳಿ

ಪ್ರಕಾಶ್ ಶೆಟ್ಟಿ



ಬಿಬಿಎಂಪಿ: ಕಾಮಗಾರಿ ಸ್ಥಗಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಎಲ್ಲ ಕಾಮಗಾರಿಗಳನ್ನೂ ಸ್ಥಗಿತಗೊಳಿಸಲಾಗಿದ್ದು, ಬಾಕಿ ಬಿಲ್ ಪಾವತಿಯಾಗುವವರೆಗೂ ಕೆಲಸ ಮುಂದುವರಿಸದಿರಲು ಗುತ್ತಿಗೆದಾರರು ನಿರ್ಧರಿಸಿದ್ದಾರೆ. ಸಂಘದ ಪ್ರಧಾನ ಪೋಷಕ ಡಿ. ಕೆಂಪಣ್ಣ ನೇತೃತ್ವದಲ್ಲಿ ಬುಧವಾರ ನಡೆದ ಸಂಘದ ಪದಾಧಿಕಾರಿಗಳ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದೆ.

'ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಯವರಿಗೆ ಬಿಲ್ ಪಾವತಿಸಲು ಮನವಿ ಮಾಡಿಕೊಳ್ಳಲಾಗಿದೆ. ಒಂದೆರಡು ದಿನ ಕಾದು ನೋಡಲಾಗುತ್ತದೆ. ನಂತರ ಮುಂದೆ ಯಾವ ಕ್ರಮ ಕೈಗೊಳ್ಳಬೇಕು ಎಂಬ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗುತ್ತದೆ' ಎಂದು ಸಂಘದ ಕಾರ್ಯಾಧ್ಯಕ್ಷ ಜಿ.ಎಂ. ರವೀಂದ್ರ ಸಭೆ ಬಳಿಕ ತಿಳಿಸಿದರು.

'ಪೂರ್ಣಗೊಂಡ ಕಾಮಗಾರಿಗಳಿಗೆ ಬಿಲ್ ಪಾವತಿಸಿಲ್ಲ. ಗುತ್ತಿಗೆದಾರರ ಬಳಿ ಇದೀಗ ಹಣವಿಲ್ಲ. ನಡೆಯುತ್ತಿರುವ ಕಾಮಗಾರಿಗಳನ್ನು ಮುಂದುವರಿಸಲು ಆಗುತ್ತಿಲ್ಲ. ಹೀಗಾಗಿ ಕಾಮಗಾರಿ ಸ್ಥಗಿತಗೊಳಿಸಿದ್ದೇವೆ' ಎಂದು ಹೇಳಿದರು.

'ಕಾಂಗ್ರೆಸ್‌ನ ಕೆಲವು ಶಾಸಕರು 'ಬಿಲ್ ಪಾವತಿ ಮಾಡುವಂತೆ ನಾವು ಹೇಳುತ್ತೇವೆ. ನೀವು ಕಾಮಗಾರಿ ಪ್ರಾರಂಭಿಸಿ' ಎಂದು ಒತ್ತಾಯಿಸುತ್ತಿದ್ದಾರೆ. ಆದರೂ ಹಣ ಪಾವತಿ ಮಾಡುವವರೆಗೂ ಕಾಮಗಾರಿ ಆರಂಭಿಸದಿರಲು ನಿರ್ಧರಿಸಲಾಗಿದೆ' ಎಂದು ಮಾಹಿತಿ ನೀಡಿದರು.

6ನೇ ಪುಟ ನೋಡಿ

ಡಿಸಿಎಂಗೆ ಮನವಿ

'28 ತಿಂಗಳಿಂದ ಬಿಲ್ ಪಾವತಿಯಾಗಿಲ್ಲ. ನಮಗೆ ಕುಟುಂಬ ಇದೆ, ಸಾಲ ಮರುಪಾವತಿ ಮಾಡಬೇಕಿದೆ. ಡಿ.ಕೆ. ಶಿವಕುಮಾರ್ ಸರ್, ದಯವಿಟ್ಟು ನಮ್ಮ ಮನವಿ ಪರಿಗಣಿಸಿ' ಎಂದು ಬಿಬಿಎಂಪಿ ಗುತ್ತಿಗೆದಾರರು ಸಾಮಾಜಿಕ ತಾಣಗಳಲ್ಲಿ ಮನವಿ ಮಾಡಿಕೊಳ್ಳುತ್ತಿದ್ದಾರೆ.

'ವಾಟ್ಸ್‌ಆ್ಯಪ್ ಡಿಪಿ, ಫೇಸ್‌ಬುಕ್, ಟ್ವಿಟರ್ ಸೇರಿದಂತೆ ಸಾಮಾಜಿಕ ತಾಣಗಳಲ್ಲಿ ಮನವಿ ಮಾಡಿಕೊಳ್ಳಲಾಗುತ್ತಿದೆ. ನಮಗೆ ಯಾರ ಮೇಲೂ ವೈಯಕ್ತಿಕ ವಿರೋಧ ಇಲ್ಲ. ನಮಗೆ ಬಿಲ್ ಪಾವತಿ ಮಾಡಲು ಕೋರಿಕೊಳ್ಳಲಾಗುತ್ತಿದೆ' ಎಂದು ಕೆ.ಟಿ. ಮಂಜುನಾಥ್ ಹೇಳಿದರು.

ಬ್ಯಾಂಕ್: ದಂಡ, ಶುಲ್ಕದಿಂದ ₹35,587.68 ಕೋಟಿ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಂಕ್ ಖಾತೆಯಲ್ಲಿ ಕನಿಷ್ಠ ಮೊತ್ತ ಉಳಿಸಿಕೊಳ್ಳದೇ ಇರುವುದಕ್ಕೆ ದಂಡ, ಮಿತಿಗಿಂತ ಹೆಚ್ಚಿನ ಬಾರಿ ಎಟಿಎಂ ಬಳಕೆಗೆ ಶುಲ್ಕ ಹಾಗೂ ಎಸ್‌ಎಂಎಸ್ ಸೇವೆಗೆ ಶುಲ್ಕದ ಮೂಲಕ ವಾಣಿಜ್ಯ ಬ್ಯಾಂಕ್‌ಗಳು 2018ರಿಂದ ಈಚೆಗೆ ಗ್ರಾಹಕರಿಂದ ಒಟ್ಟು ₹35,587.68 ಕೋಟಿ ಸಂಗ್ರಹಿಸಿವೆ.

ಸಂಸದೆ ಅಮೀ ಯಾಗ್ನಿಕ್ ಕೇಳಿದ ಪ್ರಶ್ನೆಗೆ ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಭಾಗವತ್ ಕರಾಡ್ ಅವರು ರಾಜ್ಯಸಭೆಯಲ್ಲಿ ಈ ಮಾಹಿತಿ ನೀಡಿದ್ದಾರೆ. ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ಹಾಗೂ ಖಾಸಗಿ ವಲಯದ ಎಕ್ಸಿಸ್ ಬ್ಯಾಂಕ್, ಎಚ್‌ಡಿಎಫ್‌ಸಿ ಬ್ಯಾಂಕ್, ಇಂಡಸ್‌ಇಂಡ್ ಬ್ಯಾಂಕ್, ಐಸಿಐಸಿಐ ಬ್ಯಾಂಕ್ ಮತ್ತು ಐಡಿಬಿಐ ಬ್ಯಾಂಕ್ ನೀಡಿರುವ ಅಂಕಿ–ಅಂಶಗಳನ್ನು ಆಧರಿಸಿ ಈ ಮಾಹಿತಿ ನೀಡಿರುವುದಾಗಿ ಅವರು ತಿಳಿಸಿದ್ದಾರೆ.

ಆರ್‌ಬಿಐ 2015ರ ಜುಲೈ 1ರಂದು ಹೊರಡಿಸಿರುವ ಪ್ರಕಟಣೆಯಂತೆ, ಉಳಿತಾಯ ಖಾತೆಯಲ್ಲಿ ಕನಿಷ್ಠ ಮೊತ್ತ ಉಳಿಸಿಕೊಳ್ಳದವರಿಗೆ ಬ್ಯಾಂಕ್‌ನ ಆಡಳಿತ ಮಂಡಳಿ ಒಪ್ಪಿರುವ ನೀತಿಯಂತೆ ದಂಡ ವಿಧಿಸಲು ಬ್ಯಾಂಕ್‌ಗಳಿಗೆ ಅವಕಾಶ ಇದೆ. ಆದರೆ, ಹೀಗೆ ವಿಧಿಸುವ ದಂಡವು ನ್ಯಾಯೋಚಿತವಾಗಿ ಇರಬೇಕು ಮತ್ತು ಸೇವೆಗಳನ್ನು ನೀಡುವುದಕ್ಕೆ ತಗಲುವ ಸರಾಸರಿ ವೆಚ್ಚಕ್ಕಿಂತಲೂ ಹೆಚ್ಚಿಗೆ ಇರದಂತೆ ನೋಡಿಕೊಳ್ಳಬೇಕು ಎಂದು ಅವರು ವಿವರಿಸಿದ್ದಾರೆ.

10ನೇ ಪುಟ ನೋಡಿ

ದಂಡ, ಶುಲ್ಕ ಸಂಗ್ರಹ

ಕಾರಣ	ಮೊತ್ತ (ಕೋಟಿಗಳಲ್ಲಿ)
ಖಾತೆಯಲ್ಲಿ ಕನಿಷ್ಠ ಮೊತ್ತ ಇಲ್ಲದ್ದಕ್ಕೆ ದಂಡ	₹21,044.04
ಉಚಿತ ಮಿತಿಗಿಂತ ಹೆಚ್ಚು ಬಾರಿ ಎಟಿಎಂ ಬಳಕೆ	₹8,289.32
ಎಸ್‌ಎಂಎಸ್ ಸೇವೆಗಳಿಗೆ	₹6,254.32

(2018ರಿಂದ ಈಚೆಗೆ ಸಂಗ್ರಹಿಸಿರುವುದು)

ಪಟ್ಟಿಯಲ್ಲಿ ಕೇಂದ್ರ ಸಚಿವ ಆರ್.ಕೆ.ಸಿಂಗ್ ಸೇರಿ ನಾಲ್ವರು ಸಂಸದರು

ಸಂಸದರ ನಿಧಿ: ಜಾಧವ್ ಶೂನ್ಯ ಶಿಫಾರಸು

• ಮಂಜುನಾಥ ಹೆಬ್ಬಾರ್

ನವದೆಹಲಿ: 2019ರ ಲೋಕಸಭಾ ಚುನಾವಣೆಯಲ್ಲಿ ಕಲಬುರಗಿ ಕ್ಷೇತ್ರದಲ್ಲಿ ಕಾಂಗ್ರೆಸ್ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರನ್ನು ಸೋಲಿಸುವ ಮೂಲಕ ದೇಶದ ಗಮನ ಸೆಳೆದಿದ್ದ ಡಾ.ಉಮೇಶ್ ಜಿ.ಜಾಧವ್ ಅವರು ಸಂಸದರ ಸ್ಥಳೀಯ ಕ್ಷೇತ್ರಾಭಿವೃದ್ಧಿ ಯೋಜನೆಯಡಿ (ಎಂಪಿ ಲ್ಯಾಡ್ಸ್) ಕಾಮಗಾರಿಗಳಿಗೆ ಅನುದಾನ ಬಳಸಲು ಕಳೆದ ಮೂರು ವರ್ಷಗಳಲ್ಲಿ ಯಾವುದೇ ಶಿಫಾರಸು ಮಾಡಿಲ್ಲ.

'ದೇಶದಲ್ಲಿ ಕಳೆದ ಮೂರು ವರ್ಷಗಳಲ್ಲಿ ಯಾವ ಸಂಸದರು ಸಂಸದರ ನಿಧಿಗಳನ್ನು ಬಳಸಿಲ್ಲ. ಈ ಬಗ್ಗೆ ವಿವರಗಳನ್ನು ನೀಡಬೇಕು' ಎಂದು ಸಂಸದ ಥಾಮಸ್ ಚಾಯಿಕಡನ್ ಅವರು ಲೋಕಸಭೆಯಲ್ಲಿ ಬುಧವಾರ ಪ್ರಶ್ನೆ ಕೇಳಿದ್ದರು. ಇದಕ್ಕೆ ಕೇಂದ್ರ ಯೋಜನೆ ಹಾಗೂ ಕಾರ್ಯಕ್ರಮ ಅನುಷ್ಠಾನ ಸಚಿವ ರಾವ್ ಇಂದ್ರಜಿತ್ ಸಿಂಗ್ 65 ಪುಟಗಳ ಉತ್ತರ ನೀಡಿದ್ದಾರೆ. ಈ ಉತ್ತರದ ಪ್ರಕಾರ, ಉಮೇಶ್ ಜಾಧವ್, ಕೇಂದ್ರ ಸಚಿವ ಆರ್.ಕೆ.ಸಿಂಗ್, ಲಕ್ಷದ್ವೀಪದ ಎನ್‌ಸಿಪಿ ಸಂಸದ ಫೈಸಲ್ ಪಿ.ಪಿ. ಮೊಹಮ್ಮದ್ ಹಾಗೂ ಜಾರ್ಖಂಡ್‌ನ ಬಿಜೆಪಿ ಸಂಸದ ನಿಶಿಕಾಂತ್ ದುಬೆ ಅವರು ಸಂಸದರ ನಿಧಿಯಡಿ ಕಾಮಗಾರಿ ಗಳನ್ನು ನಡೆಸಲು ಕಳೆದ ಮೂರು ವರ್ಷಗಳಲ್ಲಿ ಯಾವುದೇ ಶಿಫಾರಸುಗಳನ್ನು ಮಾಡಿಲ್ಲ. ಕೇಂದ್ರ ಸಚಿವೆ ಅನ್ನಪೂರ್ಣದೇವಿ ಸೇರಿದಂತೆ ಆರು ಸಂಸದರು ಎರಡು ವರ್ಷಗಳಲ್ಲಿ ಯಾವುದೇ ಅನುದಾನ ಬಳಸಿಲ್ಲ. ಎಂಪಿಲ್ಯಾಡ್ಸ್ ಪೋರ್ಟಲ್‌ನಲ್ಲಿ ಜಿಲ್ಲಾ ಅಧಿಕಾರಿಗಳು ಅಪ್‌ಲೋಡ್ ಮಾಡಿರುವ ಮಾಹಿತಿ ಪ್ರಕಾರ ಈ ವಿವರ ಒದಗಿಸಲಾಗಿದೆ ಎಂದು ಸಚಿವರು ಸ್ಪಷ್ಟಪಡಿಸಿದ್ದಾರೆ.

'ಸಂಸದರಿಗೆ ವಾರ್ಷಿಕ ₹5 ಕೋಟಿಗಳಂತೆ ಐದು ವರ್ಷಗಳಲ್ಲಿ ₹25 ಕೋಟಿ ಅನುದಾನ ನೀಡಲಾಗುತ್ತದೆ. ಸಂಸದರ ಶಿಫಾರಸಿನ ಆಧಾರದಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತದೆ. ಸಾಮಾನ್ಯವಾಗಿ ಪ್ರತಿ ಮೂರು ತಿಂಗಳಿಗೊಮ್ಮೆ ಸಂಸದರು ಪ್ರಗತಿ ಪರಿಶೀಲನೆ ಸಭೆ ನಡೆಸಿ ಕಾಮಗಾರಿಗಳ ಪ್ರಗತಿಯ ವಿವರ ಪಡೆಯುತ್ತಾರೆ. ಒಂದು ವೇಳೆ, ಮೊದಲ ವರ್ಷ ಅನುದಾನ ಬಳಸದಿದ್ದರೆ ಮುಂದಿನ ವರ್ಷ ಅದನ್ನು ಬಳಸಲು ಅವಕಾಶ ಇದೆ. ಕೇಂದ್ರ ಸರ್ಕಾರ ಮೊದಲ ಹಂತದಲ್ಲಿ ₹2.5 ಕೋಟಿ ಅನುದಾನ ಬಿಡುಗಡೆ ಮಾಡುತ್ತದೆ. ಈ ಅನುದಾನದ ಬಳಕೆಯ ಪ್ರಮಾಣಪತ್ರ ನೀಡಿದ ಬಳಿಕ ₹2.5 ಕೋಟಿ ಅನುದಾನ ಬಿಡುಗಡೆಯಾಗುತ್ತದೆ ಎಂದು ರಾಜ್ಯದ ಹಿರಿಯ ಸಂಸದರೊಬ್ಬರು ಮಾಹಿತಿ ನೀಡಿದರು.

ಪೂರ್ಣ ಪ್ರಮಾಣದಲ್ಲಿ ಅನುದಾನ ಬಳಕೆಗೆ ಶಿಫಾರಸು ಮಾಡದವರ ಪಟ್ಟಿಯಲ್ಲಿ ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ಶೋಭಾ ಕರಂದ್ಲಾಜೆ, ಎ.ನಾರಾಯಣಸ್ವಾಮಿ, ಬಿಜೆಪಿಯ ಸಂಸದರಾದ ಪಿ.ಸಿ.ಮೋಹನ್, ಎಸ್.ಮುನಿಸ್ವಾಮಿ, ವೈ.ದೇವೇಂದ್ರಪ್ಪ, ಮತ್ತಿತರರು ಸೇರಿದ್ದಾರೆ. ಇನ್ನೊಂದೆಡೆ, ಸಂಸದರ ನಿಧಿಯಲ್ಲಿ ಶಿವಮೊಗ್ಗ ಕ್ಷೇತ್ರಕ್ಕೆ 3 ವರ್ಷಗಳಲ್ಲಿ ₹17 ಕೋಟಿ ಮಂಜೂರು ಆಗಿದ್ದರೆ, ಸಂಸದ ಬಿ.ವೈ. ರಾಘವೇಂದ್ರ ₹32.14 ಕೋಟಿಯ ಕಾಮಗಾರಿಗಳ ಶಿಫಾರಸು ಮಾಡಿದ್ದಾರೆ.

> ಕಲಬುರಗಿ ಕ್ಷೇತ್ರಕ್ಕೆ ಮೊದಲ ಹಂತದಲ್ಲಿ ₹2.5 ಕೋಟಿ ಅನುದಾನ ಬಿಡುಗಡೆ ಮಾಡಲಾಗಿತ್ತು. ಆದರೆ ಕಾಮಗಾರಿಯ ಲೆಕ್ಕಪರಿಶೋಧನೆ ಆಗಿರಲಿಲ್ಲ. ಹಾಗಾಗಿ, ಶೂನ್ಯ ಶಿಫಾರಸು ಎಂದು ತೋರಿಸುತ್ತಿದೆ. ನಾವು ಶೇ 90ರಷ್ಟು ನಿಯಮ ಪಾಲನೆ ಮಾಡಿದ್ದೇವೆ. ಕ್ಷೇತ್ರದ ಕಾಮಗಾರಿಗಳಿಗೆ ಅನುದಾನ ಬಳಕೆ ಮಾಡಿದ್ದೇವೆ. ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸಗಳು ಆಗಿವೆ.
> **ಡಾ.ಉಮೇಶ್ ಜಿ.ಜಾಧವ್,** ಸಂಸದ

> ಸಂಸದರಿಗೆ ಐದು ವರ್ಷಗಳಲ್ಲಿ ಸಿಗುವ ಅನುದಾನ ₹25 ಕೋಟಿ. ಕ್ಷೇತ್ರದ ಸಮಸ್ಯೆಗಳಿಗೆ ಹೋಲಿಸಿದರೆ ಈ ಅನುದಾನ ಏನೇನೂ ಸಾಲದು. ಸಮಸ್ಯೆಗಳು ಬೆಟ್ಟದಷ್ಟು ಇರುತ್ತವೆ. ಜನರ ಬೇಡಿಕೆಯೂ ದೊಡ್ಡ ಪ್ರಮಾಣದಲ್ಲಿ ಇರುತ್ತದೆ. ಅದನ್ನೇ ಬಳಸಿಲ್ಲ ಎಂದರೆ ಅವರಿಗೆ ಕ್ಷೇತ್ರದ ಬಗ್ಗೆ ಆಸಕ್ತಿ ಹಾಗೂ ಜನರ ಬಗ್ಗೆ ಕಾಳಜಿ ಇಲ್ಲ ಎಂದು ಅರ್ಥ.
> **ಬಿ.ಎನ್.ಚಂದ್ರಪ್ಪ,** ಮಾಜಿ ಸಂಸದ, ಚಿತ್ರದುರ್ಗ

ರಾಜ್ಯದ ಸಂಸದರ ಸಾಧನೆ 06

6 ಸಾವಿರ ಆಕಾಂಕ್ಷಿಗಳಿಗೆ ವಂಚನೆ: ಬಂಧನ

ಪ್ರಜಾವಾಣಿ ವಾರ್ತೆ

ವಿಜಯಪುರ: ಕೇಂದ್ರ ಸರ್ಕಾರದ 'ಒನ್ ನೇಷನ್ ಒನ್ ಕಾರ್ಡ್' ಯೋಜನೆಯಡಿ ಗುತ್ತಿಗೆ ಆಧಾರಿತ ನೌಕರಿಗೆ ನೇಮಿಸಿಕೊಳ್ಳುವುದಾಗಿ ನಂಬಿಸಿ 6 ಸಾವಿರಕ್ಕೂ ಹೆಚ್ಚು ಉದ್ಯೋಗಾಕಾಂಕ್ಷಿಗಳಿಂದ ಹಣ ಪಡೆದು ವಂಚಿಸಿದ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ತುಮಕೂರು ಜಿಲ್ಲೆ ಮಧುಗಿರಿಯ ಎಸ್.ಸುಧೀರ್ ಬಾಬು ಅಲಿಯಾಸ್ ಸುಧೀರ್ ರೆಡ್ಡಿ ಹಾಗೂ ಶಶಾಂಕ್ ಎಸ್.ಎನ್, ಉದ್ಯೋಗಾಕಾಂಕ್ಷಿಗಳಿಂದ ₹ 95 ಲಕ್ಷಕ್ಕೂ ಹೆಚ್ಚು ಹಣ ಸಂಗ್ರಹಿಸಿದ್ದರು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಚ್.ಡಿ.ಆನಂದ ಕುಮಾರ್ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ವಿಜಯಪುರ ಜಿಲ್ಲೆ ತಿಕೋಟಾ ತಾಲ್ಲೂಕಿನ ತೊರವಿ ಗ್ರಾಮದ ಶಶಿಕಲಾ ತಳಸದಾರ ಅವರ 'ಸ್ಫೂರ್ತಿ' ಎಂಬ ಸರ್ಕಾರೇತರ ಸೇವಾ ಸಂಸ್ಥೆಯನ್ನು ಬಳಸಿಕೊಂಡ ಆರೋಪಿಗಳು, ಆಕಾಂಕ್ಷಿಗಳನ್ನು ನಂಬಿಸಿದ್ದಾರೆ'

6ನೇ ಪುಟ ನೋಡಿ

ಪಿಂಚಣಿ ನೀಡುವಂತೆ ಆಗ್ರಹಿಸಿ ನಿವೃತ್ತ ಪೌರಕಾರ್ಮಿಕರು ಬಿಬಿಎಂಪಿ ಕೇಂದ್ರ ಕಚೇರಿ ಮುಂಭಾಗದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಪಿಂಚಣಿಗೆ ಆಗ್ರಹಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೇರಪಾವತಿ ಪೌರಕಾರ್ಮಿಕರಿಗೆ ಆರು ವರ್ಷಗಳಿಂದ ಪಿಂಚಣಿ ನೀಡಿಲ್ಲವೆಂದು ಆರೋಪಿಸಿ ಕರ್ನಾಟಕ ರಾಜ್ಯ ಮಹಾನಗರಪಾಲಿಕೆ, ನಗರಸಭೆ ಮತ್ತು ಪುರಸಭೆಗಳ ಪೌರ ಕಾರ್ಮಿಕರ ಮಹಾಸಂಘದ ಸದಸ್ಯರು ಬುಧವಾರ ಬಿಬಿಎಂಪಿ ಕೇಂದ್ರ ಕಚೇರಿ ಮುಂಭಾಗದಲ್ಲಿ ಪ್ರತಿಭಟನೆ ನಡೆಸಿದರು.

‘2018ರ ಜನವರಿ 1ರಂದು ನೇರವೇತನ ಪೌರಕಾರ್ಮಿಕರಿಗೆ ನಿವೃತ್ತಿ ವೇತನ ನೀಡಬೇಕೆಂಬ ಆದೇಶವಾಗಿದೆ. ಆದರೆ, ಇದು ವರೆಗೂ ಒಂದು ಸಾವಿರಕ್ಕಿಂತ ಹೆಚ್ಚು ಪೌರಕಾರ್ಮಿಕರ ಖಾತೆಗೆ ಹಣ ಜಮೆಯೇ ಆಗಿಲ್ಲ. ಈಗಾಗಲೇ 500ಕ್ಕೂ ಜನ ಮರಣ ಹೊಂದಿದ್ದಾರೆ. ಕುಟುಂಬ ನಿರ್ವಹಣೆ ಮಾಡುವುದೇ ಕಷ್ಟಕರ ವಾಗಿದೆ’ ಎಂದು ನಗರ ಘಟಕದ ಅಧ್ಯಕ್ಷ ಮುನಿರಾಜು ಹೇಳಿದರು.

‘ಬಿಬಿಎಂಪಿ ಮುಖ್ಯ ಆಯುಕ್ತರು ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಗೆ ಆರು ವರ್ಷಗಳಿಂದ ಹಲವಾರು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಮರಣ ಹೊಂದಿರುವ ಪೌರ ಕಾರ್ಮಿಕರ ಕುಟುಂಬಗಳಿಗೆ ₹ 10 ಲಕ್ಷ ಪರಿಹಾರ ನೀಡಲಾಗುತ್ತಿದೆ. ಅದರಂತೆ, ನೇರವೇತನ ಪೌರಕಾರ್ಮಿಕರ ಖಾತೆಗೂ ₹ 10 ಲಕ್ಷ ಮಂಜೂರು ಮಾಡಬೇಕು’ ಎಂದು ಒತ್ತಾಯಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಚಿನ್ನೋಡು, ಎಸ್. ಎನ್. ವೇಣುಗೋಪಾಲ, ಎನ್. ನಾಗರಾಜು ಇದ್ದರು.

ಸಹಕಾರ ಕೃಷಿ ಗುಂಪು ರಚನೆಗೆ ಚಿಂತನೆ: ಸಚಿವ ಮಹದೇವಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಪ್ರದೇಶಗಳಿಗೆ ಜನರ ವಲಸೆ ತಡೆಯುವ ಉದ್ದೇಶದಿಂದ ಹಳ್ಳಿಗಳಲ್ಲಿ ಸ್ತ್ರೀ ಶಕ್ತಿ ಗುಂಪುಗಳ ಮಾದರಿಯಲ್ಲಿ ಸಹಕಾರ ಕೃಷಿ ಗುಂಪುಗಳನ್ನು ರಚಿಸುವ ಚಿಂತನೆ ನಡೆದಿದೆ ಎಂದು ಸಮಾಜ ಕಲ್ಯಾಣ ಸಚಿವ ಎಚ್‌.ಸಿ. ಮಹದೇವಪ್ಪ ತಿಳಿಸಿದರು.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, ‘ಗ್ರಾಮೀಣ ಪ್ರದೇಶದಲ್ಲಿ ಜನರು ಸಂಘಟಿತರಾಗಿ ಸಹಕಾರಿ ಪದ್ಧತಿಯಡಿ ಕೃಷಿ ಚಟುವಟಿಕೆ ಕೈಗೊಳ್ಳಲು ಪ್ರೋತ್ಸಾಹ ನೀಡುವ ಉದ್ದೇಶ ಸರ್ಕಾರಕ್ಕೆ ಇದೆ. ಈ ಪ್ರಕ್ರಿಯೆಯಿಂದ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನ ಉದ್ಯೋಗಗಳು ಸೃಜನೆಯಾಗುತ್ತವೆ’ ಎಂದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರು ರಚಿಸಿಕೊಳ್ಳುವ ಸಹಕಾರ ಕೃಷಿ ಗುಂಪುಗಳಿಗೆ ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆ (ಟಿಎಸ್‌ಪಿ) ಅನುದಾನದಲ್ಲಿ ನೆರವು ನೀಡಲಾಗುವುದು. ಉಳಿದವರಿಗೆ ಸರ್ಕಾರದ ವಿವಿಧ ಯೋಜನೆಗಳ ಅಡಿಯಲ್ಲಿ ನೆರವು ಒದಗಿಸುವ ಯೋಚನೆ ಇದೆ ಎಂದು ಹೇಳಿದರು.

ಸಹಕಾರ ಪದ್ಧತಿಯಡಿ ಕೃಷಿ ಚಟುವಟಿಕೆ ನಡೆಸಲು ಲಭ್ಯ ವಾಗಬಹುದಾದ ಜಮೀನಿನ ಪ್ರಮಾಣ ಹಾಗೂ ಗುಂಪುಗಳ ರಚನೆಗೆ ಇರುವ ಸಾಧ್ಯತೆ ಕುರಿತು ವರದಿ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಮೈಸೂರು ಜಿಲ್ಲೆಯಲ್ಲಿ ಪ್ರಾಯೋಗಿಕವಾಗಿ ಯೋಜನೆಯನ್ನು ಜಾರಿಗೊಳಿಸಲು ಯೋಚಿಸಲಾಗಿದೆ. ಅದಕ್ಕೆ ಪೂರಕವಾಗಿ ಮೈಸೂರು ಜಿಲ್ಲಾಧಿಕಾರಿ ಹಾಗೂ ಇತರ ಇಲಾಖೆಗಳ ಅಧಿಕಾರಿಗಳಿಂದ ವರದಿ ಕೋರಲಾಗಿದೆ ಎಂದರು.

ಸ್ವಂತ ಜಮೀನು ಹೊಂದಿಲ್ಲದ ಆಸಕ್ತರಿಗೆ ಸರ್ಕಾರದಿಂದಲೇ ಜಮೀನು ಒದಗಿಸಿ ಸಹಕಾರ ಪದ್ಧತಿಯಡಿ ಕೃಷಿ ಚಟುವಟಿಕೆಗೆ ಅವಕಾಶ ಒದಗಿಸುವ ಪ್ರಸ್ತಾವವೂ ಇದೆ ಎಂದು ತಿಳಿಸಿದರು.

‘ಡಿಸಿಆರ್‌ಇ ಬಲವರ್ಧನೆಗೆ ಕ್ರಮ’

‘ನಕಲಿ ಜಾತಿ ಪ್ರಮಾಣ ಪತ್ರ ಮತ್ತು ಪರಿಶಿಷ್ಟರ ಮೇಲಿನ ದೌರ್ಜನ್ಯಕ್ಕೆ ಸಂಬಂಧಿಸಿದ ಪ್ರಕರಣಗಳ ವಿಚಾರಣೆ ನಡೆಸುವ ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯವನ್ನು (ಡಿಸಿಆರ್‌ಇ) ಬಲಪಡಿಸಲು ಕ್ರಮ ಕೈಗೊಳ್ಳಲಾಗುವುದು’ ಎಂದು ಎಚ್‌.ಸಿ. ಮಹದೇವಪ್ಪ ಅವರು ಹೇಳಿದರು.

‘ರಾಜ್ಯದಲ್ಲಿ ಡಿಸಿಆರ್‌ಇ ದಾಖಲಿಸುವ ಪ್ರಕರಣಗಳಲ್ಲಿ ಶಿಕ್ಷೆಯ ಪ್ರಮಾಣ ಶೇಕಡ ಎರಡರಷ್ಟು ಮಾತ್ರ ಇದೆ. ಉತ್ತರ ಪ್ರದೇಶ, ಬಿಹಾರದಂತಹ ರಾಜ್ಯಗಳಲ್ಲಿ ಶೇ 60ರಷ್ಟಿದೆ. ಈ ವ್ಯತ್ಯಾಸವನ್ನು ತೊಲಗಿಸಲು ಡಿಸಿಆರ್‌ಇಗೆ ಅಗತ್ಯ ಸಿಬ್ಬಂದಿ ಮತ್ತು ಸೌಕರ್ಯ ಕಲ್ಪಿಸಲಾಗುವುದು’ ಎಂದೂ ಅವರು ತಿಳಿಸಿದರು.

ಸುದ್ದಿ 2 ನಿಮಿಷ

ಪುಣೆಯ ಸೇನಾ ವೈದ್ಯಕೀಯ ಕಾಲೇಜಿಗೆ ರಿತ್ವಿಜಾ ಆಯ್ಕೆ

ಬೆಂಗಳೂರು: ರಾಷ್ಟ್ರೋತ್ಥಾನ ಪರಿಷತ್ತಿನ ಯೋಜನೆಯಾದ ‘ಸಾಧನಾ’ದಲ್ಲಿ ಕಲಿತ ಮಂಡ್ಯದ ರಿತ್ವಿಜಾ ದೇವೇಗೌಡ ಅವರು ಪುಣೆಯ ಸೇನಾ ವೈದ್ಯಕೀಯ ಕಾಲೇಜಿಗೆ (ಎಎಫ್‌ಎಂಸಿ) ಪ್ರವೇಶ ಪಡೆದಿದ್ದಾರೆ.

ಸೇನಾ ವೈದ್ಯಕೀಯ ಕಾಲೇಜಿಗೆ ದೇಶದ ವಿವಿಧ ರಾಜ್ಯಗಳಿಂದ ಪ್ರತಿ ವರ್ಷ 30 ವಿದ್ಯಾರ್ಥಿನಿಯರನ್ನು ಆಯ್ಕೆ ಮಾಡಲಾಗುತ್ತದೆ. ಕರ್ನಾಟಕದಿಂದ ಆಯ್ಕೆಯಾದವರು ಅವರೊಬ್ಬರೇ.

ವೈದ್ಯಕೀಯ ಶಿಕ್ಷಣ ಪಡೆಯಲು ಆಸಕ್ತಿ ಹೊಂದಿರುವ ಗ್ರಾಮೀಣ ಪ್ರದೇಶದ ಆರ್ಥಿಕ ದುರ್ಬಲ ವರ್ಗದ ವಿದ್ಯಾರ್ಥಿನಿಯರಿಗೆ ರಾಷ್ಟ್ರೋತ್ಥಾನ ಪರಿಷತ್ ಎರಡು ವರ್ಷ ಪದವಿಪೂರ್ವ ಶಿಕ್ಷಣ ನೀಡಿ, ನಂತರ ವೈದ್ಯಕೀಯ ಪ್ರವೇಶ ಪರೀಕ್ಷೆಗಳ ತರಬೇತಿ ಕೊಡುತ್ತದೆ. ಈ ಅವಧಿಯಲ್ಲಿ ಊಟ, ವಸತಿ, ಶುಲ್ಕ ಸೇರಿದಂತೆ ಎಲ್ಲ ವೆಚ್ಚವನ್ನೂ ಪರಿಷತ್ ಭರಿಸುತ್ತದೆ. 2017ರಲ್ಲಿ ಆರಂಭವಾದ ಈ ಯೋಜನೆ ಪ್ರಯೋಜನವನ್ನು 200ಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಪಡೆದಿದ್ದಾರೆ. 54 ಮಂದಿ ವೈದ್ಯಕೀಯ ಪ್ರವೇಶ ಪಡೆದಿದ್ದಾರೆ. ಮಂಡ್ಯದ ರೈತ ಕುಟುಂಬದ ರಿತ್ವಿಜಾ ಅವರು ಸಾಧನಾದ 5ನೇ ಬ್ಯಾಚ್‌ನ (2021-23) ವಿದ್ಯಾರ್ಥಿನಿ. ನೀಟ್ ಪರೀಕ್ಷೆಯಲ್ಲಿ ಅವರು 670 ಅಂಕಗಳು ಪಡೆದಿದ್ದರು.

ನವಕರ್ನಾಟಕ ಪ್ರಕಾಶನಕ್ಕೆ ಪುರಸ್ಕಾರ

ಬೆಂಗಳೂರು: ಭಾರತೀಯ ಪ್ರಕಾಶನ ಒಕ್ಕೂಟ ನೀಡುವ ‘ಪ್ರಕಾಶನ ಪುರಸ್ಕಾರ’ಕ್ಕೆ ಇಲ್ಲಿನ ನವಕರ್ನಾಟಕ ಪ್ರಕಾಶನ ಆಯ್ಕೆಯಾಗಿದೆ.

ಒಕ್ಕೂಟವು ತನ್ನ ಸುವರ್ಣ ಮಹೋತ್ಸವದ ಪ್ರಯುಕ್ತ ದೇಶದ ಪ್ರಮುಖ ಭಾಷೆಗಳ ಪ್ರಕಾಶನ ಸಂಸ್ಥೆಗಳಿಗೆ ಪುರಸ್ಕಾರ ನೀಡುತ್ತಿದೆ. ಕನ್ನಡದಲ್ಲಿ ಕಳೆದ 63 ವರ್ಷಗಳಿಂದ ಸುಮಾರು 6,500ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿರುವ ನವಕರ್ನಾಟಕ ಪ್ರಕಾಶನ ಸಂಸ್ಥೆಯನ್ನು ಆಯ್ಕೆ ಮಾಡಲಾಗಿದೆ.

ನವದೆಹಲಿಯಲ್ಲಿ ಇದೇ 11 ಮತ್ತು 12ರಂದು ನಡೆಯಲಿರುವ ಕಾರ್ಯಕ್ರಮ ಲ್ಲಿ ಈ ಪುರಸ್ಕಾರವನ್ನು ಪ್ರದಾನ ಮಾಡಲಾಗುವುದು ಎಂದು ಒಕ್ಕೂಟದ ಅಧ್ಯಕ್ಷ ರಮೇಶ್ ಮಿತ್ತಲ್ ತಿಳಿಸಿದ್ದಾರೆ.

ನೆಡುತೋಪು ಅಭಿಯಾನ

ಅಸ್ಸಾಂನ ತಿನ್ಸುಕಿಯಾ ಜಿಲ್ಲೆಯಲ್ಲಿ ಮಂಗಳವಾರ ನಡೆದ ತಾಳೆ ನೆಡುತೋಪು ಅಭಿಯಾನದಲ್ಲಿ ಪತಂಜಲಿ ಸಮೂಹದ ಮುಖ್ಯಸ್ಥ ಬಾಬಾ ರಾಮದೇವ್, ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ ಹಾಗೂ ಇತರರು ಪಾಲ್ಗೊಂಡಿದ್ದರು. ಅಸ್ಸಾಂ ರಾಜ್ಯದಲ್ಲಿ ತಾಳೆ ಕೃಷಿಗೆ ಉತ್ತೇಜನ ನೀಡುತ್ತಿರುವುದಾಗಿ ಪತಂಜಲಿ ಫುಡ್ಸ್ ಹೇಳಿದೆ

ಸ್ಪರ್ಧಾವಾಣಿ ಪುರವಣಿ ಓದಿರಿ

ಗುಜರಾತ್ ಪೆಟ್ರೋಸಿಂಥಿಸ್ ಲಿಮಿಟೆಡ್

ನೋಂದಾಯಿತ ಕಚೇರಿ: ನಂ.24, 2ನೇ ಮುಖ್ಯರಸ್ತೆ, 1ನೇ ಹಂತ, ದೊಡ್ಡನೆಕ್ಕುಂಡಿ ಕೈಗಾರಿಕಾ ಪ್ರದೇಶ, ಮಹದೇವಪುರ ಅಂಚೆ, ಬೆಂಗಳೂರು - 560 048. CIN : L23209KA1977PLC043357

E-mail : info@gpl.in, secretarial@gujaratpetrosynthese.com Website: www.gpl.in

ಜೂನ್ 30, 2023ರ ತ್ರೈಮಾಸಿಕಕ್ಕೆ ಅಂತ್ಯಗೊಂಡ ಅಪರಿಶೋಧಿತ ಆರ್ಥಿಕ ಫಲಿತಾಂಶಗಳು

(ರೂ. ಸಾವಿರಗಳಲ್ಲಿ)

ಕ್ರ. ಸಂ.	ವಿವರಗಳು	ಜೂನ್ 2023 ತ್ರೈಮಾಸಿಕಕ್ಕೆ ಅಂತ್ಯಗೊಂಡ	ಜೂನ್ 2022 ತ್ರೈಮಾಸಿಕಕ್ಕೆ ಅಂತ್ಯಗೊಂಡ	ಮಾರ್ಚ್ 2023 ವರ್ಷಕ್ಕೆ ಅಂತ್ಯಗೊಂಡ
1	ನಿರ್ವಹಣೆಯಿಂದ ಬಂದ ಒಟ್ಟು ವರಮಾನ	35,284	53,161	2,20,929
2	ನಿವ್ವಳ ಲಾಭ/ (ನಷ್ಟ) ಅವಧಿಗೆ (ತೆರಿಗೆಯ ಮುಂಚೆ, ವಿನಾಯಿತಿ ಪಡೆದ/ಮತ್ತು ವಿಶೇಷ ವಸ್ತುಗಳು)	2,861	4,296	20,927
3	ನಿವ್ವಳ ಲಾಭ/ (ನಷ್ಟ) ತೆರಿಗೆಯ ಅವಧಿಯ ಮುಂಚೆ (ವಿನಾಯಿತಿ ಪಡೆದ ನಂತರ/ಮತ್ತು ವಿಶೇಷ ವಸ್ತುಗಳು)	2,861	4,296	19,685
4	ನಿವ್ವಳ ಲಾಭ / (ನಷ್ಟ) ತೆರಿಗೆಯ ಅವಧಿಯ ನಂತರ (ವಿನಾಯಿತಿ ಪಡೆದ ನಂತರ/ಮತ್ತು ವಿಶೇಷ ವಸ್ತುಗಳು)	2,861	3,950	13,854
5	ಸಂಪೂರ್ಣ ಸಮಗ್ರ ಅವಧಿಯ ಆದಾಯ [ಒಳಗೊಂಡಿರುವ ಲಾಭ/(ನಷ್ಟ) ಅವಧಿಗೆ(ತೆರಿಗೆಯನಂತರ) ಹಾಗೂ ಇತರೆ ಸಮಗ್ರ ಆದಾಯ (ತೆರಿಗೆಯನಂತರ)	2,626	3,950	13,854
6	ಈಕ್ವಿಟಿ ಷೇರುಬಂಡವಾಳ (ಮುಖಬೆಲೆ ರೂ.10 ಪ್ರತಿಷೇರಿಗೆ)	5,969	5,969	5,969
7	ಮೀಸಲು (ಪುನರುಜ್ಜೀವನ ಮೀಸಲು ಹೊರತುಪಡಿಸಿ) ಹಿಂದಿನ ವರ್ಷದ ಲೆಕ್ಕ ಪರಿಶೋಧನೆಯ ಆಯವ್ಯಯ ಪಟ್ಟಿಯಲ್ಲಿ ತೋರಿಸಿರುವಂತೆ			4,08,330
8	ಪ್ರತಿ ಷೇರಿನಗಳಿಕೆ (ಪ್ರತಿ ರೂ.10ಕ್ಕೆ) (ಕಾರ್ಯಾಚರಣೆಗಳನ್ನು ಮುಂದುವರಿಸುವುದಕ್ಕಾಗಿ ಹಾಗೂ ಸ್ಥಗಿತಗೊಳಸುವುದಕ್ಕಾಗಿ) 1. ಮೂಲಭೂತ: 2. ಡೈಲ್ಯೂಟೆಡ್:	0.44	0.66	2.32

ಸೂಚನೆಗಳು:
A) ಈ ಮೇಲಿನವು 30ನೇ ಜೂನ್ 2023ರ ತ್ರೈಮಾಸಿಕಕ್ಕೆ ಕೊನೆಗೊಂಡ ಆರ್ಥಿಕ ಫಲಿತಾಂಶಗಳ ಸಂಕ್ಷಿಪ್ತ ರೂಪವಾಗಿರುತದೆ ಹಾಗೂ ಆಗಸ್ಟ್ 9, 2023 ರಂದು ಲೆಕ್ಕ ಪರಿಶೋಧನಾ ಸಮಿತಿಯಿಂದ ಈ ಮೇಲ್ಕಂಡ ಫಲಿತಾಂಶಗೇಳು ಪುನಾರಾವಲೋಕನಗೊಂಡಿದ್ದು, ಕಂಪನಿಯ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಪರಿಗಣಿಸಿ, ದಾಖಲಿಸಿ, 2015ರ ಸೆಬಿಯ ನಿಯಂತ್ರಣಗಳ(ಲಿಸ್ಟಿಂಗ್ ಮತ್ತು ಇತರೆ ಘೋಷಣೆಗಳ ಅವಶ್ಯಕತೆಗಳು) 33ನೇಯ ನಿಯಂತ್ರಣದಡಿ ಸ್ಟಾಕ್‌ಎಕ್ಸ್ಚೇಂಜ್‌ನಲ್ಲಿ ಸಲ್ಲಿಸಲಾಗಿದೆ. ಈ ಆರ್ಥಿಕ ಫಲಿತಾಂಶಗಳ ಪೂರ್ಣ ನಮೂನೆಯು ಬಿಎಸ್‌ಇ ಲಿಮಿಟೆಡ್‌ನ ವೆಬ್‌ಸೈಟ್ www.bseindia.com ಮತ್ತು ಕಂಪನಿಯ ವೆಬ್‌ಸೈಟ್ www.gpl.in ನಲ್ಲೂ ಲಭ್ಯವಿದೆ. B) ಕಂಪನಿಯು ಒಂದು ಸೆಗ್ಮೆಂಟ್‌ನಲ್ಲಿ ಮಾತ್ರ ಕಾರ್ಯ ನಿರ್ವಹಿಸುತ್ತದೆ. C) ಸಂಪೂರ್ಣ ಸ್ವಾಮ್ಯದ ಅಂಗಸಂಸ್ಥೆಯಾದ ಗುಜರಾತ್ ಪಾಲಿಬ್ಯುಟೆನ್ ಪ್ರೈವೇಟ್ ಲಿಮಿಟೆಡ್ (‘GPPL’) ಜೊತೆಗೆ ಗುಜರಾತ್ ಪೆಟ್ರೋಸಿಂಥೀಸ್ ಲಿಮಿಟೆಡ್ (ಕಂಪನಿ) 1ನೇ ಜುಲೈ, 2020 ರಂತೆ ನಿಗದಿತ ದಿನಾಂಕದೊಂದಿಗೆ ವಿಲೀನದ ಯೋಜನೆಯನ್ನು NCLTಯು ಸೆಪ್ಟೆಂಬರ್ 29 2022 ರಂದು ಅಂತಿಮ ಆದೇಶವನ್ನು ರವಾನಿಸುವ ಮೂಲಕ ಅನುಮೋದಿಸಿದೆ. (‘ಅಂತಿಮ ಆದೇಶ’). ಇದರ ಪರಿಣಾಮವಾಗಿ, ಕಂಪನಿಯು ಈ ಲೆಕ್ಕಪರಿಶೋಧಕ ಹಣಕಾಸು ಫಲಿತಾಂಶಗಳಲ್ಲಿ GPPL ನ ಹಣಕಾಸುಗಳನ್ನು ವಿಲೀನಗೊಳಿಸಿದೆ. ನಿಗದಿತ ದಿನಾಂಕವು ಜುಲೈ 1, 2020 ಆಗಿದ್ದು, 30ನೇ ಜೂನ್ 2022 ಕೊನೆಗೊಂಡ ತ್ರೈಮಾಸಿಕದ ಹಿಂದಿನ ಅವಧಿಯ ಹೋಲಿಕೆಗಳು ಈ ಲೆಕ್ಕಪರಿಶೋಧನೆಯ ಅಪರಿಶೋಧಿತ ಹಣಕಾಸು ಫಲಿತಾಂಶಗಳಲ್ಲಿ ಹೋಲಿಕೆಯ ಉದ್ದೇಶಕ್ಕಾಗಿ ಮರುಪ್ರದರ್ಶಿಸಲಾಗಿದೆ. D) ಅಗತ್ಯವಿದ್ದಲ್ಲಿ ಹೋಲಿಕೆ ಮಾಡಲು, ಹಿಂದಿನ ತ್ರೈಮಾಸಿಕ / ಅವಧಿಯ ಅಂಕಿ ಅಂಶಗಳನ್ನು ಮರು ಸಂಗ್ರಹಿಸಲಾಗಿದೆ/ ಮರು ಜೋಡಿಸಲಾಗಿದೆ.

ಗುಜರಾತ್ ಪೆಟ್ರೋಸಿಥಿಂಸ್ ಲಿಮಿಟೆಡ್‌ನ ಪರವಾಗಿ

ಸ್ಥಳ : ಬೆಂಗಳೂರು
ದಿನಾಂಕ : 09/08/2023

ಸಹಿ/– ಊರ್ಮಿ. ಎನ್. ಪ್ರಸಾದ್
ಜಂಟಿ ವ್ಯವಸ್ಥಾಪಕ ನಿರ್ದೇಶಕರು ಡಿ.ಐ.ಎನ್: 00319482

ರೈಲ್ವೆ ವಿದ್ಯುದೀಕರಣ, ಬೆಂಗಳೂರು

ಇ–ಟೆಂಡರ್ ನೋಟಿಸ್ ನಂ.: ಟಿಡಬ್ಲ್ಯುಎಸ್–ಟಿಹೆಚ್‌ಎನ್_02_2023–24 ದಿನಾಂಕ: 04.08.2023

ಟೆಂಡರ್ ಆಹ್ವಾನ ಪ್ರಕಟಣೆ

ಭಾರತದ ರಾಷ್ಟ್ರಪತಿಗಳ ಪರವಾಗಿ, ಡೆ. ಚೀಫ್ ಸಿಗ್ನಲ್ & ಟೆಲೆಕಾಂ ಇಂಜಿನಿಯರ್, ರೈಲ್ವೆ ವಿದ್ಯುದೀಕರಣ, 2ನೇ ಮಹಡಿ, ಕೆಎಸ್‌ಆರ್ ಬೆಂಗಳೂರು ಸಿಟಿ ರೈಲ್ವೆ ನಿಲ್ದಾಣ, ಬೆಂಗಳೂರು – 560023 ಇವರು, ಈ ಕೆಳಗೆ ಉಲ್ಲೇಖಿಸಲಾಗಿರುವ ಕಾಮಗಾರಿಗಾಗಿ ಅಗತ್ಯ ಮಾನದಂಡಗಳನ್ನು ಪೂರೈಸಬಲ್ಲ ಟೆಂಡರ್‌ದಾರರಿಂದ https://ireps.gov.in ವೆಬ್‌ಸೈಟ್‌ನಲ್ಲಿ (ಕೋರ್–ಎಸ್‌ಬಿಎಸ್–ಎಸ್ & ಟಿ) ಇ-ಬಿಡ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿ ಹೆಸರು: ದಕ್ಷಿಣ ಮಧ್ಯ ರೈಲ್ವೆಯ ತೋಳಹುಣಸೆ ನಿಲ್ದಾಣದಲ್ಲಿ ಟವರ್ ವ್ಯಾಗನ್ ಸೈಡಿಂಗ್ ಪೂರೈಕೆಗೆ ಸಂಬಂಧಿಸಿದಂತೆ ಗುಂಡಿ ತೋಡುವುದು ಮತ್ತು ನೆಲದಡಿ ಸಿಗ್ನಲ್ಲಿಂಗ್ ಕೇಬಲ್‌ಗಳನ್ನು/ಪವರ್ ಕೇಬಲ್‌ಗಳನ್ನು ಅಳವಡಿಸುವುದು, ಫೌಂಡೇಶನ್‌ಗಳ ಕ್ಯಾಸ್ಟಿಂಗ್, ನಿರ್ದಿಷ್ಟ ಉಪಕರಣ/ಪದಾರ್ಥಗಳ ಪೂರೈಕೆ, ಅಪಾರೆಟಸ್ ಕೇಸ್‌ಗಳ ಇರೆಕ್ಷನ್ ಮತ್ತು ಇಕ್ವಿಪ್‌ಮೆಂಟ್‌ಗಳ ಫಿಕ್ಸಿಂಗ್, ವೈರಿಂಗ್, ಟೆಸ್ಟಿಂಗ್ ಹಾಗೂ ಕಮಿಷನಿಂಗ್ ಜೊತೆಗೆ ಪ್ರಸ್ತುತ ಅಸ್ತಿತ್ವದಲ್ಲಿರುವ ಇಐ'ನ (ಮೇಕ್: ಕಯೋಸ್ಯಾನ್) ಬದಲಾವಣೆ ಸೇರಿದಂತೆ, ಮೈಸೂರು ಡಿವಿಜನ್‌ನ ಚಿಕ್ಕಜಾಜೂರು ಜಂಕ್ಷನ್ (ಎಕ್ಸ್‌ಕ್ಲೂ)–ಕರಜಗಿ (ಎಕ್ಸ್‌ಕ್ಲೂ) ಸೆಕ್ಷನ್‌ನಲ್ಲಿ (ಗ್ರೂಪ್: 259) 25 ಕೆವಿ ಎಸಿ ಆರ್‌ಇ ಫಿಟ್ನೆಸ್‌ಗೆ ಸಂಬಂಧಿತ ಇನ್ನಿತರ ಮಿಸಲೇನಿಯಸ್ ಸಿಗ್ನಲ್ಲಿಂಗ್ ಕಾಮಗಾರಿಗಳನ್ನು ಕೈಗೊಳ್ಳುವುದು.

ಅಂದಾಜು ವೆಚ್ಚ: ರೂ. 50,57, 699.21/– | **ಇ.ಎಂ.ಡಿ:** ರೂ. 1,01,200/–

ಟೆಂಡರ್ ಪತ್ರಗಳ ಶುಲ್ಕ: ಶೂನ್ಯ

ಕಾಮಗಾರಿ ಪೂರ್ಣಗೊಳಿಸುವ ಅವಧಿ: 06 (ಆರು) ತಿಂಗಳು

ಟೆಂಡರ್ ಕ್ಲೋಸಿಂಗ್ ದಿನಾಂಕ ಮತ್ತು ಸಮಯ:– 28/08/2023 ರಂದು 15.00 ಗಂಟೆ.

ಖುದ್ದಾಗಿಯಾಗಲಿ ಅಥವಾ ಅಂಚೆ ಮೂಲಕವಾಗಲಿ ಸಲ್ಲಿಸಲಾಗುವ ಮ್ಯಾನುಯಲ್ ಆಫರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ, ಸದರಿ ಇ-ಟೆಂಡರ್‌ಗೆ ಪ್ರತಿಯಾಗಿ ನಿಗದಿತ ಸಮಯದೊಳಗೆ ಸಂಸ್ಥೆಯ ಲೆಟರ್ ಹೆಡ್‌ನಲ್ಲಿ ಸಲ್ಲಿಸಿದಾಗ್ಯೂ ಕೂಡ ಪರಿಗಣಿಸಲಾಗುವುದಿಲ್ಲ. ಇಂತಹ ಎಲ್ಲಾ ಆಫರ್‌ಗಳನ್ನು ಅಸಿಂಧು ಎಂದು ಪರಿಗಣಿಸಲಾಗುತ್ತದೆ ಮತ್ತು ಮುಲಾಜಿಲ್ಲದೆ ತಿರಸ್ಕರಿಸಲಾಗುತ್ತದೆ. ಮೇಲ್ಕಂಡ ಇ-ಟೆಂಡರ್‌ಗಳಿಗೆ ಸಂಬಂಧಿತ ಇ-ಟೆಂಡರ್ ದಸ್ತಾವೇಜುಗಳ ಸಮೇತವಿರುವ ಸಂಪೂರ್ಣ ಮಾಹಿತಿಯು http://ireps.gov.in ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ.
ಸದರಿ ಇ-ಟೆಂಡರ್‌ಗೆ ಆಫರ್ ಸಲ್ಲಿಸುವ ಬಿಡ್‌ದಾರರು ಕಡ್ಡಾಯವಾಗಿ ಕ್ಲಾಸ್–3 ಡಿಜಿಟಲ್ ಸಿಗ್ನೇಚರ್ ಸರ್ಟಿಫಿಕೇಟ್ ಹೊಂದಿರಬೇಕು ಮತ್ತು ಐಆರ್‌ಇಪಿಎಸ್ ಪೋರ್ಟಲ್‌ನಲ್ಲಿ ನೋಂದಣಿ ಮಾಡಿಕೊಂಡಿರಬೇಕು. ಸಂಬಂಧಿತ ಎಲ್ಲಾ ದಾಖಲಾತಿಗಳನ್ನು ಐಆರ್‌ಇಪಿಎಸ್ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡುವುದು ಕಡ್ಡಾಯ ಹಾಗೂ ಮೇಲ್ಕಂಡ ಇ–ಟೆಂಡರ್‌ನ ಇ–ಬಿಡ್ಡಿಂಗ್‌ಗಾಗಿ ದಸ್ತಾವೇಜುಗಳಲ್ಲಿ ನೀಡಲಾಗಿರುವ ಸೂಚನೆಗಳನ್ನು ಅನುಸರಿಸತಕ್ಕದ್ದು.
ಸಂಭಾವ್ಯ ಬಿಡ್‌ದಾರರು, ಟೆಂಡರ್ ಕ್ಲೋಸಿಂಗ್ ದಿನಾಂಕಕ್ಕೆ ಏಳು ದಿನಗಳ ಮುಂಚಿತವಾಗಿ ಐಆರ್‌ಇಪಿಎಸ್ ವೆಬ್‌ಸೈಟ್‌ಗೆ ಪುನಃ ಭೇಟಿ ನೀಡಿ, ಸದರಿ ಟೆಂಡರ್‌ಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿ/ಮಾರ್ಪಾಡು ಹೊರಡಿಸಲಾಗಿದೆಯೆ ಎಂಬುದನ್ನು ತಿಳಿದುಕೊಳ್ಳಬೇಕೆಂದು ಸೂಚಿಸಲಾಗಿದೆ.

ಡೆ. ಚೀಫ್ ಸಿಗ್ನಲ್ ಅಂಡ್ ಟೆಲೆಕಾಂ ಇಂಜಿನಿಯರ್,
ರೈಲ್ವೆ ವಿದ್ಯುದೀಕರಣ, ಬೆಂಗಳೂರು
ಭಾರತದ ರಾಷ್ಟ್ರಪತಿಗಳ ಪರವಾಗಿ

ಪೀಆರ-135/2023

ಪೊಮ ‘‘ग्राहकों की सेवा में मुस्कान के साथ’’

ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ಬಾಣಸವಾಡಿ ವಿದ್ಯುತ್ ನಿರ್ವಹಣಾ ಕೇಂದ್ರದಲ್ಲಿ ನಿರ್ವಹಣೆ ಕಾಮಗಾರಿ ಕೈಗೊಂಡಿರುವುದರಿಂದ ಆ.10ರಂದು ಬೆಳಿಗ್ಗೆ 10.15ರಿಂದ ಮಧ್ಯಾಹ್ನ 3.15 ಗಂಟೆವರೆಗೆ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ಹೊರಮಾವು ಪಿ ಆ್ಯಂಡ್ ಟಿ ಲೇಔಟ್, ನಿಸರ್ಗ ಕಾಲೊನಿ, ನಂದನ ಕಾಲೊನಿ, ಆಶೀರ್ವಾದ ಕಾಲೊನಿ, ಜ್ಯೋತಿನಗರ, ಆಗರ, ಬಾಲಾಜಿ ಲೇಔಟ್, ಚಿನ್ನಸ್ವಾಮಪ್ಪ ಲೇಔಟ್, ಕೊಕೊನಟ್ ಗ್ರೋವ್, ದೇವಮತ ಶಾಲೆ, ಅಮರ್ ರೀಜೆನ್ಸಿ, ವಿಜಯ ಬ್ಯಾಂಕ್ ಕಾಲೊನಿ ಎಕ್ಸ್‌ಟೆನ್ಷನ್, ಎಚ್‌ಆರ್‌ಬಿಆರ್ ಲೇಔಟ್, ಕಮ್ಮನಹಳ್ಳಿ ಮುಖ್ಯರಸ್ತೆ, ಹೆಣ್ಣೂರು ಗ್ರಾಮ, ಚಳ್ಳಿಕೆರೆ, ಜಯಂತಿನಗರ, ಮಂಜುನಾಥನಗರ, ಡಬಲ್ ರಸ್ತೆ, ಪುಣ್ಯಭೂಮಿ ಲೇಔಟ್, ಸಮದ್ ಲೇಔಟ್, ಯಾಸಿನ್‌ನಗರ, ಕುಳ್ಳಪ್ಪ ಸರ್ಕಲ್, ರಾಜ್‌ಕುಮಾರ್ ಪಾರ್ಕ್, ಕರಾವಳಿ ರಸ್ತೆ, ರಾಮಮೂರ್ತಿನಗರ, ಚಿಕ್ಕ ಬಾಣಸವಾಡಿ, ದೊಡ್ಡಬಾಣಸವಾಡಿ, ದಿವ್ಯ ಉನ್ನತಿ ಲೇಔಟ್, ಮಲ್ಲಪ್ಪ ಲೇಔಟ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಬೈರತಿ, ಹೆಣ್ಣೂರು, ಚಳ್ಳಕೆರೆ, ವಡ್ಡರಪಾಳ್ಯ, ಗೆದ್ದಲಹಳ್ಳಿ, ಕೊತ್ತನೂರು, ಕ್ಯಾಲಸನಹಳ್ಳಿ ಗ್ರಾಮ, ನಕ್ಷತ್ರ ಲೇಔಟ್, ಬೈರತಿ ಬಂಡೆ, ಬಾಬೂಸಾ ಪಾಳ್ಯ, ಬ್ಯಾಂಕ್ ಅವೆನ್ಯೂ ಲೇಔಟ್, ನಂಜಪ್ಪ ಗಾರ್ಡನ್, ಸಿ.ಎನ್.ಆರ್. ಲೇಔಟ್ ಮತ್ತು ಸುತ್ತಲಿನ ಪ್ರದೇಶ. ಹನುಮಂತಪ್ಪ ರಸ್ತೆ, ಮುನೇಗೌಡ ರಸ್ತೆ, ಕುವೆಂಪು ರಸ್ತೆ, ಓ.ಎಂ.ಬಿ.ಆರ್. 5ನೇ ಕ್ರಾಸ್, ಬೃಂದಾವನ ಲೇಔಟ್, ಬಂಜಾರ ಲೇಔಟ್, ಎನ್.ಪಿ.ಎಸ್., ಬೆಥೆಲ್ ಲೇಔಟ್, ಸಮೃದ್ಧಿ ಲೇಔಟ್, ವಾಟರ್ ಟ್ಯಾಂಕ್, ಕಲ್ಕೆರೆ, ಜಯಂತಿನಗರ ಮತ್ತು ಸುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಾಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಹೆಸರಘಟ್ಟ ಗ್ರಾ. ಪಂ: ಲತಾ ಅಧ್ಯಕ್ಷೆ

ಹೆಸರಘಟ್ಟ: ಹೆಸರಘಟ್ಟ ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷರಾಗಿ ಲತಾ ಕೆ.ಆರ್. ಹಾಗೂ ಉಪಾಧ್ಯಕ್ಷರಾಗಿ ಅಂಜನಾದೇವಿ ಅವಿರೋಧವಾಗಿ ಬುಧವಾರ ಆಯ್ಕೆಯಾಗಿದ್ದಾರೆ.

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ ಎಲೆಕ್ಟ್ರೋ-ಆಪ್ಟಿಕ್ಸ್ ಸಿಸ್ಟಮ್ಸಗಳಿಗಾಗಿ ಲ್ಯಾಬೋರೇಟರಿ (LEOS)
ಪೀಣ್ಯ, ಬೆಂಗಳೂರು-560058. ಲಿಯೋಸ್ ನಿರ್ಮಾಣ ಮತ್ತು ನಿರ್ವಹಣೆ ಗುಂಪು (LCMG)
[ಫೋನ್: (080)-22685088, 5193, 5093, 5086, ಫ್ಯಾಕ್ಸ್: (080)-28392310]

ಭಾರತದ ಅಧ್ಯಕ್ಷರ ಪರವಾಗಿ ,ಇ-ಟೆಂಡರ್ (NIET) ಆಹ್ವಾನಿಸುವ ಸಂಕ್ಷಿಪ್ತ ಸೂಚನೆ, ಈ ಕೆಳಗಿನ ಕೆಲಸಗಳಿಗಾಗಿ ಐಟಂ ದರ ಇ-ಟೆಂಡರ್ ಅನ್ನು ಆಹ್ವಾನಿಸಲಾಗಿದೆ:

ಕೆಲಸದ ಹೆಸರು; NIT ಸಂಖ್ಯೆ ಮತ್ತು ದಿನಾಂಕ: ISRAD ಕ್ಯಾಂಪಸ್, LEOS ನಲ್ಲಿ ಹಾನಿಗೊಳಗಾದ ಕಾಂಪೌಂಡ್ ಗೋಡೆಯ ಪ್ರಸ್ತಾವಿತ ದುರಸ್ತಿ, ಪೀಣ್ಯ, ಬೆಂಗಳೂರು-58. NIET ಸಂಖ್ಯೆ: CMG/LEOS/2023-24/LAM-03 ದಿನಾಂಕ: 28.07.2023 **ಅಂದಾಜು ವೆಚ್ಚವನ್ನು ಟೆಂಡರ್ಗೆ ಹಾಕಲಾಗಿದೆ ಮತ್ತು ಇಎಂಡಿ ರೂ. 17.39 ಲಕ್ಷಗಳು, EMD ರೂ: 34,782/- . ಪೂರ್ಣಗೊಳಿಸುವ ಅವಧಿ ತಿಂಗಳುಗಳಲ್ಲಿ:** 04 ತಿಂಗಳುಗಳು. ಟೆಂಡರ್ ಡಾಕ್ಯುಮೆಂಟ್ ಅನ್ನು ಡೌನ್ಲೋಡ್ ಮಾಡಬಹುದು: **ತೆರೆಯುವ ದಿನಾಂಕ:** 01.08.2023 **ಮುಕ್ತಾಯ ದಿನಾಂಕ:** 18.08.2023

ಕೆಲಸದ ಹೆಸರು; NIT ಸಂಖ್ಯೆ ಮತ್ತು ದಿನಾಂಕ: LEOS ಕ್ಯಾಂಪಸ್, ಪೀಣ್ಯ, ಬೆಂಗಳೂರು-560058 ನಲ್ಲಿರುವ ವೈಬ್ರೇಶನ್ ಪ್ಯಾನೆಲ್ ಲ್ಯಾಬ್ ಬ್ಲಾಕ್ಗೆ LEOS ಸಬ್‌ಸ್ಟೇಷನ್ನಿಂದ 185Sqmm, 1.1kV ದರ್ಜೆಯ, LT XLPE ಕೇಬಲ್ನ 2 ರನ್ಗಳು ಪೂರೈಕೆ, ಹಾಕುವಿಕೆ ಮತ್ತು ಮುಕ್ತಾಯ. NIET ಸಂಖ್ಯೆ: LEOS/CMG/ EW-01/2023-24 ದಿನಾಂಕ: 28.07.2023 **ಅಂದಾಜು ವೆಚ್ಚವನ್ನು ಟೆಂಡರ್ ಮತ್ತು EMD ಗೆ ರೂ. : ರೂ. 18.41 ಲಕ್ಷಗಳು, EMD ರೂ: 36,820/- ಪೂರ್ಣಗೊಳಿಸುವ ಅವಧಿ ತಿಂಗಳುಗಳಲ್ಲಿ :** 03 ತಿಂಗಳುಗಳು. ಟೆಂಡರ್ ಡಾಕ್ಯುಮೆಂಟ್ ಅನ್ನು ಡೌನ್ಲೋಡ್ ಮಾಡಬಹುದು: **ತೆರೆಯುವ ದಿನಾಂಕ:** 04.08.2023 **ಕೊನೆಯ ದಿನಾಂಕ :** 22.08.2023

ಆಸಕ್ತ ಟೆಂಡರ್ದಾರರು ಅರ್ಹತಾ ಮಾನದಂಡಗಳು ಮತ್ತು ವೆಬ್ಸೈಟ್ನಲ್ಲಿ ಇತರ ವಿವರಗಳಿಗಾಗಿ ಇ-ಟೆಂಡರ್ ಆಹ್ವಾನಿಸುವ (NIET) ವಿವರವಾದ ಸೂಚನೆಯನ್ನು ದಯವಿಟ್ಟು ಉಲ್ಲೇಖಿಸಬಹುದು: www.isro.gov.in ಮತ್ತು ಟೆಂಡರ್ ದಾಖಲೆಗಳನ್ನು www.tenderwizard.com/ISRO ನಿಂದ ಡೌನ್ಲೋಡ್ ಮಾಡಿ

-Sd- ಗ್ರೂಪ್ ಡೈರೆಕ್ಟರ್ ನಿರ್ಮಾಣ ಮತ್ತು ನಿರ್ವಹಣೆ ಗುಂಪು (C&MG) URSC, ಬೆಂಗಳೂರು.

ನೈಋತ್ಯ ರೈಲ್ವೆ

ಇ–ಟೆಂಡರ್ ಪ್ರಕಟಣೆ ಸಂ. ಸಿಎ/ಸಿಎನ್/ಬಿಎನ್‌ಸಿ/100/2022
ದಿನಾಂಕ : 26–10–2022 ಗೆ ತಿದ್ದುಪಡಿ – 5

ಕೆಲಸದ ಹೆಸರು	ಅಂದಾಜು ಮೌಲ್ಯ
ಮಲುಗೂರು (ಚೈ : 0.000) ನಿಂದ ಪಾಲಸಮುದ್ರಂ (ಚೈ:17180.000) ನಡುವೆ ಸಿಗ್ನಲಿಂಗ್ ಟೆಲಿಕಮ್ಯುನಿಕೇಶನ್ ಮತ್ತು ವಿದ್ಯುತ್ ಕಾಮಗಾರಿಗಳನ್ನು ಒಳಗೊಂಡು ಹೊಸ ವಿದ್ಯುದೀಕೃತ ಬ್ರಾಡ್‌ಗೇಜ್ ಮಾರ್ಗ ಟ್ರ್ಯಾಕ್‌ನ ನಿರ್ಮಾಣ (17.18 ಕಿ.ಮೀ) (ಟೆಂಡರ್ ಉಲ್ಲೇಖ ಸಂ. ಎಂಎಲ್‌ಯು–ಪಾಲಸಮುದ್ರಂ–ಇಪಿಸಿ–01)	ರೂ. 232,05,30,000/–

ಬಿಡ್ ಮುಕ್ತಾಯದ ದಿನಾಂಕ	
ಹಾಲಿ ದಿನಾಂಕ	ಪರಿಷ್ಕೃತ ದಿನಾಂಕ
21–08–2023 ರಂದು 15:00 ಗಂಟೆಗೆ	21–09–2023 ರಂದು 15:00 ಗಂಟೆಗೆ

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಉಪ ಮುಖ್ಯ ಇಂಜಿನಿಯರ್ / ಸಿಎನ್ / ಕಾಮಗಾರಿಗಳು ಬೆಂಗಳೂರು ದಂಡು

ಪಿಯುಬಿ/290/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2023–24

S.W.Railways SWRRLY SWRRLY

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ, ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ , ನಿರ್ಮಾಣ ಮತ್ತು ನಿರ್ವಹಣೆ ಸಮೂಹ, ಇಸ್ರೋ ಟೆಲಿಮೆಟ್ರಿ ಟ್ರ್ಯಾಕಿಂಗ್ ಮತ್ತು ಕಮಾಂಡ್ ನೆಟ್‌ವರ್ಕ್(ಐಎಸ್‌ಟಿಆರ್‌ಎಸಿ)
ಪ್ಲಾಟ್ ನಂ. 12 ಮತ್ತು 13 3ನೇ ಮೈನ್, 2ನೇ ಫೇಸ್, ಪೀಣ್ಯ ಇಂಡಸ್ಟ್ರಿಯಲ್ ಎಸ್ಟೇಟ್, ಬೆಂಗಳೂರು-560 058
ಫ್ಯಾಕ್ಸ್:080-28094180, ದೂರವಾಣಿ:080-28094184, 4196, 4541, 4542

ಸಂಕ್ಷಿಪ್ತ ಇ–ಟೆಂಡರ್ ಪ್ರಕಟಣೆ

ಭಾರತದ ರಾಷ್ಟ್ರಪತಿಯವರ ಪರವಾಗಿ ಈ ಕೆಳಕಂಡ ಕಾಮಗಾರಿಗಳಿಗೆ ಸೂಕ್ತ ದರ್ಜೆಯ ಗುತ್ತಿಗೆದಾರರಿಂದ ಐಟಂ ದರದ ಇ-ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಎನ್‌ಐಟಿ ಸಂ.:	ಐಎಸ್‌ಟಿಆರ್‌ಎಸಿ/ಸಿಎಂಜಿ/ ಎಂಎಐಎನ್‌ಟಿ/ಸಿ/ಇ-ಟೆಂಡರ್–38/ 2023–24 ದಿನಾಂಕ: 09.08.2023	ಐಎಸ್‌ಟಿಆರ್‌ಎಸಿ/ಸಿಎಂಜಿ/ ಎಂಎಐಎನ್‌ಟಿ/ಸಿ/ಇ–ಟೆಂಡರ್–39/ 2023–24 ದಿನಾಂಕ: 09.08.2023	ಐಎಸ್‌ಟಿಆರ್‌ಎಸಿ/ಸಿಎಂಜಿ/ ಎಂಎಐಎನ್‌ಟಿ/ಸಿ/ಇ–ಟೆಂಡರ್–42/ 2023–24 ದಿನಾಂಕ: 09.08.2023
ಕಾಮಗಾರಿಯ ಹೆಸರು	ಬೆಂಗಳೂರಿನ ಐಸ್ಟ್ರಾಕ್‌ನಲ್ಲಿನ ಸಾರಿಗೆ ಪ್ರಾಂಗಣದಲ್ಲಿ ಐಸ್ಟ್ರಾಕ್ ವಾಹನಗಳ ಸಂರಕ್ಷಣೆಗಾಗಿ ವಾರ್ಷಿಕ ಸೇವಾ ಗುತ್ತಿಗೆ	ಬೆಂಗಳೂರಿನ ಐಸ್ಟ್ರಾಕ್‌ನ ಎಸ್‌ಸಿಸಿ, ಎಂಓಎಕ್ಸ್ ಮತ್ತು ಐಡಿಎಸ್‌ಎನ್ ಕ್ಯಾಂಪಸ್‌ಗಳ ವಿವಿಧ ವಿಭಾಗಗಳಿಗೆ ಕಛೇರಿ ಸೇವಾ ಸಹಾಯಕರನ್ನು ಒದಗಿಸಲು ವಾರ್ಷಿಕ ಸೇವಾ ಗುತ್ತಿಗೆ	ಬೆಂಗಳೂರಿನ (ಜಾಲಹಳ್ಳಿ, ಆರ್‌ಪಿಸಿ ಲೇಔಟ್ ಮತ್ತು ಅಂತರಿಕ್ಷ ಅಪಾರ್ಟ್‌ಮೆಂಟ್) ಡಿಓಎಸ್ ಹೌಸಿಂಗ್ ಕಾಲೋನಿಗಳಲ್ಲಿ ಖಾಲಿ ಇರುವ ಎಲ್ಲಾ ಕ್ವಾರ್ಟರ್ಸ್‌ಗಳಿಗೆ ಬಣ್ಣ ಬಳಿಯಲು ವಾರ್ಷಿಕ ಸೇವಾ ಗುತ್ತಿಗೆ
ಟೆಂಡರ್‌ಗಿಟ್ಟ ಅಂದಾಜು ಮೊತ್ತ	ರೂ.15.74 ಲಕ್ಷಗಳು	ರೂ.114.26 ಲಕ್ಷಗಳು	ರೂ.15.16 ಲಕ್ಷಗಳು
ಟೆಂಡರ್ ದಸ್ತಾವೇಜು ವಿವರ	ಇ–ಟೆಂಡರ್	ಇ–ಟೆಂಡರ್	ಇ–ಟೆಂಡರ್
ಪೂರ್ಣಗೊಳಿಸುವ ಅವಧಿ	12 ತಿಂಗಳು (ಮುಂದಿನ 24 ತಿಂಗಳು ಅವಧಿಗೆ ಗುತ್ತಿಗೆಯನ್ನ ವಿಸ್ತರಿಸುವ ಹಕ್ಕನ್ನು ಇಲಾಖೆ ಕಾಯ್ದಿರಿಸಿದೆ)	12 ತಿಂಗಳು (ಮುಂದಿನ 24 ತಿಂಗಳು ಅವಧಿಗೆ ಗುತ್ತಿಗೆಯನ್ನ ವಿಸ್ತರಿಸುವ ಹಕ್ಕನ್ನು ಇಲಾಖೆ ಕಾಯ್ದಿರಿಸಿದೆ)	12 ತಿಂಗಳು (ಮುಂದಿನ 24 ತಿಂಗಳು ಅವಧಿಗೆ ಗುತ್ತಿಗೆಯನ್ನ ವಿಸ್ತರಿಸುವ ಹಕ್ಕನ್ನು ಇಲಾಖೆ ಕಾಯ್ದಿರಿಸಿದೆ)
ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಅವಧಿ	10.08.2023 ರಿಂದ 24.08.2023 ರವರೆಗೆ	10.08.2023 ರಿಂದ 31.08.2023 ರವರೆಗೆ	10.08.2023 ರಿಂದ 24.08.2023 ರವರೆಗೆ
ಬಿಡ್ ಸ್ಪಷ್ಟೀಕರಣ	10.08.2023 ರಿಂದ 24.08.2023 ರವರೆಗೆ	10.08.2023 ರಿಂದ 31.08.2023 ರವರೆಗೆ	10.08.2023 ರಿಂದ 24.08.2023 ರವರೆಗೆ
ಬಿಡ್ ಸ್ಪಷ್ಟೀಕರಣಗಳಿಗೆ ಪ್ರತಿಕ್ರಿಯೆ ನೀಡಲು ಕಡೆಯ ದಿನಾಂಕ ಮತ್ತು ಸಮಯ	25.08.2023, 16.30 ಗಂಟೆಯವರೆಗೆ	01.09.2023, 16.30 ಗಂಟೆಯವರೆಗೆ	25.08.2023, 16.30 ಗಂಟೆಯವರೆಗೆ
ಟೆಂಡರ್ ಸ್ವೀಕರಿಸುವ ಕಡೆಯ ದಿನಾಂಕ ಮತ್ತು ಸಮಯ	28.08.2023, 14.30 ಗಂಟೆಯವರೆಗೆ	04.09.2023, 14.30 ಗಂಟೆಯವರೆಗೆ	28.08.2023, 14.30 ಗಂಟೆಯವರೆಗೆ
ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	29.08.2023, 11.30 ಗಂಟೆಯ ನಂತರ	05.09.2023, 11.30 ಗಂಟೆಯ ನಂತರ	29.08.2023, 11.30 ಗಂಟೆಯ ನಂತರ
ಇಎಂಡಿ	ರೂ.31,480/–	ರೂ.2.29 ಲಕ್ಷಗಳು	ರೂ.30,320/–

ಆಸಕ್ತಿಯುಳ್ಳ ಟೆಂಡರ್‌ದಾರರು ಅರ್ಹತಾ ಅಗತ್ಯತೆ ಮತ್ತು ಇತರೆ ವಿವರಗಳಿಗೆ ಟೆಂಡರ್ ಪ್ರಕಟಣೆಯನ್ನು ಪರಿವೀಕ್ಷಿಸಲು ವೆಬ್‌ಸೈಟ್: www.isro.gov.in

ಸಹಿ/- ಸಮೂಹ ಮುಖ್ಯಸ್ಥರು, ಸಿಎಂಜಿ

BEFORE THE HON'BLE IX ADDITIONAL CITY CIVIL & SESSION JUDGE [CCH-5], AT BENGALURU.

In the matter of:
P & Sc. No. 614 of 2022.

Mrs. ADITHI SHEKAR.
W/o Late. Amith Raj, Aged about 39 years, Resident of D-2, 602, Golden Palms Apartment, Near Kristu Jayanti College, K. Narayanapura Bangalore North, Bengaluru–560077.
Petitioner No.1.

Miss. ANVITHA
D/o Mrs. Adithi Shekar & Late. Amith Raj., Aged about 06 years, Resident of D-2, 602, Golden Palms Apartment Near Kristu Jayanti College, K. Narayanapura, Bangalore North, Bengaluru–560077.
Since Minor Rep. by her Mother & Natural Guardian.
Mrs. Adithi Shekar.
Petitioner No.2.

G. PRAHLAD RAO
S/o Late. Hoovahirao. G
Aged about 73 years,
Resident of 'Vijayalakshmi Nilaya', 4th Cross, Ashok Nagara, Shivamogga–577 201.
Petitioner No.3

Mrs. H.K. VIJAYAKUMARI
W/o G. Prahlad Rao
Aged about 73 years,
Resident of 'Vijayalakshmi Nilaya', 4th Cross, Ashok Nagara, Shivamogga – 577201.
Petitioner No.4

Versus NIL
Respondent.

PUBLIC NOTICE.

The General Public is hereby notified that the Petitioners have filed the above Petition for issuance of a Succession Certificate under Section 372 of the Indian Succession Act claiming the closure proceed in the Citi Bank Account bearing No. 5965892801 of Late Sri. Amith Raj, husband of the 1st Petitioner, father of the 2nd Petitioner and son of the 3rd & 4th Petitioner who died on 21.03.2021 at Bengaluru. Any person having any claim or objection to the Petition if any is hereby called upon to appear before this Hon'ble Court in person or by a pleader duly instructed on 07-09-2023 at 11.00 A.M., failing which the matter will be decided in accordance with law. Given under my hand and seal of the court this 08-08-2023, August 2023.

By Order of the Court
Chief Administrative Officer
Date: 08-08-2023

ಡಿವೈಎಸ್ಪಿ, ಇನ್‌ಸ್ಪೆಕ್ಟರ್‌ಗಳ ವರ್ಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂವರು ಡಿವೈಎಸ್‌ಪಿ ಹಾಗೂ 28 ಪೊಲೀಸ್ ಇನ್‌ಸ್ಪೆಕ್ಟರ್ ಗಳನ್ನು ಪೊಲೀಸ್ ಇಲಾಖೆ ಬುಧವಾರ ವರ್ಗಾವಣೆ ಮಾಡಿ ಆದೇಶ ಹೊರಡಿಸಿದೆ. ಅಲ್ಲದೇ ಕಳೆದ ವಾರ ವರ್ಗಾವಣೆ ಮಾಡಿದ್ದ ಮೂವರು ಡಿವೈಎಸ್‌ಪಿ ಹಾಗೂ 12 ಮಂದಿ ಇನ್‌ಸ್ಪೆಕ್ಟರ್‌ಗಳ ವರ್ಗಾವಣೆ ಆದೇಶ ರದ್ದುಗೊಳಿಸಿದೆ.

ಡಿವೈಎಸ್‌ಪಿ ಸಿವಿಲ್: ಎಂ.ಎಚ್. ಮಂಜುನಾಥ್ ಚೌಧರಿ, ಸಿಸಿಬಿ, ಬೆಂಗಳೂರು ನಗರ; ಟಿ.ರಂಗಪ್ಪ, ಸಂಪಿಗೆಹಳ್ಳಿ ಉಪ ವಿಭಾಗ, ಬೆಂಗಳೂರು ನಗರ; ಪಿ.ರವಿ, ದೊಡ್ಡಬಳ್ಳಾಪುರ ಉಪ ವಿಭಾಗ, ಬೆಂಗಳೂರು ಜಿಲ್ಲೆ.

ಮೈಸೂರಿನ ಕೆಪಿಎನಿಂದ ಮೈಸೂರು ಸಂಚಾರ ಉಪ ವಿಭಾಗ ವರ್ಗಾವಣೆ ಮಾಡಲಾಗಿದ್ದ ಮೊಹಮ್ಮದ್ ಹಶ್ಮಯ್ ಖಾನ್ ಐ., ಬಾಗಲಕೋಟೆಯಿಂದ ಹುನಗುಂದ ಉಪ ವಿಭಾಗಕ್ಕೆ ವರ್ಗವಾಗಿದ್ದ ಪ್ರಶಾಂತ್ ಜಿ. ಮುನೋಳ್ಳಿ, ರಾಜ್ಯ ಗುಪ್ತವಾರ್ತೆಯಿಂದ ಸಂಪಿಗೆಹಳ್ಳಿ ವಿಭಾಗಕ್ಕೆ ವರ್ಗಾವಣೆಗೊಂಡಿದ್ದ ಎಂ. ಮುರುಗೇಂದ್ರಯ್ಯ ಅವರ ವರ್ಗಾವಣೆ ಆದೇಶವನ್ನು ರದ್ದು ಪಡಿಪಡಿಸಲಾಗಿದೆ.

ಬೆಂಗಳೂರು ವ್ಯಾಪ್ತಿಗೆ ಪೊಲೀಸ್ ಇನ್‌ಸ್ಪೆಕ್ಟರ್‌ಗಳ ವರ್ಗಾವಣೆ: ಎ.ಡಿ. ಪ್ರೀತಂ, ಬೊಮ್ಮನಹಳ್ಳಿ; ಎಚ್. ಸಂದೀಪ್, ಸಿಟಿ ಮಾರುಕಟ್ಟೆ; ಪಿ.ಎಂ. ಹರೀಶ್ ಕುಮಾರ್, ಎಚ್‌ಎಸ್‌ಆರ್ ಲೇಔಟ್; ಎಸ್.ಪ್ರಶಾಂತ್, ಹಲಸೂರು ಸಂಚಾರ ಪೊಲೀಸ್ ಠಾಣೆ; ಹನುಮಂತ ಕೆ. ಭಜಂತ್ರಿ, ಹಲಸೂರು ಗೇಟ್; ಸಲೀಂ ಸಿ. ನದಾಫ್, ಹೆಬ್ಬಾಳ ಸಂಚಾರ ಪೊಲೀಸ್ ಠಾಣೆ, ಎಂ.ಎಸ್.ರವಿ, ಜ್ಞಾನಭಾರತಿ; ಐ.ರಹೀಂ, ಕೆ.ಜಿ.ಹಳ್ಳಿ; ಎಸ್.ಶ್ರೀಧರ್, ಕೆ.ಜಿ.ಹಳ್ಳಿ ಸಂಚಾರ ಪೊಲೀಸ್ ಠಾಣೆ. ಸಿ.ಜೆ.ಚೈತನ್ಯ, ಕೆ.ಆರ್.ಪುರ ಸಂಚಾರ ಪೊಲೀಸ್ ಠಾಣೆ; ಎ.ಕೆ.ರಕ್ಷಿತ್, ಕೆಂಪೇಗೌಡ ನಗರ; ಜಿ.ಪಿ.ರಾಜು, ಮಾಗಡಿ ರಸ್ತೆ; ಎಂ.ಎಸ್.ಅನಿಲ್‌ಕುಮಾರ್, ಪೀಣ್ಯ; ಎಸ್.ಲಕ್ಷ್ಮಣಗೌಡ, ರಾಜಾಜಿನಗರ; ಎಂ.ಎಲ್.ಕೃಷ್ಣಮೂರ್ತಿ, ಯಲಹಂಕ; ಬಿ.ಚಿದಾನಂದ, ಯಶವಂತಪುರ ಸಂಚಾರ ಪೊಲೀಸ್ ಠಾಣೆ; ಟಿ.ಎಲ್. ಪ್ರವೀಣ್ ಕುಮಾರ್, ಸಿಇಎನ್, ಬೆಂಗಳೂರು ಜಿಲ್ಲೆ; ಬಿ.ಎಸ್. ಮಂಜುನಾಥ್, ಜಿಗಣಿ; ಟಿ.ಶ್ರೀನಿವಾಸ್, ವಿಶ್ವನಾಥಪುರ, ಬೆಂಗಳೂರು ಜಿಲ್ಲೆ; ಬಿ.ಎನ್.ಪುನೀತ್, ಕಾಮಾಕ್ಷಿಪಾಳ್ಯ; ಕೆ.ಬಿ.ರವಿ, ಅಶೋಕನಗರ; ಎಂ.ಕೆ. ಮುರಳೀಧರ್, ಮಾದನಾಯಕನಹಳ್ಳಿ, ಬಿ.ಆರ್.ರಾಘವೇಂದ್ರ, ಜಯನಗರ; ಹೇಮಂತ್‌ಕುಮಾರ್, ವಿಜಯನಗರ; ಕೆಂಪೇಗೌಡ, ಜೆಜೆ ನಗರ; ಬಿ.ಎಂ. ಶಿವಕುಮಾರ್, ರಾಜರಾಜೇಶ್ವರಿ ನಗರ.

ವರ್ಗಾವಣೆ ರದ್ದುಗೊಂಡವರು: ಇನ್‌ಸ್ಪೆಕ್ಟರ್‌ಗಳಾದ ನವೀನ್‌ಚಂದ್ರ ಜೋಗಿ, ವಜ್ರಮುನಿ ಕೆ., ಭಾಗ್ಯವತಿ ಜಿ. ಬಂಟಿ, ಜೆ. ಅಶ್ವತ್ಥ್‌ಗೌಡ, ಎಚ್.ಬಿ. ಸುನಿಲ್, ಮೋಹನ್ ಎನ್. ಹೆಡ್ಡಣ್ಣವರ್, ಎಸ್.ಪಾರ್ವತಮ್ಮ, ಶ್ರೀಧರ್ ಶಾಸ್ತ್ರಿ ಟಿ. ಗುಡಗಟ್ಟಿ, ಎಂ.ಗೋವಿಂದರಾಜು. ಎಚ್.ಎ.ಮಂಜು, ಸಿ.ಪಿ.ನವೀನ್, ಎಸ್. ಎಡ್ವಿನ್ ಪ್ರದೀಪ್ ಅವರ ವರ್ಗಾವಣೆ ಆದೇಶವನ್ನು ರದ್ದುಪಡಿಸಲಾಗಿದೆ. ಈ 12 ಇನ್‌ಸ್ಪೆಕ್ಟರ್‌ಗಳನ್ನು ಬೆಂಗಳೂರು ನಗರವು ಸೇರಿದಂತೆ ವಿವಿಧೆಡೆಗೆ ವರ್ಗಾವಣೆ ಮಾಡಲಾಗಿತ್ತು.

ನಗರದಲ್ಲಿ ಇಂದು

ಸೈಬರ್ ಸೆಕ್ಯೂರಿಟಿ ಹ್ಯಾಕಥಾನ್ ‘ಕವಚ’: ಆಯೋಜನೆ ಮತ್ತು ಸ್ಥಳ: ಎ.ಎಂ.ಸಿ ಸಭಾಂಗಣ, ಎ.ಎಂ.ಸಿ. ಆವರಣ, ಬನ್ನೇರುಘಟ್ಟ, ಬೆಳಿಗ್ಗೆ 9.30

ಹಂ.ಪ. ನಾಗರಾಜಯ್ಯ ಅವರ ಇಂಗ್ಲಿಷ್ ಪುಸ್ತಕ ‘ಸ್ಪೆಕ್ಟ್ರಮ್ ಆಫ್ ಕ್ಲಾಸಿಕಲ್ ಲಿಟರೇಚರ್ ಇನ್ ಕರ್ನಾಟಕ’ ಕುರಿತ ಅನುಸಂಧಾನ: ಉದ್ಘಾಟನೆ: ಜಯಕರ ಎಂ.ಎಸ್., ಅಧ್ಯಕ್ಷತೆ: ಮುನಿಯಪ್ಪ, ಉಪಸ್ಥಿತಿ: ಹಂ.ಪ. ನಾಗರಾಜಯ್ಯ, ಕಮಲಾ ಹಂಪನಾ, ಅತಿಥಿ: ಎಚ್.ಎಸ್. ಶಿವಪ್ರಕಾಶ, ವಿಚಾರಸಂಕಿರಣ: ಅಧ್ಯಕ್ಷತೆ: ಮಲ್ಲೇಪುರಂ ಜಿ. ವೆಂಕಟೇಶ್, ಎಂ.ಎಸ್. ಆಶಾದೇವಿ, ಎಚ್.ಎಸ್. ರಾಘವೇಂದ್ರ ರಾವ್, ಮಹೇಂದ್ರಕುಮಾರ್, ಪದ್ಮಿನಿ ನಾಗರಾಜ್, ಎಸ್. ಗಂಗಾಂಬಿಕೆ, ಆಯೋಜನೆ ಮತ್ತು ಸ್ಥಳ: ಜಿ.ಎಸ್. ಎಸ್. ಸಭಾಂಗಣ, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಳಿಗ್ಗೆ 10

‘ಮಾಧ್ಯಮ ಭಾಷಾ ಕೌಶಲ್ಯ, ಬರವಣಿಗೆ ಕಾರ್ಯಾಗಾರ: ಉದ್ಘಾಟನೆ: ರುದ್ರಣ್ಣ ಹರ್ತಿಕೋಟೆ, ಅಧ್ಯಕ್ಷತೆ: ವೈ. ವೆಂಕಟೇಶಪ್ಪ, ರಾಘವೇಂದ್ರ ಎಸ್.ಜಿ., ಜ್ಞಾನೇಶ್ವರ ಟಿ.ಎನ್., ಪತ್ರಿಕಾ ಉಪನ್ಯಾಸ: ಸುಶೀಲಾ ಡೋಣೂರ, ರಾಜೀವ್ ಕೃಷ್ಣಸ್ವಾಮಿ, ನರೇಂದ್ರ ಪಾರೆಕಟ್, ಮೊಹಮ್ಮದ್ ಹಸೀಬ, ಎಚ್.ಆರ್. ಸುಜಾತ, ‘ನಾಳಿನ ಭವಿಷ್ಯಕ್ಕೆ ಸಂವಹನದ ಸವಾಲುಗಳು’ ಕುರಿತು ಉಪನ್ಯಾಸ: ನಾಗೇಶ ಹೆಗಡೆ, ಆಯೋಜನೆ ಮತ್ತು ಸ್ಥಳ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಳಿಗ್ಗೆ 10

ಫರ್ಸ್ಟ್ ಡೇ ಫರ್ಸ್ಟ್ ಶೋ: ಆಯೋಜನೆ: ಬೆಂಗಳೂರು ಅಂತರರಾಷ್ಟ್ರೀಯ ಕಿರುಚಿತ್ರೋತ್ಸವ, ಸ್ಥಳ: ಸುಚಿತ್ರ ಫಿಲ್ಮ್ ಸೊಸೈಟಿ, ಬನಶಂಕರಿ, ಸಂಜೆ 5.30ರಿಂದ

‘ಕಂಠದಾನ ಮತ್ತು ತಂತ್ರಜ್ಞಾನ’ ಕುರಿತ ಉಪನ್ಯಾಸ: ಕಾವ್ಯ ಪ್ರಕಾಶ್, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ಪ್ರವಚನ ವಾಹಿನಿ: ‘ಶ್ರೀರಾಮ ಕೃಷ್ಣ ವಚನ ವೇದ’ ಕುರಿತ ಉಪನ್ಯಾಸ: ಸ್ವಾಮಿ ಯೋಗೇಶ್ವರಾನಂದ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ರಿಕ್ಕಿ ಕೇಜ್

ವಿಶೇಷ ಪ್ರದರ್ಶನ, ರಿಕ್ಕಿ ಕೇಜ್ ಅವರೊಂದಿಗೆ ಸಂವಾದ: ಆಯೋಜನೆ ಮತ್ತು ಸ್ಥಳ: ದಿ ಲೀಲಾ ಪ್ಯಾಲೇಸ್, ಹಳೆ ವಿಮಾನ ನಿಲ್ದಾಣ ರಸ್ತೆ, ಬೆಳಿಗ್ಗೆ 10

ಪೂಜಾ ಸುಗಮ್

ಯುವ ನೃತ್ಯೋತ್ಸವ: ಪೂಜಾ ಸುಗಮ್, ಆಯೋಜನೆ: ಅನನ್ಯ ಕಲಾ ನಿಕೇತನ, ಸ್ಥಳ: ಸೇವಾಸದನ, ಮಲ್ಲೇಶ್ವರ, ಸಂಜೆ 7.15

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ ಕಳುಹಿಸಿ nagaradalli_indu@prajavani.co.in

ಕೆಎಎಸ್ ಅಧಿಕಾರಿಗಳ ಸಂಘದ ಶತಮಾನೋತ್ಸವದಲ್ಲಿ ಸಿ.ಎಂ ಸಿದ್ದರಾಮಯ್ಯ ಅಭಿಮತ

‘ಸಾಕಾರಗೊಳ್ಳದ ಸಮ ಸಮಾಜದ ಆಶಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯ ಬಂದು ಏಳೂವರೆ ದಶಕ ಕಳೆದರೂ ಸಮ ಸಮಾಜ ನಿರ್ಮಾಣ ಸಾಧ್ಯವಾಗಿಲ್ಲ. ಕಾನೂನಿನ ದೃಷ್ಟಿಯಲ್ಲಿ ಎಲ್ಲರೂ ಸಮಾನರು. ಆದರೆ, ಸಾಮಾಜಿಕ, ಆರ್ಥಿಕ ಸಮಾನತೆ ಇಂದಿಗೂ ಸಾಕಾರಗೊಂಡಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕರ್ನಾಟಕ ಆಡಳಿತ ಸೇವೆ (ಕೆಎಎಸ್) ಅಧಿಕಾರಿಗಳ ಸಂಘದ ಶತಮಾನೋತ್ಸವ ಸಮಾರಂಭದಲ್ಲಿ ಅವರು ಮಾತನಾಡಿದರು.

ಅಧಿಕಾರಿಗಳು ಜಾತಿ, ಧರ್ಮಾತೀತವಾಗಿ ಜನರ ಸೇವೆ ಮಾಡಬೇಕು. ಸಾಮಾಜಿಕ ಸಮಾನತೆಗೆ ಶ್ರಮಿಸಬೇಕು. ಧರ್ಮದ ವಿಚಾರ, ರಾಜಕಾರಣದಲ್ಲಿ ತೊಡಗಿಸಿಕೊಳ್ಳಬಾರದು. ಜನರ ಮಧ್ಯೆ ತಾರತಮ್ಯ ಮಾಡಬಾರದು. ಹಿರಿಯರು ಕಷ್ಟಪಟ್ಟು ದೊರಕಿಸಿಕೊಟ್ಟ ಸ್ವಾತಂತ್ರ್ಯ ಸೌಧವನ್ನು ಧ್ವಂಸಗೊಳಿಸುವ ಸಾಧ್ಯತೆ ಇದೆ ಎನ್ನುವ ಅಂಬೇಡ್ಕರ್ ಮಾತುಗಳನ್ನು ಅರ್ಥಮಾಡಿಕೊಂಡು ಹೆಜ್ಜೆ ಇಡಬೇಕು. ಪ್ರತಿಯೊಬ್ಬ ಅಧಿಕಾರಿಯೂ ಸಂವಿಧಾನದ ಚೌಕಟ್ಟಿನೊಳಗೆ, ಧ್ಯೇಯ, ಉದ್ದೇಶ ಅರಿತು ಕಾರ್ಯನಿರ್ವಹಿಸಬೇಕು. ಸಮಾಜದಲ್ಲಿ ಸುಧಾರಣೆಗೆ ನಾಂದಿ ಹಾಡಬೇಕು. ಜಾತ್ಯತೀತತೆ, ವೈಚಾರಿಕತೆ ಪಾಲಿಸಬೇಕು ಎಂದರು.

ಐರ್ಲೆಂಡ್ ಅಧಿಕಾರಿ ಸ್ಫೂರ್ತಿಯಿಂದಾಗಿ 1919ರಲ್ಲಿ ಸಂಘ ಅಸ್ತಿತ್ವ ಬಂದಿತ್ತು. ಸಾಹಿತಿ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅಂಥವರೂ ಸಂಘ ಮುನ್ನಡೆಸಿದ್ದಾರೆ. ಹಲವು ಕಾರ್ಯಗಳಿಗೆ ಸಂಘ ಮಾದರಿಯಾಗಿದೆ.

ಡಾ.ಬಿ.ಆರ್.ಹರೀಶ್ ನಾಯ್ಕ್,
ಕಾರ್ಯದರ್ಶಿ, ಕೆಎಎಸ್ ಅಧಿಕಾರಿಗಳ ಸಂಘ

ಅಧಿಕಾರಿಗಳು ಪ್ರಾಮಾಣಿಕವಾಗಿ, ಜನಪರವಾಗಿ ಕೆಲಸ ಮಾಡಿದರೆ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಅಧಿಕಾರಿಗಳು ಎಂದಿಗೂ ಬಡವರ ವಿರೋಧಿ ನೀತಿ ಅನುಸರಿಸಬಾರದು. ಜನವಿರೋಧಿಗಳಾಗಬಾರದು, ಭ್ರಷ್ಟಾಚಾರಕ್ಕೆ ಅವಕಾಶ ಕೊಡಬಾರದು ಎಂದು ಕಿವಿಮಾತು ಹೇಳಿದರು.

ಗ್ಯಾರಂಟಿ ಯೋಜನೆಗಳ ಯಶಸ್ಸು ಅಧಿಕಾರಿಗಳ ಮೇಲೆ ಅವಲಂಬಿತವಾಗಿದೆ. ಈಗಾಗಲೇ ಮೂರು ಗ್ಯಾರಂಟಿ ಜಾರಿಯಾಗಿವೆ. ಉಳಿದೆರಡು ಡಿಸೆಂಬರ್ ಅಥವಾ ಜನವರಿಯಲ್ಲಿ ಜಾರಿಗೊಳಿಸಲಾಗುವುದು ಎಂದರು.

ಕಂದಾಯ ಸಚಿವ ಕೃಷ್ಣ ಬೈರೇಗೌಡ, ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ, ಅಭಿವೃದ್ಧಿ ಆಯುಕ್ತ ಇ.ವಿ. ರಮಣರೆಡ್ಡಿ, ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ, ಆಡಳಿತ ಸುಧಾರಣಾ ಇಲಾಖೆ ಕಾರ್ಯದರ್ಶಿ ಎಂ.ಎಸ್. ಶ್ರೀಕರ್ ಉಪಸ್ಥಿತರಿದ್ದರು.

ವಿಧಾನಸೌಧದ ಬ್ಯಾಂಕ್ವೆಟ್‌ಹಾಲ್‌ನಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕರ್ನಾಟಕ ಆಡಳಿತ ಸೇವೆ (ಕೆಎಎಸ್) ಅಧಿಕಾರಿಗಳ ಸಂಘದ ಶತಮಾನೋತ್ಸವ ಸಮಾರಂಭದಲ್ಲಿ ‘ಶತ ಸಂಭ್ರಮ’ ಸಂಚಿಕೆಯನ್ನು ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಬಿಡುಗಡೆ ಮಾಡಿದರು. ಸಂಘದ ಅಧ್ಯಕ್ಷ ರವಿ ಎಂ. ತಿರ್ಲಾಪೂರ, ಮುಖ್ಯಮಂತ್ರಿ ಸಿದ್ದರಾಮಯ್ಯ, ಕಂದಾಯ ಸಚಿವ ಕೃಷ್ಣ ಬೈರೇಗೌಡ, ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ ಇದ್ದಾರೆ.

‘ಪ್ರೋತ್ಸಾಹ ನೀಡಿದರೆ ಇನ್ನಷ್ಟು ಸೇವೆ’

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಡಳಿತದ ಅವಧಿಯಲ್ಲಿ ನಾಗರಿಕ ಸೇವೆಯ ಕಲ್ಪನೆ ಜೀವ ತಳೆಯಿತು. ಮೊದಲು ಮೈಸೂರು ಆಡಳಿತ ಸೇವೆ ಎಂದಿದ್ದು, ನಂತರ ಕರ್ನಾಟಕ ಆಡಳಿತ ಸೇವೆಯಾಯಿತು. ಸರ್ಕಾರ, ಸಚಿವರು, ಜನಪ್ರತಿನಿಧಿಗಳು ಪ್ರೋತ್ಸಾಹ ನೀಡಿದರೆ, ಇನ್ನಷ್ಟು ಉತ್ತಮ ಕೆಲಸಗಳಿಗೆ ಪ್ರೇರಣೆಯಾಗಲಿದೆ. ಸಂಘದ ಬೇಡಿಕೆಗಳನ್ನು ಸರ್ಕಾರ ಈಡೇರಿಸಬೇಕು ಎಂದು ಸಂಘದ ಅಧ್ಯಕ್ಷ ರವಿ ಎಂ. ತಿರ್ಲಾಪೂರ ಹೇಳಿದರು.

ಕಾಣೆಯಾಗಿದ್ದಾರೆ

ಜಿ.ಎಲ್. ನಾಗರಾಜು

ವಯಸ್ಸು: 57 ವರ್ಷ, ದುಂಡುಮುಖ, ಗೋಧಿ ಮೈಬಣ್ಣ, ಸಾಧಾರಣ ಮೈಕಟ್ಟು, 5.6 ಅಡಿ ಎತ್ತರ, ಬಿಳಿಕೂದಲು. ಈ ಬಗ್ಗೆ ಮಾಹಿತಿ ದೊರತಲ್ಲಿ ಚಂದ್ರಲೇಔಟ್ ಠಾಣೆ 080–22942512ಗೆ ತಿಳಿಸಿ

ಮೆಟ್ರೊ: ಬೆಳಿಗ್ಗೆ ಹೊತ್ತು ಕೆಲವೆಡೆ ಸ್ಥಗಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಟ್ರೊ ನೇರಳೆ ಮಾರ್ಗದಲ್ಲಿ ವಿಸ್ತರಿತ ಸಂಚಾರದ ಕಾಮಗಾರಿಗಳಿಗಾಗಿ ಆ.10, 11 ಮತ್ತು 14ರಂದು ಬೆಳಿಗ್ಗೆ ಕೆಲವು ನಿಲ್ದಾಣಗಳಲ್ಲಿ ಮೆಟ್ರೊ ರೈಲು ಸಂಚಾರ ಸ್ಥಗಿತಗೊಳ್ಳಲಿದೆ.

ಬೈಯಪ್ಪನಹಳ್ಳಿ ಟರ್ಮಿನಲ್‌ನಿಂದ ಸ್ವಾಮಿ ವಿವೇಕಾನಂದ ರಸ್ತೆ ಮೆಟ್ರೊ ನಿಲ್ದಾಣ, ಕೃಷ್ಣರಾಜಪುರ, ವೈಟ್‌ಫೀಲ್ಡ್‌ವರೆಗೆ ಮೆಟ್ರೊ ಸಂಚಾರ ವಿಸ್ತರಿತ ಮಾರ್ಗದಲ್ಲಿ ಸಿಗ್ನಲಿಂಗ್ ಮತ್ತು ಇತರ ಕಾಮಗಾರಿಗಳು ನಡೆಯಲಿವೆ.

ಬೈಯಪ್ಪನಹಳ್ಳಿವರೆಗೆ ಎಂದಿನಂತೆ ಮೆಟ್ರೊ ರೈಲುಗಳು ಸಂಚರಿಸಲಿದ್ದು, ಅಲ್ಲಿಂದ ಮುಂದಕ್ಕೆ ವೈಟ್‌ಫೀಲ್ಡ್‌ವರೆಗೆ ಬೆಳಿಗ್ಗೆ 7 ಗಂಟೆಯವರೆಗೆ ಸಂಚಾರ ಇರುವುದಿಲ್ಲ.

ಕೆಂಗೇರಿ ನಿಲ್ದಾಣದಿಂದ ಚಲ್ಲಘಟ್ಟವರೆಗೆ ಸಿಗ್ನಲಿಂಗ್ ಮತ್ತು ಇತರ ಕಾಮಗಾರಿಗಳನ್ನು ಆ.14ರಂದು ಹಮ್ಮಿಕೊಳ್ಳಲಾಗಿದ್ದು, ಅಂದು ಬೆಳಿಗ್ಗೆ 5ರಿಂದ 7ರವರೆಗೆ ಕೆಂಗೇರಿ–ವಿಜಯನಗರ ನಿಲ್ದಾಣಗಳ ನಡುವೆ ಮೆಟ್ರೊ ರೈಲು ಸಂಚಾರ ಸ್ಥಗಿತಗೊಳ್ಳಲಿದೆ.

ಹಸಿರು ಮಾರ್ಗದಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಬಾಕಿ ಪ್ರಕರಣ ತ್ವರಿತ ವಿಚಾರಣೆ ಕಂದಾಯ ಸಚಿವರ ತಾಕೀತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿವಿಧ ಹಂತಗಳಲ್ಲಿ ಬಾಕಿ ಇರುವ ಪ್ರಕರಣಗಳನ್ನು ತ್ವರಿತವಾಗಿ ವಿಚಾರಣೆ ನಡೆಸಿ, ತಪ್ಪಿತಸ್ಥರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು’ ಎಂದು ಇಲಾಖೆಯ ಅಧಿಕಾರಿಗಳಿಗೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ತಾಕೀತು ಮಾಡಿದ್ದಾರೆ.

‘ವಿಚಾರಣೆಗೆ ಬಾಕಿ ಇರುವ ಪ್ರಕರಣಗಳ ಪಟ್ಟಿ ತಯಾರಿಸಬೇಕು. ವಿಚಾರಣಾಧಿಕಾರಿಗಳು, ಮಂಡನಾಧಿಕಾರಿಗಳ ನೇಮಕ ಮತ್ತಿತರ ಪ್ರಕ್ರಿಯೆ ವಿಳಂಬ ಆಗಬಾರದು. ಅಲ್ಲದೆ, ಈ ಹಂತಗಳಲ್ಲಿ ಕಡತಗಳನ್ನು ಮರೆಮಾಚಲು ಅವಕಾಶ ನೀಡಬಾರದು’ ಎಂದು ಅವರು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

‘ಚಾಲ್ತಿಯಲ್ಲಿರುವ ವಿಚಾರಣೆಗಳನ್ನು ಮತ್ತು ನಂತರದ ಪ್ರಕರಣಗಳನ್ನು ನಿಗದಿತ ಸಮಯ ಒಳಗೆ ಮುಕ್ತಾಯ ಮಾಡುವಂತೆ ವಿಚಾರಣಾ ಅಧಿಕಾರಿಗಳಿಗೆ ತಾಕೀತು ಮಾಡಬೇಕು. ವಿಚಾರಣೆ ಅವಧಿಯನ್ನು ಅನಗತ್ಯವಾಗಿ ವಿಸ್ತರಿಸಬಾರದು. ಅನಿವಾರ್ಯ ಸಂದರ್ಭದಲ್ಲಿ ಮಾತ್ರ ಒಮ್ಮೆ ವಿಸ್ತರಿಸಬಹುದು. ಅನಿವಾರ್ಯ ಕಾರಣಗಳಿಂದ ಕೋರ್ಟ್ ಮೆಟ್ಟಿಲೇರಿದರೆ ಶೀಘ್ರ ವಿಲೇವಾರಿಗೆ ಕಾನೂನು ಕ್ರಮ ತೆಗೆದುಕೊಳ್ಳಬೇಕು’ ಎಂದಿದ್ದಾರೆ.

‘ಪ್ರಗತಿ ಪರಿಶೀಲನಾ ಸಭೆಗಳಲ್ಲಿ ಬಾಕಿ ಪ್ರಕರಣಗಳ ಕುರಿತು ಪರಿಶೀಲಿಸಿ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆಗಳನ್ನು ನೀಡಬೇಕು. ವಿಚಾರಣಾ ವರದಿಗಳನ್ನು ತ್ವರಿತವಾಗಿ ಅನುಷ್ಠಾನಕ್ಕೆ ತರಬೇಕು. ಯಾವುದೇ ಹಂತದಲ್ಲಿ ಅಥವಾ ವಿಚಾರಣೆಯ ಹಂತದಲ್ಲಿ ವಿಳಂಬ ಮಾಡಿದ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ತೆಗೆದುಕೊಳ್ಳಬೇಕು’ ಎಂದೂ ಹೇಳಿದ್ದಾರೆ.

‘ಐದು ವರ್ಷಗಳಿಂದ ದೂಳು ಹಿಡಿದಿದ್ದ 67 ಭ್ರಷ್ಟ ಅಧಿಕಾರಿಗಳ ಕಡತಗಳನ್ನು ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಎರಡೇ ತಿಂಗಳಿನಲ್ಲಿ ಪರಿಶೀಲನೆ ನಡೆಸಿ, ತಪ್ಪಿತಸ್ಥರಿಗೆ ಶಿಕ್ಷೆ ನೀಡಲಾಗಿದೆ. ಇನ್ನೂ ಹಲವು ಪ್ರಕರಣಗಳಲ್ಲಿ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ, ಇಲಾಖಾ ವಿಚಾರಣೆ ಬಾಕಿ ಇವೆ. ಕಡತಗಳನ್ನು ದುರುದ್ದೇಶದಿಂದ ಮರೆಮಾಚಿ ವಿಳಂಬ ಮಾಡಿರುವ ಪ್ರಕರಣಗಳೂ ನಡೆದಿವೆ. ಇಂತಹ ವರ್ತನೆಗಳನ್ನು ಇನ್ನು ಮುಂದೆ ಸಹಿಸುವುದಿಲ್ಲ’ ಎಂದು ಅವರು ಎಚ್ಚರಿಕೆ ನೀಡಿದ್ದಾರೆ.

SRI DEVARAJ URS ACADEMY OF HIGHER EDUCATION AND RESEARCH
(A Deemed to be University declared under Section 3 of UGC Act 1956)
Comprising Sri Devaraj Urs Medical College
[Constituent unit of Sri Devaraj Urs Educational Trust for Backward Classes (Regd.)]
TAMAKA, KOLAR-563 103, KARNATAKA, INDIA
Ph: 918152-243003, +91 9448395232, Fax : +918152 - 243008 E–mail – registrar@sduaher.ac.in / office@sduaher.ac.in. Website: www.sduaher.ac.in

No. SDUAHER/KLR/ADMN/1246 /2023-24 Date : 09.08.2023.

THE ACADEMY INVITES

Applications from candidates with outstanding credentials in Academics, Research and Administration for the post of

VICE CHANCELLOR

Eligibility : Age less than 65 years. Qualification and Experience as per UGC regulations. Eligible candidates need to apply on or before **10th September 2023** addressed to the **Registrar, Sri Devaraj Urs Academy of Higher Education and Research, Tamaka, Kolar-563103, Karnataka** by Registered post.The envelope should be super-scribed “**Application for the position of Vice Chancellor**”.Selection will be based on the recommendation of the “**Search-cum-Selection committee**” constituted by The Academy. The post carries pay and perks befitting the position of a Vice Chancellor.

Sd/-
Dr. D.V.L.N. Prasad, Registrar

Fi India
17-19 August 2023
Hall No.1,
Bombay Exhibition Centre,
Mumbai
informa markets

Unleash the Taste of Tomorrow at Fi India 2023!
India's leading food ingredients event in food and beverage industry.

Show Features
Fi Awards | Conferences | Innovative Product Showcase | Live Demonstration | Fund Quest | B2B meetings | Sustainability Square

We look forward to welcome you at Fi India & ProPak India 2023!

Association Partners | Clean Energy Partner | Innovation Partner | Knowledge Partner

Scan the QR code to REGISTER

For Queries: Call / WhatsApp
+91 9372682559 | +91 9137341053

ProPak India 2023: The Premier Processing and Packaging Event In India For India.
Co-located with PROPAK INDIA

www.fi-india.com www.propakindia.com

This is a trade show. Entry restricted for individuals below 18 years of age and infants in arms right of admmision reserved with Informa Markets

TATA ಉತ್ಪಾದನೆ



ನಿಮ್ಮ ವಜ್ರಗಳ ಹೊಳಪಿನಿಂದ ನೀವು ಸಿನಿಮಾ ತಾರೆಯರ ಸಮಾರಂಭದಲ್ಲೂ ಆಕರ್ಷಣೆಯ ಕೇಂದ್ರವಾಗಿರಿ.

20%* ರಷ್ಟು ಕಡಿತ
ವಜ್ರದ ಆಭರಣಗಳ ಮೌಲ್ಯದ ಮೇಲೆ

To locate your nearest store and know more on 6366920017. Buy online at tanishq.co.in or Download our App *Conditions apply.

Showrooms at **Bangalore:** Dickenson Road, Koramangala, Kamanahalli, E-City, Marathahalli, HSR Layout, Phoenix Mall, Nexus Shantiniketan Mall, Bannerghata, Jaynagar, Banashankari, Vijayanagar, Kanakapura Road, Basaveshwaranagar, New BEL Road, **New Stores at** Whitefield: Tel: 080-22633335; KR Puram: Subhash Nagar, Batarahalli. Tel: 9611730802; RR Nagar - BEML Layout, Jawaharlal Nehru Road. Tel: 080-47574666, **Relocated to new premises at** Malleswaram - Sampige Road. Tel: 9164326100 & Yelahanka - Opp. to The Galleria Mall. Tel: 080-43364336; **Mysore:** No.2927, Bangalore - Nilgiri Road, Near Suburban Bus Stand. Tel: 821 428 0074; **Tumkur:** ADR Complex, Ground Floor, General Kariyappa Road, K R Extension. Tel: 816 4041666

ರಸ್ತೆ ಅಪಘಾತ ಪರಿಹಾರ: ಹೈಕೋರ್ಟ್ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಸ್ತೆ ಅಪಘಾತ ಪ್ರಕರಣಗಳಲ್ಲಿನ ಪರಿಹಾರ ಅರ್ಜಿಗಳ ಶೀಘ್ರ ವಿಲೇವಾರಿಗೆ ಪೊಲೀಸ್ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯ ಜೊತೆಗೆ ರಸ್ತೆ ಅಪಘಾತ ದತ್ತಾಂಶ, ವಿಧಿ ವಿಜ್ಞಾನ ಪ್ರಯೋಗಾಲಯಗಳು ಮತ್ತು ವಿಮಾ ಇಲಾಖೆಯನ್ನೂ ಸಂಯೋಜಿಸಬೇಕು' ಎಂದು ಹೈಕೋರ್ಟ್ ನಿರ್ದೇಶಿಸಿದೆ.

'ಪರಿಹಾರ ಕೋರಿ ಅರ್ಜಿ ಸಲ್ಲಿಕೆ ವಿಳಂಬವಾಗಿದೆ' ಎಂದು ಆಕ್ಷೇಪಿಸಿ, ವಿಮಾ ಕಂಪನಿ ಸಲ್ಲಿಸಿದ್ದ ಮೇಲ್ಮನವಿಯನ್ನು ವಜಾಗೊಳಿಸಿರುವ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಮೋಟಾರು ವಾಹನ ಅಪಘಾತ ಕಾಯ್ದೆ ಇರುವುದೇ ಸಂತ್ರಸ್ತರ ಅನುಕೂಲಕ್ಕಾಗಿ. ಹಾಗಾಗಿ, ಅದರಲ್ಲಿನ ತಾಂತ್ರಿಕ ಅಂಶಗಳೂ ಸೇರಿದಂತೆ ಎಲ್ಲವನ್ನೂ ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು' ಎಂದು ತಾಕೀತು ಮಾಡಿದೆ.

'ಮೋಟಾರು ವಾಹನ ಅಪಘಾತ ಕಾಯ್ದೆಗೆ 2019ರಲ್ಲಿ ತಿದ್ದುಪಡಿ ತರಲಾಗಿದ್ದು, 2022ರಲ್ಲಿ ನಿಯಮಗಳನ್ನು ರೂಪಿಸಲಾಗಿದೆ. ಅದರನ್ವಯ ಅಪಘಾತ ನಡೆದ ಸಮಯದಲ್ಲಿ ತನಿಖಾಧಿಕಾರಿ ದಾಖಲಿಸುವ ಮೊದಲ ಅಪಘಾತ ವರದಿಯನ್ನೇ (ಎಫ್‌ಎಆರ್) ಪರಿಹಾರದ ಅರ್ಜಿ ಎಂದು ಪರಿಗಣಿಸಬಹುದಾಗಿದೆ. ಹಾಗಾಗಿ, ಅರ್ಜಿದಾರರು ತಡವಾಗಿ ಪರಿಹಾರ ಅರ್ಜಿ ಸಲ್ಲಿಸಿದ್ದಾರೆಂಬ ವಿಮಾ ಕಂಪನಿಯ ವಾದವನ್ನು ಪುರಸ್ಕರಿಸಲಾಗದು' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

'ಎಲ್ಲ ಪೊಲೀಸ್ ಅಧಿಕಾರಿಗಳು ಎಫ್‌ಎಆರ್ ದಾಖಲಿಸಿದ ನಂತರ ಮೋಟಾರು ವಾಹನ ಕಾಯ್ದೆಯ ಕಲಂ 159 ಅನ್ನು ಪಾಲಿಸಬೇಕು. ಆಗ ನ್ಯಾಯಾಲಯ ಎಫ್‌ಎಆರ್ ಅನ್ನು ಪರಿಹಾರದ ಅರ್ಜಿ ಎಂದು ಪರಿಗಣಿಸಿ ವಿಚಾರಣಾ ಪ್ರಕ್ರಿಯೆ ಆರಂಭಿಸಬಹುದು' ಎಂದು ಆದೇಶಿಸಿದೆ.

ಅಂತೆಯೇ, 'ಕೋರ್ಟ್ ನೀಡುತ್ತಿರುವ ನಿರ್ದೇಶನಗಳ ಪಾಲನೆಯ ನಿಟ್ಟಿನಲ್ಲಿ ನಾಲ್ಕು ವಾರಗಳಲ್ಲಿ ವಿಸ್ತೃತ ಯೋಜನಾ ವರದಿಯನ್ನು ಸಿದ್ಧಪಡಿಸಿ ಕೋರ್ಟ್‌ಗೆ ಸಲ್ಲಿಸಬೇಕು' ಎಂದು ನಿರ್ದೇಶಿಸಿದೆ.

ನ್ಯಾಯಪೀಠದ ನಿರ್ದೇಶನಗಳು

- ಕೇಂದ್ರ ಮೋಟಾರು ವಾಹನ ತಿದ್ದುಪಡಿ ನಿಯಮ–2022ರ ಪರಿಣಾಮಕಾರಿ ಜಾರಿಗೆ ಡಿಜಿಪಿ, ಸಾರಿಗೆ ಆಯುಕ್ತರು, ಆರೋಗ್ಯ ಇಲಾಖೆ ಕಾರ್ಯದರ್ಶಿ ಮತ್ತು ಇ-ಆಡಳಿತ ಇಲಾಖೆ ಕಾರ್ಯದರ್ಶಿ ಕ್ರಮ ಕೈಗೊಳ್ಳಬೇಕು.
- ರಾಜ್ಯ ಪೊಲೀಸ್ ಇಲಾಖೆ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ರೂಪಿಸಿರುವ 'ಪರಿವಾಹನ್' ವೆಬ್‌ಸೈಟ್ ಜೊತೆ ರಸ್ತೆ ಅಪಘಾತ ದತ್ತಾಂಶ ಅಥವಾ ಇ-ಡಿಟೈಲ್ ಆ್ಯಕ್ಸಿಡೆಂಟ್ ರಿಪೋರ್ಟ್ (ಇ-ಡಿಎಆರ್) ಅನ್ನು ಸಂಯೋಜಿಸಬೇಕು.
- ಪೊಲೀಸ್ ಇಲಾಖೆಯು, ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ ರೂಪಿಸಿರುವ 'ಯೂನಿಕ್ ಡಿಸೆಬಲಿಟಿ ಐಡಿ ವೆಬ್‌ಸೈಟ್' ಜೊತೆ ದತ್ತಾಂಶವನ್ನೂ ಸಂಯೋಜಿಸಬೇಕು.
- ಕರ್ನಾಟಕ ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿನ ವಿಧಿ ವಿಜ್ಞಾನ ಪ್ರಯೋಗಾಲಯಗಳು ನೀಡಿರುವ ವರದಿಗಳನ್ನು ಪರಿವಾಹನ್ ವೆಬ್‌ಸೈಟ್ ನಲ್ಲಿ ಭರ್ತಿ ಮಾಡಬೇಕು.
- ದೇಶದಾದ್ಯಂತ ವಿಮಾ ಸೇವೆ ಒದಗಿಸುತ್ತಿರುವ ವಿಮಾ ಕಂಪನಿಗಳು ಅಪಘಾತಕ್ಕೊಳಗಾದ ವಾಹನಗಳಿಗೆ ಮಾಡಿಸಿರುವ ವಿಮೆಯ ವಿವರಗಳನ್ನು ಪೊಲೀಸ್ ಇಲಾಖೆ ಏಕೀಕೃತಗೊಳಿಸಬೇಕು.
- ರಸ್ತೆ ಅಪಘಾತದ ವಾಹನಗಳು, ಅದರ ಮಾಲೀಕರು, ಚಾಲಕರು ಹಾಗೂ ಇತರ ವಿವರಗಳನ್ನು ಸಾರಿಗೆ ಇಲಾಖೆ ಯಿಂದ ಪಡೆದು ಅದನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಬೇಕು.

ಪೊಲೀಸ್ ದೂರು ಪ್ರಾಧಿಕಾರಕ್ಕೆ ನೇಮಕ: ಹೈಕೋರ್ಟ್‌ಗೆ ಮಾಹಿತಿ

ಬೆಂಗಳೂರು: 'ಕರ್ನಾಟಕ ಪೊಲೀಸ್ ದೂರು ಪ್ರಾಧಿಕಾರಕ್ಕೆ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎನ್.ಕೆ. ಸುಧೀಂದ್ರ ರಾವ್ ಅವರನ್ನು 2023ರ ಜುಲೈ 31ರಂದು ನೇಮಕ ಮಾಡಲಾಗಿದೆ. ಈಗಾಗಲೇ ಅವರು ಅಧಿಕಾರ ವಹಿಸಿಕೊಂಡಿದ್ದಾರೆ' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

'ಕರ್ನಾಟಕ ಪೊಲೀಸ್ ದೂರು ಪ್ರಾಧಿಕಾರಕ್ಕೆ ಅಧ್ಯಕ್ಷರ ನೇಮಕ ಕುರಿತಂತೆ ನಿರ್ದೇಶಿಸಬೇಕು' ಎಂದು ಕೋರಿ ವಕೀಲೆ ಸುಧಾ ಕಾಟ್ವ ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಅಡ್ವೊಕೇಟ್ ಜನರಲ್ ಕೆ. ಶಶಿಕಿರಣ ಶೆಟ್ಟಿ ಮತ್ತು ಪ್ರಧಾನ ವಕೀಲ ಎಸ್.ಎಸ್.ಮಹೇಂದ್ರ, ಹೈಕೋರ್ಟ್ ನಿರ್ದೇಶನದ ಅನುಸಾರ ಕೈಗೊಂಡಿರುವ ಅನುಪಾಲನಾ ವರದಿಯನ್ನು ನ್ಯಾಯಪೀಠಕ್ಕೆ ಸಲ್ಲಿಸಿ, 'ಪ್ರಾಧಿಕಾರಕ್ಕೆ ವಿಶ್ವೇಶ್ವರಯ್ಯ ಗೋಪುರದಲ್ಲಿ ಕಚೇರಿ ಮತ್ತು ಅಗತ್ಯ ಸಿಬ್ಬಂದಿಯನ್ನು ಒದಗಿಸಲಾಗಿದೆ' ಎಂದು ವಿವರಿಸಿದರು.

ಸುದ್ದಿ 2 ನಿಮಿಷ

'ಎಲ್‌ಎಲ್‌ಬಿ–ಲಿಂಗತ್ವ ಅಲ್ಪಸಂಖ್ಯಾತರಿಗೆ ಮೀಸಲು ಇಲ್ಲ'

ಬೆಂಗಳೂರು: 'ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಮೂರು ವರ್ಷಗಳ ಕಾನೂನು ಪದವಿ (ಎಲ್‌ಎಲ್‌ಬಿ) ಪ್ರವೇಶಾತಿಯಲ್ಲಿ ಲಿಂಗತ್ವ ಅಲ್ಪಸಂಖ್ಯಾತರಿಗೆ ಮೀಸಲು ನೀಡದಿರಲು ನಿರ್ಧರಿಸಲಾಗಿದೆ' ಎಂದು ರಾಷ್ಟ್ರೀಯ ಕಾನೂನು ಶಾಲೆ ವಿಶ್ವವಿದ್ಯಾಲಯ (ಎನ್‌ಎಲ್‌ಎಸ್‌ಯು) ಹೈಕೋರ್ಟ್‌ಗೆ ತಿಳಿಸಿದೆ.

ತಮಗೆ ಕಾನೂನು ಪದವಿ ಪ್ರವೇಶ ನಿರಾಕರಿಸಿರುವ ಎನ್‌ಎಲ್‌ಎಸ್‌ಯು ಕ್ರಮವನ್ನು ಪ್ರಶ್ನಿಸಿ ಲಿಂಗತ್ವ ಅಲ್ಪಸಂಖ್ಯಾತ ಅಭ್ಯರ್ಥಿ ಮುಗಿಲ್ ಅನ್ಬು ವಸಂತ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಅಶೋಕ್ ಎಸ್. ಕಿಣಗಿ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಅರ್ಜಿಗೆ ಆಕ್ಷೇಪಣೆ ಸಲ್ಲಿಸಿದ ಎನ್‌ಎಲ್‌ಎಸ್‌ಯು; ತನ್ನ ಕಾರ್ಯಕಾರಿ ಮಂಡಳಿಯ ನಿರ್ಧಾರವನ್ನು ನ್ಯಾಯಪೀಠಕ್ಕೆ ತಿಳಿಸಿತು.

'ಮೀಸಲಾತಿಯನ್ನು ಸೂಚಿಸುವುದು ಮತ್ತು ಅನುಷ್ಠಾನಗೊಳಿಸುವುದು ವಿಶ್ವವಿದ್ಯಾಲಯದ ಪರಮಾಧಿಕಾರ ಎಂಬುದನ್ನು ಕರ್ನಾಟಕ ಹೈಕೋರ್ಟ್ ಪ್ರಕರಣವೊಂದರಲ್ಲಿ ಆದೇಶಿಸಿದೆ. ವಿಶ್ವವಿದ್ಯಾಲಯ ಅರ್ಜಿದಾರರ ಯಾವುದೇ ಹಕ್ಕನ್ನು ಉಲ್ಲಂಘಿಸಿಲ್ಲ ಅಥವಾ ಅವರ ವಿಚಾರದಲ್ಲಿ ತಾರತಮ್ಯ ನೀತಿ ಅನುಸರಿಸಿಲ್ಲ. ಮೇಲಾಗಿ ಎನ್‌ಎಲ್‌ಎಸ್‌ಎಟಿ-ಎಲ್‌ಎಲ್‌ಬಿ 2023ರ ಮಾರ್ಗಸೂಚಿಯಲ್ಲಿ ಕಾನೂನು ಪದವಿ ಪ್ರವೇಶಾತಿಯಲ್ಲಿ ಲಿಂಗತ್ವ ಅಲ್ಪಸಂಖ್ಯಾತರಿಗೆ ಮೀಸಲು ಒದಗಿಸುವ ಬಾಧ್ಯತೆ ಹೊಂದಿಲ್ಲ' ಎಂದು ಸ್ಪಷ್ಟಪಡಿಸಿತು.

ಆಕ್ಷೇಪಣೆಯನ್ನು ದಾಖಲಿಸಿಕೊಂಡ ನ್ಯಾಯಪೀಠ ಈ ಕುರಿತಂತೆ ಉತ್ತರಿಸಲು ರಾಜ್ಯ ಸರ್ಕಾರಕ್ಕೆ ಒಂದು ವಾರ ಕಾಲಾವಕಾಶ ನೀಡಿ ವಿಚಾರಣೆ ಮುಂದೂಡಿತು.

ನಿಧನ

ಕೆ.ಕೃಷ್ಣಪ್ಪ

ಸುದ್ದುಗುಂಟೆ ಪಾಳ್ಯ, ಸಿ ವಿ ರಾಮನ್ ನಗರ, ಬೆಂಗಳೂರು-93

ಇವರು ದಿನಾಂಕ: 09.08.2023ರಂದು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅಂತ್ಯಕ್ರಿಯೆಯನ್ನು ದಿ: 10.08.2023ರಂದು ಮಧ್ಯಾಹ್ನ 3.00 ಗಂಟೆಗೆ ಸಿ.ವಿ.ರಾಮನ್‌ನಗರ ರುದ್ರಭೂಮಿಯಲ್ಲಿ ನಡೆಸಲಾಗುವುದು.

ದುಃಖತಪ್ತರು: ಕುಟುಂಬದವರು

'ಬೆಂಗಳೂರು– ಕನಕಪುರ ರಸ್ತೆ ಸುರಕ್ಷತಾ ಕ್ರಮ ಸಾಲದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನಕಪುರ-ಬೆಂಗಳೂರು ಮಾರ್ಗದ ರಸ್ತೆಯಲ್ಲಿ ವಾಹನ ಸವಾರರಿಗೆ ಸೂಕ್ತ ರೀತಿಯ ಸುರಕ್ಷತಾ ಕ್ರಮಗಳಿಲ್ಲ' ಎಂದ ಹೈಕೋರ್ಟ್, ಭಾರತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ (ಎನ್‌ಎಚ್‌ಎಐ) ನಡೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

ಬೆಂಗಳೂರು-ಕನಕಪುರ ರಸ್ತೆ ವಿಸ್ತರಣೆ ಕುರಿತಂತೆ ಎಸ್.ಪಿ. ಸಂದೀಪ್ ರಾಜು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು. ರಸ್ತೆ ಸುರಕ್ಷತೆಗೆ ಸಂಬಂಧಿಸಿದಂತೆ ಕೋರ್ಟ್ ಕಮಿಷನರ್ ಸಲ್ಲಿಸಿದ ವರದಿ ಪರಿಗಣಿಸಿದ ನ್ಯಾಯಪೀಠವು, 'ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಸುರಕ್ಷತೆ ವಿಷಯದಲ್ಲಿ ಪರಿಣತಿ ಹೊಂದಿದೆ. ಆದರೂ, ಈ ಪ್ರಕರಣದಲ್ಲಿ ಸುರಕ್ಷತೆಯನ್ನು ಕಡೆಗಣಿಸಲಾಗಿದೆ'ಎಂದು ಅತೃಪ್ತಿ ವ್ಯಕ್ತಪಡಿಸಿತು.

'ರಾತ್ರಿ ವೇಳೆ ಸಂಚರಿಸುವ ವಾಹನ ಸವಾರರಿಗೆ, ಅದರಲ್ಲೂ ಬೈಕ್ ಸವಾರರಿಗೆ ಸುರಕ್ಷತೆ ಇಲ್ಲದಂತಾಗಿದೆ. ಆದ್ದರಿಂದ, ಸೂಕ್ತಕ್ರಮ ಕೈಗೊಳ್ಳುವ ಮೂಲಕ ಪ್ರಮಾಣ ಪತ್ರ ಸಲ್ಲಿಸಬೇಕು' ಎಂದು ನಿರ್ದೇಶಿಸಿತು.

ಇದಕ್ಕೂ ಮುನ್ನ ಎನ್‌ಎಚ್‌ಎಐ ಪರ ವಕೀಲರು, 'ಬೆಂಗಳೂರು- ಕನಕಪುರ ರಸ್ತೆ ವಿಸ್ತರಣೆ ಕಾಮಗಾರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಮೊದಲು ಗುತ್ತಿಗೆ ಪಡೆದಿದ್ದ ಕಂಪನಿಯು ಮಳವಳ್ಳಿಯ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಪ್ರಸ್ತುತ ತಡೆಯಾಜ್ಞೆ ಇದೆ. ಹೀಗಾಗಿ ಕಾಮಗಾರಿ ವಿಳಂಬಕ್ಕೆ ಕಾರಣವಾಗಿದೆ' ಎಂದು ವಿವರಿಸಿದರು.

ಅಪಘಾತ: ಇಬ್ಬರು ಮಕ್ಕಳ ಸಾವು

ರಾಮನಗರ: ತಾಲ್ಲೂಕಿನ ಮಾಗಡಿ ರಸ್ತೆಯ ಗೊಲ್ಲರದೊಡ್ಡಿ ಗ್ರಾಮದಲ್ಲಿ ಬುಧವಾರ ರಾತ್ರಿ ಟ್ಯೂಷನ್ ಮುಗಿಸಿಕೊಂಡು ಮನೆಗೆ ವಾಪಸ್ಸಾಗುತ್ತಿದ್ದ ಐವರು ಮಕ್ಕಳಿಗೆ ಟಾಟಾ ಏಸ್ ಗೂಡ್ಸ್ ವಾಹನ ಡಿಕ್ಕಿ ಹೊಡೆದಿದಿದ್ದರಿಂದ ಇಬ್ಬರು ಮೃತಪಟ್ಟಿದ್ದಾರೆ. ಮೂವರಿಗೆ ಗಂಭೀರ ಗಾಯಗಳಾಗಿವೆ.

ಗ್ರಾಮದ ಲಕ್ಷ್ಮೀಶ –ಕವಿತಾ ದಂಪತಿ ಪುತ್ರ ಎರಡನೇ ತರಗತಿಯ ರೋಹಿನ್ (8) ಮತ್ತು ರಾಜಣ್ಣ– ಶಾಂತಮ್ಮ ದಂಪತಿ ಪುತ್ರಿ ಮೂರನೇ ತರಗತಿಯ ಶಾಲಿನಿ(8) ಮೃತಪಟ್ಟವರು. ಗಂಭೀರವಾಗಿ ಗಾಯಗೊಂಡಿರುವ ಸುಚಿತ್, ಗೌತಮಿ ಹಾಗೂ ಲೇಖನ ಅವರಿಗೆ ರಾಮನಗರದ ರಾಮಕೃಷ್ಣ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ, ನಂತರ ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಗೆ ಸಾಗಿಸಲಾಗಿದೆ. ಗಾಯಾಳು ಪೈಕಿ ಒಬ್ಬ ಬಾಲಕಿ ಮೃತ ಶಾಲಿನಿಯ ಸಹೋದರಿಯಾಗಿದ್ದಾಳೆ.

ಗ್ರಾಮದ ಮನೆಯೊಂದರಲ್ಲಿ ರಾತ್ರಿ 8ರ ಸುಮಾರಿಗೆ ಮಕ್ಕಳು ಟ್ಯೂಷನ್ ಮುಗಿಸಿಕೊಂಡು ಮನೆಗೆ ಹೋಗುತ್ತಿದ್ದರು. ರಸ್ತೆ ಬದಿ ನಿಂತಿದ್ದ ಟ್ಯಾಂಕರ್ ಲಾರಿ ಪಕ್ಕ ನಡೆದುಕೊಂಡು ಹೋಗುತ್ತಿದ್ದ ಮಕ್ಕಳಿಗೆ ಮಾಗಡಿ ಕಡೆಯಿಂದ ವೇಗವಾಗಿ ಬಂದಿರುವ ಗೂಡ್ಸ್ ವಾಹನ ಡಿಕ್ಕಿ ಹೊಡೆದಿದೆ ಎಂದು ರಾಮನಗರ ಗ್ರಾಮಾಂತರ ಠಾಣೆ ಪೊಲೀಸರು ತಿಳಿಸಿದರು.

ಡಿಕ್ಕಿಯ ರಭಸಕ್ಕೆ ಮಕ್ಕಳು ಟ್ಯಾಂಕರ್ ತಳಕ್ಕೆ ಬಿದ್ದರು. ಗಂಭೀರವಾಗಿ ಗಾಯಗೊಂಡ ಮಕ್ಕಳನ್ನು ಸ್ಥಳೀಯರು ವಾಹನದಲ್ಲಿ ರಾಮನಗರದ ರಾಮಕೃಷ್ಣ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದಾರೆ. ಆದರೆ, ತಲೆಗೆ ಗಂಭೀರವಾದ ಪೆಟ್ಟು ಬಿದ್ದಿದ್ದರಿಂದ ರೋಹಿನ್ ಮತ್ತು ಶಾಲಿನಿ ಬದುಕುಳಿಯಲಿಲ್ಲ. ಘಟನೆ ಬಳಿಕ ವಾಹನ ಚಾಲಕ ವರದರಾಜು, ವಾಹನ ಬಿಟ್ಟು ಪರಾರಿಯಾಗಿದ್ದಾನೆ ಎಂದು ಹೇಳಿದರು.

ನಮ್ಮ ಮೇಲೂ ವಾಹನ ಹತ್ತಿಸಲು ಯತ್ನ: 'ಒಂಬತ್ತು ಮಕ್ಕಳು ಟ್ಯೂಷನ್‌ಗೆ ಹೋಗಿದ್ದರು. ನಾಲ್ಕು ಮಕ್ಕಳು ಸ್ವಲ್ಪ ಮುಂದೆಯೇ. ಉಳಿದ ಐವರು ಒಟ್ಟಿಗೆ ಬರುತ್ತಿದ್ದರು. ಮಕ್ಕಳು ಬರುತ್ತಿದ್ದದ್ದು ರಸ್ತೆಯ ಅಕ್ಕಪಕ್ಕದಲ್ಲಿದ್ದವರಿಗೆ ಕಾಣುತ್ತಿತ್ತು. ಕೈ ಹಿಡಿದುಕೊಂಡು ಬರುತ್ತಿದ್ದ ಮಕ್ಕಳಿಗೆ ನೋಡನೋಡುತ್ತಿದ್ದಂತೆ ವಾಹನ ಡಿಕ್ಕಿ ಹೊಡೆಯಿತು' ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದರು.

'ಮನೆ ಬಳಿ ಇದ್ದವರು ತಕ್ಷಣ ರಸ್ತೆಗೆ ಓಡಿ ಬಂದು ವಾಹನ ತಡೆಯಲು ಯತ್ನಿಸಿದೆವು. ಚಾಲಕ ನಮ್ಮತ್ತ ವಾಹನ ನುಗ್ಗಿಸಲು ಮುಂದಾಗಿದ್ದರಿಂದ ಪಕ್ಕಕ್ಕೆ ಓಡಿದೆವು. ಆತ ನಿಲ್ಲಿಸದೆ ಜೋರಾಗಿ ಹೋದ. ನಂತರ ನಾವು ಟ್ಯಾಂಕರ್ ಕೆಳಗೆ ರಕ್ತದ ಮಡುವಿನಲ್ಲಿದ್ದ ಮಕ್ಕಳನ್ನು ಎತ್ತಿಕೊಂಡು ರಾಮನಗರಕ್ಕೆ ಆಸ್ಪತ್ರೆಗೆ ಕರೆದುಕೊಂಡು ಬಂದೆವು' ಎಂದು ಹೇಳಿದರು.

ಜ್ಯೋತಿಷಿ ಪುತ್ರನ ಅಪಹರಿಸಿ ₹ 5 ಲಕ್ಷಕ್ಕೆ ಬೇಡಿಕೆ: ಬಂಧನ

ಬೆಂಗಳೂರು: ನಗರದಲ್ಲಿ ಸಿನಿಮೀಯ ರೀತಿಯಲ್ಲಿ ಜ್ಯೋತಿಷಿಯ ಪುತ್ರನನ್ನು ಅಪಹರಿಸಿ, ₹ 5 ಲಕ್ಷಕ್ಕೆ ಬೇಡಿಕೆಯಿಟ್ಟಿದ್ದ ಆರೋಪಿಯನ್ನು ಎಚ್‌ಎಸ್‌ಆರ್ ಲೇಔಟ್ ಪೊಲೀಸರು ಬಂಧಿಸಿದ್ದಾರೆ.

ಜ್ಯೋತಿಷಿ ಮಣಿವಾಸಕನ್ ಅವರ 18 ವರ್ಷದ ಪುತ್ರನನ್ನು ತುಮಕೂರಿನ ಅರ್ಜುನ್ ಅಪಹರಣ ಮಾಡಿ ಹಣಕ್ಕೆ ಬೇಡಿಕೆಯಿಟ್ಟಿದ್ದ ಎಂದು ಪೊಲೀಸರು ಹೇಳಿದರು.

'ನಗರದ ಪಿಜಿಯೊಂದರಲ್ಲಿ ಆರೋಪಿ ಅರ್ಜುನ್ ನೆಲೆಸಿದ್ದ. ಸಾಧನೆ ಮಾಡಬೇಕೆಂದು ಬೆಂಗಳೂರಿಗೆ ಬಂದಿರುವುದಾಗಿ ಹೇಳಿಕೊಳ್ಳುತ್ತಿದ್ದ. ಗ್ಯಾರೇಜ್‌ನಲ್ಲಿ ಕೆಲಸ ಮಾಡುತ್ತಿದ್ದ ಆತ ದುಡ್ಡಿಗಾಗಿ ಯಾರನ್ನಾದರೂ ಅಪಹರಣ ಮಾಡಬೇಕೆಂದು ಯೋಜನೆ ರೂಪಿಸಿದ್ದ. ಜ್ಯೋತಿಷಿಯ ಪುತ್ರ ಮೆಡಿಕಲ್ ಸೀಟಗಾಗಿ ಕೋಚಿಂಗ್ ತೆರಳುತ್ತಿರುವುದನ್ನು ಆರೋಪಿ ಗಮನಿಸಿದ್ದ. ಆರೋಪಿಗೆ ಸಿನಿಮಾ ವೀಕ್ಷಣೆ ಹವ್ಯಾಸವಿತ್ತು. ಸಿನಿಮಾದಿಂದ ಪ್ರೇರಣೆಗೊಂಡು ಅಪಹರಣಕ್ಕೆ ಸಿನಿಮಾದಲ್ಲಿ ಬರುವ ದೃಶ್ಯಾವಳಿಯಂತೆಯೇ ಯೋಜನೆ ರೂಪಿಸಿದ್ದ. ಡ್ರಾಪ್ ಕೇಳುವ ನೆಪದಲ್ಲಿ ಕಾರನ್ನು ಅಡ್ಡಗಟ್ಟಿದ್ದ ಆರೋಪಿ ಯುವಕ ಪುತ್ರನ ಹಣೆಗೆ ಗನ್‌ಯಿಟ್ಟು ಅಪಹರಣ ಮಾಡಿದ್ದ. ಬಳಿಕ ಜ್ಯೋತಿಷಿಗೆ ವಾಟ್ಸ್‌ಆ್ಯಪ್ ಕರೆ ಮಾಡಿ ಹಣ ನೀಡುವಂತೆ ಬೇಡಿಕೆಯಿಟ್ಟಿದ್ದ. ಮೊಬೈಲ್ ಲೊಕೇಶನ್ ಆಧರಿಸಿ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಹೆದರಿಸಲು ಬಳಸಿದ್ದ ಗನ್ ಡಮ್ಮಿ ಎಂಬುದು ತನಿಖೆಯಿಂದ ಗೊತ್ತಾಗಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

General

CARRIER OPPORTUNITY to Earn 50k to 1 Lakh per month for Retired, Bankers, Sr.Citizens, Business People and Housewife Part/ Full time. Contact:- 9480612899/ 9008002763.

Teachers/ Professors

WELL ESTABLISHED ICSE school in Indiranagar is looking for a Principal, VP, teachers and admin staff. Please call -9980988724

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

PUBLIC NOTICE

NOTICE
To whom so ever it may concern.
Ministry of Environment, Forest and Climate Change has issued Environmental Clearance Certificate vide ref. No SEIAA 17 IND 2022 dated 26th July 2023 to M/s. Pai & Pai Chemicals (I) Pvt Ltd, for the expansion of the treatment plant located at No. 29/A, I phase, Kumbalgudu Industrial area, Bengaluru-560 074.

EDUCATIONAL

Correspondence Courses

STUDY AT Home SSLC DIRECT 2nd PUC Regular Class Science Commerce Arts. BA,B.Com,BBA, B.Sc,BCA,BSW, B.LISc,B.Ed, M.Ed, M.LISc,MA M.Com,M.Sc, MBA, MSW, MCA,PG-Diploma Courses, Contact: Manasa Correspondence College. Malleshwaram Circle Bangalore. 9663555154/ 9880498484.

PERSONAL

Change of Name

SUJATHA SURESH, Wife/o, JC681763L, SUB HONY LT/ASH, SURESH P.M, Vill-Kuttikkattoor Velliparamba, Calicut, Kozhikode Kerala changed name SUJATHA SURESH to SUJATHA K P, 08/08/2023 Notary K.V. Mani, Bangalore

CHANGE OF NAME
I, SHRIHARI M, R/at # 425, 6th Main Road, Attur Layout, Yelahanka, Bangalore-560064 found my name was wrongly mentioned as SRIHARI M in my daughter's school certificates, hereby declaring that my correct name is SHRIHARI M vide affidavit dt. 21/07/2023 before VII addl. Chief Metropolitan Magistrator, Bangalore.

CHANGE OF NAME
I,SHIVAMMA M, W/o No.14811809-L, Rank: NK-TS, Harsha M, R/at # 868, Rakitha, 14th Main, 13th 'B' Cross, Chandra Layout, Nagarabhavi 1st Stage, bangalore-72, have changed my name to SHIVAMMA declare that my D.O.B. is mentioned in the army record as 30.12.1981 & correct D.O.B. is 31.12.1980, vide affidavit dt. 04/07/2023 before Notary D.G. Shanthappa, Bengaluru.

CHANGE OF NAME
I, AMMINI M as per service documents, dependent of Balakrishnan M resident of Moochitharakkal House, Pulappatta, Palakkad, Kerala-678632 have changed my Name from AMMINI M as per service documents to AMMINI AMMA vide affidavit dated 05.08.2023 before notary A.R.Muneer Ahmed Bengaluru Metropolitan area

CHANGE OF NAME
I, KEVIN GEORGE, R/at. # 20, R. A. Road, Ejipura, Viveknagar Post, Bengaluru-560047 have changed my name to KEVIN DOUGLAS GEORGE vide affidavit dt. 09/08/2023 before Notary S.I. Balaguru, Bengaluru. Henceforth I shall be called KEVIN DOUGLAS GEORGE only

CHANGE OF NAME
I, SIVARANJANI.M, D/o. Mr. C.Mahendran, aged about 30 years, Roman Catholic Christian by religion, R/at. 'Sri Guru Krupa', 2/2, 4th Main, 3rd Stage, 2nd Block, behind Carmel College, Basaveshwara Nagara, Bengaluru-560079, PAN: DVYPS9615D, AADHAAR NO. 3134 2531 7628, is also known and called as A.CYNTHIA BRIDGIT, but from the date 07/08/23 I am being called and known only as A.CYNTHIA BRIDGIT and not as SIVARANJANI.M, and to this effect I have executed my Notary attested Affidavit, dated 07/08/23, Notarial Register Sl. No. 169, Page No. 38, Volume-II.

I, SUSHIL KUMAR, resident of No. 136, 3rd Main, 4th Cross, RMV 2nd Stage Ashwathnager, Bangalore-560094, have changed my Name to SUSHIL AGARWAL Vide Affidavit dated 08.08.2023 sworn before Smt. A. Manjula Advocate & Notary, Bangalore

CHANGE OF NAME
I, BUDURUNNISA, R/at. 20/1, 4th Main Road, Bismilla Nagar, Bengaluru - 560029, have changed my name to BUDURUNNISA KHATAI vide affidavit dated 08/08/2023 before Notary Hegde Ganapati Venkatraman, Bangalore. Henceforth I shall be called BUDURUNNISA KHATAI only

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

Bunts' Sangha Bangalore
#324, Bunts' Sangha Complex, Chord Road, Vijaynagar, B'lore-40
Tel : 080-23399323/635/636 Web: www.buntsanghablr.com
Email : buntsanghabangalore@yahoo.in/info@buntsanghablr.com
TENDER NOTIFICATION
Invites EOI from the Suppliers / contractors having technical and financial capacity for Supply and fixing of Tip- up mechanism chair with push back for Auditorium
Sd/-Hon. Secretary
For further details visit Sangha website or contact above address and submit tender within 7 days

DH ಪ್ರಜಾವಾಣಿ
JOB CORNER
BOOK JOB ADS ON WEEKDAY + SUNDAY
@ 803/-* Per Sqcm Single Column
@ 825/-* Per Sqcm Multi Column
conditions apply*
For more information Contact:
9845114560 : 9731810277
9901641752 : 9886213331
080 - 45557163 / 164

ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ರೈತ ಮೋರ್ಚಾ ಪ್ರತಿಭಟನೆ

'80 ದಿನಗಳಲ್ಲಿ 50 ರೈತರ ಆತ್ಮಹತ್ಯೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭ್ರಷ್ಟಾಚಾರ, ವರ್ಗಾವಣೆ ದಂಧೆಯಲ್ಲಿ ಮುಳುಗಿರುವ ಕಾಂಗ್ರೆಸ್ ಸರ್ಕಾರದ 80 ದಿನಗಳ ಅವಧಿಯಲ್ಲಿ 50ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕಲುಷಿತ ನೀರು ಸೇವಿಸಿ ಹಲವರು ಮೃತಪಟ್ಟಿದ್ದಾರೆ. ಈ ಸರ್ಕಾರವೂ ಬದುಕಿಲ್ಲ' ಎಂದು ಬಿಜೆಪಿ ಮುಖಂಡ ಸಿ.ಟಿ.ರವಿ ಹರಿಹಾಯ್ದಿದ್ದಾರೆ.

ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಬಿಜೆಪಿ ಮಹಾನಗರ ರೈತ ಮೋರ್ಚಾ ವತಿಯಿಂದ ನಡೆದ ಪ್ರತಿಭಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, 'ಸಿದ್ದರಾಮಯ್ಯ ನೇತೃತ್ವದ ಸರ್ಕಾರ ನೀರಾವರಿಗೆ ಹಣ ಇಟ್ಟಿಲ್ಲ. ಕಿಸಾನ್ ಸಮ್ಮಾನ್, ರೈತ ವಿದ್ಯಾನಿಧಿ, ಭೂಸಿರಿ ಸೇರಿ ಅನೇಕ ಯೋಜನೆಗಳನ್ನು ರದ್ದುಪಡಿಸುವ ಮೂಲಕ ರೈತರ ಬೆನ್ನು ಮೂಳೆ ಮುರಿಯಲು ಮುಂದಾಗಿದೆ' ಎಂದು ಟೀಕಿಸಿದರು.

ಬಿಜೆಪಿ ನಾಯಕ ಸಿ.ಟಿ.ರವಿ ನೇತೃತ್ವದಲ್ಲಿ ರೈತ ಮೋರ್ಚಾದ ವತಿಯಿಂದ ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಯಿತು.

ಶಾಸಕ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಮಾತನಾಡಿ, ಕಿಸಾನ್ ಸಮ್ಮಾನ್ ಯೋಜನೆಯಡಿ ಕೇಂದ್ರದ ₹6,000 ಜತೆ, ಹೆಚ್ಚುವರಿಯಾಗಿ ರಾಜ್ಯ ಸರ್ಕಾರ ನೀಡುತ್ತಿದ್ದ ₹4,000 ನಿಲ್ಲಿಸಲಾಗಿದೆ. ಕ್ಷೀರ ಸಮೃದ್ಧಿ ಬ್ಯಾಂಕ್, ಗೋಶಾಲೆ ಯೋಜನೆಗಳನ್ನೂ ನಿಲ್ಲಿಸಲಾಗಿದೆ. ಕಾಂಗ್ರೆಸ್ ಸರ್ಕಾರ, ರೈತರ ಪರವಾಗಿದ್ದ ಎಪಿಎಂಸಿ ಕಾಯ್ದೆಯನ್ನು ದಲ್ಲಾಳಿಗಳ ಪರವಾಗಿ ಮಾಡಿದೆ ಎಂದರು.

ಪ್ರತಿಭಟನೆಯಲ್ಲಿ ಎಸ್‌ಸಿ ಮೋರ್ಚಾ ರಾಜ್ಯ ಅಧ್ಯಕ್ಷ ಛಲವಾದಿ ನಾರಾಯಣಸ್ವಾಮಿ, ರೈತ ಮೋರ್ಚಾ ಉಪಾಧ್ಯಕ್ಷ ಲೋಕೇಶ್ ಗೌಡ, ಬೆಂಗಳೂರು ಉತ್ತರ ಮೋರ್ಚಾ ಜಿಲ್ಲಾಧ್ಯಕ್ಷ ಸತೀಶ್ ಕಡತನಮಲೆ, ಬೆಂಗಳೂರು ಕೇಂದ್ರ ಮೋರ್ಚಾ ಜಿಲ್ಲಾಧ್ಯಕ್ಷ ರುದ್ರಪ್ಪ, ಬೆಂಗಳೂರು ರೈತ ಮೋರ್ಚಾ ಜಿಲ್ಲಾಧ್ಯಕ್ಷ ಅಶೋಕ್ ಕುಮಾರ್ ಭಾಗವಹಿಸಿದ್ದರು.

'12 ತಾಸು ಕೆಲಸ': ಪೊಲೀಸರ ಅಳಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮಗೂ ರಕ್ತ ಸಂಚಲನ ಮಾಡುವಂತಹ ದೇಹವೇ ಇದೆ. ನಮ್ಮದು ಕೃತಕ ದೇಹ ಅಲ್ಲ. ಸಮಯಕ್ಕೆ ಸರಿಯಾಗಿ ಊಟ, ನಿದ್ರೆ, ವಿಶ್ರಾಂತಿ ಬೇಕಿದೆ. ಆದರೆ, ಪೊಲೀಸ್ ಇಲಾಖೆಯಲ್ಲಿ 12 ತಾಸು ಕೆಲಸ ಮಾಡಬೇಕಿದೆ. ಅದರ ನಡುವೆಯೇ ವಿಶ್ರಾಂತಿ ಪಡೆಯುತ್ತಿದ್ದರೆ ಶಿಕ್ಷೆ ವಿಧಿಸಲಾಗುತ್ತಿದೆ. ಇದು ಎಷ್ಟರ ಮಟ್ಟಿಗೆ ಸರಿ...'

– ಇದು ನಗರದ ಠಾಣೆಯೊಂದರ ಎಎಸ್‌ಐ ಒಬ್ಬರು ವಾಟ್ಸ್‌ಆ್ಯಪ್ ನಲ್ಲಿ ಅಳಲು ತೋಡಿಕೊಂಡ ಪರಿ. ಅವರ ಬರಹವು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

'ನಾನು 27 ವರ್ಷಗಳಿಂದ ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ಇಲಾಖೆ ಕೆಲಸದಲ್ಲಿ ಸಾಕಷ್ಟು ಅನುಭವವಾಗಿದೆ. ಎಲ್ಲ ಪೊಲೀಸ್ ಠಾಣೆಗಳಲ್ಲೂ ರಾತ್ರಿ ಪಾಳಿಯಲ್ಲಿ ನಾಲ್ಕರಿಂದ ಐದು ಮಂದಿಯನ್ನು ನಿಯೋಜಿಸಲಾಗುತ್ತದೆ. ಸಿಬ್ಬಂದಿ ಠಾಣೆಗಳಲ್ಲೇ ಇರುತ್ತಾರೆ. ಸಾರ್ವಜನಿಕರಿಂದ ಯಾವುದೇ ರೀತಿಯ ದೂರುಗಳು ಬಂದರೆ ಅದಕ್ಕೆ ಸ್ಪಂದಿಸಿ ನ್ಯಾಯ ದೊರಕಿಸಿ ಕೊಡುವಲ್ಲಿ ತೊಡಗುತ್ತಾರೆ. ಇದಕ್ಕೆ ಸಮಯದ ಮಿತಿಯೂ ಇಲ್ಲ' ಎಂದು ಅವರು ಹೇಳಿದ್ದಾರೆ.

'ರಾತ್ರಿ ಪಾಳಿ ವೇಳೆ ಕರ್ತವ್ಯ ನಿರ್ವಹಿಸುವಾಗ, ಕೆಲವರು ಸ್ವಲ್ಪ ಸಮಯ ವಿಶ್ರಾಂತಿ ಪಡೆದುಕೊಳ್ಳುತ್ತೇವೆ. ಉಳಿದವರು ಕೆಲಸ ಮಾಡುತ್ತಿರುತ್ತೇವೆ. ಇದು, ಹಿಂದಿನಿಂದಲೂ ನಡೆದುಕೊಂಡು ಬಂದ ಪದ್ಧತಿ. ಆದರೆ, ರಾತ್ರಿ ಪಾಳಿಯಲ್ಲಿ ದೂರು ಕೊಡಲು ಬಂದ ಸಾರ್ವಜನಿಕರಿಗೆ ತೊಂದರೆ ಕೊಡುವುದಿಲ್ಲ. ದೂರು ತೆಗೆದುಕೊಳ್ಳುವುದಿಲ್ಲ ಎಂದು ಯಾರೂ ವಾಪಸ್ ಕಳುಹಿಸಿರುವುದಿಲ್ಲ. ಇಲಾಖೆ ಮೇಲಧಿಕಾರಿಗಳು ಕೆಲವು ಠಾಣೆಗಳಿಗೆ ಬೆಳಗಿನಜಾವ ಭೇಟಿ ನೀಡುತ್ತಿದ್ದಾರೆ. ಆಗ ಕೆಲವು ಸಿಬ್ಬಂದಿ ವಿಶ್ರಾಂತಿ ಪಡೆಯುತ್ತಿರುತ್ತಾರೆ. ಉಳಿದವರು ಕಚೇರಿ ಕೆಲಸ ಮಾಡುತ್ತಿರುತ್ತಾರೆ. ಅದನ್ನೇ ನೆಪವಾಗಿಸಿಕೊಂಡು ಅಮಾನತು ಮಾಡಲಾಗುತ್ತಿದೆ. ಇದು ಎಷ್ಟರ ಮಟ್ಟಿಗೆ ಸರಿ' ಎಂದು ಪತ್ರದಲ್ಲಿ ಪ್ರಶ್ನಿಸಿದ್ದಾರೆ.

'ಪೊಲೀಸ್ ಇಲಾಖೆಯಲ್ಲಿ ತಕ್ಕ ಸೌಲಭ್ಯಗಳು ಇಲ್ಲ. ಪೊಲೀಸ್ ಕಾಯ್ದೆ ಪ್ರಕಾರ ಕಾನ್‌ಸ್ಟೆಬಲ್, ಹೆಡ್ ಕಾನ್‌ಸ್ಟೆಬಲ್‌ಗೆ 8 ತಾಸು ಮಾತ್ರ ಕೆಲಸದ ಅವಧಿ ಆಗಿದೆ. ಆದರೆ, 12 ಗಂಟೆ ಕೆಲಸ ಮಾಡುತ್ತಿದ್ದೇವೆ. ಪ್ರಯಾಣದ ಅವಧಿ ಸೇರಿ 16 ತಾಸಿಗೆ ಕೆಲಸದ ಅವಧಿ ತಲುಪುತ್ತಿದೆ. ವಿಶ್ರಾಂತಿ ತೆಗೆದುಕೊಳ್ಳಲು ನಮಗೆ ಸಮಯ ಇರುವುದಿಲ್ಲ. ಇದರಿಂದ ಕಾಯಿಲೆಗಳು ಬರುತ್ತಿವೆ. ರಕ್ತದ ಒತ್ತಡ ಮತ್ತು ಸಕ್ಕರೆ ಕಾಯಿಲೆ ಅಧಿಕಗೊಳ್ಳುತ್ತಿವೆ. ಈ ರೀತಿ ಎಲ್ಲ ಠಾಣೆಗಳಲ್ಲೂ ಅಮಾನತು ಮಾಡಿದರೆ ಠಾಣೆಗಳಲ್ಲಿ ಸಿಬ್ಬಂದಿಯೇ ಇರುವುದಿಲ್ಲ' ಎಂದೂ ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಕೊಲೆ ಮಾಡಿ ಶರಣಾದ ಆರೋಪಿ

ಬೆಂಗಳೂರು: ಕೆಂಗೇರಿ ಪೊಲೀಸ್ ಠಾಣಾ ವ್ಯಾಪ್ತಿಯ ಕೊಮ್ಮಘಟ್ಟದ ಮೈದಾನದಲ್ಲಿ ವ್ಯಕ್ತಿಯನ್ನು ಕೊಲೆ ಮಾಡಿದ್ದ ಆರೋಪಿ ಠಾಣೆಗೆ ಬಂದು ಶರಣಾಗಿದ್ದಾನೆ.

ಚೇತನ್ (21) ಕೊಲೆಯಾದ ವ್ಯಕ್ತಿ. ಕೊಮ್ಮಘಟ್ಟದ ಅಮಾನ್ ಉಲ್ಲಾ ಖಾನ್ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

'ಚೇತನ್ ಹಾಗೂ ಅಮಾನ್ ಉಲ್ಲಾ ಖಾನ್ ನಡುವೆ ಗಲಾಟೆ ನಡೆದಿತ್ತು. ಗಲಾಟೆ ಬಳಿಕ ಬುಧವಾರ ಬೆಳಿಗ್ಗೆ 10ರ ಸುಮಾರಿಗೆ ಮೈದಾನದ ಬಳಿ ಚೇತನ್ ತಲೆಗೆ ಕಲ್ಲು ಎತ್ತಿ ಹಾಕಿ ಕೊಲೆ ಮಾಡಲಾಗಿತ್ತು. ಆರೋಪಿ ಠಾಣೆಗೆ ಬಂದು 'ಸರ್ ನಾನೇ ಕೊಲೆ ಮಾಡಿದ್ದೇನೆ. ಮೃತದೇಹ ತರೋಣ' ಎಂದು ಪೊಲೀಸರಿಗೆ ಹೇಳಿದ್ದ' ಎಂದು ಮೂಲಗಳು ತಿಳಿಸಿವೆ. 'ಗಲಾಟೆಗೆ ಕಾರಣ ತಿಳಿದುಬಂದಿಲ್ಲ' ಎಂದೂ ಪೊಲೀಸರು ತಿಳಿಸಿದ್ದಾರೆ.

ಆಟೊ ಚಾಲಕನಿಗೆ ₹23 ಸಾವಿರ ವಂಚಿಸಿದ ಯುವತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಿರಿನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಯುವತಿಯೊಬ್ಬಳು ಫೋನ್ ಪೇ ಮೂಲಕ ಹಣ ನೀಡುವುದಾಗಿ ಹೇಳಿ ಆಟೊ ಚಾಲಕನಿಗೆ ವಂಚಿಸಿ ಪರಾರಿಯಾಗಿದ್ದಾಳೆ.

ನಾಗರಬಾವಿ ಮಹದೇಶ್ವರ ಲೇಔಟ್‌ನ ನಿವಾಸಿ ಶಿವಕುಮಾರ್ ವಂಚನೆಗೆ ಒಳಗಾದವರು.

'ಶಿವಕುಮಾರ್ ಅವರು ಆಟೊ ಚಾಲನೆ ಮಾಡಿಕೊಂಡು ತೆರಳುತ್ತಿದ್ದಾಗ ಚಂದ್ರಾಲೇಔಟ್ ಸಮೀಪ ಯುವತಿಯೊಬ್ಬಳು ಆಟೊ ಹತ್ತಿದ್ದಳು. ಮಾರ್ಗಮಧ್ಯದಲ್ಲಿ ಶಿವಕುಮಾರ್‌ಗೆ ಸ್ನೇಹಿತ ರೊಬ್ಬರು ಕರೆ ಮಾಡಿದಾಗ ಪಿಇಎಸ್ ಕಾಲೇಜು ಬಳಿ ಬರುತ್ತಿದ್ದು, ಅಲ್ಲಿಗೆ ಹಣ ತಲುಪಿಸುವಂತೆ ಹೇಳಿದ್ದರು. ಅವರು ಪಿಇಎಸ್ ಕಾಲೇಜು ಬಳಿ ಬಂದು ₹23 ಸಾವಿರ ಹಣ ಕೊಟ್ಟು ಹೋಗಿದ್ದರು. ಆಟೊದಲ್ಲಿದ್ದ ಆಕೆ ಎಲ್ಲವನ್ನೂ ಗಮನಿಸಿದ್ದಳು' ಎಂದು ಪೊಲೀಸರು ಹೇಳಿದರು.

'ನಾನು ಕಾಲೇಜಿಗೆ ಶುಲ್ಕ ಪಾವತಿಸಬೇಕು. ಫೋನ್ ಪೇ ಮೂಲಕ ಕಾಲೇಜಿನವರು ಶುಲ್ಕ ಪಡೆದು ಕೊಳ್ಳುವುದಿಲ್ಲ. ನಿಮ್ಮ ಬಳಿಯಿರುವ ₹ 23 ಸಾವಿರ ಹಣವನ್ನು ನನಗೆ ನೀಡಿದರೆ, ಅಷ್ಟು ಹಣವನ್ನು ಫೋನ್ ಪೇ ಮಾಡುತ್ತೇನೆಂದು ನಂಬಿಸಿದ್ದಳು. ಯುವತಿ ಮಾತನ್ನು ನಂಬಿದ ಆಟೊ ಚಾಲಕ, ಆ ಹಣವನ್ನು ಆಕೆಗೆ ನೀಡಿದ್ದರು. ಆಟೊ ಇಳಿದ ಮೇಲೆ ಆಕೆ ಫೋನ್ ಪೇ ಮಾಡಿದ್ದೇನೆ. ಮೆಸೇಜ್ ಬಂದಿದೆ ನೋಡಿ ಎಂದು ಕ್ಷಣಾರ್ಧದಲ್ಲಿ ತೆರಳಿದ್ದಾಳೆ'.

ಚಾಲಕ ಫೋನ್ ಪೇ ಪರಿಶೀಲಿಸಿದಾಗ ಹಣ ಬಾರದಿರುವುದು ಗೊತ್ತಾಗಿದೆ. ಬಳಿಕ ಆಕೆ ನೀಡಿದ ನಂಬರ್‌ಗೆ ಕರೆ ಮಾಡಿದಾಗ ಮೊಬೈಲ್ ಸ್ವಿಚ್ಡ್‌ಆಫ್ ಆಗಿತ್ತು. ನಂತರ, ಮೋಸ ಹೋಗಿರುವುದು ತಿಳಿದು ದೂರು ನೀಡಿದ್ದು ತನಿಖೆ ನಡೆಸಲಾಗುತ್ತಿದೆ. ಆಕೆ ಆಟೊ ಇಳಿದ ಸ್ಥಳದ ಅಕ್ಕಪಕ್ಕದ ಅಂಗಡಿಗಳ ಸಿ.ಸಿ ಟಿ.ವಿ ಕ್ಯಾಮೆರಾದ ದೃಶ್ಯಾವಳಿ ಪರಿಶೀಲನೆ ನಡೆಸಲಾಗುತ್ತದೆ' ಎಂದು ಪೊಲೀಸರು ಹೇಳಿದರು.

1. ಸಾರಕ್ಕಿ ಮಾರುಕಟ್ಟೆಯಲ್ಲಿ ಸೂಕ್ತ ಸೌಲಭ್ಯ ಇಲ್ಲದಿರುವುದರಿಂದ ವ್ಯಾಪಾರಿಗಳು ಕನಕಪುರ ಮುಖ್ಯರಸ್ತೆಯ ಪಾದಚಾರಿ ಮಾರ್ಗದಲ್ಲಿಯೇ ತರಕಾರಿ ಮಾರುತ್ತಿರುವುದು. 2. ತರಕಾರಿ ಖರೀದಿಗೆ ಬಂದ ಗ್ರಾಹಕರು ಪಾರ್ಕಿಂಗ್ ಸಮಸ್ಯೆಯಿಂದ ಪರದಾಡುತ್ತಿರುವುದು. 3. ಬಸ್ ನಿಲ್ದಾಣದಲ್ಲಿ ವ್ಯಾಪಾರಿಗಳು ತರಕಾರಿ ಮಾರಾಟ ಮಾಡುತ್ತಿರುವುದು

ಪ್ರಜಾವಾಣಿ ಚಿತ್ರಗಳು: ಪ್ರಶಾಂತ್ ಎಚ್.ಜಿ.

ಅವ್ಯವಸ್ಥೆಯ ಆಗರವಾದ ಸಾರಕ್ಕಿ ತರಕಾರಿ ಮಾರುಕಟ್ಟೆ ● ಕುಡಿಯುವ ನೀರು ಸೇರಿದಂತೆ ಕನಿಷ್ಠ ಮೂಲಸೌಕರ್ಯವೂ ಇಲ್ಲ

ಪಾದಚಾರಿ ಮಾರ್ಗ, ಬಸ್ ನಿಲ್ದಾಣವೇ ಮಾರುಕಟ್ಟೆ!

● ವರುಣ ಹೆಗಡೆ

ಬೆಂಗಳೂರು: ಪಾದಚಾರಿ ಮಾರ್ಗ ಹಾಗೂ ಬಸ್ ನಿಲ್ದಾಣದಲ್ಲಿಯೇ ಗ್ರಾಹಕರಿಗೆ ಎದುರು ನೋಡುವ ವ್ಯಾಪಾರಿಗಳು, ವಾಹನ ನಿಲುಗಡೆಗೆ ಸ್ಥಳಾವಕಾಶವಿಲ್ಲದೆ ಚಡಪಡಿಸುವ ಗ್ರಾಹಕರು, ವ್ಯಾಪಾರಿಗಳು ಮತ್ತು ಗ್ರಾಹಕರ ಮೇಲೆ ರೇಗಾಡುವ ಸಂಚಾರ ಪೊಲೀಸರು...

ಇದು ಜೆ.ಪಿ. ನಗರದ ಮೊದಲನೇ ಹಂತದಲ್ಲಿರುವ ಸಾರಕ್ಕಿ ತರಕಾರಿ ಮಾರುಕಟ್ಟೆಯ ಸ್ಥಿತಿ.

ಮಾರುಕಟ್ಟೆ ಕಷ್ಟ ಸಿಕ್ಕಾಪಟ್ಟೆ

ಕನಕಪುರ ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ಈ ಮಾರುಕಟ್ಟೆ ಅವ್ಯವಸ್ಥೆಯ ಆಗರವಾಗಿದ್ದು, ವ್ಯಾಪಾರಿಗಳಿಗೆ ಕನಿಷ್ಠ ಮೂಲಸೌಕರ್ಯವೂ ಇಲ್ಲವಾಗಿದೆ. ಕೆ.ಆರ್. ಮಾರುಕಟ್ಟೆ, ಯಶವಂತಪುರ ಮಾರುಕಟ್ಟೆ ಸೇರಿ ವಿವಿಧೆಡೆಯಿಂದ ವ್ಯಾಪಾರಿಗಳು ತರಕಾರಿಗಳನ್ನು ಖರೀದಿಸಿ, ಬೆಳಿಗ್ಗೆ 4 ಗಂಟೆಗೆ ಇಲ್ಲಿಗೆ ಬರುತ್ತಾರೆ. 200ಕ್ಕೂ ಅಧಿಕ ವ್ಯಾಪಾರಿಗಳು ದೈನಂದಿನ ವ್ಯಾಪಾರವನ್ನೇ ನಂಬಿಕೊಂಡಿದ್ದು, ಬೆಳಿಗ್ಗೆ 5 ಗಂಟೆಯಿಂದ 10 ಗಂಟೆಯವರೆಗೂ ವ್ಯಾಪಾರ ನಡೆಸುತ್ತಾರೆ. ಬಳಿಕ ಸಂಚಾರ ಪೊಲೀಸರು ವ್ಯಾಪಾರಕ್ಕೆ ಅವಕಾಶ ನೀಡದಿರುವುದರಿಂದ ಬಹುತೇಕ ವ್ಯಾಪಾರಿಗಳು ಮಾರಾಟವಾಗದೆ ಉಳಿದ ತರಕಾರಿಗಳನ್ನು ಚೀಲದಲ್ಲಿ ತುಂಬಿ, ಹೊತ್ತೊಯ್ಯಬೇಕಾದ ಸ್ಥಿತಿಯಿದೆ.

ಪ್ರತಿದಿನ ಸಾವಿರಾರು ಗ್ರಾಹಕರು ಇಲ್ಲಿ ಸೊಪ್ಪು, ತರಕಾರಿಗಳನ್ನು ಖರೀದಿಸುತ್ತಾರೆ. ಸಾರಕ್ಕಿ ಮಾರುಕಟ್ಟೆಯು ಕನಕಪುರ ಮುಖ್ಯರಸ್ತೆಯ ಇಕ್ಕೆಲಗಳಲ್ಲಿ ಸುಮಾರು ಅರ್ಧ ಕಿ.ಮೀ. ವಿಸ್ತರಿಸಿಕೊಂಡಿದೆ. ಮುಖ್ಯ ರಸ್ತೆಯಲ್ಲಿನ ವಿವಿಧ ವಾಣಿಜ್ಯ ಮಳಿಗೆಗಳು 10 ಗಂಟೆ ವೇಳೆಗೆ ತೆರೆದುಕೊಳ್ಳುವುದರಿಂದ ತರಕಾರಿ ವ್ಯಾಪಾರಿಗಳು ಅಷ್ಟರೊಳಗೆ ವ್ಯಾಪಾರ ಮುಗಿಸಿ, ಜಾಗ ಖಾಲಿ ಮಾಡಬೇಕಾಗುತ್ತದೆ. ಇದರಿಂದಾಗಿ ಪ್ರತಿನಿತ್ಯ ವಿವಿಧೆಡೆಯಿಂದ ಖರೀದಿಸಿ ತಂದ ಅಷ್ಟೂ ತರಕಾರಿಗಳು ಮಾರಾಟವಾಗುವ ಖಚಿತತೆ ವ್ಯಾಪಾರಿಗಳಿಗೆ ಇಲ್ಲವಾಗಿದೆ. ಕೆಲ ವ್ಯಾಪಾರಿಗಳು ಬಸ್ ನಿಲ್ದಾಣದಲ್ಲಿಯೂ ತರಕಾರಿ ಮಾರುತ್ತಿದ್ದು, ಇಲ್ಲಿ ಸುತ್ತಮುತ್ತ ನೀರು ಹಾಗೂ ಶೌಚಾಲಯದ ವ್ಯವಸ್ಥೆಯಿಲ್ಲ. ಇದು ಕೂಡ ವ್ಯಾಪಾರಿಗಳಿಗೆ ಸಮಸ್ಯೆಯಾಗಿದೆ.

ವ್ಯಾಪಾರಕ್ಕಿಲ್ಲ ಮಳಿಗೆ: ಇಲ್ಲಿ ವ್ಯಾಪಾರಕ್ಕೆ ಮಳಿಗೆಗಳಿಲ್ಲ. ಇದರಿಂದಾಗಿ ಮಳೆ ಬಂದಲ್ಲಿ ವ್ಯಾಪಾರಿಗಳು ಹಾಗೂ ಗ್ರಾಹಕರು ಪರದಾಟ ನಡೆಸಬೇಕಾಗುತ್ತದೆ. ತರಕಾರಿ ಮತ್ತು ಇತರ ವಸ್ತುಗಳನ್ನು ಇರಿಸಲು ಸಹ ಇಲ್ಲಿ ಜಾಗವಿಲ್ಲ. ಹೀಗಾಗಿ, ಮಳೆಯಲ್ಲೇ ವ್ಯಾಪಾರ ಮಾಡಬೇಕಾದ ಸ್ಥಿತಿ ಇದೆ. ಸುಸಜ್ಜಿತ ಮಳಿಗೆ, ಕುಡಿಯುವ ನೀರು ಹಾಗೂ ಶೌಚಾಲಯ ನಿರ್ಮಿಸಿ ಕೊಡಬೇಕೆನ್ನುವುದು ಇಲ್ಲಿಯ ವ್ಯಾಪಾರಿಗಳ ಆಗ್ರಹ.

‘ದೈನಂದಿನ ವ್ಯಾಪಾರವನ್ನೇ ನಂಬಿದ್ದು, ಮುಂಜಾನೆಯೇ ತರಕಾರಿಗಳನ್ನು ಹೊತ್ತು ಬರುತ್ತೇವೆ. ಇಲ್ಲಿ ಯಾವುದೇ ಸೌಲಭ್ಯವಿಲ್ಲದಿದ್ದರೂ ಜೀವನ ನಿರ್ವಹಣೆಗೆ ಈ ಮಾರುಕಟ್ಟೆಯನ್ನೇ ನಂಬಿದ್ದೇವೆ. ಪೊಲೀಸರು ನಮಗೆ ಸಮರ್ಪಕವಾಗಿ ವ್ಯಾಪಾರ ಮಾಡಲು ಬಿಡುವುದಿಲ್ಲ. ₹ 10 ಸಾವಿರ ಬಂಡವಾಳ ಹೂಡಿ ಸೊಪ್ಪು ತಂದಿದ್ದು, ವ್ಯಾಪಾರ ಆಗದಿದ್ದರಿಂದ ಹಾಗೇ ಹೊತ್ತೊಯ್ಯಬೇಕಿದೆ. ಹೃದಯ ಸಮಸ್ಯೆ ಜತೆಗೆ ಮಧುಮೇಹವೂ ಇದೆ. ಮಾತ್ರೆಗಳಿಗೆ ಹಣ ಹೊಂದಿಸಬೇಕಿದೆ. ಸರ್ಕಾರಗಳು ದುಡಿದು ತಿನ್ನುವವರಿಗೆ ಬದುಕಲು ಬಿಡುತ್ತಿಲ್ಲ’ ಎಂದು ವ್ಯಾಪಾರಿ ಪಣನಿಯಮ್ಮ ಕಣ್ಣೀರು ಹಾಕಿದರು.

ರಸ್ತೆಯಲ್ಲೇ ಕೊಳೆಯುವ ತರಕಾರಿ

ಪಾದಚಾರಿ ಮಾರ್ಗಗಳಲ್ಲಿ ತರಕಾರಿಗಳನ್ನು ಮಾರಾಟ ಮಾಡುವ ವ್ಯಾಪಾರಿಗಳು ಹಾಗೂ ರೈತರು, ಬೆಳಿಗ್ಗೆ 10 ಗಂಟೆಯವರೆಗೆ ವಹಿವಾಟು ನಡೆಸಿ, ತೆರಳುತ್ತಾರೆ. ಕೊಳೆತ ತರಕಾರಿಗಳನ್ನು ಹಾಕಲು ಇಲ್ಲಿ ತೊಟ್ಟಿಯಿಲ್ಲ. ಆದ್ದರಿಂದ ಅಲ್ಲಿಯೇ ಬಿಸಾಡಿ ಹೊರಡುತ್ತಾರೆ. ಇದರಿಂದ ಪಾದಚಾರಿ ಮಾರ್ಗದಲ್ಲಿ ಓಡಾಟ ಕಷ್ಟವಾಗುತ್ತಿದೆ. ಮಳೆ ಬಂದರೆ ಪಾದಚಾರಿ ಮಾರ್ಗವು ಅಕ್ಷರಶಃ ತಿಪ್ಪೆಯಾಗಿರುತ್ತದೆ ಎಂದು ಸಾರ್ವಜನಿಕರು ದೂರಿದರು.

‘ಸಾರಕ್ಕಿಯಲ್ಲಿ ವ್ಯಾಪಾರಿಗಳು ಹಾಗೂ ರೈತರಿಗೆ ಸುಸಜ್ಜಿತ ಮಾರುಕಟ್ಟೆ ನಿರ್ಮಿಸಿಕೊಡಬೇಕು. ಈಗ ಅವರು ಮುಖ್ಯ ರಸ್ತೆಯ ಇಕ್ಕೆಲಗಳಲ್ಲಿಯೇ ವ್ಯಾಪಾರ ಮಾಡಿ, ಕೊಳೆತ ತರಕಾರಿಗಳನ್ನು ಅಲ್ಲಿಯೇ ಬಿಸಾಡಿ ಹೋಗುತ್ತಿದ್ದಾರೆ. ಇದರಿಂದ ಜನರು ಪಾದಚಾರಿ ಮಾರ್ಗದ ಬದಲು, ಮುಖ್ಯ ರಸ್ತೆಯಲ್ಲಿಯೇ ಹೆಜ್ಜೆ ಹಾಕಲಾರಂಭಿಸಿದ್ದಾರೆ. ಹೀಗಾಗಿ, ಸಾರಕ್ಕಿ ವೃತ್ತದಲ್ಲಿ ವಾಹನದಟ್ಟಣೆ ಸಹ ಹೆಚ್ಚುತ್ತಿದೆ’ ಎಂದು ಸ್ಥಳೀಯ ನಿವಾಸಿ ನಾಗರಾಜ್ ತಿಳಿಸಿದರು.

ವಾಹನ ಪಾರ್ಕಿಂಗ್ ಸಮಸ್ಯೆ

ತರಕಾರಿಗಳನ್ನು ತರುವ ವ್ಯಾಪಾರಿಗಳು, ಮಾರುಕಟ್ಟೆಗೆ ಬರುವ ಗ್ರಾಹಕರಿಗೆ ಇಲ್ಲಿ ಪಾರ್ಕಿಂಗ್ ಸ್ಥಳಾವಕಾಶವಿಲ್ಲ. ಇದರಿಂದಾಗಿ ಮುಖ್ಯ ರಸ್ತೆಯಲ್ಲಿಯೇ ವಾಹನಗಳನ್ನು ನಿಲ್ಲಿಸಿ, ತರಕಾರಿಗಳನ್ನು ಇಳಿಸಿಕೊಳ್ಳುತ್ತಿದ್ದಾರೆ. ಗ್ರಾಹಕರು ವ್ಯಾಪಾರ ನಡೆಯುವ ಮುಖ್ಯ ರಸ್ತೆಯಲ್ಲಿ ವಾಹನ ನಿಲ್ಲಿಸಿದರೆ ಸಂಚಾರ ಪೊಲೀಸರು ಫೋಟೊ ತೆಗೆದು, ದಂಡ ವಿಧಿಸುತ್ತಿದ್ದಾರೆ ಇದರಿಂದಾಗಿ ಪಾರ್ಕಿಂಗ್‌ಗಾಗಿ ವಿವಿಧೆಡೆ ಅಲೆದಾಟ ನಡೆಸಬೇಕಾದ ಪರಿಸ್ಥಿತಿಯಿದೆ.

‘ಮಾರುಕಟ್ಟೆಗೆ ಬಂದು ತರಕಾರಿಯನ್ನು ಹೊತ್ತೊಯ್ಯುವುದು ಸವಾಲಾಗಿದೆ. ಮುಖ್ಯ ರಸ್ತೆ ಆಗಿರುವುದರಿಂದ ವಾಹನವನ್ನು ಪಾರ್ಕಿಂಗ್ ಮಾಡುವ ಹಾಗಿಲ್ಲ. ಒಂದು ವೇಳೆ ನಿಲ್ಲಿಸಿದರೆ ₹ 100 ಖರೀದಿಗೆ ₹ 500 ದಂಡ ಪಾವತಿಸಬೇಕಾಗುತ್ತದೆ. ಹೆಚ್ಚಿನ ತರಕಾರಿಗಳನ್ನು ಖರೀದಿಸಿದಲ್ಲಿ ವಾಹನ ಇರುವ ಸ್ಥಳಕ್ಕೆ ತೆಗೆದುಕೊಂಡು ಹೋಗುವುದು ಕಷ್ಟ. ಆದ್ದರಿಂದ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಬೇಕು’ ಎಂದು ಹೋಟೆಲ್ ಒಂದರ ಮಾಲೀಕ ಸುದೀಪ್ ತಿಳಿಸಿದರು.

ವ್ಯಾಪಾರಿಗಳು ಏನಂತಾರೆ?

ಮುಂಜಾನೆಯೇ ಮಾರುಕಟ್ಟೆಗೆ ಬರುವ ನಮಗೆ ನೀರು ಹಾಗೂ ಶೌಚಾಲಯ ವ್ಯವಸ್ಥೆ ಅಗತ್ಯವಿದೆ. ಒಂದೆಡೆ ಮಳಿಗೆ ನಿರ್ಮಿಸಿಕೊಟ್ಟರೆ ದಿನಪೂರ್ತಿ ಮಾರಾಟ ಸಾಧ್ಯವಾಗುತ್ತದೆ.

ಕೃಷ್ಣಮೂರ್ತಿ ಎಂ.

ವೃದ್ಧರು ಸೇರಿ ವಿವಿಧ ವಯೋಮಾನದವರು ದೂರದ ಸ್ಥಳದಿಂದ ವ್ಯಾಪಾರಕ್ಕೆ ಬರುತ್ತಾರೆ. ಹೀಗಾಗಿ ಮಾರಾಟಕ್ಕೆ ಸೂಕ್ತ ವ್ಯವಸ್ಥೆ ಕಲ್ಪಿಸಿ, ಶೌಚಾಲಯ ನಿರ್ಮಿಸಿಕೊಡಬೇಕು.

ರೇಣುಕಮ್ಮ

ಮಳೆ ಬಂದಲ್ಲಿ ವ್ಯಾಪಾರ ಕಷ್ಟವಾಗುತ್ತದೆ. ಮಳೆಯಿಂದ ರಕ್ಷಿಸಿಕೊಳ್ಳಲು ಸೂಕ್ತ ವ್ಯವಸ್ಥೆ ಇಲ್ಲದಿರುವುದರಿಂದ ಪರದಾಟ ನಡೆಸಬೇಕಾಗುತ್ತದೆ. ಶೆಡ್ ನಿರ್ಮಿಸಿಕೊಟ್ಟರೆ ಸಹಕಾರಿ ಆಗಲಿದೆ.

ಮಂಜುಳಾ

ಮಾರಾಟಕ್ಕೆ ಸೂಕ್ತ ವ್ಯವಸ್ಥೆ ಇಲ್ಲದಿರುವುದರಿಂದ ಪಾದಚಾರಿ ಮಾರ್ಗದಲ್ಲಿಯೇ ಮಾರಾಟ ಅನಿವಾರ್ಯವಾಗಿದೆ. ಮಾರಾಟದ ಸ್ಥಳವನ್ನು ಸ್ವಚ್ಛಪಡಿಸಿಕೊಟ್ಟಲ್ಲಿ ಕುಳಿತು ವ್ಯಾಪಾರ ಮಾಡಬಹುದು.

ಪುಟ್ಟನಂಜ

ಸಾವಿರಾರು ರೂಪಾಯಿ ಹೂಡಿಕೆ ಮಾಡಿ, ವ್ಯಾಪಾರ ಮಾಡುತ್ತಿದ್ದೇವೆ. ದಿನವಿಡೀ ವ್ಯಾಪಾರ ಮಾಡಲು ಅವಕಾಶ ಕಲ್ಪಿಸಿ, ಅಗತ್ಯ ವ್ಯವಸ್ಥೆ ಮಾಡಿಕೊಡಬೇಕು.

ರವಿ

ಕುಡಿಯಲು ನೀರಿನ ವ್ಯವಸ್ಥೆ ಇಲ್ಲದಿರುವುದರಿಂದ ಮನೆಯಿಂದಲೇ ನೀರು ತಂದುಕೊಳ್ಳುತ್ತೇವೆ. ಇಲ್ಲಿ ಯಾವುದೇ ರೀತಿಯ ಸೌಲಭ್ಯವಿಲ್ಲ. ಇದರಿಂದ ಖರೀದಿಗೆ ಬರುವ ಗ್ರಾಹಕರಿಗೂ ಸಮಸ್ಯೆಯಾಗುತ್ತಿದೆ.

ಸವಿತಾ

ಮೆಟ್ರೊ ರೈಲುಗಳಿಗೆ 318 ಬೋಗಿ, 15 ವರ್ಷ ನಿರ್ವಹಣೆ

ಬಿಎಂಆರ್‌ಸಿಎಲ್ ಜೊತೆ ಬೆಮೆಲ್ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಟ್ರೊ ರೈಲುಗಳಿಗೆ 318 ಬೋಗಿಗಳನ್ನು ಒದಗಿಸಲು, 15 ವರ್ಷ ನಿರ್ವಹಣೆ ಮಾಡಲು ಬಿಎಂಆರ್‌ಸಿಎಲ್ ಜೊತೆಗೆ ಬೆಮೆಲ್ ಒಪ್ಪಂದ ಮಾಡಿಕೊಂಡಿದೆ.

ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್ (ಬೆಮೆಲ್) 2025ರ ಆರಂಭಕ್ಕೆ ಮೊದಲ ಬೋಗಿ ನೀಡಲಿದ್ದು, 2026ರ ಡಿಸೆಂಬರ್ ಒಳಗೆ ಎಲ್ಲ ಬೋಗಿಗಳನ್ನು ಪೂರೈಸಲಿದೆ. 2025ರ ಜನವರಿಯಿಂದ ಪ್ರತಿ ತಿಂಗಳು 12ರಿಂದ 14 ಬೋಗಿಗಳನ್ನು ಒದಗಿಸಲಿದೆ. ಹಿಂದೆಯೂ ‘ನಮ್ಮ ಮೆಟ್ರೊ’ ಸೇರಿದಂತೆ ದೇಶದ ವಿವಿಧ ಮೆಟ್ರೊಗಳಿಗೆ ಬೋಗಿಗಳನ್ನು ತಯಾರಿಸಿ ನೀಡಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ನಮ್ಮ ಮೆಟ್ರೊದ ಅತಿಹೆಚ್ಚು ಬೋಗಿಗಳ ಒಪ್ಪಂದಕ್ಕೆ ಸಂಬಂಧಿಸಿದಂತೆ ಬಿಎಂಆರ್‌ಸಿಎಲ್ ಸ್ವೀಕಾರ ಪತ್ರವನ್ನು ನೀಡಿದೆ. ಒಪ್ಪಂದವು ₹3,177 ಕೋಟಿಯದ್ದಾಗಿದ್ದು, ಜಪಾನ್ ಇಂಟರ್ ನ್ಯಾಷನಲ್ ಸಹಕಾರ ಏಜೆನ್ಸಿಯಿಂದ (ಜೆಐಸಿಎ) ಆರ್ಥಿಕ ನೆರವು ಪಡೆಯಲಾಗಿದೆ ಎಂದು ತಿಳಿಸಿದ್ದಾರೆ.

ಗುಲಾಬಿ ಮಾರ್ಗ ಕಾಳೇನ ಅಗ್ರಹಾರ– ನಾಗವಾರ 2ನೇ ಹಂತದಲ್ಲಿ, ನೀಲಿ ಮಾರ್ಗ ಸಿಲ್ಕ್ ಬೋರ್ಡ್–ಕೆ.ಆರ್. ಪುರ 2ಎ ಹಂತ, ಕೆ.ಆರ್. ಪುರ–ವಿಮಾನ ನಿಲ್ದಾಣ 2ಬಿಯಲ್ಲಿ ಸಂಚರಿಸಲಿರುವ ಮೆಟ್ರೊ ರೈಲಿನಲ್ಲಿ ಈ ಬೋಗಿಗಳು ಬಳಕೆಯಾಗಲಿವೆ.

ಗುಲಾಬಿ ಮಾರ್ಗದಲ್ಲಿ 2025ರ ಮಾರ್ಚ್‌ನಲ್ಲಿ ಮೆಟ್ರೊ ರೈಲು ಸಂಚಾರ ಆರಂಭವಾಗಲಿದೆ. 2026ರ ಜೂನ್‌ಗೆ ನೀಲಿ ಮಾರ್ಗ ಚಾಲನೆಗೊಳ್ಳಲಿದೆ.

‘2025ರ ಜನವರಿಯಲ್ಲಿ ಮೊದಲ ಬೋಗಿ ನೀಡುವಂತೆ ಒಪ್ಪಂದದಲ್ಲಿ ಉಲ್ಲೇಖಿಸಲಾಗಿದೆ. ಆದರೆ, ಅದಕ್ಕಿಂತ ಮೊದಲೇ ಬೆಮೆಲ್ ಪೂರೈಸಲಿದೆ’ ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

‘ಕೃಷ್ಣರಾಜ ಪರಿಷತ್ತಿನ ಮಂದಿರದ ಬಾಡಿಗೆ ಇಳಿಸಿ’

ಬೆಂಗಳೂರು: ನವೀಕೃತ ಕೃಷ್ಣರಾಜ ಪರಿಷತ್ತಿನ ಮಂದಿರದ ಬಾಡಿಗೆಯನ್ನು ಕಡಿಮೆ ಮಾಡಬೇಕು ಎಂದು ಕರ್ನಾಟಕ ಪ್ರಕಾಶಕರ ಸಂಘವು ಕನ್ನಡ ಸಾಹಿತ್ಯ ಪರಿಷತ್ತಿಗೆ (ಕಸಾಪ) ಆಗ್ರಹಿಸಿದೆ.

ಈ ಬಗ್ಗೆ ಸಂಘವು ಕಸಾಪ ಅಧ್ಯಕ್ಷ ಮಹೇಶ ಜೋಶಿ ಅವರಿಗೆ ಪತ್ರ ಬರೆದಿದೆ. ‘ಈ ಹಿಂದೆ ಪರಿಷತ್ತಿನ ಮಂದಿರದಲ್ಲಿ ವರ್ಷದ ಎಲ್ಲಾ ದಿನಗಳು ಸಾಹಿತ್ಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿದ್ದವು. ಈಗ ಸಭಾಂಗಣದ ಬಾಡಿಗೆಯನ್ನು ಕೈಗೆಟುಕದಷ್ಟು ಏರಿಸಲಾಗಿದೆ. ಇದರಿಂದ ಪುಸ್ತಕ ಬಿಡುಗಡೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಅಷ್ಟಾಗಿ ನಡೆಯುತ್ತಿಲ್ಲ. ಏಕಾಏಕಿ ಬಾಡಿಗೆ ಹೆಚ್ಚಳ ಮಾಡಿರುವುದು ಸಾಹಿತಿಗಳು ಹಾಗೂ ಪ್ರಕಾಶಕರ ಅಸಮಾಧಾನಕ್ಕೆ ಕಾರಣವಾಗಿದೆ’ ಎಂದು ಸಂಘದ ಜಂಟಿ ಕಾರ್ಯದರ್ಶಿ ಸೃಷ್ಟಿ ನಾಗೇಶ್ ತಿಳಿಸಿದ್ದಾರೆ.

‘ಕಟ್ಟಡ ನವೀಕರಣಕ್ಕೆ ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿ ಬಳಸಿರುವುದು ತಿಳಿದುಬಂದಿದೆ. ಸರ್ಕಾರ ಮತ್ತು ಇತರ ಮೂಲಗಳಿಂದ ಧನ ಸಹಾಯ ಬರುತ್ತಿರುವುದರಿಂದ ಈ ಸಭಾಂಗಣದ ಬಾಡಿಗೆಯಿಂದಲೇ ಕಾರ್ಯ ಚಟುವಟಿಕೆಗಳನ್ನು ನಡೆಸಬೇಕಾದ ಅನಿವಾರ್ಯತೆ ಪರಿಷತ್ತಿಗೆ ಇಲ್ಲ’ ಎಂದು ಪತ್ರದಲ್ಲಿ ಹೇಳಲಾಗಿದೆ.

ಪ್ರತಿಭಟನೆ

ಸೌಜನ್ಯಾ ಪ್ರಕರಣ ಹಾಗೂ ಮಣಿಪುರದಲ್ಲಿ ಮಹಿಳೆಯರ ಮೇಲೆ ನಡೆದ ದೌರ್ಜನ್ಯ ಪ್ರಕರಣವನ್ನು ಖಂಡಿಸಿ ಸೋಷಿಯಲಿಸ್ಟ್ ಪಾರ್ಟಿ (ಇಂಡಿಯಾ) ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು. ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಮೈಕಲ್ ಫರ್ನಾಂಡಿಸ್, ಕಾರ್ಯಾಧ್ಯಕ್ಷೆ ಬಿ.ಟಿ. ಲಲಿತಾ ನಾಯಕ್ ಇದ್ದರು.

ಸೆ. 28ಕ್ಕೆ ಅನಂತ ಪದ್ಮನಾಭ ಉದ್ಯಾಪನಾ ಪೂಜೆ

ಬೆಂಗಳೂರು: ವಾಸವಿ ಕ್ಷೇತ್ರ ಟ್ರಸ್ಟ್‌ನಿಂದ ಅನಂತ ಪದ್ಮನಾಭಸ್ವಾಮಿ ಉದ್ಯಾಪನಾ ಪೂಜಾ ಕಾರ್ಯಕ್ರಮವು ಸೆ.28ರಿಂದ 29ರವರೆಗೆ ಗಿರಿನಗರದಲ್ಲಿ ಆಯೋಜಿಸಲಾಗಿದೆ.

ಸೆ.28ರಂದು ಬೆಳಿಗ್ಗೆ 8ಕ್ಕೆ ಗಂಗಾ ಭಾಗೀರಥಿ ಪೂಜೆ, ಅನಂತ ಪದ್ಮನಾಭಸ್ವಾಮಿ ವ್ರತ ನಡೆಯಲಿದೆ. ಸಂಜೆ 5ಕ್ಕೆ ಮಹಾಗಣಪತಿ, ಪಂಚಗವ್ಯ ಸೇರಿ ವಿವಿಧ ಪೂಜೆಗಳು ಹಾಗೂ ಪಂಚಾಮೃತ ಅಭಿಷೇಕ ನಡೆಲಿವೆ.

ಸೆ.29ರಂದು ಅನಂತ ಉದ್ಯಾಪನೆ, ಮಹಾಗಣಪತಿ ಪೂಜೆ, ಕಲಶ ಸ್ಥಾಪನೆ, ಸಹಸ್ರನಾಮ ಪೂಜೆ, ಮಂಗಳಾರತಿ ಹಾಗೂ ವಿವಿಧ ಹೋಮಗಳು ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಮುಂದಿನ ಪೀಳಿಗೆಗಾಗಿ ಹಸಿರುಮಯ ನಗರ

‘ಬ್ರ್ಯಾಂಡ್ ಬೆಂಗಳೂರು– ಹಸಿರು ಬೆಂಗಳೂರು’ ವಿಚಾರ ಸಂಕಿರಣದಲ್ಲಿ ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂದಿನ ಪೀಳಿಗೆಗೆ ಉತ್ತಮ ಪರಿಸರ ಕಲ್ಪಿಸಲು ನಗರವನ್ನು ಹಸಿರುಮಯವಾಗಿಸಲು ಯೋಜನೆ ರೂಪಿಸಿ, ಕ್ರಮ ಕೈಗೊಳ್ಳಲಾಗುವುದು ಎಂದು ಬಿಬಿಎಂಪಿ ಅರಣ್ಯ ವಿಭಾಗದ ವಿಶೇಷ ಆಯುಕ್ತೆ ಪ್ರೀತಿ ಗೆಹ್ಲೋಟ್ ತಿಳಿಸಿದರು.

‘ಬ್ರ್ಯಾಂಡ್ ಬೆಂಗಳೂರು’ ಯೋಜನೆಯಡಿ ‘ಹಸಿರು/ಪರಿಸರ ಬೆಂಗಳೂರು’ ವಿಷಯಕ್ಕೆ ಸಂಬಂಧಿಸಿದಂತೆ ಆರ್.ವಿ .ತಾಂತ್ರಿಕ ಮಹಾವಿದ್ಯಾಲಯದಲ್ಲಿ ಬುಧವಾರ ನಡೆದ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

ಮುಂದಿನ 25-30 ವರ್ಷಗಳಲ್ಲಿ ಸಂಪೂರ್ಣ ಬೆಂಗಳೂರನ್ನು ಹಸಿರುಮಯವಾಗಿಸಬೇಕು. ಈ ಸಂಬಂಧ ನಾಗರಿಕರಿಂದ ಬಂದಂತಹ ಸಲಹೆಗಳನ್ನು ಕ್ರೋಡೀಕರಿಸಿ ಉತ್ತಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಶಾಲಾ-ಕಾಲೇಜು, ಶೈಕ್ಷಣಿಕ ಸಂಸ್ಥೆಗಳ ಜೊತೆ ಒಡಂಬಡಿಕೆ ಮಾಡಿಕೊಂಡು, ಸಸಿಗಳನ್ನು ನೆಟ್ಟು ಅವು ಬೆಳೆಯುವವರೆಗೆ ಪೋಷಣೆ ಮಾಡಲು ವಿದ್ಯಾರ್ಥಿಗಳಿಗೆ ಜವಾಬ್ದಾರಿ ನೀಡಲಾಗಿದೆ. ಆ ಸಸಿಗೆ ವಿದ್ಯಾರ್ಥಿಗಳ ಹೆಸರನ್ನು ಶಾಶ್ವತವಾಗಿ ಇಡುವ ಯೋಜನೆ ರೂಪಿಸಲಾಗಿದ್ದು, ಈಗಾಗಲೇ ಕಾರ್ಯಪ್ರವೃತ್ತರಾಗಿ ಕೆಲಸ ಮಾಡಲಾಗುತ್ತಿದೆ ಎಂದರು.

ಬಿಬಿಎಂಪಿ ಉಪ ಅರಣ್ಯ ಸಂರಕ್ಷಣಾಧಿಕಾರಿಯಾದ ಸರೀನಾ ಸಿಕ್ಕಲಿಗರ್, ಕೆರೆಗಳ ವಿಭಾಗದ ಮುಖ್ಯ ಎಂಜಿನಿಯರ್ ವಿಜಯ್ ಕುಮಾರ್ ಹರಿದಾಸ್, ಆರ್.ವಿ. ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಕೆ.ಎನ್ ಸುಬ್ರಮಣ್ಯ, ಕಾಲೇಜು ವಿದ್ಯಾರ್ಥಿಗಳು ಇದ್ದರು.

ಪ್ರಮುಖ ಸಲಹೆಗಳು

- ಸಾರ್ವಜನಿಕ ಹಾಗೂ ಖಾಸಗಿ ಸ್ಥಳಗಳಲ್ಲಿ ಸಸಿಗಳನ್ನು ನೆಡುವುದು
- ಕೆರೆಗಳಿಗೆ ಕಲುಷಿತ ನೀರು ಸೇರದಂತೆ ಕ್ರಮವಹಿಸುವುದು
- ಶೇ 100ರಷ್ಟು ತ್ಯಾಜ್ಯ ನೀರು ಶುದ್ಧೀಕರಣ ಹಾಗೂ ಶುದ್ಧೀಕರಣ ಘಟಕಗಳ ವಿಕೇಂದ್ರಿಕರಣ
- ಬೆಂಗಳೂರು ನಗರ ವ್ಯಾಪ್ತಿಯ ಅರಣ್ಯ ಸಂಪತ್ತಿನ ರಕ್ಷಣೆ
- ಅಪಾರ್ಟ್‌ಮೆಂಟ್‌ಗಲ್ಲಿ ಎಸ್.ಟಿ.ಪಿ ನಿರ್ಮಾಣ ಕಡ್ಡಾಯ ಮಾಡುವುದು
- ಮರ/ ಸಸಿಗಳನ್ನು ಕಡಿಯದೆ ಕಾಮಗಾರಿಗಳ ವಿನ್ಯಾಸ ರೂಪಿಸುವುದು
- ನೆಟ್ಟ ಸಸಿಗಳು ಬೆಳವಣಿಗೆ ಹಾಗೂ ನಾಶದ ಬಗ್ಗೆ ನಿಖರ ಮಾಹಿತಿ ಸಂಗ್ರಹ
- ಎಲ್ಲ ಕೆರೆಗಳ ಪುನಶ್ಚೇತನ ಹಾಗೂ ನಿರ್ವಹಣೆ
- ಪರಿಸರ ಉಳಿಸಲು ಮಕ್ಕಳಿಗೆ ಶಿಕ್ಷಣ ಹಾಗೂ ಜಾಗೃತಿ
- ಬಿಬಿಎಂಪಿ, ಜಲಮಂಡಳಿ, ಬಿಡಿಎ ಇಲಾಖೆಗಳ ಸಮನ್ವಯದಿಂದ ಪರಿಸರ ವೃದ್ಧಿ ಕಾರ್ಯ
- ಹೊಸ ವಾಹನ ಖರೀದಿಸುವವರಿಗೆ ಸಸಿಗಳನ್ನು ಉಡುಗೊರೆಯಾಗಿ ನೀಡಿ, ಪೋಷಿಸಲು ಜಾಗೃತಿ ಮೂಡಿಸುವುದು
- ಉದ್ಯಾನಗಳಲ್ಲಿ ಸಸಿಗಳನ್ನು ನೆಟ್ಟು ಬೆಳೆಸುವ ಯೋಜನೆ
- ರಸ್ತೆ ಬದಿ, ಉದ್ಯಾನ, ಮನೆಗಳ ಬಳಿ ಇಂಗು ಗುಂಡಿಗಳನ್ನು ನಿರ್ಮಿಸಿ ಅಂತರ್ಜಲ ಮಟ್ಟ ಹೆಚ್ಚಿಸುವುದು

ಚಿತ್ರಾವಳಿ

ಹನುಮಂತ ನಗರದಲ್ಲಿರುವ ‘ಶ್ರೀ ಕುಮಾರ ಸ್ವಾಮಿ ದೇವಸ್ಥಾನ’ದಲ್ಲಿ ಬುಧವಾರ ನಡೆದ ‘ಆಡಿ ಕೃತಿಕಾ ಮಹೋತ್ಸವ’ಕ್ಕೆ ಕಾವಡಿ ಹೊತ್ತು ಬಂದ ಭಕ್ತಾದಿಗಳು

ಕರ್ನಾಟಕ ರೈತರ ಜಾಗೃತಿ ವೇದಿಕೆ ನಗರದಲ್ಲಿ ಬುಧವಾರ ಆಯೋಜಿಸಿದ್ದ ‘ನಮ್ಮ ಊರು ನಮ್ಮ ಪರಿಸರ’ ಕಾರ್ಯಕ್ರಮವನ್ನು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ರಾಜ್ಯ ಮುಖ್ಯ ಆಯುಕ್ತ ಪಿ.ಜಿ.ಆರ್. ಸಿಂಧ್ಯ ಅವರು ಗಿಡಕ್ಕೆ ನೀರು ಹಾಕುವ ಮೂಲಕ ಉದ್ಘಾಟಿಸಿದರು. (ಎಡದಿಂದ) ನೈನ್ ರಿಚ್ ಸಂಸ್ಥೆಯ ಎನ್. ಮೋಹನ್, ಕಾಮಧೇನು ಹಂಸ ಸೇವಾ ಟ್ರಸ್ಟ್ ಸಂಸ್ಥಾಪಕ ಜೆ.ಜಯರಾಮ್, ಕರ್ನಾಟಕ ರೈತರ ಜಾಗೃತಿ ವೇದಿಕೆ ಕಾರ್ಯದರ್ಶಿ ಕೆ.ವಿ. ರೆಡ್ಡಿ, ಕೋಲಾರ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷೆ ಚೌಡೇಶ್ವರಿ ರಾಮಚಂದ್ರ, ಹಸಿರೇ ಉಸಿರು ಟ್ರಸ್ಟ್ ಅಧ್ಯಕ್ಷ ಬಿ.ಎಂ. ಶ್ರೀನಿವಾಸಮೂರ್ತಿ ಮತ್ತು ಕೆ.ಆರ್. ಸುಮಿತ್ರಾ ಇದ್ದಾರೆ —ಪ್ರಜಾವಾಣಿ ಚಿತ್ರ

‘ವಿದ್ಯಾರ್ಥಿಗಳ ಸಾಧನೆ ದೇಶಕ್ಕೆ ಕೊಡುಗೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಪೋಷಕರು, ಶಿಕ್ಷಕರು ಮಹತ್ವದ ಪಾತ್ರ ವಹಿಸುತ್ತಾರೆ’ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ಬಿಜಿಎಸ್ ಇಂಟರ್ ನ್ಯಾಷನಲ್ ಅಕಾಡೆಮಿಯಾ ಸ್ಕೂಲ್‌ನಲ್ಲಿ ಬುಧವಾರ ನಡೆದ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಸರ್ಕಾರದ ಸೌಲಭ್ಯಗಳನ್ನು ಬಳಸಿಕೊಂಡು ವಿದ್ಯಾರ್ಥಿಗಳು ಸಾಧನೆ ಮಾಡಬೇಕು. ಅದು ದೇಶದ ಅಭಿವೃದ್ಧಿಗೆ ಏನಾದರೂ ಕೊಡುಗೆ ನೀಡುವಂತಿರಬೇಕು’ ಎಂದು ತಿಳಿಸಿದರು.

ಬಿಜಿಎಸ್ ಇಂಟರ್ ನ್ಯಾಷನಲ್ ಅಕಾಡೆಮಿಯಾ ಸ್ಕೂಲ್‌ನಲ್ಲಿ ಬುಧವಾರ ನಡೆದ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮಕ್ಕೆ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಚಾಲನೆ ನೀಡಿದರು. ಸಚಿವ ಮಧು ಬಂಗಾರಪ್ಪ, ಶಾಸಕ ಎಸ್.ಟಿ. ಸೋಮಶೇಖರ್ ಇದ್ದಾರೆ.

ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ, ‘ಭಾರತವನ್ನು ಇಂದು ಇಡೀ ವಿಶ್ವವೇ ತಿರುಗಿ ನೋಡುತ್ತಿದೆ ಅಂದರೆ ಅದಕ್ಕೆ ಕಾರಣ ನಮ್ಮ ಸಂಸ್ಕಾರ. ವಿದ್ಯಾರ್ಥಿಗಳಿಗೆ ಸಾಮಾಜಿಕ ಬದ್ಧತೆ ಇರಬೇಕು. ವಿಶ್ವಮಾನವ ತತ್ವದಲ್ಲಿ ನಾವು ಜೀವನ ನಡೆಸಬೇಕು’ ಎಂದು ಕರೆ ನೀಡಿದರು.

ಎಸ್‌ಜೆಬಿ ಮತ್ತು ಬಿಜಿಎಸ್ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕರಾದ ಪ್ರಕಾಶನಾಥ ಸ್ವಾಮೀಜಿ, ಪೌಲಮಿ ಘೋಷ್ ಇದ್ದರು.

ಸುಧಾ, ಮಯೂರ ಓದಿರಿ

· 10 am to 8 pm · Open All Days · Master / Visa Card Accepted

INNERWEAR · LEISUREWEAR · ACTIVEWEAR · KIDSWEAR · SOCKS

Venues In Bangalore

Infantry Road:	Safina Plaza, No.84/85 - 560 001
J.P.Nagar, 7th Phase:	Sri Someshwara Sabha Bhavana, No.108, R.B.I Layout, Puttenahalli - 560 078
Rajajinagar:	Raja Rajeshwari Kalyana Mantapa, 2nd Block, Dr. Rajkumar Road, Near Blue Hyundai Showroom - 560010
Banshankari:	Sri Hari Kalyana Mantap, 30th Main, B.S.K. 3rd Stage, Near K.I.M.S. Hospital - 560085
Bannerghatta Road:	Santhome Parish Church Hall, Hulimavu, Near Meenakshi Mall - 560076
Jayanagar:	Hema Chandra Kalyan Mahal, 10th Main Road, T. Mariappa Road, 2nd Block, (Near Ashoka Pillar) - 560011
Malleswaram:	The Canara Union, No.42, 8th Main, Canara Union Road - 560003
VijayaNagar:	Five O Gallery, 17th Cross, M.C. Road, Near Vijay Nagar Bus Stop - 560040
Rajarajeshwari Nagar:	Vasavi Mahal Kalyana Mantapa, Next To Reliance Digital, Ideal Homes I Phase - 560098
Kundalahalli Gate:	S K R Convention Hall, Thubarahalli, Varthur Main Road - 560066
M.S.R. Nagar:	Ramachandra Convention Hall, 8th Cross, New BEL Road, Behind Punjab National Bank, Near Mayuri Hotel - 560054
Hesaraghatta Main Road:	Sri Sai Kalyana Mantapa, No. 36, Near Bangalagunte Bus Stop, Mallasandra - 560057
Koramangala:	Apoorva International, #35A, Raheja Arcade, Opp Star Box - 560095
Basavanagudi:	Amolak Apparels, #104, Bull Temple Road, Near Ramakrishna Ashram - 560019

Org. by: Surya Agency Pvt. Ltd.

ಆನೆ ಸಂಖ್ಯೆಯಲ್ಲಿ ರಾಜ್ಯವೇ ಪ್ರಥಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2023ರ ಮೇ ತಿಂಗಳಿನಲ್ಲಿ ನಡೆದ ಆನೆ ಗಣತಿಯಲ್ಲಿ ಕರ್ನಾಟಕದಲ್ಲಿ 6,395 ಆನೆಗಳಿರುವುದು ಕಂಡು ಬಂದಿದೆ. ಆನೆಗಳ ಸಂಖ್ಯೆಯಲ್ಲಿ ರಾಜ್ಯವು ದೇಶದಲ್ಲೇ ಅಗ್ರಸ್ಥಾನ ಪಡೆದಿದೆ ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದರು.

ಆನೆ ಗಣತಿ ವರದಿಯ ಮುಖ್ಯಾಂಶಗಳನ್ನು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಬಿಡುಗಡೆ ಮಾಡಿ ಮಾತನಾಡಿದ ಅವರು, '2017ರಲ್ಲಿ ನಡೆದ ಗಣತಿ ಪ್ರಕಾರ, ರಾಜ್ಯದಲ್ಲಿ 6,049 ಆನೆಗಳಿದ್ದವು. ಆರು ವರ್ಷಗಳ ಬಳಿಕ ಕಳೆದ ಮೇ 17 ರಿಂದ 19ರವರೆಗೆ ಗಣತಿ ನಡೆಸಲಾಗಿದೆ. ರಾಜ್ಯದಲ್ಲಿ ಆನೆಗಳ ಸಂಖ್ಯೆಯಲ್ಲಿ 346ರಷ್ಟು ಹೆಚ್ಚಳವಾಗಿರುವುದು ಕಂಡುಬಂದಿದೆ' ಎಂದರು.

ರಾಜ್ಯದ 32 ವನ್ಯಜೀವಿ ವಿಭಾಗಗಳಲ್ಲಿ ನಡೆದ ಗಣತಿಯಲ್ಲಿ ಇಲಾಖೆಯ 3,400 ಸಿಬ್ಬಂದಿ ಪಾಲ್ಗೊಂಡಿದ್ದರು. 23 ವನ್ಯಜೀವಿ ವಿಭಾಗಗಳಲ್ಲಿ ಆನೆಗಳು ಇರುವುದು ದೃಢಪಟ್ಟಿದೆ. 6,104 ಚದರ ಕಿಲೋಮೀಟರ್ ಪ್ರದೇಶದಲ್ಲಿ ಆನೆ ಗಣತಿ ನಡೆಸಲಾಗಿದೆ. ಗಣತಿ ದಿನಗಳಲ್ಲಿ 2,219 ಆನೆಗಳನ್ನು ನೇರವಾಗಿ ಎಣಿಕೆ ಮಾಡಲಾಗಿತ್ತು ಎಂದು ವಿವರಿಸಿದರು.

ಕರ್ನಾಟಕ, ಕೇರಳ ಮತ್ತು ತಮಿಳುನಾಡು ರಾಜ್ಯಗಳು ಆನೆ ಗಣತಿ ನೇತೃತ್ವ ವಹಿಸಿದ್ದವು. ಆಂಧ್ರಪ್ರದೇಶದಲ್ಲೂ ಇದೇ ಅವಧಿಯಲ್ಲಿ ಗಣತಿ ನಡೆದಿದೆ. ಗಣತಿಯ ವಿನ್ಯಾಸ, ಸಿಬ್ಬಂದಿಗೆ ತರಬೇತಿ, ಫಲಿತಾಂಶಗಳ ವಿಶ್ಲೇಷಣೆ ಮತ್ತು ವರದಿ ತಯಾರಿಕೆಗೆ ಭಾರತೀಯ ವಿಜ್ಞಾನ ಸಂಸ್ಥೆಯ ಪ್ರಾಧ್ಯಾಪಕ ಆರ್. ಸುಕುಮಾರ್ ನೇತೃತ್ವದ ತಂತ್ರಜ್ಞರ ತಂಡ ನೆರವು ನೀಡಿತ್ತು ಎಂದು ತಿಳಿಸಿದರು.

ಹುಲಿಗಳ ಸಂಖ್ಯೆಯಲ್ಲಿ ಕರ್ನಾಟಕವು ದೇಶದಲ್ಲೇ ಎರಡನೇ ಸ್ಥಾನದಲ್ಲಿರುವುದು ಇತ್ತೀಚೆಗೆ ಬಿಡುಗಡೆಯಾದ ಹುಲಿ ಗಣತಿ ವರದಿಯಿಂದ ಗೊತ್ತಾಗಿತ್ತು. ಈಗ ಆನೆಗಳ ಸಂಖ್ಯೆಯಲ್ಲಿ ರಾಜ್ಯಕ್ಕೆ ಅಗ್ರ ಸ್ಥಾನ ದೊರಕಿದೆ. 2010 ರಿಂದಲೂ ರಾಜ್ಯದಲ್ಲಿ ಆನೆಗಳ ಸಂಖ್ಯೆಯಲ್ಲಿ ನಿರಂತರ ಏರಿಕೆಯಾಗುತ್ತಿದೆ ಎಂದರು.

ಆನೆಗಳು ಎಲ್ಲಿ? ಎಷ್ಟಿವೆ?

ವನ್ಯಜೀವಿ ವಲಯ	ಆನೆಗಳ ಸಂಖ್ಯೆ
ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ	1,116
ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ	831
ಮಲೈಮಹದೇಶ್ವರ ಬೆಟ್ಟ ವನ್ಯಜೀವಿ ವಿಭಾಗ	706
ಬಿ.ಆರ್.ಟಿ. ಹುಲಿ ಸಂರಕ್ಷಿತ ಪ್ರದೇಶ	619
ಭದ್ರಾ ಹುಲಿ ಸಂರಕ್ಷಿತ ಪ್ರದೇಶ	445
ಕಾವೇರಿ ವನ್ಯಜೀವಿ ವಿಭಾಗ	236
ಮಡಿಕೇರಿ ಪ್ರಾದೇಶಿಕ ವಿಭಾಗ	214
ಕೊಪ್ಪ ವಿಭಾಗ	128
ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ	127
ಶಿವಮೊಗ್ಗ ವನ್ಯಜೀವಿ ವಿಭಾಗ	127
ಮಡಿಕೇರಿ ವನ್ಯಜೀವಿ ವಿಭಾಗ	113
ಹಾಸನ ವಿಭಾಗ	66
ಮೈಸೂರು ಪ್ರಾದೇಶಿಕ ವಿಭಾಗ	59
ವಿರಾಜಪೇಟೆ ವಿಭಾಗ	58
ಮಂಗಳೂರು ವಿಭಾಗ	47
ಕಾಳಿ ಹುಲಿ ಸಂರಕ್ಷಿತ ಪ್ರದೇಶ	38
ರಾಮನಗರ ವಿಭಾಗ	33
ಚಿಕ್ಕಮಗಳೂರು ವಿಭಾಗ	33
ಕೋಲಾರ ವಿಭಾಗ	13
ಭದ್ರಾವತಿ ವಿಭಾಗ	08
ಕುದುರೆಮುಖ ವಿಭಾಗ	05
ಹಳಿಯಾಳ ವಿಭಾಗ	03
ಯಲ್ಲಾಪುರ ವಿಭಾಗ	02

ಸಂಘರ್ಷ ತಡೆಗೆ ಕ್ರಮ: ಆನೆಗಳು ಜನವಸತಿ ಪ್ರದೇಶ ಪ್ರವೇಶದಿಂದ ಮಾನವ– ಪ್ರಾಣಿ ಸಂಘರ್ಷ ಉಂಟಾಗುವುದನ್ನು ತಪ್ಪಿಸಲು ಅರಣ್ಯ ಇಲಾಖೆ ಪ್ರಯತ್ನಿಸುತ್ತಿದೆ. ಅರಣ್ಯದ ಅಂಚಿನಲ್ಲಿ ರೈಲ್ವೆ ಹಳಿಯ ಕಂಬಿಗಳನ್ನು ಬಳಸಿ ಬೇಲಿ ನಿರ್ಮಿಸಲು ಪ್ರಸಕ್ತ ವರ್ಷದ ಬಜೆಟ್‌ನಲ್ಲಿ ₹ 120 ಕೋಟಿ ಅನುದಾನ ಒದಗಿಸಲಾಗಿದೆ. ₹ 300 ಕೋಟಿ ಅನುದಾನದ ಬೇಡಿಕೆ ಇದ್ದು, ಹೆಚ್ಚಿನ ಮೊತ್ತದ ಮಂಜೂರಾತಿಗೆ ಪ್ರಯತ್ನಿಸಲಾಗುತ್ತಿದೆ ಎಂದು ತಿಳಿಸಿದರು.

ಆನೆ ತಡೆಗೆ ರೈಲ್ವೆ ಕಂಬಿ ಬೇಲಿಯೂ ಸೇರಿದಂತೆ ವಿವಿಧ ಯೋಜನೆಗಳಿಗೆ ಕೇಂದ್ರ ಸರ್ಕಾರದ ನೆರವನ್ನು ಪಡೆಯುವುದಕ್ಕೂ ಪ್ರಯತ್ನಿಸಲಾಗುತ್ತಿದೆ. ಹುಲಿ ಯೋಜನೆಯ ಮೂರು ಮತ್ತು ನಾಲ್ಕನೇ ಕಂತುಗಳ ಅನುದಾನವೂ ಕೇಂದ್ರದಿಂದ ಬಿಡುಗಡೆಯಾಗಿಲ್ಲ. ಈ ಎಲ್ಲವನ್ನೂ ಪಡೆಯಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.



ಇದು ರಾಜ್ಯಗಳೇ ನಡೆಸಿದ ಗಣತಿ

ಕೇಂದ್ರ ಸರ್ಕಾರದ ಅರಣ್ಯ ಮತ್ತು ಪರಿಸರ ಸಚಿವಾಲಯದಿಂದ ಪ್ರತಿ ಐದು ವರ್ಷಗಳಿಗೊಮ್ಮೆ ಆನೆಗಳ ಗಣತಿ ನಡೆಸಲಾಗುತ್ತಿತ್ತು. 2022ರಲ್ಲಿ ಗಣತಿ ನಡೆಯಬೇಕಿತ್ತು. ಆದರೆ, ಕೇಂದ್ರ ಸರ್ಕಾರ ಗಣತಿ ನಡೆಸಲಿಲ್ಲ. ಕರ್ನಾಟಕ, ಕೇರಳ ಮತ್ತು ತಮಿಳುನಾಡು ರಾಜ್ಯಗಳು ಈ ವರ್ಷ ತಾವಾಗಿಯೇ ಆನೆಗಳ ಗಣತಿ ನಡೆಸಿವೆ. ಆಂಧ್ರಪ್ರದೇಶವೂ ಗಣತಿ ನಡೆಸಿದ್ದು, ಇನ್ನೂ ವರದಿ ಬಂದಿಲ್ಲ.

ಕಾರಿನಲ್ಲಿ ಸಾಕುನಾಯಿ ಕೂಡಿಹಾಕಿ ವಿಮಾನದಲ್ಲಿ ಹೋದ ಮಾಲೀಕ!

ಪ್ರಜಾವಾಣಿ ವಾರ್ತೆ

ದೇವನಹಳ್ಳಿ (ಬೆಂಗಳೂರು ಗ್ರಾಮಾಂತರ): ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಪಾರ್ಕಿಂಗ್‌ನಲ್ಲಿ ಸೋಮವಾರ ಕಾರು ನಿಲ್ಲಿಸಿದ ವ್ಯಕ್ತಿಯೊಬ್ಬರು ತಮ್ಮೊಂದಿಗೆ ಕರೆತಂದಿದ್ದ ಸಾಕುನಾಯಿಯನ್ನು ಕಾರಿನಲ್ಲಿಯೇ ಬಿಟ್ಟು ವಿಮಾನ ಏರಿ ಕೊಯಮತ್ತೂರಿಗೆ ತೆರಳಿದ್ದರು.

ದೇವನಹಳ್ಳಿ ವಿಮಾನ ನಿಲ್ದಾಣದ ಪಾರ್ಕಿಂಗ್‌ನಲ್ಲಿ ರಕ್ಷಿಸಲ್ಪಟ್ಟ ನಾಯಿ

ಕಾರು ಲಾಕ್ ಮಾಡಿ, ಕಿಟಕಿಯ ಗಾಜು ಹಾಕಿದ್ದರಿಂದ ಮೂರ್‍ನಾಲ್ಕು ತಾಸುಗಳ ನಂತರ ಉಸಿರಾಡಲು ಗಾಳಿ ಇಲ್ಲದೆ ಒಳಗಿದ್ದ ಗ್ರೇಟ್ ಡೇನ್ ತಳಿಯ ನಾಯಿ ನಿತ್ರಾಣಗೊಂಡಿದೆ. ಅದಾದ ನಂತರ ಆಮ್ಲಜನಕದ ಕೊರತೆ ಮತ್ತು ನಿರಂತರವಾಗಿ ಬೊಗಳಿದ್ದರಿಂದ ಮೂಗಿನಲ್ಲಿ ರಕ್ತಸ್ರಾವವಾಗಿದೆ.

ಎಂದಿನಂತೆ ವಿಮಾನ ನಿಲ್ದಾಣದ ಗಸ್ತಿನಲ್ಲಿದ್ದ ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್) ಬಾಂಬ್ ನಿಷ್ಕ್ರೀಯ ದಳದ ಸಿಬ್ಬಂದಿ ಪಾರ್ಕಿಂಗ್ ಸ್ಥಳಕ್ಕೆ ಬಂದಾಗ ಕಾರಿನ ಒಳಗಿದ್ದ ನಾಯಿ ಕಣ್ಣಿಗೆ ಬಿದ್ದಿದೆ.

ಕೂಡಲೇ ಕಾರಿನ ಕಿಟಕಿಯ ಗಾಜು ಒಡೆದ ಸಿಬ್ಬಂದಿ ನಾಯಿಯನ್ನು ಹೊರತಂದಿದ್ದಾರೆ. ನಿಲ್ಲಲೂ ಆಗದಷ್ಟು ನಿತ್ರಾಣವಾಗಿದ್ದ ನಾಯಿಯನ್ನು ಪಾರ್ಕಿಂಗ್ ಸ್ಥಳದಲ್ಲಿ ಮಲಗಿಸಿ ನೀರು ಕುಡಿಸಿದ್ದಾರೆ. ಸುಧಾರಿಸಿಕೊಂಡ ನಂತರ ಚಾರ್ಲಿ ಎಂಬ ಪ್ರಾಣಿಗಳ ರಕ್ಷಣಾ ಸ್ವಯಂಸೇವಾ ಸಂಸ್ಥೆ ಸಂಪರ್ಕಿಸಿದ್ದಾರೆ. ಸಂಸ್ಥೆಯ ಸಿಬ್ಬಂದಿ ನಾಯಿಯನ್ನು ಕರೆದೊಯ್ದು ಚಿಕಿತ್ಸೆ ನೀಡಿದ್ದಾರೆ.

ಅದೇ ದಿನ ರಾತ್ರಿ ಕೊಯಮುತ್ತೂರಿನಿಂದ ಮರಳಿದ ಮಾಲೀಕ ಬೆಂಗಳೂರಿನ ಕಲ್ಯಾಣ ನಗರದ ವಿಕ್ರಮ್ ರಾಮದಾಸ್ ಲಿಂಗೇಶ್ವರ್ (41) ಅವರನ್ನು ವಶಕ್ಕೆ ಪಡೆದ ವಿಮಾನ ನಿಲ್ದಾಣದ ಸಿಬ್ಬಂದಿ, ಅವರನ್ನು ಪೊಲೀಸರಿಗೆ ಒಪ್ಪಿಸಿದ್ದಾರೆ. ವಿಮಾನ ನಿಲ್ದಾಣ ಪೊಲೀಸ್ ಠಾಣೆಯಲ್ಲಿ ಅವರ ವಿರುದ್ಧ ಪ್ರಕರಣ ದಾಖಲಾಗಿದೆ. ನಂತರ ಅವರನ್ನು ಠಾಣಾ ಜಾಮೀನಿನ (ಸ್ಟೇಷನ್ ಬೇಲ್) ಮೇಲೆ ಬಿಡುಗಡೆ ಮಾಡಲಾಗಿದೆ.

ಚಿಕಿತ್ಸೆ ನಂತರ ನಾಯಿ ಚೇತರಿಸಿಕೊಂಡಿದೆ. ಮಾಲೀಕ, ನಾಯಿಯನ್ನು ಕಾರಿನಲ್ಲಿ ಬಿಟ್ಟು ಹೋಗಲು ಕಾರಣ ತಿಳಿದು ಬಂದಿಲ್ಲ. ಮರಳಿ ಬಂದಾಗ ಅವರು ತುಂಬಾ ಒತ್ತಡದಲ್ಲಿದ್ದಂತೆ ಕಂಡು ಬಂದರು ಎಂದು ಪೊಲೀಸರು ತಿಳಿಸಿದ್ದಾರೆ.

ಜೆಡಿಎಸ್ ಮುಖಂಡನ ಕೊಲೆ

ಪ್ರಜಾವಾಣಿ ವಾರ್ತೆ

ಹಾಸನ: ನಗರದ ಹೊರವಲಯದ ನಾಗತವಳ್ಳಿಯ ಕೈಗಾರಿಕಾ ಪ್ರದೇಶದಲ್ಲಿ ಬುಧವಾರ ಮಧ್ಯಾಹ್ನ 1.30 ರಿಂದ 1.45 ರ ವೇಳೆಯಲ್ಲಿ ಗ್ರಾನೈಟ್ ಉದ್ಯಮಿ ಹಾಗೂ ಜೆಡಿಎಸ್ ಮುಖಂಡ ಕೃಷ್ಣೇಗೌಡ (55) ಅವರ ಮೇಲೆ ಮಚ್ಚಿನಿಂದ ಹಲ್ಲೆ ಮಾಡಿ, ಕೊಲೆ ಮಾಡಲಾಗಿದೆ.

ಅವರು ಫ್ಯಾಕ್ಟರಿಯ ಗೇಟ್ ತೆರೆಯಲು ವಾಹನದಿಂದ ಇಳಿದಾಗ, ನಾಲ್ಕೈದು ಜನರ ತಂಡ ಹಿಂದಿನಿಂದ ಹಲ್ಲೆ ಮಾಡಿತು. ಕುತ್ತಿಗೆ, ತಲೆ, ಕೈ, ಕಾಲುಗಳಿಗೆ ತೀವ್ರ ಗಾಯವಾಗಿ ರಕ್ತಸ್ರಾವದಿಂದ ಕೃಷ್ಣೇಗೌಡ ಸ್ಥಳದಲ್ಲೇ ಮೃತಪಟ್ಟರು.

'ವೈಯಕ್ತಿಕ ದ್ವೇಷದಿಂದ ಕೊಲೆಯಾಗಿದೆ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ಆರೋಪಿಗಳ ಪತ್ತೆಗೆ ನಾಲ್ಕು ತಂಡಗಳನ್ನು ರಚಿಸಲಾಗಿದೆ' ಎಂದು ಎಸ್ಪಿ ಹರಿರಾಂ ಶಂಕರ್ ತಿಳಿಸಿದ್ದಾರೆ. ಶಾಸಕ ಎಚ್.ಡಿ. ರೇವಣ್ಣ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದ ಕೃಷ್ಣೇಗೌಡರು, ಜೆಡಿಎಸ್‌ನಿಂದ ನಗರಸಭೆ ಚುನಾವಣೆಗೆ ಸ್ಪರ್ಧಿಸಿ, ಸೋತಿದ್ದರು.

4 ವರ್ಷ ಸಸಿ ನೆಟ್ಟು ಪೋಷಿಸಿದರೆ 5 ಅಂಕ

ಶಿರಸಿಯ ಅರಣ್ಯ ಮಹಾವಿದ್ಯಾಲಯದಿಂದ ವಿದ್ಯಾರ್ಥಿಗಳಲ್ಲಿ ಪರಿಸರ ಪ್ರೇಮ ಬೆಳೆಸಲು ಯೋಜನೆ

● ರಾಜೇಂದ್ರ ಹೆಗಡೆ

ಪ್ರಜಾವಾಣಿ ವಿಶೇಷ

ಶಿರಸಿ: ಕೆರೆ ದಂಡೆಯಲ್ಲಿ ಎರಡೆರಡು ಗಿಡ ನೆಟ್ಟು 4 ವರ್ಷ ಉತ್ತಮ ರೀತಿ ಪೋಷಿಸುವ ಅರಣ್ಯ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಗೆ ಪದವಿ ಅಂತಿಮ ಪರೀಕ್ಷೆಯಲ್ಲಿ 5 ಅಂಕಗಳು ಸಿಗುತ್ತವೆ.

ಧಾರವಾಡದ ಕೃಷಿ ವಿಶ್ವವಿದ್ಯಾಲಯ ವ್ಯಾಪ್ತಿಯ ಶಿರಸಿಯ ಅರಣ್ಯ ಮಹಾವಿದ್ಯಾಲಯದ 'ಗ್ರೀನ್ ಗ್ರ್ಯಾಜ್ಯುಯೇಶನ್ ಪ್ರೋಗ್ರಾಂ' (ಜಿಜಿಪಿ) ಅಡಿ ಪ್ರಸಕ್ತ ಸಾಲಿನಿಂದ ಪದವಿ ಮೊದಲ ವರ್ಷದ ವಿದ್ಯಾರ್ಥಿಗಳಿಗೆ ಇದನ್ನು ಪರಿಚಯಿಸಲಾಗಿದೆ.

'ಹಸಿರು ಪರಿಸರವನ್ನು ಸಂಭ್ರಮಿಸಿದರಷ್ಟೇ ಸಾಲದು, ಅದನ್ನು ವಿಸ್ತರಿಸಬೇಕು' ಎಂಬ ಮಹಾವಿದ್ಯಾಲಯದ ಆಶಯದಂತೆ ವಿದ್ಯಾರ್ಥಿಗಳು ನಗರದ ರಾಯನಕೆರೆ ದಂಡೆಯಲ್ಲಿ ಪದವಿ ಮೊದಲ ವರ್ಷದ 60 ವಿದ್ಯಾರ್ಥಿಗಳು ತಲಾ ಎರಡರಂತೆ 120 ವಿವಿಧ ತಳಿಗಳ ಗಿಡಗಳನ್ನು ನಾಟಿ ಮಾಡಿದ್ದಾರೆ. ಪಿಕಾಸಿ ಹಿಡಿದು ಹೊಂಡ ತೋಡಿ, ಗಿಡ ನಾಟಿ ಮಾಡಿ, ಗೊಬ್ಬರ ಹಾಕಿ ನೀರೆರೆದಿದ್ದಾರೆ. ನಿರಂತರ ಪೋಷಣೆಗೆ ಪಣ ತೊಟ್ಟಿದ್ದಾರೆ.

'ವಿಶ್ವಸಂಸ್ಥೆಯ ಮಹತ್ತರ ಯೋಜನೆಯಾದ 'ಜಿಜಿಪಿ'ಯನ್ನು ಜಗತ್ತಿನ 500 ವಿಶ್ವವಿದ್ಯಾಲಯಗಳು ಅನುಸರಿಸುತ್ತಿವೆ. ಜಿಜಿಪಿ ನಿಯಮದಂತೆ ಅಂತಿಮ ಪರೀಕ್ಷೆ ಅಂಕಗಳ ಜೊತೆಗೆ 5 ಅಂಕ ನೀಡಲು ಅವಕಾಶವಿದೆ.

ಶಿರಸಿಯ ರಾಯನಕೆರೆ ದಂಡೆಯ ಮೇಲೆ ಅರಣ್ಯ ಪದವಿ ಮೊದಲ ವರ್ಷದ ವಿದ್ಯಾರ್ಥಿಗಳು ಗಿಡಗಳ ನಾಟಿ ಕಾರ್ಯದಲ್ಲಿ ತೊಡಗಿರುವುದು

ವಿದ್ಯಾರ್ಥಿಗಳಿಗೆ ಪ್ರಕೃತಿಯ ಮೇಲೆ ಪ್ರೀತಿ ಹೆಚ್ಚಿಸುವ ಜೊತೆ ಮಾಲೀಕತ್ವ ಜವಾಬ್ದಾರಿ ಕೊಡುವುದು ಇದರ ಉದ್ದೇಶ. ಪದವಿ ಬಳಿಕವೂ ವಿದ್ಯಾರ್ಥಿಗಳಿಗೆ ನೆಟ್ಟ ಗಿಡಗಳ ನಂಟು ಇರುತ್ತದೆ' ಎಂದು ಅರಣ್ಯ ಮಹಾವಿದ್ಯಾಲಯದ ಡೀನ್ ಆರ್. ವಾಸುದೇವ್ ತಿಳಿಸಿದರು.

ವಿದ್ಯಾರ್ಥಿಗಳಿಗೆ ಪದವಿ ಶಿಕ್ಷಣದ ಆರಂಭದಲ್ಲೇ ಪರಿಸರ ಪ್ರಾತ್ಯಕ್ಷಿಕೆ, ಕ್ಷೇತ್ರ ಭೇಟಿಯಂಥ ಪಾಠ ಕಲಿಸುತ್ತಿರುವುದು ಶ್ಲಾಘನೀಯ

ಜಿ.ಆರ್.ಅಜ್ಜಯ್ಯ, ಡಿಎಫ್‌ಒ, ಶಿರಸಿ

'ಭೂಮಿಯನ್ನು ರಕ್ಷಿಸುವ ಮತ್ತು ಪರಿಸರ ಸಮತೋಲನ ಕಾಪಾಡುವ ದೃಷ್ಟಿಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಗಿಡಗಳನ್ನು ನಾಟಿ ಮಾಡಬೇಕು. ಸಾಮಾಜಿಕ ಅರಣ್ಯ ಯೋಜನೆಯಡಿ ಬಹಳಷ್ಟು ಶಾಲಾವನಗಳು ನಿರ್ಮಾಣವಾಗಿವೆ. ಈ ಯೋಜನೆಯೂ ಯಶಸ್ವಿಯಾಗುವ ವಿಶ್ವಾಸವಿದೆ' ಎಂದು ಪರಿಸರ ಬರಹಗಾರ ಶಿವಾನಂದ ಕಳವೆ 'ಪ್ರಜಾವಾಣಿ'ಗೆ ತಿಳಿಸಿದರು.

ಹೆಣ್ಣು ಕೊಡದಿದ್ದಕ್ಕೆ ಅಡಿಕೆ ಮರ ಹನನ

ಪ್ರಜಾವಾಣಿ ವಾರ್ತೆ

ಹನಗೋಡು (ಮೈಸೂರು ಜಿಲ್ಲೆ): ಹೋಬಳಿಯ ಕಡೆಮನುಗನಹಳ್ಳಿಯಲ್ಲಿ ಫಸಲಿಗೆ ಬಂದಿದ್ದ, ರೈತ ಕೆ.ವೆಂಕಟೇಶ್ ಅವರ ತೋಟದ 600 ಅಡಿಕೆ ಮರಗಳನ್ನು ಮಂಗಳವಾರ ರಾತ್ರಿ ದುಷ್ಕರ್ಮಿಗಳು ನಾಶಪಡಿಸಿದ್ದಾರೆ.

ಅವರು ತೋಟದ ಮನೆಯಲ್ಲಿ ಮಲಗಿದ್ದಾಗಲೇ ದುರ್ಘಟನೆ ನಡೆದಿದೆ. ದುಷ್ಕರ್ಮಿಗಳು ಶಬ್ದವಾಗದಂತೆ ಮರಗಳನ್ನು ಕಡಿದು ಹಾಕಿದ್ದಾರೆ. ಬೆಳಿಗ್ಗೆ ವಿಷಯ ಗೊತ್ತಾದ ಬಳಿಕ, ಮರಗಳ ಬಳಿ ಗೋಳಾಡುತ್ತಿದ್ದ ವೆಂಕಟೇಶ್ ಅವರನ್ನು ನೆರೆಹೊರೆಯ ರೈತರು ಸಮಾಧಾನಪಡಿಸಿದರು.

'ನನ್ನ ಮಗಳೊಂದಿಗೆ ಮದುವೆ ಮಾಡಲಿಲ್ಲ ಎಂಬ ದ್ವೇಷದಿಂದ ನಮ್ಮದೇ ಗ್ರಾಮದ ಅಶೋಕ್ ಈ ಕೃತ್ಯ ಎಸಗಿದ್ದಾನೆ. ನಾಲ್ಕು ದಿನಗಳ ಹಿಂದೆ ಶುಂಠಿ ಬೆಳೆಯನ್ನೂ ನಾಶಪಡಿಸಿದ್ದ' ಎಂದು ವೆಂಕಟೇಶ್ ಅವರು ಆರೋಪಿಸಿದ್ದಾರೆ.

ಅಂಗನವಾಡಿ ಪೌಷ್ಟಿಕ ಆಹಾರ ಪೊಟ್ಟಣದಲ್ಲಿ 30 ಸತ್ತ ಜಿರಳೆ!

ಪ್ರಜಾವಾಣಿ ವಾರ್ತೆ

ವಿಜಯಪುರ (ದೇವನಹಳ್ಳಿ): ಗರ್ಭಿಣಿಯರು, ಬಾಣಂತಿಯರಿಗೆ ಅಂಗನವಾಡಿ ಕೇಂದ್ರದಲ್ಲಿ ವಿತರಿಸಲಾದ ಪೌಷ್ಟಿಕ ಆಹಾರ ಪೊಟ್ಟಣದಲ್ಲಿ ಸತ್ತ ಜಿರಳೆಗಳು ಪತ್ತೆಯಾಗಿವೆ.

ಬುಳ್ಳಹಳ್ಳಿ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ವಿತರಿಸಲಾದ ಆಹಾರದ ಪೊಟ್ಟಣದಲ್ಲಿ ಕಂಡುಬಂದ ಸತ್ತ ಜಿರಳೆಗಳು

ಹಾರೋಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬುಳ್ಳಹಳ್ಳಿ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಮಂಗಳವಾರ ವಿತರಿಸಲಾದ ಆಹಾರ ಪೊಟ್ಟಣದಲ್ಲಿ 30ಕ್ಕೂ ಹೆಚ್ಚು ಸತ್ತ ಜಿರಳೆಗಳಿವೆ.

ಗ್ರಾಮದ ನಿವಾಸಿ ಪೂಜಪ್ಪ ಎಂಬುವರಿಗೆ ನೀಡಿದ ಎರಡು ಆಹಾರ ಪೊಟ್ಟಣಗಳ ಪೈಕಿ ಒಂದರಲ್ಲಿ ಈ ಜಿರಳೆಗಳು ಕಂಡುಬಂದಿವೆ. ಕೂಡಲೇ ಅವರು ಪೊಟ್ಟಣಗಳನ್ನು ಅಂಗನವಾಡಿ ಕೇಂದ್ರಕ್ಕೆ ಒಪ್ಪಿಸಿದ್ದಾರೆ. 'ಒಂದು ಪೊಟ್ಟಣ ಚೆನ್ನಾಗಿದೆ. ಆದರೂ ಅದರಲ್ಲಿಯ ಹಿಟ್ಟು ಬಳಸಲು, ಮಕ್ಕಳಿಗೆ ಕೊಡಲು ಭಯವಾಗುತ್ತದೆ' ಎಂದು ಪೂಜಪ್ಪ ಆತಂಕ ವ್ಯಕ್ತಪಡಿಸಿದರು.

'ಪೊಟ್ಟಣಗಳನ್ನು ನಾವು ಇಲ್ಲಿ ತಯಾರು ಮಾಡುವುದಿಲ್ಲ. ನಮಗೆ ಮೂಟೆಗಳಲ್ಲಿ ಸರಬರಾಜು ಮಾಡುತ್ತಾರೆ. ನಾವು ಅವನ್ನು ವಿತರಿಸಿದ್ದೇವೆ ಅಷ್ಟೇ. ಜಿರಳೆ ಸೇರಿಕೊಂಡಿರುವುದಕ್ಕೂ ನಮಗೂ ಸಂಬಂಧವಿಲ್ಲ' ಎಂದು ಅಂಗನವಾಡಿ ಸಹಾಯಕಿ ಪ್ರತಿಕ್ರಿಯಿಸಿದ್ದಾರೆ.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೂಲಕ ಅಂಗನವಾಡಿಗಳಿಗೆ ಪೂರೈಸುವ ಈ ಪೌಷ್ಟಿಕ ಆಹಾರ ಪೊಟ್ಟಣಗಳು ದೇವನಹಳ್ಳಿ ಪಟ್ಟಣದ ಒಂದನೇ ವಾರ್ಡ್ ಪ್ರಸನ್ನಹಳ್ಳಿಯಲ್ಲಿ ತಯಾರಾಗುತ್ತಿವೆ. 112ನೇ ಬ್ಯಾಚ್‌ನಲ್ಲಿ ತಯಾರಾದ ಪೊಟ್ಟಣದಲ್ಲಿ ಜಿರಳೆಗಳು ಪತ್ತೆ ಆಗಿವೆ. ಜೂನ್ ತಿಂಗಳಲ್ಲಿ ಈ ಆಹಾರ ಪೊಟ್ಟಣ ಪ್ಯಾಕ್ ಮಾಡಲಾಗಿದ್ದು, ಆಗಸ್ಟ್ 28ರವರೆಗೂ ಉಪಯೋಗಿಸಬಹುದಾಗಿದೆ.

ಹಾಡಿಯಲ್ಲಿ ಸಚಿವ ನಾಗೇಂದ್ರ ವಾಸ್ತವ್ಯ

ಪ್ರಜಾವಾಣಿ ವಾರ್ತೆ

ಹಂಪಾಪುರ/ ಎಚ್.ಡಿ.ಕೋಟೆ: (ಮೈಸೂರು ಜಿಲ್ಲೆ): ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ ಬಿ.ನಾಗೇಂದ್ರ ಅವರು ತಾವು ಹಮ್ಮಿಕೊಂಡಿರುವ 'ಹಾಡಿಗಳ ವಾಸ್ತವ್ಯ' ಕಾರ್ಯಕ್ರಮಕ್ಕೆ, ಎಚ್.ಡಿ.ಕೋಟೆ ತಾಲ್ಲೂಕು ಗೋಳೂರು ಹಾಡಿಯಲ್ಲಿ ಬುಧವಾರ ಚಾಲನೆ ನೀಡಿದರು.

ರಾತ್ರಿ ಹಾಡಿಗೆ ಬಂದ ಅವರು, ಆದಿವಾಸಿಗಳ ಸಾಂಪ್ರದಾಯಿಕ ನೃತ್ಯ ಕಾರ್ಯಕ್ರಮ ವೀಕ್ಷಿಸಿದರು. ಕಾಡು ಕುರುಬರೊಂದಿಗೆ ಹೆಜ್ಜೆ ಹಾಕಿದರು. ಆದಿವಾಸಿಗಳು ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಬಳಸುವ ಡೋಲು ಬಾರಿಸಿ ಖುಷಿಪಟ್ಟರು. ಶಾಸಕ ಅನಿಲ್ ಚಿಕ್ಕಮಾದು ಸಾಥ್ ನೀಡಿದರು.

ಅಲ್ಲಿನ ಮನೆಯೊಂದರ ಕಟ್ಟೆಯಲ್ಲಿ ಕುಳಿತು ಮಕ್ಕಳೊಂದಿಗೆ ಮಾತುಕತೆ ನಡೆಸಿದ ಸಚಿವರು, ಬುಡಕಟ್ಟು ಜನರ ಸಮಸ್ಯೆಗಳನ್ನು ಆಲಿಸಿದರು.

ಡಿ.ಬಿ. ಕುಪ್ಪೆ ಗ್ರಾಮ ಪಂಚಾಯಿತಿ ಸದಸ್ಯ ಪುರುಷೋತ್ತಮ್ ಮಾತನಾಡಿ, 'ಹಾಡಿಗಳಿಗೆ ಸಚಿವರು ಮತ್ತು ಅಧಿಕಾರಿಗಳು ಬರುವುದು, ವಾಸ್ತವ್ಯ ಹೂಡಿ ಭರವಸೆಗಳನ್ನು ನೀಡಿ ಹೋಗುವುದು ಹಿಂದಿನಿಂದಲೂ ನಡೆಯುತ್ತಿದೆ. ಆದರೆ, ಭರವಸೆಗಳು ಈಡೇರಿಲ್ಲ; ಹಾಡಿಗಳ ಜನರ ಬದುಕು ಸುಧಾರಿಸಿಲ್ಲ. ನೀವಾದರೂ ಸ್ಪಂದಿಸಬೇಕು' ಎಂದು ಕೋರಿದರು.

ಮೈಸೂರು ಜಿಲ್ಲೆ ಎಚ್‌.ಡಿ.ಕೋಟೆ ತಾಲ್ಲೂಕಿನ ಗೋಳೂರು ಹಾಡಿಯಲ್ಲಿ ಬುಧವಾರ ವಾಸ್ತವ್ಯ ಹೂಡಿದ ಸಚಿವ ಬಿ.ನಾಗೇಂದ್ರ ಹಾಗೂ ಶಾಸಕ ಅನಿಲ್ ಚಿಕ್ಕಮಾದು ಬುಡಕಟ್ಟು ಜನರು ಬಳಸುವ ಡೋಲು ಬಾರಿಸಿ ಖುಷಿ ಪಟ್ಟರು

'ಹಕ್ಕುಪತ್ರ ನೀಡಬೇಕು, ಆಶ್ರಮ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ಕಲ್ಪಿಸಬೇಕು. ಕೇರಳ ಮಾದರಿಯಲ್ಲಿ ಶಾಲೆಗಳನ್ನು ಅಭಿವೃದ್ಧಿಪಡಿಸಬೇಕು. ಶಿಕ್ಷಣ ಇಲಾಖೆಗೆ ಹಸ್ತಾಂತರಿಸಬೇಕು' ಎಂದು ಒತ್ತಾಯಿಸಿದರು.

ಪ್ರತಿಕ್ರಿಯಿಸಿದ ಸಚಿವರು, 'ಸಮಸ್ಯೆಯನ್ನು 2 ದಿನಗಳಲ್ಲಿ ಬಗೆಹರಿಸಬೇಕು' ಎಂದು ತಹಶೀಲ್ದಾರ್ ಸಣ್ಣರಾಮಪ್ಪ ಅವರಿಗೆ ತಾಕೀತು ಮಾಡಿದರು.

ಅಲ್ಲೇ ಊಟ ಮಾಡಿದ ಸಚಿವರು, ನಿವಾಸಿಯೊಬ್ಬರು ನಿರ್ಮಿಸಿರುವ ಹೊಸ ಗುಡಿಸಲಿನಲ್ಲಿ ವಾಸ್ತವ್ಯ ಹೂಡಿದರು.

ಇದಕ್ಕೂ ಮುನ್ನ, ಸೊಳ್ಳೇಪುರ ಗ್ರಾಮದ ಏಕಲವ್ಯ ಮಾದರಿ ವಸತಿ ಶಾಲೆಯಲ್ಲಿ ನಡೆದ ವಿಶ್ವ ಬುಡಕಟ್ಟು ದಿನಾಚರಣೆಯಲ್ಲಿ ಪಾಲ್ಗೊಂಡು, ಫಲಾನುಭವಿಗಳಿಗೆ ಸವಲತ್ತು ವಿತರಿಸಿದರು. 'ಬುಡಕಟ್ಟು ಜನರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಹಾಡಿಗಳಲ್ಲಿ ವಾಸ್ತವ್ಯ ಕಾರ್ಯಕ್ರಮ ಹಮ್ಮಿಕೊಂಡಿದ್ದೇನೆ' ಎಂದರು.

'ತಾಲ್ಲೂಕಿನ ಎಲ್ಲ 3,318 ಬುಡಕಟ್ಟು ಜನರಿಗೂ ಹಕ್ಕುಪತ್ರ ನೀಡಲಾಗುವುದು. ಬುಡಕಟ್ಟು ಆಶ್ರಮ ಶಾಲೆಯಲ್ಲಿ ಓದಿದ ಮಕ್ಕಳಿಗೆ ಮೊರಾರ್ಜಿ ಶಾಲೆ ಅಥವಾ ಏಕಲವ್ಯ ಶಾಲೆಗೆ ನೇರವಾಗಿ ಪ್ರವೇಶ ಕೊಡಿಸುವ ಯೋಜನೆ ಜಾರಿಗೊಳಿಸಲಾಗುವುದು. ಆದಿವಾಸಿಗಳ ಮನೆ ನಿರ್ಮಾಣಕ್ಕೆ ₹ 5 ಲಕ್ಷ ದೊರಕಿಸಲಾಗುವುದು' ಎಂದು ಭರವಸೆ ನೀಡಿದರು.

'ಸಂತೋಷ್ ರಾವ್ ಕುಟುಂಬಕ್ಕೆ ಬೆಂಬಲ'

ಪ್ರಜಾವಾಣಿ ವಾರ್ತೆ

ಕಾರ್ಕಳ (ಉಡುಪಿ ಜಿಲ್ಲೆ): ಸೌಜನ್ಯಾ ಕೊಲೆ ಪ್ರಕರಣದಲ್ಲಿ ನಿರ್ದೋಷಿಯಾಗಿ ಬಿಡುಗಡೆಯಾಗಿರುವ ಕಾರ್ಕಳ ತಾಲ್ಲೂಕಿನ ಬೈಲೂರಿನ ಸಂತೋಷ್ ರಾವ್ ನಿವಾಸಕ್ಕೆ ಬುಧವಾರ ಒಡನಾಡಿ ಸಂಸ್ಥೆಯ ಸ್ಟ್ಯಾನ್ಲಿ, ಹೋರಾಟಗಾರ ಮಹೇಶ್ ಶೆಟ್ಟಿ ತಿಮರೋಡಿ ಸಹಿತ ಹಲವರು ಭೇಟಿ ನೀಡಿ ನೊಂದ ಕುಟುಂಬಕ್ಕೆ ಸಾಂತ್ವನ ಹೇಳಿದರು.

ಸಂತೋಷ್ ರಾವ್ ಅವರ ತಂದೆ ನಿವೃತ್ತ ಶಿಕ್ಷಕರಾದ ಸುಧಾಕರ ರಾವ್ ಅವರಿಗೆ ಗುರುವಂದನೆ ಸಲ್ಲಿಸಲಾಯಿತು. ಸುಧಾಕರ ಅವರಿಗೆ ತಲೆಗೂದಲು ಕ್ಷೌರ ಮಾಡಿಸಿ, ಹೊಸಬಟ್ಟೆ ತೊಡಿಸಿ ಪಾದಪೂಜೆ ಮಾಡಲಾಯಿತು. ಮನೆಗೆ ಸುಣ್ಣಬಣ್ಣ ಬಳಿಯಲಾಯಿತು. ಬಳಿಕ ಮಾತನಾಡಿದ ಒಡನಾಡಿ ಸಂಸ್ಥೆಯ ಸ್ಟ್ಯಾನ್ಲಿ, 'ಸೌಜನ್ಯಾ ಕೊಲೆ ಪ್ರಕರಣದಲ್ಲಿ ಸಂತೋಷ್ ರಾವ್ ಕುಟುಂಬ ಮಾನಸಿಕವಾಗಿ– ದೈಹಿಕವಾಗಿ ಬಹಳ ನೊಂದಿದೆ. ಕೊಲೆಗಾರ, ಅತ್ಯಾಚಾರಿ ಎಂಬ ಕಳಂಕದ ಕಾರಣಕ್ಕೆ ಸಂಬಂಧಗಳನ್ನು ಕಳೆದುಕೊಂಡಿದೆ. ಸಮಾಜದಿಂದ ದೂರವಿದ್ದು ದಯನೀಯ ಸ್ಥಿತಿಯಲ್ಲಿ ಬದುಕು ಸಾಗಿಸಿದೆ. ಇಂತಹ ಪರಿಸ್ಥಿತಿಯಲ್ಲಿ ಸಮಾಜದ ಪರವಾಗಿ ಸಂತೋಷ್ ರಾವ್ ಕುಟುಂಬದ ಕ್ಷಮೆ ಕೇಳಬೇಕಾಗಿರುವುದು ನಮ್ಮ ಕರ್ತವ್ಯ' ಎಂದರು.

ಸಂತೋಷ್ ರಾವ್ ಕುಟುಂಬಕ್ಕೆ ಹೊಸದಾಗಿ ಬದುಕು ಕಟ್ಟಿಕೊಡಬೇಕು. ಈ ನಿಟ್ಟಿನಲ್ಲಿ ಒಡನಾಡಿ ಸಂಸ್ಥೆಯು ನೆರವು ನೀಡಲಿದೆ ಎಂದರು. ಸೌಜನ್ಯಾ ಪ್ರಕರಣದಲ್ಲಿ ಮಾಡದ ತಪ್ಪಿಗೆ ಸಂತೋಷ್‌ರಾವ್ ಮಾನಸಿಕವಾಗಿ, ದೈಹಿಕವಾಗಿ, ಆರ್ಥಿಕವಾಗಿ ನಷ್ಟ ಅನುಭವಿಸಿದ್ದಾರೆ. ಕುಟುಂಬಕ್ಕೆ ನ್ಯಾಯ ಹಾಗೂ ಪರಿಹಾರ ಕೊಡಿಸುವ ನಿಟ್ಟಿನಲ್ಲಿ ಸಂಸ್ಥೆ ನೆರವು ನೀಡಲಿದೆ' ಎಂದರು.

ಆಂಬುಲೆನ್ಸ್ ಸಿಗದೆ ಗರ್ಭಿಣಿ ಹೊಟ್ಟೆಯಲ್ಲೇ ಮಗು ಸಾವು: ಆರೋಪ

ಬೇಲೂರು: 'ಪಟ್ಟಣದಲ್ಲಿ ಮಂಗಳವಾರ ರಾತ್ರಿ ಸಕಾಲಕ್ಕೆ ಆಂಬುಲೆನ್ಸ್ ಬಾರದೆ, ಗರ್ಭಿಣಿ ಆಶಾ ಅವರ ಹೊಟ್ಟೆಯಲ್ಲಿದ್ದ ಮಗು ಮೃತಪಟ್ಟಿತು' ಎಂದು ಪೋಷಕರು ಆರೋಪಿಸಿದ್ದಾರೆ.

'ಆಸ್ಪತ್ರೆಯ ಆಂಬುಲೆನ್ಸ್ ಚಾಲಕರಿಗೆ ಮತ್ತು ಆಸ್ಪತ್ರೆಗೆ ಯಾವುದೇ ಕರೆ ಬಂದಿಲ್ಲ' ಎಂದು ಸಾರ್ವಜನಿಕ ಆಸ್ಪತ್ರೆ ವೈದ್ಯಾಧಿಕಾರಿ ಡಾ.ಸತೀಶ್ ಪ್ರತಿಕ್ರಿಯಿಸಿದ್ದಾರೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	113.26	5,024	5,302
ಹಾರಂಗಿ	2,859	2,858.71	2,617	1,412
ಕಬಿನಿ	2284.00	2,282.12	4,742	5,850
ಹೇಮಾವತಿ	2,922	2,916.15	2,675	1,390
ಲಿಂಗನಮಕ್ಕಿ	1,819	1,790.60	7,897	7,771.70
ಸೂಪಾ (ಮೀ)	564	546.72	8,238	5,388
ಮಾಣಿ	595	581.62	1,274	683
ತುಂಗಭದ್ರಾ	1,633	1,628.33	24,800	9,165
ಮಲಪ್ರಭಾ	2079.5	2,066.50	2,439	194
ಘಟಪ್ರಭಾ	2175	2,164.30	7,400	1,963
ಭದ್ರಾ	186	166.50	4,118	194
ಆಲಮಟ್ಟಿ (ಮೀ)	519.60	519.55	48,212	34,231
ನಾರಾಯಣಪುರ (ಮೀ)	492.25	491.49	25,000	6,000

* ನೆಲಮಟ್ಟದಿಂದ

ಪೊಲೀಸ್ ವರ್ಗ ತಡೆ ಹಿಡಿದಿದ್ದ ಪಟ್ಟಿಗೆ ಮುಕ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಇನ್‌ಸ್ಪೆಕ್ಟರ್‌ಗಳು, ಡಿವೈಎಸ್‌ಪಿ ವರ್ಗಾವಣೆ ಕುರಿತು ಶಾಸಕರು ಅಸಮಾಧಾನ ವ್ಯಕ್ತಪಡಿಸಿದ್ದರಿಂದ ತಡೆಹಿಡಿಯಲಾಗಿದ್ದ ಪಟ್ಟಿಯನ್ನು ಅಲ್ಪಸ್ವಲ್ಪ ಮಾರ್ಪಡಿಸಿ, ಹಲವನ್ನು ರದ್ದು ಪಡಿಸಿ ಬುಧವಾರ ಮರು ಆದೇಶ ಹೊರಡಿಸಲಾಗಿದೆ.

211 ಇನ್‌ಸ್ಪೆಕ್ಟರ್‌ಗಳನ್ನು ವರ್ಗಾವಣೆಗೊಳಿಸಿ ಈಚೆಗೆ ಆದೇಶ ಹೊರಡಿಸಿದ್ದ ಬೆನ್ನಲ್ಲೇ ಐವತ್ತಕ್ಕೂ ಹೆಚ್ಚು ಅಧಿಕಾರಿಗಳು ನಿಯೋಜಿತ ಸ್ಥಳದಲ್ಲಿ ಅಧಿಕಾರ ವಹಿಸಿಕೊಳ್ಳದಂತೆ ಸರ್ಕಾರವೇ ತಡೆ ನೀಡಿತ್ತು. ಈಗ 40 ಇನ್‌ಸ್ಪೆಕ್ಟರ್‌ಗಳು, 6 ಡಿವೈಎಸ್‌ಪಿಗಳ ವರ್ಗಾವಣೆ ಪಟ್ಟಿ ಬಿಡುಗಡೆ ಮಾಡಲಾಗಿದ್ದು, ಅವರಲ್ಲಿ ಹಿಂದೆ ವಿವಿಧ ಸ್ಥಳಗಳಿಗೆ ನಿಯೋಜಿಸಿದ್ದ 12 ಇನ್‌ಸ್ಪೆಕ್ಟರ್‌ಗಳು ಹಾಗೂ ಮೂವರು ಡಿವೈಎಸ್‌ಪಿಗಳ ವರ್ಗಾವಣೆಯನ್ನು ರದ್ದುಪಡಿಸಲಾಗಿದೆ.

ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದು, ಸಾರ್ವತ್ರಿಕ ವರ್ಗಾವಣೆ ಪ್ರಕ್ರಿಯೆ ಆರಂಭವಾದ ಬಳಿಕ ಶಾಸಕರು ಆಯಾ ಕ್ಷೇತ್ರಗಳಲ್ಲಿನ ವಿವಿಧ ಇಲಾಖೆಗಳ ಅಧಿಕಾರಿಗಳ ವರ್ಗಾವಣೆಗೆ ಪತ್ರ ನೀಡಿದ್ದರು. ಕ್ಷೇತ್ರದಲ್ಲಿ ಹಿಂದಿನ ಬಿಜೆಪಿ ಸರ್ಕಾರದ ಅವಧಿಯಿಂದ ಕಾರ್ಯನಿರ್ವಹಿಸುತ್ತಿರುವ ಪೊಲೀಸ್ ಸಬ್‌ಇನ್‌ಸ್ಪೆಕ್ಟರ್, ಇನ್‌ಸ್ಪೆಕ್ಟರ್, ಡಿವೈಎಸ್‌ಪಿ/ಎಸಿಪಿ ದರ್ಜೆ ಅಧಿಕಾರಿಗಳ ಬದಲಾವಣೆಗೆ ಭಾರಿ ಪ್ರಯತ್ನ ನಡೆಸಿದ್ದರು.

ಕರ್ನಾಟಕ ಬ್ಯಾಂಕ್ ಮಾಜಿ ಅಧ್ಯಕ್ಷ ಪಿ.ಜಯರಾಮ್ ಭಟ್ ನಿಧನ

ಮಂಗಳೂರು: ಕರ್ನಾಟಕ ಬ್ಯಾಂಕ್‌ನ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದ ಪಿ. ಜಯರಾಮ್ ಭಟ್ (72) ಬುಧವಾರ ನಿಧನರಾದರು.

ಮುಂಬೈನಿಂದ ಬುಧವಾರ ಮಧ್ಯಾಹ್ನ ವಿಮಾನದಲ್ಲಿ ಮಂಗಳೂರಿಗೆ ಬಂದಿದ್ದ ಅವರಿಗೆ ವಿಮಾನ ನಿಲ್ದಾಣದಲ್ಲೇ ಹೃದಯಾಘಾತವಾಗಿತ್ತು. ತಕ್ಷಣ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಮಂಗಳೂರು ನಿವಾಸಿಯಾಗಿದ್ದ ಅವರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳ ತಾಲ್ಲೂಕು ಪೊಳಲಿಯ ಅವರು, ಮೈಸೂರು ವಿಶ್ವವಿದ್ಯಾಲಯದಲ್ಲಿ ಎಂ.ಎಸ್ಸಿ ಸ್ನಾತಕೋತ್ತರ ಪದವಿಯಲ್ಲಿ ಪ್ರಥಮ ರ‍್ಯಾಂಕ್ ಗಳಿಸಿದ್ದರು. 1973ರಲ್ಲಿ ಪ್ರೊಬೇಷನರಿ ಅಧಿಕಾರಿಯಾಗಿ ಕರ್ನಾಟಕ ಬ್ಯಾಂಕ್ ಸೇರಿದ್ದ ಅವರು, 1976ರಲ್ಲಿ ಶಾಖಾ ವ್ಯವಸ್ಥಾಪಕರಾಗಿ, ನಂತರ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿ 2005ರಲ್ಲಿ ಪ್ರಧಾನ ವ್ಯವಸ್ಥಾಪಕರಾಗಿ ನೇಮಕಗೊಂಡಿದ್ದರು. 2009ರಲ್ಲಿ ಅವರಿಗೆ ಕರ್ನಾಟಕ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಿಇಒ ಹುದ್ದೆ ಒಲಿಯಿತು. 2017ರಲ್ಲಿ ಬ್ಯಾಂಕ್‌ನ ಅಧ್ಯಕ್ಷರಾದ ಅವಧಿಯಲ್ಲಿ ಇ-ಲಾಬಿ, ಮೊಬೈಲ್ ಬ್ಯಾಂಕಿಂಗ್, ಪಿಒಎಸ್, ಆನ್‌ಲೈನ್ ಟ್ರೇಡಿಂಗ್ ಅಕೌಂಟ್, ಟ್ರಾವೆಲ್ ಕಾರ್ಡ್, ಇನ್ನೂ ಅನೇಕ ಯೋಜನೆಗಳನ್ನು ಪರಿಚಯಿಸಿ, ಗ್ರಾಹಕರ ಮೆಚ್ಚುಗೆ ಗಳಿಸಿದ್ದರು.

ಬ್ಯಾಂಕಿಂಗ್ ಕ್ಷೇತ್ರದಲ್ಲಿ ಐದು ದಶಕಗಳ ಅನುಭವ ಹೊಂದಿದ್ದ ಅವರಿಗೆ 20ಕ್ಕೂ ಹೆಚ್ಚು ಪ್ರಶಸ್ತಿಗಳು ಲಭಿಸಿದ್ದವು.

ಗುರುವಾರ (ಆ.10) ಬೆಳಿಗ್ಗೆ 8ರಿಂದ 9 ಗಂಟೆಯವರೆಗೆ ಮಂಗಳೂರಿನ ಎ.ಜೆ. ಆಸ್ಪತ್ರೆಯಲ್ಲಿ ಮೃತರ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. 10 ಗಂಟೆಗೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪರೀಕ್ಷಾ ಮೇಲ್ವಿಚಾರಣೆಗೆ ಡಿ ಗ್ರೂಪ್ ನೌಕರರ ಬಳಕೆ

ಪ್ರಜಾವಾಣಿ ವಾರ್ತೆ

ಮಂಡ್ಯ: ಮಂಡ್ಯ ವಿಶ್ವವಿದ್ಯಾಲಯದ ಅತಿಥಿ ಉಪನ್ಯಾಸಕರು ಪದವಿ ಪರೀಕ್ಷೆಗಳ ಮೇಲ್ವಿಚಾರಣಾ ಕರ್ತವ್ಯವನ್ನು ಬಹಿಷ್ಕರಿಸಿರುವುದರಿಂದ, ವಿ.ವಿಯ ಡಿ ಗ್ರೂಪ್ ನೌಕರರನ್ನೇ ಆ ಕೆಲಸಕ್ಕಾಗಿ ಬಳಸಿಕೊಳ್ಳಲಾಗುತ್ತಿದೆ.

ಆ.8ರಿಂದ ಪದವಿ ಪರೀಕ್ಷೆಗಳು ಆರಂಭವಾಗಿವೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಆದೇಶದಂತೆ 125 ಅತಿಥಿ ಉಪನ್ಯಾಸಕರನ್ನು ಜುಲೈ 8ರಂದೇ ಕರ್ತವ್ಯದಿಂದ ಬಿಡುಗಡೆಗೊಳಿಸಿರುವುದರಿಂದ, ಪರೀಕ್ಷಾ ಮೇಲ್ವಿಚಾರಣೆಗೆ ಸಿಬ್ಬಂದಿ ಕೊರತೆಯುಂಟಾಗಿದೆ.

ವಿಶ್ವವಿದ್ಯಾಲಯದ ಆಡಳಿತ ಮಂಡಳಿಯ ಮನವಿ ಮೇರೆಗೆ ಅತಿಥಿ ಉಪನ್ಯಾಸಕರು ಪರೀಕ್ಷಾ ಕರ್ತವ್ಯಕ್ಕೆ ಹಾಜರಾಗಲು ಒಪ್ಪಿದ್ದರು. ಆದರೆ, ಮೈಸೂರು ವಿಶ್ವವಿದ್ಯಾಲಯ ನಿಗದಿ ಮಾಡಿರುವಂತೆ, ಆ.28ರವರೆಗೂ ಕರ್ತವ್ಯ ದಿನ ಎಂದು ಪರಿಗಣಿಸಿ ವೇತನ ನೀಡಬೇಕು ಎಂದು ಒತ್ತಾಯಿಸಿದ್ದರು. ಆಡಳಿತ ಮಂಡಳಿ ಒಪ್ಪದಿರುವುದರಿಂದ ಕಡೇ ಕ್ಷಣದಲ್ಲಿ ಕರ್ತವ್ಯವನ್ನು ಬಹಿಷ್ಕರಿಸಿದ್ದರು. ಅದರಿಂದ 30 ಕೊಠಡಿಗಳಲ್ಲಿ ಪರೀಕ್ಷೆಗಳ ಮೇಲ್ವಿಚಾರಣೆ ನಡೆಸಲು ಸಿಬ್ಬಂದಿಯ ಕೊರತೆ ಉಂಟಾಗಿದೆ.

'ಪರೀಕ್ಷಾ ಕರ್ತವ್ಯಕ್ಕೆ ಡಿ ಗ್ರೂಪ್ ನೌಕರರ ಸಹಾಯ ಪಡೆದಿದ್ದೇವೆ. ಸ್ನಾತಕೋತ್ತರ ಪದವಿ ತರಗತಿಗಳ ಅಧ್ಯಾಪಕರಿಗೂ ಬರುವಂತೆ ಸೂಚಿಸಲಾಗಿದೆ. ಬೇರೆ ಕಾಲೇಜುಗಳ ಉಪನ್ಯಾಸಕರು ನೆರವಾಗುತ್ತಿದ್ದಾರೆ. ಸುಸೂತ್ರವಾಗಿ ಪರೀಕ್ಷೆ ನಡೆಯುತ್ತಿದೆ' ಎಂದು ಮಂಡ್ಯ ವಿ.ವಿ. ಕುಲಪತಿ ಪುಟ್ಟರಾಜು ತಿಳಿಸಿದರು.

ಮುರುಘಾ ಮಠ: ವಿಚಾರಣೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಿತ್ರದುರ್ಗದ 'ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ'ಕ್ಕೆ (ಎಸ್‌ಜೆಎಂ) ರಾಜ್ಯ ಸರ್ಕಾರ ಆಡಳಿತಾಧಿಕಾರಿ ನೇಮಕ ಮಾಡಿದ ಆದೇಶವನ್ನು ರದ್ದುಪಡಿಸಿದ್ದ ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಲಾದ ಮೇಲ್ಮನವಿ ವಿಚಾರಣೆಯನ್ನು ಹೈಕೋರ್ಟ್ ಇದೇ 16ಕ್ಕೆ ಮುಂದೂಡಿದೆ.

ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಲಾದ ಒಟ್ಟು ಏಳು ಮೇಲ್ಮನವಿಗಳ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆಗೆ ನಿಗದಿಪಡಿಸಿತ್ತು. ಆದರೆ, ಮಧ್ಯಾಹ್ನದ ಕಲಾಪದ ಅವಧಿಯನ್ನು 3.45ಕ್ಕೇ ಮುಕ್ತಾಯಗೊಳಿಸಿದ ಕಾರಣ ಇದೇ 16 ರ ಬೆಳಗ್ಗೆ 10 ಗಂಟೆಗೆ ವಿಚಾರಣೆ ಕೈಗೆತ್ತಿಕೊಳ್ಳುವುದಾಗಿ ಮುಖ್ಯ ನ್ಯಾಯಮೂರ್ತಿಗಳು ತಿಳಿಸಿದರು.

'ಮೇಲ್ಮನವಿ ಇತ್ಯರ್ಥವಾಗುವ ತನಕ ಮಠಕ್ಕೆ ಚಿತ್ರದುರ್ಗ ಜಿಲ್ಲಾ ಪ್ರಧಾನ ನ್ಯಾಯಾಧೀಶರನ್ನು ತಾತ್ಕಾಲಿಕ ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಿರುವ ಆದೇಶ ಮುಂದುವರಿಯಲಿದೆ' ಎಂದು ನ್ಯಾಯಪೀಠ ಮಂಗಳವಾರವಷ್ಟೇ (ಆ.08) ಆದೇಶಿಸಿತ್ತು.

ವಿಜಯ ರಾಘವೇಂದ್ರ ಮತ್ತು ಅವರ ಮಗ ಶೌರ್ಯ ಸ್ಪಂದನಾ ಅವರಿಗೆ ಅಂತಿಮ ವಿದಾಯ ಹೇಳಿದ ಕ್ಷಣ...

–ಪ್ರಜಾವಾಣಿ ಚಿತ್ರ

ಸ್ಪಂದನಾಗೆ ಭಾವಪೂರ್ಣ ವಿದಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೃದಯಾಘಾತದಿಂದ ನಿಧನರಾದ ಸ್ಪಂದನಾ ಪಾರ್ಥಿವ ಶರೀರದ ಅಂತ್ಯಸಂಸ್ಕಾರ ಬುಧವಾರ ನೆರವೇರಿತು. ನಗರದ ಹರಿಶ್ಚಂದ್ರ ಘಾಟ್‌ನಲ್ಲಿ ಪತಿ ವಿಜಯ ರಾಘವೇಂದ್ರ, ಪುತ್ರ ಶೌರ್ಯ ಈಡಿಗ ಸಂಪ್ರದಾಯದಂತೆ ಅಂತ್ಯಸಂಸ್ಕಾರದ ಸಕಲ ವಿಧಿ ವಿಧಾನಗಳನ್ನು ಪೂರೈಸಿದರು.

ಬ್ಯಾಂಕಾಕ್‌ನಲ್ಲಿ ನಿಧನ ಹೊಂದಿದ್ದ ಸ್ಪಂದನಾ ಪಾರ್ಥಿವ ಶರೀರವನ್ನು ಮಂಗಳವಾರ ತಡರಾತ್ರಿ ಮಲ್ಲೇಶ್ವರದಲ್ಲಿರುವ ತವರು ಮನೆಗೆ ತರಲಾಗಿತ್ತು. ಅಲ್ಲಿಯೇ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದ ಮುಖ್ಯಮಂತ್ರಿ ಸಿದ್ದರಾಮಯ್ಯ, ಸ್ಪಂದನಾ ಅವರ ಪತಿ, ನಟ ವಿಜಯ ರಾಘವೇಂದ್ರ ಹಾಗೂ ಕುಟುಂಬದವರಿಗೆ ಸಾಂತ್ವನ ಹೇಳಿದರು. ಶಿವರಾಜ್‌ಕುಮಾರ್ ದಂಪತಿ, ಅಶ್ವಿನಿ ಪುನೀತ್ ರಾಜ್‌ಕುಮಾರ್, ಯಶ್ ಸೇರಿದಂತೆ ಚಿತ್ರರಂಗದ ಅನೇಕ ಗಣ್ಯರು ಅಂತಿಮ ದರ್ಶನ ಪಡೆದರು.

ಮಲ್ಲೇಶ್ವರಂ ನಿವಾಸದಿಂದ ಹರಿಶ್ಚಂದ್ರ ಘಾಟ್‌ವರೆಗೆ ಚಿರಶಾಂತಿ ವಾಹನದಲ್ಲಿ ಪಾರ್ಥಿವ ಶರೀರವನ್ನು ತರಲಾಯಿತು. ಸಾವಿರಾರು ಸಾರ್ವಜನಿಕರು ಅಂತಿಮ ದರ್ಶನ ಪಡೆದರು. ಸ್ಪಂದನಾ ತಂದೆ ಬಿ.ಕೆ.ಶಿವರಾಂ, ಚಿಕ್ಕಪ್ಪ ಬಿ.ಕೆ.ಹರಿಪ್ರಸಾದ್, ಮಾವ ಚಿನ್ನೇಗೌಡ ಸೇರಿದಂತೆ ಇಡೀ ಕುಟುಂಬವರ್ಗ ಅಂತ್ಯಸಂಸ್ಕಾರದಲ್ಲಿ ಭಾಗಿಯಾಯಿತು.

EXAM DH ಪ್ರಜಾವಾಣಿ MASTERMIND™
ಸ್ಪರ್ಧಾತ್ಮಕ ಪರೀಕ್ಷೆಗಳ ಮಾಹಿತಿಗಾಗಿ
ಪ್ರಚಲಿತ ವಿದ್ಯಮಾನಗಳು, ಮಾದರಿ ಪ್ರಶ್ನೋತ್ತರ ಸೇರಿದಂತೆ ನಾಗರಿಕ ಸೇವಾ ಪರೀಕ್ಷೆಗಳಿಗೆ ಸಂಬಂಧಿಸಿದ ಲೇಖನಗಳು ಹಾಗೂ ವಿಡಿಯೊಗಳಿಗಾಗಿ 'ಡೆಕ್ಕನ್‌ಹೆರಾಲ್ಡ್‌– ಪ್ರಜಾವಾಣಿ ಮಾಸ್ಟರ್‌ಮೈಂಡ್‌' ಇ–ಪೇಪರ್‌ಗೆ ಚಂದಾದಾರರಾಗಿ. ಚಂದಕ್ಕಾಗಿ ಪಕ್ಕದಲ್ಲಿರುವ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ
www.exammastermind.com

ಐಬಿಪಿಎಸ್‌ನಿಂದ ಮತ್ತೆ ನೇಮಕಾತಿ

11 ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ 3,049 ಪ್ರೊಬೇಷನರಿ ಆಫೀಸರ್ಸ್ ಹುದ್ದೆಗಳು

ದೇಶದ 11 ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಖಾಲಿಯಿರುವ 3,049 ಪ್ರೊಬೇಷನರಿ ಆಫೀಸರ್ಸ್ ಹುದ್ದೆಗಳ ಭರ್ತಿಗಾಗಿ ಅರ್ಜಿ ಆಹ್ವಾನಿಸಿದೆ. ಅರ್ಜಿ ಸಲ್ಲಿಕೆ ಮತ್ತಿತರ ವಿವರಗಳು ಇಲ್ಲಿವೆ.

ಆರ್.ಕೆ. ಬಾಲಚಂದ್ರ

ಕಳೆದ ಜುಲೈ ತಿಂಗಳಾಂತ್ಯದಲ್ಲಷ್ಟೇ ನಾಲ್ಕು ಸಾವಿರಕ್ಕೂ ಹೆಚ್ಚು ಗುಮಾಸ್ತ ಹುದ್ದೆಗಳ ನೇಮಕಾತಿ ಮಾಡಿಕೊಳ್ಳಲು ಬ್ಯಾಂಕ್ ಸಿಬ್ಬಂದಿ ನೇಮಕಾತಿ ಸಂಸ್ಥೆ(ಐಪಿಬಿಎಸ್) ಅರ್ಹರಿಂದ ಅರ್ಜಿ ಆಹ್ವಾನಿಸಿತ್ತು. ಈಗ ಮತ್ತೆ ಹನ್ನೊಂದು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಖಾಲಿಯಿರುವ 3,049 ಪ್ರೊಬೇಷನರಿ ಆಫೀಸರ್ಸ್‌ಗಳ ನೇಮಕಾತಿಗಾಗಿ ಅರ್ಜಿ ಆಹ್ವಾನಿಸಿದೆ. ಎರಡು ಹಂತಗಳ ಪರೀಕ್ಷೆ (ಪೂರ್ವ ಭಾವಿ ಪರೀಕ್ಷೆ ಮತ್ತು ಮುಖ್ಯ ಪರೀಕ್ಷೆ) ಮತ್ತು ಸಂದರ್ಶನ ಪ್ರಕ್ರಿಯೆ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತಿದೆ. ಈ ಸಂಬಂಧ ಕಳೆದ ವಾರ ಐಬಿಪಿಎಸ್ ಅಧಿಸೂಚನೆ ಹೊರಡಿಸಿದೆ.ಒಟ್ಟು ಹುದ್ದೆಗಳಲ್ಲಿ ಪರಿಶಿಷ್ಟ ಜಾತಿಗೆ 462, ಪರಿಶಿಷ್ಟ ಪಂಗಡಕ್ಕೆ 234, ಹಿಂದುಳಿದ ವರ್ಗದವರಿಗೆ 829, ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ 300 ಹಾಗತೂ ಸಾಮಾನ್ಯ ವರ್ಗದವರಿಗೆ 1,224 ಹುದ್ದೆಗಳನ್ನು ಮೀಸಲಿಡಲಾಗಿದೆ. ಆಗಸ್ಟ್ 1ರಿಂದ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಿದೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು. ಅರ್ಜಿ ಸಲ್ಲಿಕೆಗೆ ಆಗಸ್ಟ್ 21, 2023 ಕೊನೆ ದಿನ. ಅರ್ಜಿ ಸಲ್ಲಿಸಲು ಹಾಗೂ ನೋಂದಣಿಗೆ ಬಳಸಬೇಕಾದ ಲಿಂಕ್: www.ibps.in ಮತ್ತು https://ibpsonline.ibps.in/crppo13jun23/

ಯಾವ ಬ್ಯಾಂಕ್, ಎಷ್ಟು ಹುದ್ದೆ?

ಕೆನರಾ ಬ್ಯಾಂಕ್ 500, ಪಂಜಾಬ್ ಆ್ಯಂಡ್ ಸಿಂಧ್ ಬ್ಯಾಂಕ್ 125 , ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ 2000, ಬ್ಯಾಂಕ್ ಆಫ್ ಇಂಡಿಯಾ 224 ಪಂಜಾಬ್ ನ್ಯಾಷನಲ್ ಬ್ಯಾಂಕ್ 200 ಹುದ್ದೆಗಳಿಗೆ ನೇಮಕ ಮಾಡಿಕೊಳ್ಳುವುದಾಗಿ ಪ್ರಕಟಿಸಿವೆ.

ಅರ್ಜಿ ಸಲ್ಲಿಸುವಾಗ

- ಅಭ್ಯರ್ಥಿ ಬ್ಯಾಂಕ್ ಆಯ್ಕೆ ಮಾಡಿಕೊಳ್ಳುವುದಕ್ಕೆ ಆನ್‌ಲೈನ್ ಅರ್ಜಿ ನಮೂನೆಯಲ್ಲಿ ಬ್ಯಾಂಕ್ ಆದ್ಯತೆಯ ಆದೇಶವನ್ನು ಅಳವಡಿಸಲಾಗಿದೆ. ಅಭ್ಯರ್ಥಿಗಳು ಈ ಹಂತದಲ್ಲಿ ಬ್ಯಾಂಕ್ ಆದ್ಯತೆಯ ಕ್ರಮವನ್ನು ಅಗತ್ಯವಾಗಿ ಸೂಚಿಸಬೇಕು.
- ಯಾವ್ಯಾವ ಬ್ಯಾಂಕ್‌ಗಳಲ್ಲಿ ಎಷ್ಟೆಷ್ಟು ಹುದ್ದೆಗಳಿವೆ ಹಾಗೂ ನಮ್ಮ ರಾಜ್ಯದಲ್ಲಿ ಶಾಖೆಗಳಿವೆಯಾ ಎಂಬುದರ ಮೇಲೆ ನಿಮ್ಮ ಆದ್ಯತೆಯ ಆಯ್ಕೆ ಇರಲಿ.
- ಒಮ್ಮೆ ನೀವು ಆಯ್ಕೆಯಾದರೆ ನಂತರದ ದಿನಗಳಲ್ಲಿ ಬ್ಯಾಂಕ್ /ಸ್ಥಳ ಬದಲಾವಣೆಗಾಗಿ ಸಲ್ಲಿಸುವ ವಿನಂತಿಯನ್ನು ಪರಿಗಣಿಸಲಾಗುವುದಿಲ್ಲ.
- ಆಯ್ಕೆ ಪ್ರಕ್ರಿಯೆಯ ಹಂತದಲ್ಲಿ ಅಥವಾ ಅಪಾಯಿಂಟ್‌ಮೆಂಟ್‌ನ ನಂತರ ನಿಮ್ಮ ಕೈಬರಹದ ಘೋಷಣೆ ಹಾಗೂ ನಿಮ್ಮ ಕೈಬರಹದಲ್ಲಿ ಭಿನ್ನವಾಗಿರುವುದು ತಜ್ಞರ ವಿಶ್ಲೇಷಣೆಯಲ್ಲಿ ಕಂಡುಬಂದರೆ, ಅಭ್ಯರ್ಥಿಯ ಉಮೇದುವಾರಿಕೆಯನ್ನ ರದ್ದುಗೊಳಿಸಲಾಗುವುದು.

ಶೈಕ್ಷಣಿಕ ಅರ್ಹತೆ: ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಯಾವುದೇ ವಿಷಯದಲ್ಲಿ ಪದವಿ ಅಥವಾ ಕೇಂದ್ರ ಸರ್ಕಾರದಿಂದ ಮಾನ್ಯತೆ ಪಡೆದ ಯಾವುದೇ ಸಮಾನ ಅರ್ಹತೆ.

ವಯೋಮಿತಿ: ಕನಿಷ್ಠ 20 ವರ್ಷಗಳು ಗರಿಷ್ಠ 30 ವರ್ಷಗಳು(01.08.2023ಕ್ಕೆ ಅನ್ವಯಿಸುವಂತೆ). ಎಸ್‌ಸಿ/ ಎಸ್.ಟಿ ಅಭ್ಯರ್ಥಿಗಳಿಗೆ 5 ವರ್ಷ, ಇತರ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ 3 ವರ್ಷ ಮತ್ತು ಅಂಗವಿಕಲ ಅಭ್ಯರ್ಥಿಗಳಿಗೆ 10 ವರ್ಷ ವಯೋಮಿತಿಯಲ್ಲಿ ಸಡಿಲಿಕೆ ಇರುತ್ತದೆ.

ಅರ್ಜಿ ಶುಲ್ಕ: ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ₹ 850. ಎಸ್‌ಸಿ/ಎಸ್‌ಟಿ/ಅಂಗವಿಕಲ ಅಭ್ಯರ್ಥಿಗಳು/ಮಾಜಿ ಯೋಧರಿಗೆ ₹175.

ನೆನಪಿಡಿ: ಒಬಿಸಿ ವರ್ಗಕ್ಕೆ ಸೇರಿದ ಆದರೆ ಕೆನೆ ಪದರದ ಅಡಿಯಲ್ಲಿ ಬರುವ ಅಭ್ಯರ್ಥಿಗಳು ಒಬಿಸಿ ಮೀಸಲಾತಿಗೆ ಅರ್ಹರಾಗಿರುವುದಿಲ್ಲ. ಅವರು ಆನ್‌ಲೈನ್ ಅರ್ಜಿ ನಮೂನೆಯಲ್ಲಿ ತಮ್ಮ ವರ್ಗವನ್ನು ಸಾಮಾನ್ಯ ಎಂದು ಸೂಚಿಸಬೇಕು. ಅಭ್ಯರ್ಥಿಯು ಕಾಲಕಾಲಕ್ಕೆ ಭಾರತ ಸರ್ಕಾರದ ಮಾರ್ಗಸೂಚಿಗಳ ಪ್ರಕಾರ ಕೆನೆರಹಿತ ಪದರ (Non creamy layer) ಷರತ್ತಿನೊಂದಿಗೆ ಒಬಿಸಿ ಪ್ರಮಾಣಪತ್ರವನ್ನು ಹೊಂದಿರಬೇಕು.

ಶುಲ್ಕಪಾವತಿ: ನೋಂದಣಿ ನಂತರ ಅಭ್ಯರ್ಥಿಗಳು ಆನ್‌ಲೈನ್ ಬ್ಯಾಂಕಿಂಗ್ ಮೂಲಕ ಅರ್ಜಿ ಶುಲ್ಕ ಪಾವತಿಸಬೇಕಾಗುತ್ತದೆ.

ಪರೀಕ್ಷಾ ಪ್ರಕ್ರಿಯೆ: ಇದೇ ಅಕ್ಟೋಬರ್‌ನಲ್ಲಿ ಪೂರ್ವಭಾವಿ ಪರೀಕ್ಷೆ, ನವೆಂಬರ್‌ನಲ್ಲಿ ಮುಖ್ಯ ಪರೀಕ್ಷೆ ಹಾಗೂ 2024ರ ಜನವರಿ ಅಥವಾ ಫೆಬ್ರವರಿಯಲ್ಲಿ ಸಂದರ್ಶನ ನಡೆಯುವ ಸಾಧ್ಯತೆ ಇದೆ. ಎರಡೂ ಪರೀಕ್ಷೆಗಳು ಆನ್‌ಲೈನ್‌ನಲ್ಲಿ ನಡೆಯುಲಿವೆ. ರಾಜ್ಯದ 13 ಜಿಲ್ಲಾ ಕೇಂದ್ರಗಳಲ್ಲಿ ಪೂರ್ವಭಾವಿ ಪರೀಕ್ಷೆ ಮತ್ತು 3 ಜಿಲ್ಲಾ ಕೇಂದ್ರಗಳಲ್ಲಿ ಮುಖ್ಯ ಪರೀಕ್ಷೆ ನಡೆಯಲಿದೆ.

ಪೂರ್ವಭಾವಿ ಪರೀಕ್ಷೆಗೆ ತರಬೇತಿ: ಐಬಿಪಿಎಸ್ ವತಿಯಿಂದ ಎಸ್.ಸಿ/ಎಸ್.ಟಿ/ ಅಲ್ಪಸಂಖ್ಯಾತ ವರ್ಗದ ಅಭ್ಯರ್ಥಿಗಳು, ಮಾಜಿ ಸೈನಿಕರು, ಅಂಗವಿಕಲ ಅಭ್ಯರ್ಥಿಗಳಿಗೆ ಉಚಿತ ಪರೀಕ್ಷಾ ತರಬೇತಿ ನೀಡಲಾಗುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಅರ್ಜಿ ಸಲ್ಲಿಸುವಾಗಲೇ ಅಭ್ಯರ್ಥಿಗಳು ಕೋರಿಕೆ ಸಲ್ಲಿಸಬೇಕು. ಪೂರ್ವಭಾವಿ ಪರೀಕ್ಷಾ ತರಬೇತಿ ಬೆಂಗಳೂರು, ಹುಬ್ಬಳ್ಳಿ, ಕಲಬುರಗಿ, ಮಂಗಳೂರು ಮತ್ತು ಮೈಸೂರಿನಲ್ಲಿ ನಡೆಯಲಿದೆ.

ತರಬೇತಿ ಸ್ಥಳದ ಖರ್ಚು ವೆಚ್ಚ ಹಾಗೂ ಪ್ರಯಾಣದ ಖರ್ಚು ವೆಚ್ಚವನ್ನು ಅಭ್ಯರ್ಥಿಗಳ ಭರಿಸಬೇಕಾಗುತ್ತದೆ.

ಕ್ರೆಡಿಟ್ ಇತಿಹಾಸ: (i) ಅರ್ಜಿ ಸಲ್ಲಿಸುವ ಅಭ್ಯರ್ಥಿಯು ಅವರು ಆರೋಗ್ಯಕರ ಕ್ರೆಡಿಟ್ ಇತಿಹಾಸ (Credit History) ಹೊಂದಿರಬೇಕು. ಬ್ಯಾಂಕ್‌ಗೆ ಸೇರುವ ಸಮಯದಲ್ಲಿ ಕನಿಷ್ಠ ಸಿಬಿಲ್(CIBIL)ಸ್ಕೋರ್ 650 ಅಥವಾ ಅದಕ್ಕಿಂತ ಹೆಚ್ಚಿರುವುದನ್ನು ಖಚಿತ ಪಡಿಸಿಕೊಳ್ಳಬೇಕು. ಕನಿಷ್ಠ ಕ್ರೆಡಿಟ್ ಸ್ಕೋರ್ ಭಾಗವಹಿಸುವ ಬ್ಯಾಂಕ್‌ಗಳ ನೀತಿಯ ಪ್ರಕಾರ ಇರುತ್ತದೆ. ಕಾಲಕಾಲಕ್ಕೆ ಅವುಗಳನ್ನ ತಿದ್ದುಪಡಿ ಮಾಡಲಾಗುತ್ತದೆ. (ii) ಹುದ್ದೆಗೆ ಸೇರ್ಪಡೆಗೊಳ್ಳುವ ದಿನಾಂಕದ ಮೊದಲು CIBIL ಸ್ಥಿತಿ ನವೀಕರಿಸಬೇಕು ಅಥವಾ CIBILನಲ್ಲಿ ಪ್ರತಿಕೂಲವಾಗಿ ಪ್ರತಿಬಿಂಬಿತವಾಗಿರುವ ಖಾತೆಗಳಿಗೆ ಸಂಬಂಧಿಸಿದಂತೆ ಯಾವುದೇ ಬಾಕಿ ಉಳಿದಿಲ್ಲ ಎಂದು ಸಾಲದಾತರಿಂದ ನಿರಾಪೇಕ್ಷಣಾ ಪತ್ರ(NOC)ಗಳನ್ನು ಪಡೆಯಬೇಕು. ವಿಫಲವಾದರೆ ಆಫರ್ ಪತ್ರವನ್ನು ಹಿಂಪಡೆಯಲಾಗುತ್ತದೆ / ರದ್ದುಗೊಳಿಸಲಾಗುತ್ತದೆ.

ಗಮನಿಸಿ: ಯಾವುದೇ ಬ್ಯಾಂಕ್ ಖಾತೆಯನ್ನು ಹೊಂದಿರದ ಅಭ್ಯರ್ಥಿಗಳು CIBIL ಸ್ಥಿತಿಯನ್ನು ಒದಗಿಸುವ ಅಗತ್ಯವಿಲ್ಲ.

(ಮುಂದಿನವಾರ: ಪರೀಕ್ಷೆಯಲ್ಲಿನ ಬದಲಾವಣೆ ಮತ್ತು ಪರೀಕ್ಷಾ ವಿಧಾನ ಕುರಿತ ಮಾಹಿತಿ)

(ಲೇಖಕರು: ಬ್ಯಾಂಕಿಂಗ್ ಮತ್ತು ವ್ಯಕ್ತಿತ್ವ ವಿಕಸನ ತರಬೇತುದಾರರು ಹಾಗೂ ವೃತ್ತಿ ಮಾರ್ಗದರ್ಶಕರು, ಮಡಿಕೇರಿ)

ಸ್ಟೆನೊಗ್ರಾಫರ್ ಹುದ್ದೆಗಳಿಗೆ ಅರ್ಜಿ ಆಹ್ವಾನ

ಕೇಂದ್ರ ಸರ್ಕಾರದ ಸಿಬ್ಬಂದಿ ನೇಮಕಾತಿ ಆಯೋಗವು (ಎಸ್‌ಎಸ್‌ಸಿ) ಸ್ಟೆನೊಗ್ರಾಫರ್ ಗ್ರೇಡ್ 'ಸಿ' ಮತ್ತು 'ಡಿ' ಹುದ್ದೆಗಳ ನೇಮಕಾತಿಗಾಗಿ ಅರ್ಜಿ ಆಹ್ವಾನಿಸಿದೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು. ಈಗಾಗಲೇ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಿದೆ. ಇದೇ ಆಗಸ್ಟ್ 23, ಅರ್ಜಿ ಸಲ್ಲಿಕೆಗೆ ಕೊನೆ ದಿನ. ಆನ್‌ಲೈನ್‌ನಲ್ಲಿ ಅರ್ಜಿಸಲ್ಲಿಸಲು ಲಿಂಕ್: https://ssc.nic.in

ವಿದ್ಯಾರ್ಹತೆ: 12ನೇ ತರಗತಿ ಅಥವಾ ತತ್ಸಮಾನ ಶಿಕ್ಷಣದಲ್ಲಿ ಉತ್ತೀರ್ಣರಾಗಿರಬೇಕು. ಶೀಘ್ರಲಿಪಿ ಮತ್ತು ಬೆರಳಚ್ಚು ಕೌಶಲ ಹೊಂದಿರಬೇಕು.

ವಯೋಮಿತಿ: i)ಸ್ಟೆನೊ ಗ್ರೇಡ್ 'ಸಿ' ಹುದ್ದೆಗೆ ಕನಿಷ್ಠ 18 ವರ್ಷಗಳು ಗರಿಷ್ಠ 30 ವರ್ಷಗಳು. ii) ಸ್ಟೆನೊ ಗ್ರೇಡ್ 'ಡಿ' ಹುದ್ದೆಗೆ ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ಕನಿಷ್ಠ 17 ವರ್ಷ, ಗರಿಷ್ಠ 27 ವರ್ಷಗಳು. ಎಸ್.ಸಿ/ಎಸ್.ಟಿ/ಒಬಿಸಿ/ಆರ್ಥಿಕ ದುರ್ಬಲ ವರ್ಗದ ಅಭ್ಯರ್ಥಿಗಳಿಗೆ ವಯೋಮಿತಿ ಸಡಿಲಿಕೆ ಇದೆ. ವಿವರಗಳಿಗೆ ಅಧಿಸೂಚನೆಯ ಪ್ಯಾರಾ 4.1 ನೋಡಿ.

ಅರ್ಜಿ ಶುಲ್ಕ : ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ₹100. ಮಹಿಳೆ/ ಎಸ್.ಸಿ/ಎಸ್.ಟಿ/ ಆರ್ಥಿಕ ದುರ್ಬಲ ವರ್ಗದ ಅಭ್ಯರ್ಥಿಗಳಿಗೆ ಯಾವುದೇ ಶುಲ್ಕವಿಲ್ಲ.

ನೇಮಕಾತಿ ವಿಧಾನ: ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಪರೀಕ್ಷೆಯ ನಿಖರ ದಿನಾಂಕವನ್ನು ನಂತರ ಎಸ್‌ಎಸ್‌ಸಿ ವೆಬ್‌ಸೈಟ್ ಮೂಲಕ ತಿಳಿಸಲಾಗುವುದು. ಈ ಪರೀಕ್ಷೆಯಲ್ಲಿ ಎರಡು ಪತ್ರಿಕೆಗಳಿರುತ್ತವೆ.

ಪೇಪರ್-I ಕಂಪ್ಯೂಟರ್ ಆಧಾರಿತ ಪರೀಕ್ಷೆ. (i) ಜನರಲ್ ಇಂಟೆಲಿಜೆನ್ಸ್ ಮತ್ತು ರೀಸನಿಂಗ್ (ii) ಸಾಮಾನ್ಯಅರಿವು (iii) ಇಂಗ್ಲಿಷ್ ಭಾಷೆ ಮತ್ತು ಗ್ರಹಿಕೆ

ಪೇಪರ್-II ಕೌಶಲ ಪರೀಕ್ಷೆ: ಸ್ಟೆನೊಗ್ರಫಿ/ಟೈಪಿಂಗ್ (ಕಂಪ್ಯೂಟರ್ ಆಧಾರಿತ ಪರೀಕ್ಷೆಯಲ್ಲಿ ಅರ್ಹತೆ ಪಡೆದವರಿಗೆ).

ಹೆಚ್ಚಿನ ಮಾಹಿತಿ ಮತ್ತು ಅಧಿಸೂಚನೆ ಮತ್ತಿತರ ವಿವರಗಳಿಗೆ www.ssckkr.kar.nic.in ಮತ್ತು https://ssc.nic.in ಜಾಲತಾಣಗಳನ್ನು ನೋಡಬಹುದು.

(ಪೂರಕ ಮಾಹಿತಿ : ಕೇಂದ್ರ ಸಿಬ್ಬಂದಿ ನೇಮಕಾತಿ ಆಯೋಗ, ಕರ್ನಾಟಕ–ಕೇರಳ ಪ್ರದೇಶ, ಬೆಂಗಳೂರು)

'ಸ್ಪರ್ಧಾವಾಣಿ'ಯ ಮತ್ತಷ್ಟು ಲೇಖನಗಳಿಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ಅಶೋಕ, ಹಿಂದುಳಿದ ವರ್ಗಗಳ ಕಲ್ಯಾಣ ಸಮಿತಿಗೆ ಪುಟ್ಟರಂಗಶೆಟ್ಟಿ ಅಧ್ಯಕ್ಷ

ವಿಧಾನಸಭೆ ಸ್ಥಾಯಿ ಸಮಿತಿಗಳಿಗೆ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2023–24ನೇ ಸಾಲಿನ ವಿಧಾನ ಮಂಡಲದ ವಿಧಾನಸಭೆಯ ವಿವಿಧ ಸ್ಥಾಯಿ ಸಮಿತಿಗಳಿಗೆ ಸದಸ್ಯರನ್ನು ನಾಮನಿರ್ದೇಶನ ಮಾಡಲಾಗಿದೆ.

ಸಾರ್ವಜನಿಕ ಲೆಕ್ಕಪತ್ರ ಸಮಿತಿ: ವಿಧಾನಸಭೆ ಸದಸ್ಯರು– ಆರ್. ಅಶೋಕ (ಅಧ್ಯಕ್ಷ), ಆರ್.ವಿ. ದೇಶಪಾಂಡೆ, ಎನ್.ವೈ. ಗೋಪಾಲಕೃಷ್ಣ, ಬಸವರಾಜ ರಾಯರಡ್ಡಿ, ಎಚ್.ವೈ. ಮೇಟಿ, ಎಚ್.ಸಿ. ಬಾಲಕೃಷ್ಣ, ಎಸ್. ಆರ್. ಶ್ರೀನಿವಾಸ (ವಾಸು), ಲಕ್ಷ್ಮಣ ಸವದಿ, ಜಿ.ಟಿ. ದೇವೇಗೌಡ, ಎನ್.ಎ. ಹ್ಯಾರಿಸ್, ಸಿ.ಸಿ. ಪಾಟೀಲ, ಎಸ್.ಆರ್. ವಿಶ್ವನಾಥ, ವಿ. ಸುನೀಲ್‌ಕುಮಾರ, ರಿಜ್ವಾನ್ ಅರ್ಷದ್, ರಾಘವೇಂದ್ರ ಹಿಟ್ನಾಳ. ವಿಧಾನ ಪರಿಷತ್ ಸದಸ್ಯರು– ಜಗದೀಶ ಶೆಟ್ಟರ್, ಬಿ.ಕೆ. ಹರಿಪ್ರಸಾದ್, ಶಶೀಲ್ ನಮೋಶಿ, ಶರವಣ, ಪ್ರತಾಪಸಿಂಹ ನಾಯಕ.

ಸಾರ್ವಜನಿಕ ಉದ್ದಿಮೆಗಳ ಸಮಿತಿ: ವಿಧಾನಸಭೆ ಸದಸ್ಯರು– ತನ್ವೀರ್ ಸೇಠ್ (ಅಧ್ಯಕ್ಷ), ಬಸನಗೌಡ ಪಾಟೀಲ ಯತ್ನಾಳ, ಜಿ.ಕೆ. ವೆಂಕಟಶಿವಾರೆಡ್ಡಿ, ಸಿ.ಎನ್. ಅಶ್ವತ್ಥನಾರಾಯಣ, ಎಂ. ಸತೀಶ್ ರೆಡ್ಡಿ, ಯು.ಬಿ. ಬಣಕಾರ್, ಡಾ. ಅಜಯ್ ಸಿಂಗ್, ಡಿ.ಜಿ. ಶಾಂತನಗೌಡ, ಎ.ಆರ್. ಕೃಷ್ಣಮೂರ್ತಿ, ಎ.ಬಿ. ರಮೇಶ ಬಂಡಿಸಿದ್ದೇಗೌಡ, ವಿನಯ್ ಕುಲಕರ್ಣಿ, ಬಿ.ಎ. ಬಸವರಾಜ, ವಿಜಯಾನಂದ ಕಾಶಪ್ಪನವರ್, ಟಿ.ಡಿ. ರಾಜೇಗೌಡ, ಜಿ. ಜನಾರ್ದನ ರೆಡ್ಡಿ. ವಿಧಾನ ಪರಿಷತ್ ಸದಸ್ಯರು– ಪ್ರಕಾಶ್ ಹುಕ್ಕೇರಿ, ಎಸ್. ರವಿ, ಹನುಮಂತ ನಿರಾಣಿ, ಸಿ.ಎನ್. ಮಂಜೇಗೌಡ, ಛಲವಾದಿ ನಾರಾಯಣಸ್ವಾಮಿ

ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ: ವಿಧಾನಸಭೆ ಸದಸ್ಯರು– ಪಿ.ಎಂ. ನರೇಂದ್ರಸ್ವಾಮಿ (ಅಧ್ಯಕ್ಷ), ಬಿ.ಜಿ. ಗೋವಿಂದಪ್ಪ, ಐಹೊಳೆ ದುರ್ಯೋಧನ ಮಹಾಲಿಂಗಪ್ಪ, ಅಬ್ಬಯ್ಯ ಪ್ರಸಾದ, ಎಸ್.ಎನ್. ನಾರಾಯಣಸ್ವಾಮಿ, ಮಾನಪ್ಪ ಡಿ. ವಜ್ಜಲ, ಬಸನಗೌಡ ದದ್ದಲ, ಅನಿಲ್ ಚಿಕ್ಕಮಾದು, ಬಸವರಾಜ್ ಮತ್ತಿಮೂಡ್, ಎನ್. ಶ್ರೀನಿವಾಸಯ್ಯ, ಕೆ.ಸಿ. ವೀರೇಂದ್ರ ಪಪ್ಪಿ, ಪ್ರಕಾಶ ಕೋಳಿವಾಡ, ಕೃಷ್ಣ ನಾಯಕ, ಸಿಮೆಂಟ್ ಮಂಜು, ಕರೆಮ್ಮ, ವಿಧಾನ ಪರಿಷತ್– ಕೋಟ ಶ್ರೀನಿವಾಸ ಪೂಜಾರಿ, ಅರವಿಂದ್ ಕುಮಾರ್ ಅರಳಿ, ಶಾಂತಾರಾಮ್ ಬುಡ್ನ ಸಿದ್ದಿ, ರಾಜೇಂದ್ರ ರಾಜಣ್ಣ, ವೈ.ಎಂ. ಸತೀಶ್.

ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ: ವಿಧಾನಸಭೆ ಸದಸ್ಯರು– ಸಿ. ಪುಟ್ಟರಂಗಶೆಟ್ಟಿ (ಅಧ್ಯಕ್ಷ), ರಮೇಶ ಜಾರಕಿಹೊಳಿ, ಎಚ್.ಆರ್. ಗವಿಯಪ್ಪ, ಹರೀಶ್ ಪೂಂಜಾ, ಎಚ್.ಎ. ಇಕ್ಬಾಲ್ ಹುಸೇನ್, ಭೀಮಣ್ಣ ಟಿ. ನಾಯಕ, ಬಸವರಾಜು ಶಿವಗಂಗಾ, ಕೆ. ಹರೀಶ್ ಗೌಡ, ರವಿಶಂಕರ್ ಡಿ., ಆಸೀಫ್ (ರಾಜು) ಸೇಠ್, ಬಿ.ಬಿ. ಚಿಮ್ಮನಕಟ್ಟಿ, ಚನ್ನಬಸಪ್ಪ (ಚೆನ್ನಿ), ಎಚ್.ಕೆ. ಸುರೇಶ್ (ಹಲ್ಲಳ್ಳಿ ಸುರೇಶ್), ಧೀರಜ್ ಮುನಿರಾಜು, ಶರಣಗೌಡ ಕಂದಕೂರ, ವಿಧಾನ ಪರಿಷತ್ತಿನ ಸದಸ್ಯರು– ವೈ.ಎ. ನಾರಾಯಣಸ್ವಾಮಿ, ಕೆ. ಅಬ್ದುಲ್ ಜಬ್ಬಾರ್, ಗಣಪತಿ ದುಮ್ಮಾ ಉಳ್ವೇಕರ್, ಎಸ್.ಎಸ್. ಗೋಪಿನಾಥ್, ಕೇಶವ ಪ್ರಸಾದ್ ಎಸ್.

ಹಕ್ಕು ಬಾಧ್ಯತೆಗಳ ಸಮಿತಿ: ವಿಧಾನಸಭೆಯ ಸದಸ್ಯರು– ಬಿ.ಆರ್. ಪಾಟೀಲ (ಅಧ್ಯಕ್ಷ), ತನ್ವೀರ್ ಸೇಠ್, ಎನ್.ಎ. ಹ್ಯಾರಿಸ್, ಅಜಯ್ ಧರ್ಮಸಿಂಗ್, ಎ.ಆರ್.ಕೃಷ್ಣಮೂರ್ತಿ, ಅರವಿಂದ ಬೆಲ್ಲದ, ಕೆ.ಗೋಪಾಲಯ್ಯ, ಕೆ.ವೈ. ನಂಜೇಗೌಡ, ಭರತ್ ಶೆಟ್ಟಿ ವೈ., ಡಿ.ವೇದವ್ಯಾಸ ಕಾಮತ್, ಎಚ್.ಡಿ ಮಂಜು.

ಖಾಸಗಿ ಸದಸ್ಯರ ಮಸೂದೆ ಮತ್ತು ನಿರ್ಣಯಗಳ ಸಮಿತಿ: ವಿಧಾನಸಭೆಯ ಸದಸ್ಯರು– ರುದ್ರಪ್ಪ ಮಾನಪ್ಪ ಲಮಾಣಿ(ಅಧ್ಯಕ್ಷ), ಅಪ್ಪಾಜಿ ನಾಡಗೌಡ, ಶಿವಾನಂದ ಕೌಜಲಗಿ, ಎಲ್.ಎ.ರವಿಸುಬ್ರಹ್ಮಣ್ಯ, ಎಂ.ಟಿ.ಕೃಷ್ಣಪ್ಪ, ರಿಜ್ವಾನ್ ಅರ್ಷದ್, ಶಶಿಕಲಾ ಜೊಲ್ಲೆ, ಶರತ್ ಬಚ್ಚೇಗೌಡ, ಎಂ.ರೂಪಕಲಾ, ಉದಯ ಗರುಡಾಚಾರ್, ಎ.ಸಿ.ಶ್ರೀನಿವಾಸ.

ಅರ್ಜಿಗಳ ಸಮಿತಿ: ವಿಧಾನಸಭೆಯ ಸದಸ್ಯರು– ರುದ್ರಪ್ಪ ಮಾನಪ್ಪ ಲಮಾಣಿ (ಅಧ್ಯಕ್ಷ), ಎಸ್. ಸುರೇಶ್ ಕುಮಾರ್, ಈ.ತುಕಾರಾಮ್, ಎ.ಮಂಜು, ಸಿ.ಬಿ.ಸುರೇಶ್ ಬಾಬು, ಬಿ.ಶಿವಣ್ಣ, ಎಸ್.ಟಿ.ಸೋಮಶೇಖರ್, ಅರಬೈಲ್ ಶಿವರಾಂ ಹೆಬ್ಬಾರ್, ಎಚ್.ಡಿ.ರಂಗನಾಥ್, ಉಮಾನಾಥ್ ಕೋಟ್ಯಾನ್, ಮಂತರ್‌ಗೌಡ, ಎಚ್.ಡಿ.ತಮ್ಮಯ್ಯ, ಪ್ರದೀಶ್ ಈಶ್ವರ್, ಎ.ಸಿ.ಶ್ರೀನಿವಾಸ್, ಆನಂದ್ ಕೆ.ಎಸ್, ಮಹೇಂದ್ರ ಕಲ್ಲಪ್ಪ ತಮ್ಮಣ್ಣನವರ.

ವಸತಿ ಸೌಕರ್ಯ ಸಮಿತಿ: ವಿಧಾನಸಭೆಯ ಸದಸ್ಯರು– ರುದ್ರಪ್ಪ ಮಾನಪ್ಪ ಲಮಾಣಿ (ಅಧ್ಯಕ್ಷ), ಶಿವರಾಜ್ ಪಾಟೀಲ, ಸತೀಶ್ ಕೃಷ್ಣ ಸೈಲ್, ಶರಣು ಸಲಗರ, ರವಿಶಂಕರ್ ಡಿ, ವೆಂಕಟೇಶ ಎಚ್.ವಿ, ವಿಶ್ವಾಸ್ ವಸಂತ್ ವೈದ್ಯ, ಜಗದೀಶ ಶಿವಯ್ಯ ಗುಡಗುಂಟಿ, ಸಿದ್ದುಪಾಟೀಲ, ಯಶಪಾಲ್ ಸುವರ್ಣ, ಮಹೇಶ್ ಟೆಂಗಿನಕಾಯಿ, ಸ್ವರೂಪ್ ಪ್ರಕಾಶ್, ಬಿ.ಎನ್.ರವಿಕುಮಾರ್

ಸುದ್ದಿ 2 ನಿಮಿಷ

'ಇ-ಸ್ವತ್ತು' ಜನಸ್ನೇಹಿಗೊಳಿಸಿ

ಬೆಂಗಳೂರು: 'ಇ-ಸ್ವತ್ತು ಯೋಜನೆಯನ್ನು ಜನಸ್ನೇಹಿಗೊಳಿಸಲು ಅಗತ್ಯವಾದ ಸುಧಾರಣಾ ಕ್ರಮಗಳನ್ನು ತೆಗೆದುಕೊಳ್ಳಬೇಕು' ಎಂದು ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿಗಳಿಗೆ ಸಚಿವ ಪ್ರಿಯಾಂಕ್ ಖರ್ಗೆ ಸೂಚಿಸಿದರು.

ಇಲಾಖೆಯ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ ವೇಳೆ ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡಿದ ಸಚಿವರು, 'ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಇ-ಸ್ವತ್ತು ಸೌಲಭ್ಯವನ್ನು 2013 ರಿಂದ ಜಾರಿಗೆ ತರಲಾಗಿದೆ. ಆದರೂ ದಾಖಲೆಗಳನ್ನು ಪಡೆದುಕೊಳ್ಳಲು ಗ್ರಾಮೀಣ ಜನರಿಗೆ ಆಗುತ್ತಿರುವ ತೊಡಕುಗಳ ನಿವಾರಣೆ ಆಗಿಲ್ಲ' ಎಂದರು.

'ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕಂದಾಯೇತರ ಭೂಮಿಗೆ ಸಂಬಂಧಿಸಿದಂತೆ ವಸತಿ ಹಾಗೂ ವಾಣಿಜ್ಯ ಉದ್ದೇಶಗಳಿಗೆ ನೀಡುವ ದಾಖಲೆಗಳನ್ನು ಪಡೆದುಕೊಳ್ಳುವ ಪ್ರಕ್ರಿಯೆಯಲ್ಲಿ ಆಗುತ್ತಿರುವ ಸಮಸ್ಯೆಗಳನ್ನು ಪರಿಹರಿಸಬೇಕು' ಎಂದು ಅಧಿಕಾರಿಗಳಿಗೆ ಅವರು ಸೂಚಿಸಿದರು.

'ರಾಜ್ಯದಲ್ಲಿರುವ ಒಟ್ಟು 5,819 ಗ್ರಾಮ ಪಂಚಾಯತಿ ಗ್ರಂಥಾಲಯಗಳ ಪೈಕಿ, 5,043 ಗ್ರಂಥಾಲಯಗಳನ್ನು ಈಗಾಗಲೇ ಡಿಜಿಟಲೀಕರಣಗೊಳಿಸಲಾಗಿದೆ. ಉಳಿದವುಗಳನ್ನು ಡಿಜಿಟಲ್ ಗ್ರಂಥಾ ಲಯಗಳಾಗಿ ಮಾರ್ಪಡಿಸುವ ಕೆಲಸ ಭರದಿಂದ ಸಾಗಿದೆ' ಎಂದರು.

'ರಾಜ್ಯದ ಗ್ರಾಮೀಣ ಶಾಲೆಗಳಲ್ಲಿ 6.08 ಲಕ್ಷ ವಿದ್ಯಾರ್ಥಿ ಗಳಿದ್ದು, ಅವರಲ್ಲಿ 4.02 ಲಕ್ಷ ವಿದ್ಯಾರ್ಥಿಗಳು ಗ್ರಾಮ ಪಂಚಾಯತಿ ಗ್ರಂಥಾಲಯಗಳಲ್ಲಿ ಹೆಸರು ನೋಂದಾಯಿಸಿಕೊಂಡಿದ್ದಾರೆ. ಅಂಗವಿಕಲರಿಗಾಗಿ 735 ಬೀಕನ್ ಗ್ರಂಥಾಲಯಗಳನ್ನು ಸ್ಥಾಪಿಸುವ ಗುರಿ ಹೊಂದಲಾಗಿದೆ. ಈಗಾಗಲೇ 505 ಬೀಕನ್ ಗ್ರಂಥಾಲಯಗಳು ಪೂರ್ಣಗೊಂಡಿವೆ' ಎಂದು ಸಚಿವರು ತಿಳಿಸಿದರು.

ಗ್ರಾಮಗಳಿಗೆ ಸ್ಮಶಾನ ಜಮೀನು ವಿವರಣೆ ಸಲ್ಲಿಕೆಗೆ ನಿರ್ದೇಶನ

ಬೆಂಗಳೂರು: 'ರಾಜ್ಯದಲ್ಲಿನ ಎಲ್ಲಾ ಗ್ರಾಮಗಳಿಗೆ ಸ್ಮಶಾನಕ್ಕಾಗಿ ಜಮೀನು ಒದಗಿಸಲು ಹಾಗೂ ಒತ್ತುವರಿಯಾದ ಸರ್ಕಾರಿ ಜಮೀನನ್ನು ತೆರವುಗೊಳಿಸಲು ಕೈಗೊಂಡಿರುವ ಕ್ರಮಗಳ ಕುರಿತಂತೆ ಎರಡು ವಾರಗಳಲ್ಲಿ ವಿವರಣೆ ನೀಡಿ' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

'ರಾಜ್ಯದಲ್ಲಿ ಸ್ಮಶಾನವಿಲ್ಲದ ಗ್ರಾಮ, ಪಟ್ಟಣಗಳಿಗೆ ಜಮೀನು ಒದಗಿಸಲು ಹೈಕೋರ್ಟ್ ಹೊರಡಿಸಿರುವ ಆದೇಶ ವನ್ನು ಸರ್ಕಾರ ಪಾಲಿಸಿಲ್ಲ' ಎಂದು ಆಕ್ಷೇಪಿಸಿ ಮೊಹಮ್ಮದ್ ಇಕ್ಬಾಲ್ ಸಲ್ಲಿಸಿರುವ ಸಿವಿಲ್ ನ್ಯಾಯಾಂಗ ನಿಂದನೆ ಅರ್ಜಿಯನ್ನು ನ್ಯಾಯಮೂರ್ತಿ ಪಿ.ಎಸ್. ದಿನೇಶ್ ಕುಮಾರ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

'ಅನುಪಾಲನಾ ವರದಿ ಬಗ್ಗೆ ಅರ್ಜಿದಾರರು ಎತ್ತಿರುವ ಆಕ್ಷೇಪಣೆ ಗಳಿಗೆ ಎರಡು ವಾರಗಳಲ್ಲಿ ವಿವರಣೆ ನೀಡಿ' ಎಂದು ಸರ್ಕಾರದ ಪರ ವಕೀಲರಿಗೆ ನಿರ್ದೇಶಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿತು.

'ರಾಜ್ಯದಲ್ಲಿರುವ ಜನವಸತಿ ಗ್ರಾಮಗಳಿಗೆ ಶವ ಸಂಸ್ಕಾರಕ್ಕಾಗಿ ಸ್ಮಶಾನದ ಜಾಗ ಮಂಜೂರು ಮಾಡಬೇಕು. ಒತ್ತುವರಿಯಾದ ಜಮೀನನ್ನು ತೆರವುಗೊಳಿಸಬೇಕು' ಎಂದು ಹೈಕೋರ್ಟ್ 2019ರ ಆಗಸ್ಟ್ 20ರಂದು ಆದೇಶಿಸಿತ್ತು.

'ಕಾಶಿ ದರ್ಶನ' 9 ದಿನಕ್ಕೆ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪುಣ್ಯ ಕ್ಷೇತ್ರಗಳಾದ ವಾರಣಾಸಿ, ಅಯೋಧ್ಯೆ ಮತ್ತು ಪ್ರಯಾಗ್-ರಾಜ್ ಕ್ಷೇತ್ರಗಳ ಪ್ಯಾಕೇಜ್ ಯಾತ್ರೆಯಲ್ಲಿ ಈ ಬಾರಿ ಬಿಹಾರದ ಗಯಾ ಕ್ಷೇತ್ರದ ದರ್ಶನ ಸೇರ್ಪಡೆಗೊಳಿಸಿ, 8 ದಿನದ ಪ್ರವಾಸವನ್ನು 9 ದಿನಕ್ಕೆ ಹೆಚ್ಚಿಸಲಾಗಿದೆ.

ಈ ಯೋಜನೆಯಡಿ ಪ್ಯಾಕೇಜ್‌ಗೆ ಸರ್ಕಾರದಿಂದ ನೀಡಲಾಗುವ ಸಹಾಯ ಧನವನ್ನು ₹5,000 ಬದಲು ₹7,500ಕ್ಕೆ ಹೆಚ್ಚಿಸಲು ನಿರ್ಧರಿಸಲಾಗಿದೆ.

ಕರ್ನಾಟಕ ಭಾರತ ಗೌರವ ಕಾಶಿ ದರ್ಶನ ರೈಲಿಗೆ ಹೊಸದಾಗಿ ಎಲ್‌ಎಚ್‌ಬಿ ಕೋಚ್‌ಗಳನ್ನು ಅಳವಡಿಸಲಾಗಿದೆ. ಸುಸಜ್ಜಿತವಾದ ಅಡುಗೆ ಮನೆ ಹಾಗೂ ಇಬ್ಬರು ವೈದ್ಯರು ಯಾತ್ರಾರ್ಥಿಗಳ ಜೊತೆಯಲ್ಲಿ ಇರಲಿದ್ದಾರೆ.

ಕೃಷಿ ಸಚಿವ ಚಲುವರಾಯಸ್ವಾಮಿ ನೇತೃತ್ವದ ನಿಯೋಗದಿಂದ ರಾಜ್ಯಪಾಲರ ಭೇಟಿ

ಜೆಡಿಎಸ್‌ನಿಂದಲೇ ನಕಲಿ ಪತ್ರ: ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಅವರು ಲಂಚ ನೀಡುವಂತೆ ತಮ್ಮನ್ನು ಒತ್ತಾಯಿಸಿದರು' ಎಂದು ಆರೋಪಿಸಿ ಕೃಷಿ ಇಲಾಖೆ ಅಧಿಕಾರಿಗಳು ರಾಜ್ಯಪಾಲರಿಗೆ ಬರೆದಿದ್ದಾರೆ ಎನ್ನಲಾದ ಪತ್ರದ ಕುರಿತಂತೆ ಚಲುವರಾಯಸ್ವಾಮಿ ನೇತೃತ್ವದಲ್ಲಿ ಮಂಡ್ಯ ಶಾಸಕರ ನಿಯೋಗ ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಅವರನ್ನು ಬುಧವಾರ ಭೇಟಿ ಮಾಡಿ ಚರ್ಚೆ ನಡೆಸಿದೆ.

ಪತ್ರಕ್ಕೆ ಸಂಬಂಧಿಸಿದಂತೆ ಕೆಲವು ಮಾಹಿತಿಯನ್ನು ರಾಜ್ಯಪಾಲರ ಜೊತೆ ಚರ್ಚಿಸಿದ ನಿಯೋಗ, 'ಇದು ನಕಲಿ ಪತ್ರವಾಗಿದ್ದು, ರಾಜಕೀಯಪ್ರೇರಿತ' ಎಂದಿದೆ.

ಮಂಡ್ಯ ಜಿಲ್ಲೆಯ ಶಾಸಕರಾದ ಪಿ.ಎಂ. ನರೇಂದ್ರಸ್ವಾಮಿ, ರಮೇಶ್ ಬಾಬು ಬಂಡಿಸಿದ್ದೇಗೌಡ, ರವಿ ಗಣಿಗ, ಕೆ.ಎಂ. ಉದಯ್ ಗೌಡ, ವಿಧಾನ ಪರಿಷತ್ ಸದಸ್ಯರಾದ ದಿನೇಶ್ ಗೂಳಿಗೌಡ, ಮಧು ಮಾದೇಗೌಡ, ಮಾಜಿ ಶಾಸಕರಾದ ಹೊನ್ನಲಗೆರೆ ಶ್ರೀರಾಮಕೃಷ್ಣ, ಕೆ.ಬಿ. ಚಂದ್ರಶೇಖರ್ ನಿಯೋಗದಲ್ಲಿದ್ದರು.

ರಾಜ್ಯಪಾಲರಿಗೆ ಪತ್ರ ನೀಡಿರುವ ಚಲುವರಾಯಸ್ವಾಮಿ, 'ಪ್ರಾಥಮಿಕ ವಿಚಾರಣೆ ವೇಳೆ, ಇಲಾಖೆಯ ಸಹಾಯಕ ನಿರ್ದೇಶಕರು ಇಂಥದ್ದೊಂದು ಪತ್ರ ಬರೆದಿಲ್ಲವೆಂದು ದೃಢಪಟ್ಟಿದೆ. ನನ್ನ ವಿರುದ್ಧ ಪಟ್ಟಭದ್ರ ಹಿತಾಸಕ್ತಿಗಳ ಷಡ್ಯಂತ್ರವಿದು. ಈ ನಕಲಿ ಪತ್ರದ ಮೇಲೆ ವಿಚಾರಣೆ ನಡೆಸುವಂತೆ ತಮ್ಮ ಕಚೇರಿಯಿಂದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿರುವುದು ದುರದೃಷ್ಟಕರ. ಈ ಪತ್ರ ಬಳಿಕ ಇಡೀ ಪ್ರಕರಣ ಭಿನ್ನ ಆಯಾಮಗಳನ್ನು ಪಡೆದು, ನನ್ನ ಮತ್ತು ಸರ್ಕಾರದ ವರ್ಚಸ್ಸಿಗೆ ಧಕ್ಕೆ ಉಂಟಾಗಿದೆ. ಈ ನಕಲಿ ಪತ್ರದ ಬಗ್ಗೆ ತನಿಖೆ ನಡೆಸುವಂತೆ ಮುಖ್ಯಮಂತ್ರಿಗೆ ನಾನು ಪತ್ರ ಬರೆದಿದ್ದೇನೆ. ಇಂಥ ನಕಲಿ ಪತ್ರ ಮತ್ತು ಆರೋಪಗಳನ್ನು ಪರಿಗಣಿಸಬಾರದು' ಎಂದು ಮನವಿ ಮಾಡಿದ್ದಾರೆ.

ಸುದ್ದಿಗಾರರ ಜೊತೆ ಮಾತನಾಡಿದ ಚಲುವರಾಯಸ್ವಾಮಿ, 'ಬಹುಶಃ ಅವರು (ಕುಮಾರಸ್ವಾಮಿ) ಮೈತ್ರಿ ಸರ್ಕಾರ ಬರುತ್ತದೆ ಅಂದುಕೊಂಡಿದ್ದರು. ಆದರೆ, ಮಂಡ್ಯದಲ್ಲಿ ಆರು ಸ್ಥಾನಗಳನ್ನು ಕಾಂಗ್ರೆಸ್ ಗೆದ್ದಿರುವುದನ್ನು ಸಹಿಸಿಕೊಳ್ಳಲು ಅವರಿಗೆ ಆಗುತ್ತಿಲ್ಲ. ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರನ್ನು ನಡುಗಿಸಲು ಅವರಿಂದ ಆಗುತ್ತಿಲ್ಲ. ನಕಲಿ ಪತ್ರ ಬರೆದವನು ಯಾರೆಂದು ಗೊತ್ತಾಗುತ್ತಿಲ್ಲ. ಪತ್ರದಲ್ಲಿ ಎಚ್.ಡಿ. ಕುಮಾರಸ್ವಾಮಿ ನಮ್ಮ ನಾಯಕರು ಎಂದು ಉಲ್ಲೇಖಿಸಿದ್ದಾರೆ. ಜನತಾ ದಳದವರೇ ಇದನ್ನು ಸೃಷ್ಟಿ ಮಾಡಿದ್ದಾರೆ' ಎಂದು ಆರೋಪಿಸಿದರು.

'ಎರಡು ಬಾರಿ ಮುಖ್ಯಮಂತ್ರಿ ಆದವರು ಇಂತಹ ಕೀಳುಮಟ್ಟಕ್ಕೆ ಇಳಿಯುವುದು ಸಂಸ್ಕಾರ ಅಲ್ಲ. ಅವರ ನಡವಳಿಕೆ ಬದಲಾವಣೆ ಮಾಡಿಕೊಳ್ಳಬೇಕು. ಇದೆಲ್ಲ ಹೆಚ್ಚು ದಿನ ನಡೆಯುವುದಿಲ್ಲ. ಇದನ್ನೇ ಮುಂದುವರೆಸಿದರೆ ನಮ್ಮ ಕೆಲಸ ನಾವು ಮಾಡಬೇಕಾಗುತ್ತದೆ' ಎಂದರು.

ಪಿ.ಎಂ. ನರೇಂದ್ರಸ್ವಾಮಿ ಮಾತನಾಡಿ, 'ಪಕ್ಷದ ಘನತೆ, ಗೌರವ ಹಾಳು ಮಾಡುವ ಉದ್ದೇಶದಿಂದ ಈ ರೀತಿ ಮಾಡಿದ್ದಾರೆ. ಯಾವುದೇ ಪತ್ರದ ಬಗ್ಗೆ ತಮ್ಮ ಸಿಬ್ಬಂದಿ ಪರಿಶೀಲಿಸಿದ ಬಳಿಕ ಕ್ರಮ ತೆಗೆದುಕೊಳ್ಳಲು ರಾಜ್ಯ ಸರ್ಕಾರಕ್ಕೆ ಕಳುಹಿಸುವಂತೆ ರಾಜ್ಯಪಾಲರಲ್ಲಿ ನಿವೇದನೆ ಮಾಡಿಕೊಂಡಿದ್ದೇವೆ. ಇದು ನಕಲಿ ಪತ್ರ ಎನ್ನುವುದನ್ನು ರಾಜ್ಯಪಾಲರೂ ಹೇಳಿದ್ದಾರೆ' ಎಂದರು.

ಸುಲಿಗೆ ಮನಃಸ್ಥಿತಿಗೆ ಚಿಕಿತ್ಸೆ ಬೇಡವೆ: ಎಚ್‌ಡಿಕೆ ಪ್ರಶ್ನೆ

ಬೆಂಗಳೂರು: 'ಮಾನಸಿಕ ಸ್ಥಿಮಿತತೆ ಎಂದರೆ ಹಣಕ್ಕಾಗಿ ಸರ್ಕಾರಿ ನೌಕರರನ್ನು ಎಡೆಬಿಡದೆ ಕಾಡುವುದಾ? ಇದೇ ಸಾಮಾಜಿಕ ನ್ಯಾಯವಾ? ಸುಲಿಗೆ ಮನಸ್ಥಿತಿಗೆ ಚಿಕಿತ್ಸೆ ಬೇಡವೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಪ್ರಶ್ನಿಸಿದ್ದಾರೆ.

'ಕುಮಾರಸ್ವಾಮಿ ಮಾನಸಿಕ ಸ್ಥಿಮಿತ ಕಳೆದುಕೊಂಡಿದ್ದಾರೆ' ಎಂಬ ಸಿದ್ದರಾಮಯ್ಯ ಅವರ ಟ್ವೀಟ್‌ಗೆ ಟ್ವಿಟರ್‌ನಲ್ಲಿ ಬುಧವಾರ ಪ್ರತಿಕ್ರಿಯಿಸಿರುವ ಅವರು, 'ಒಂದೇ ಹುದ್ದೆಗೆ ಮುಖ್ಯಮಂತ್ರಿ ಕಚೇರಿಯ ಐದಾರು ಟಿಪ್ಪಣಿಗಳು ಹೊರಡುತ್ತಿವೆ. 'ನಡೆದಂತೆ ಎಲ್ಲವನ್ನೂ ನುಡಿಯುತ್ತಿವೆ'. ನುಡಿದಂತೆ ನಡೆಯುವುದೆಂದರೆ ಇದೇನಾ' ಎಂದು ಕೇಳಿದ್ದಾರೆ.

'ವಿಷಯಾಂತರ ಮಾಡಿ ನನ್ನ ಟೀಕೆ, ಭಾಷೆ, ಅರೋಪ ಇಟ್ಟುಕೊಂಡು ಅನುಕಂಪ ಗಿಟ್ಟಿಸಲು ಹೊರಟಿದ್ದೀರಿ. ಪ್ರತಿದಿನವೂ ವರ್ಗಾವಣೆ, ಕಮಿಷನ್ ದಂಧೆಯಲ್ಲಿ ಬೇಯುತ್ತಿರುವವರ ಕರುಣಾಜನಕ ಕಥೆಗಳಿಗೆ ಕೊನೆ ಎಂದು? ಭ್ರಷ್ಟಾಚಾರದ ಆರೋಪವನ್ನೇ ಅನುಕಂಪವನ್ನಾಗಿ ಪರಿವರ್ತಿಸಿಕೊಳ್ಳುವ ಕಲೆ ನನಗೆ ಗೊತ್ತಿಲ್ಲ' ಎಂದಿದ್ದಾರೆ.

ವಂಚನೆ: ಇಬ್ಬರ ಬಂಧನ

ಒಂದನೇ ಪುಟದಿಂದ...

ಸಂಸ್ಥೆಯ ವೆಬ್‌ಸೈಟ್, ದಾಖಲೆಪತ್ರಗಳ ನೆರವಿನಿಂದ ಯುವಜನರನ್ನು ಸಂಪರ್ಕಿಸಿ, ಕೆಲಸ ಕೊಡಿಸುವುದಾಗಿ ನಂಬಿಸಿದ್ದಾರೆ. ಆನ್‌ಲೈನ್‌ನಲ್ಲಿ ₹ 95 ಲಕ್ಷಕ್ಕೂ ಹೆಚ್ಚು ಹಣವನ್ನು ವಸೂಲಿ ಮಾಡಿ, ತಮ್ಮ ಖಾತೆಗೆ ವರ್ಗಾಯಿಸಿಕೊಂಡಿದ್ದಾರೆ. ನಂತರ ಸಂಸ್ಥೆಯ ಜೊತೆ ಸಂಪರ್ಕ ಕಡಿದುಕೊಂಡಿದ್ದಾರೆ. ಉದ್ಯೋಗಪತ್ರ ಸಿಕ್ಕರೂ ಮತ್ತು ಹಣ ನೀಡಿದರೂ ಕೆಲಸ ಸಿಕ್ಕಿಲ್ಲ ಎಂದು ಯುವಜನರು ದೂರಿದಾಗ ಶಶಿಕಲಾ ಅವರಿಗೆ ಅನುಮಾನ ಬಂದಿದೆ. ಅವರು ದೂರು ನೀಡಿದ ಬಳಿಕ, ನಾವು ಕ್ರಮ ಕೈಗೊಂಡೆವು' ಎಂದರು.

'ಯೋಜನೆ ಅನುಷ್ಠಾನಕ್ಕೆ ಪ್ರತಿ ತಾಲ್ಲೂಕಿಗೆ ಸಂಯೋಜಕ ಬೇಕು. ಭದ್ರತಾ ಠೇವಣಿ ಎಂದು ಹೇಳಿ ₹ 10 ಸಾವಿರ ವಸೂಲಿ ಮಾಡಿದ್ದರು. ಕಾರ್ಡ್ ನೋಂದಣಿಗೆ 25 ಮತ್ತು ಮುದ್ರಣಕ್ಕೆ 7 ಮಂದಿ ಸೇರಿ ಒಟ್ಟು 32 ಜನಬೇಕೆಂದು ಹೇಳಿ ಒಬ್ಬೊಬ್ಬರಿಂದ ತಲಾ ₹ 1,299 ವಸೂಲಿ ಮಾಡಿದ್ದರು' ಎಂದರು.

'ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳ ವಿವಿಧ ಬ್ಯಾಂಕುಗಳ ಖಾತೆಗಳನ್ನು ಮುಟ್ಟುಗೋಲು ಹಾಕಿಕೊಂಡು, ಒಟ್ಟು ₹10 ಲಕ್ಷ ವಶಪಡಿಸಿಕೊಳ್ಳಲಾಗಿದೆ. ಆರೋಪಿಗಳು ರಾಜ್ಯದ ಬೇರೆ ಜಿಲ್ಲೆಗಳಲ್ಲೂ ಸಾಕಷ್ಟು ಜನರಿಗೆ ವಂಚಿಸಿರುವ ಸಾಧ್ಯತೆಯಿದ್ದು, ಸರ್ಕಾರದ ಗಮನಕ್ಕೆ ತಂದು ತನಿಖಾ ಸಂಸ್ಥೆಗೆ ಪ್ರಕರಣ ವಹಿಸಲು ಶಿಫಾರಸು ಮಾಡಲಾಗುವುದು' ಎಂದರು.

'ನಮ್ಮ ಕ್ಲಿನಿಕ್'ಗಳಲ್ಲಿ ರಾತ್ರಿ 8ರವರೆಗೆ ಸೇವೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ಇಲಾಖೆಯು ಪ್ರಾಯೋಗಿಕವಾಗಿ ಶೇಕಡ 25 ರಷ್ಟು 'ನಮ್ಮ ಕ್ಲಿನಿಕ್'ಗಳಲ್ಲಿ ಮಧ್ಯಾಹ್ನ 12 ರಿಂದ ರಾತ್ರಿ 8 ಗಂಟೆಯವರೆಗೆ ಸೇವೆ ಒದಗಿಸಲು ಮುಂದಾಗಿದೆ.

ಸದ್ಯ ನಮ್ಮ ಕ್ಲಿನಿಕ್‌ಗಳು ಬೆಳಿಗ್ಗೆ 9 ರಿಂದ ಮಧ್ಯಾಹ್ನ 12.30 ಹಾಗೂ ಮಧ್ಯಾಹ್ನ 2 ರಿಂದ ಸಂಜೆ 4.30 ರವರೆಗೆ ಸೇವೆ ನೀಡುತ್ತಿವೆ. ಇದರಿಂದಾಗಿ ಕೂಲಿ ಕಾರ್ಮಿಕರು ಹಾಗೂ ಉದ್ಯೋಗಸ್ಥರಿಗೆ ಸಮರ್ಪಕವಾಗಿ ಸೇವೆ ಪಡೆಯಲು ಸಾಧ್ಯವಾಗುತ್ತಿಲ್ಲ ಎಂಬ ದೂರುಗಳು ಇಲಾಖೆಗೆ ಬಂದಿದ್ದವು. ಹೀಗಾಗಿ, ಈ ಬಗ್ಗೆ ಅಧಿಕಾರಿಗಳ ಜತೆಗೆ ಚರ್ಚಿಸಿರುವ ಸಚಿವ ದಿನೇಶ್ ಗುಂಡೂರಾವ್, ಸಂಜೆ ಸೇವೆ ಒದಗಿಸುವ ಬಗ್ಗೆ ಮಾಹಿತಿ ಪಡೆದುಕೊಂಡಿದ್ದಾರೆ.

'ನಮ್ಮ ಕ್ಲಿನಿಕ್‌ಗಳಲ್ಲಿ ಎರಡು ಪಾಳಿಯಂತೆ ದಿನಪೂರ್ತಿ ಸೇವೆ ಒದಗಿಸಿದರೆ ಹೆಚ್ಚಿನ ವೈದ್ಯರು, ತಂತ್ರಜ್ಞರು ಹಾಗೂ ಸಿಬ್ಬಂದಿ ಬೇಕಾಗುತ್ತದೆ. ಈಗ ವೈದ್ಯರು ಸೇರಿ ಅಗತ್ಯ ಸಿಬ್ಬಂದಿ ಕೊರತೆ ಇರುವುದರಿಂದ ಎರಡು ಪಾಳಿ ಮಾಡುವ ಬದಲು, ಈಗಿರುವ ಸಮಯ ಬದಲಿಸಿ, ಸೇವೆ ನೀಡಲು ಸಚಿವರು ಸೂಚನೆ ನೀಡಿದ್ದಾರೆ. ಶೇ 25 ರಷ್ಟು ಕ್ಲಿನಿಕ್‌ಗಳಲ್ಲಿ ಮಾತ್ರ ಸಮಯ ಬದಲಾವಣೆ ಮಾಡಲಾಗುತ್ತದೆ. ಜನರ ಪ್ರತಿಕ್ರಿಯೆ ಆಧರಿಸಿ ಮುಂದಿನ ದಿನಗಳಲ್ಲಿ ಇತರ ಕ್ಲಿನಿಕ್‌ಗಳ ಸಮಯ ಬದಲಿಸಲಾಗುವುದು' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

'ರಾಜ್ಯದಲ್ಲಿ 415 ನಮ್ಮ ಕ್ಲಿನಿಕ್‌ಗಳು ಕಾರ್ಯ ನಿರ್ವಹಿಸುತ್ತಿದ್ದು, ಈವರೆಗೆ 96 ಸಾವಿರ ಮಹಿಳೆಯರು ಹಾಗೂ 4.21 ಲಕ್ಷ ಪುರುಷರು ಸೇರಿ 5 ಲಕ್ಷಕ್ಕೂ ಅಧಿಕ ಮಂದಿ ಸೇವೆ ಪಡೆದುಕೊಂಡಿದ್ದಾರೆ. ನಿತ್ಯ ಸರಾಸರಿ 35 ರಿಂದ 40 ಜನರು ಈ ಕ್ಲಿನಿಕ್‌ಗಳಿಗೆ ಭೇಟಿ ನೀಡುತ್ತಿದ್ದಾರೆ. 2.88 ಲಕ್ಷ ಜನರು ರಕ್ತ ಪರೀಕ್ಷೆ ಸೇರಿ ವಿವಿಧ ರೋಗ ಪರೀಕ್ಷೆಗಳನ್ನು ಮಾಡಿಸಿಕೊಂಡಿ ದ್ದಾರೆ' ಎಂದು ಹೇಳಿದರು.

ವಿಶ್ವ ಆದಿವಾಸಿ ದಿನಾಚರಣೆಯಲ್ಲಿ ಅರಣ್ಯ ಸಚಿವ ಈಶ್ವರ್ ಖಂಡ್ರೆ ಎಚ್ಚರಿಕೆ

'ಆದಿವಾಸಿಗಳ ಮೇಲೆ ದೌರ್ಜನ್ಯ ಎಸಗಿದರೆ ಕ್ರಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಿವಾಸಿಗಳ ಮೇಲೆ ಅರಣ್ಯ ಇಲಾಖೆ ಅಧಿಕಾರಿಗಳು ಸುಳ್ಳು ಪ್ರಕರಣಗಳನ್ನು ದಾಖಲಿಸಿದ್ದರೆ, ಹಲ್ಲೆ, ಕೊಲೆ ಮಾಡಿದ್ದರೆ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ಹೇಳಿದರು.

ಕರ್ನಾಟಕ ಆದಿವಾಸಿ ರಕ್ಷಣಾ ಪರಿಷತ್, ತಿಂಥಿಣೆ ವೀರಗೋಟದ ಕಾಗಿನೆಲೆ ಕನಕಗುರು ಪೀಠದ ಆಶ್ರಯದಲ್ಲಿ ಬುಧವಾರ ನಡೆದ 29ನೇ ವಿಶ್ವ ಆದಿವಾಸಿ ದಿನಾಚರಣೆ ಹಾಗೂ ಆದಿವಾಸಿಗಳ ಕಲಾಮೇಳ ಉದ್ಘಾಟಿಸಿ ಮಾತನಾಡಿದರು.

'ಆದಿವಾಸಿಗಳ ಮೇಲೆ ದೌರ್ಜನ್ಯ ನಡೆದಿರುವ ಬಗ್ಗೆ ಈ ಹಿಂದೆ ಯಾರೂ ನನಗೆ ದೂರು ನೀಡಿರಲಿಲ್ಲ. ಇವತ್ತು ಮಾಹಿತಿ ನೀಡಿದ್ದೀರಿ. ಅದರ ಸತ್ಯಾಸತ್ಯತೆ ಪರಿಶೀಲಿಸಲಾಗುವುದು. ದೌರ್ಜನ್ಯ ನಡೆದಿರುವುದು ನಿಜವಾದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದು ಭರವಸೆ ನೀಡಿದರು.

ಅರಣ್ಯ ಹಕ್ಕು ಕಾಯ್ದೆಯಡಿ ವಿಲೇವಾರಿ ಆಗದ ಪ್ರಕರಣಗಳಿದ್ದರೆ ಕೂಡಲೇ ವಿಲೇ ಮಾಡಲಾಗುವುದು. 3 ಎಕರೆವರೆಗೆ ಜಮೀನು ಹೊಂದಿರುವವರನ್ನು ಒಕ್ಕಲೆಬ್ಬಿಸುವುದಿಲ್ಲ. ಅದಕ್ಕಿಂತ ಹೆಚ್ಚು ಕಾಡಿನ ಜಮೀನು ಆಕ್ರಮಿಸಿಕೊಂಡವರ ಮೇಲೆ ಕ್ರಮ ಕೈಗೊಳ್ಳಲಾಗುವುದು. ಜನರೂ ಬದುಕಬೇಕು. ಕಾಡು, ಪರಿಸರವೂ ಉಳಿಯಬೇಕು ಎಂದರು.

ವಿಶ್ವ ಆದಿವಾಸಿ ದಿನಾಚರಣೆ, ಆದಿವಾಸಿಗಳ ಕಲಾಮೇಳದಲ್ಲಿ ಕಲಾವಿದರ ತಂಡದಿಂದ ಜನಪದ ನೃತ್ಯ ಪ್ರದರ್ಶನಗೊಂಡಿತು –ಪ್ರಜಾವಾಣಿ ಚಿತ್ರ

ಕೆಪಿಸಿಸಿ ಸಾಮಾಜಿಕ ನ್ಯಾಯ ವಿಭಾಗದ ಅಧ್ಯಕ್ಷ ಸಿ.ಎಸ್.ದ್ವಾರಕನಾಥ ಮಾತನಾಡಿ, 'ರಾಜ್ಯದಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳ ದೌರ್ಜನ್ಯದಿಂದ ಆದಿವಾಸಿ ಸಮುದಾಯದ 19 ಮಂದಿ ಸಾವಿಗೀಡಾಗಿದ್ದಾರೆ. ಹಲವು ಕಡೆ ಆದಿವಾಸಿಗಳ ಮೇಲೆಯೇ ದೂರು ದಾಖಲಾಗಿದೆ' ಎಂದು ಮಾಹಿತಿ ನೀಡಿದರು.

ವಿಧಾನ ಪರಿಷತ್ ಸದಸ್ಯ ಎಚ್. ವಿಶ್ವನಾಥ್ ಮಾತನಾಡಿ, 'ಕಾಡನ್ನು ಆದಿವಾಸಿಗಳು ಉಳಿಸುತ್ತಿದ್ದಾರೆ. ಅಧಿಕಾರಿಗಳು, ರಾಜಕಾರಣಿಗಳು ಹಾಳುಗೆಡಹುತ್ತಿದ್ದಾರೆ' ಎಂದು ಆರೋಪಿಸಿದರು.

ವೀರಗೋಟ ಕನಕ ಗುರುಪೀಠದ ಸಿದ್ಧರಾಮಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಆದಿವಾಸಿ ರಕ್ಷಣಾ ಪರಿಷತ್ ರಾಜ್ಯಾಧ್ಯಕ್ಷ ಎಂ. ಕೃಷ್ಣಯ್ಯ, ಗೌರವಾಧ್ಯಕ್ಷ ಕೆ.ಎಂ. ಮೇತ್ರಿ, ಬುಡಕಟ್ಟು ಸಮುದಾಯಗಳ ಹೋರಾಟಗಾರ ಅಮೃತ್‌ರಾವ್ ಚಿಮ್‌ಕೋಡ್, ನಟ ಚೇತನ್ ಅಹಿಂಸಾ ಮಾತನಾಡಿದರು.

ಶೈಕ್ಷಣಿಕ ಸಾಧನೆಗಾಗಿ ಬುಡಕಟ್ಟು ಸಮುದಾಯಗಳ ಕಾವ್ಯಶ್ರೀ ಕೆ., ಸಂಗೀತಾ ಜೆ.ಕೆ., ಅಶ್ವಥ್ ಬಿ.ಆರ್., ಶ್ರೀಜಿತ್ ಎಸ್. ಅವರಿಗೆ ಆದಿವಾಸಿ ಸಿರಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕೆ.ಎಂ. ಮೇತ್ರಿ ಅವರ 'ಸೂಕ್ಷ್ಮ ಮೂಲ ಆದಿವಾಸಿಗಳು' ಕೃತಿ ಬಿಡುಗಡೆ ಮಾಡಲಾಯಿತು.

'ಅನುದಾನ ಬದಲಿಸಬೇಡಿ'

ಆದಿವಾಸಿಗಳ, ದಲಿತರ ಅಭಿವೃದ್ಧಿಗೆ ಮೀಸಲಿರಿಸುವ ಎಸ್‌ಸಿಪಿ, ಟಿಎಸ್‌ಪಿ ಹಣವನ್ನು ಚುನಾವಣಾ ರಾಜಕೀಯ ಯೋಜನೆಗಳಿಗೆ ಬಳಸುವುದು ಸರಿಯಲ್ಲ. ಶ್ರೀಮಂತರಿಗೆ ತೆರಿಗೆ ವಿಧಿಸಿ ಆ ಹಣವನ್ನು ಬೇಕಾದರೆ ಆ ಯೋಜನೆಗಳಿಗೆ ಬಳಸಿಕೊಳ್ಳಿ ಎಂದು ನಟ ಚೇತನ್ ಅಹಿಂಸಾ ಸಲಹೆ ನೀಡಿದರು.

ಎಸ್‌ಟಿಯಲ್ಲಿ ಬರುವ ಎಲ್ಲ ಸಮುದಾಯಗಳಿಗೆ ಸರ್ಕಾರದ ಸೌಲಭ್ಯ ಸಿಗಬೇಕಿದ್ದರೆ ಎಸ್‌ಟಿಯಲ್ಲಿ ಒಳ ಮೀಸಲಾತಿ ಜಾರಿಯಾಗಬೇಕು ಎಂದು ಆಗ್ರಹಿಸಿದರು.

ಸಂಸದರ ನಿಧಿ- ರಾಜ್ಯದ ಸಂಸದರ ಸಾಧನೆ (ಅನುದಾನ ಮೊತ್ತ ₹ ಕೋಟಿಗಳಲ್ಲಿ)

ಸಂಸದರು	ಕ್ಷೇತ್ರ	2020-21		2021-22		2022-23	
		ಅನುದಾನ	ಬಳಕೆ	ಅನುದಾನ	ಬಳಕೆ	ಅನುದಾನ	ಬಳಕೆ
ಡಾ. ಉಮೇಶ್ ಜಿ. ಜಾಧವ್	ಕಲಬುರಗಿ	2.50	0	2.50	0	2.50	0.00
ಶೋಭಾ ಕರಂದ್ಲಾಜೆ	ಉಡುಪಿ-ಚಿಕ್ಕಮಗಳೂರು	5	4.21	7	4.49	7	4.93
ತೇಜಸ್ವಿ ಸೂರ್ಯ	ಬೆಂಗಳೂರು ದಕ್ಷಿಣ	2.50	1.26	5	4.93	5	5.13
ಅನಂತಕುಮಾರ್ ಹೆಗಡೆ	ಉತ್ತರ ಕನ್ನಡ	5	4.90	7	4.90	12	11.76
ಅಣ್ಣಾಸಾಹೇಬ ಜೊಲ್ಲೆ	ಚಿಕ್ಕೋಡಿ	2.50	2.30	5	3.12	7	6.15
ಬಿ.ವೈ.ರಾಘವೇಂದ್ರ	ಶಿವಮೊಗ್ಗ	5	8.70	5	9.07	7	14.37
ಭಗವಂತ ಖೂಬಾ	ಬೀದರ್	2.50	0	5	2.85	9.50	16.23
ಡಿ.ವಿ.ಸದಾನಂದ ಗೌಡ	ಬೆಂಗಳೂರು ಉತ್ತರ	5	4.33	5	4.33	7	11.57
ಡಿ.ಕೆ.ಸುರೇಶ್	ರಾಮನಗರ	5	5	7	6.40	7	6.40
ಜಿ.ಎಸ್.ಬಸವರಾಜ್	ತುಮಕೂರು	2.50	7.82	5	9.14	7	11.24
ಜಿ.ಎಂ.ಸಿದ್ದೇಶ್ವರ	ದಾವಣಗೆರೆ	5	2.99	7	5.53	12	11.38
ನಳಿನ್ ಕುಮಾರ್ ಕಟೀಲು	ದಕ್ಷಿಣ ಕನ್ನಡ	5	2.51	7	5.60	9.50	8.23
ಪಿ.ಸಿ.ಮೋಹನ್	ಬೆಂಗಳೂರು ಕೇಂದ್ರ	5	2.80	5	2.80	7	3.15
ಪಿ.ಸಿ.ಗದ್ದಿಗೌಡರ್	ಬಾಗಲಕೋಟೆ	5	2.42	7	5.48	9.50	8.38
ಎ.ನಾರಾಯಣಸ್ವಾಮಿ	ಚಿತ್ರದುರ್ಗ	5	2.49	5	2.49	7	8.51
ಪ್ರಜ್ವಲ್ ರೇವಣ್ಣ	ಹಾಸನ	5	2.45	7	5.27	14.50	9.66
ಪ್ರಲ್ಹಾದ ಜೋಶಿ	ಧಾರವಾಡ	5	3.58	5	4	7	5.71
ಪ್ರತಾಪಸಿಂಹ	ಮೈಸೂರು	5	4.90	5	4.90	12	11.87
ರಾಜಾ ಅಮರೇಶ್ವರ ನಾಯಕ್	ರಾಯಚೂರು	2.50	3.22	5	7.06	7	9.62
ರಮೇಶ ಜಿಗಜಿಣಗಿ	ವಿಜಯಪುರ	2.50	2.53	2.50	2.53	5	2.53
ಎಸ್.ಮುನಿಸ್ವಾಮಿ	ಕೋಲಾರ	5	2.70	5	2.70	7	5.75
ಸಂಗಣ್ಣ ಕರಡಿ	ಕೊಪ್ಪಳ	5	3.76	7	4.90	7	6.86
ಶಿವಕುಮಾರ್ ಉದಾಸಿ	ಹಾವೇರಿ	5	5	5	5	7	7.92
ಬಿ.ಎನ್.ಬಚ್ಚೇಗೌಡ	ಚಿಕ್ಕಬಳ್ಳಾಪುರ	5	4.18	5	6.84	9.50	12.25
ವಿ.ಶ್ರೀನಿವಾಸ ಪ್ರಸಾದ್	ಚಾಮರಾಜನಗರ	5	2.44	5	5.10	9.50	9.91
ವೈ.ದೇವೇಂದ್ರಪ್ಪ	ಬಳ್ಳಾರಿ	5	2.13	5	3.68	7	4.89
ಸುಮಲತಾ ಅಂಬರೀಷ್	ಮಂಡ್ಯ	5	4.95	7	5.45	9.50	11.74
ಮಂಗಳಾ ಅಂಗಡಿ	ಬೆಳಗಾವಿ	-	-	2	0	2	2.50

ಬಿಬಿಎಂಪಿ: ಎಲ್ಲ ಕಾಮಗಾರಿ ಸ್ಥಗಿತ

ಒಂದನೇ ಪುಟದಿಂದ...

ನಾಯಕರಿಗೆ ಮನವಿ: 'ಬಿಬಿಎಂಪಿ ವ್ಯಾಪ್ತಿಯಲ್ಲಿ ಪೂರ್ಣಗೊಂಡಿರುವ ಕಾಮಗಾರಿಗಳಿಗೆ ಬಿಲ್ ಪಾವತಿ ಮಾಡಲು ಸರ್ಕಾರಕ್ಕೆ ಒತ್ತಾಯಿಸಬೇಕು ಎಂದು 28 ವಿಧಾನಸಭೆ ಕ್ಷೇತ್ರದ ಶಾಸಕರಿಗೂ ಮನವಿ ಸಲ್ಲಿಸಲಾಗುವುದು' ಎಂದು ಬಿಬಿಎಂಪಿ ಕಾರ್ಯನಿರತ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆ.ಟಿ. ಮಂಜುನಾಥ್ ತಿಳಿಸಿದರು.

'ಸಚಿವರಾದ ಕೃಷ್ಣ ಬೈರೇಗೌಡ, ದಿನೇಶ್ ಗುಂಡೂರಾವ್, ಬೈರತಿ ಸುರೇಶ್ ಅವರಿಗೆ ಮನವಿ ಮಾಡಿಕೊಳ್ಳಲಾಗಿದೆ. ಅವರು ಸಹಕಾರ ನೀಡುವುದಾಗಿ ಹೇಳಿದ್ದಾರೆ. ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ಹಾಗೂ ಶಾಸಕ ಡಾ. ಅಶ್ವತ್ಥನಾರಾಯಣ ಅವರಿಗೆ ಮನವಿ ಮಾಡಿಕೊಳ್ಳಲಾಗಿದ್ದು, ಅವರೂ ಸರ್ಕಾರ ಮೇಲೆ ಒತ್ತಡ ಹಾಕುವುದಾಗಿ ಹೇಳಿದ್ದಾರೆ' ಎಂದರು.

'ಎಲ್ಲ ಪಕ್ಷಗಳ ಶಾಸಕರ ಕ್ಷೇತ್ರಗಳಲ್ಲೂ ಕೆಲಸ ಮಾಡಿದ್ದೇವೆ. ಅವರ ಒತ್ತಾಸೆಯಂತೆ ರಾತ್ರಿ–ಹಗಲು ಕೆಲಸ ಮಾಡಿದ್ದೇವೆ. ಹೀಗಾಗಿ ಎಲ್ಲ ಶಾಸಕರಲ್ಲೂ ಬಿಲ್ ಪಾವತಿಸಲು ಸಹಕಾರ ನೀಡುವಂತೆ ಮನವಿ ಮಾಡಿಕೊಳ್ಳಲಾಗುತ್ತಿದೆ' ಎಂದು ಹೇಳಿದರು.

ಶೇ 15 ಕಮಿಷನ್ ಆರೋಪ: ಬಿಬಿಎಂಪಿ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳು ಮಂಗಳವಾರ ರಾಜ್ಯಪಾಲರ ಥಾವರ ಚಂದ್ ಗೆಹಲೋತ್ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಬಿಲ್ ಪಾವತಿಗೆ ಕ್ರಮ ತೆಗೆದುಕೊಳ್ಳುವಂತೆ ಮನವಿ ಮಾಡಿದ್ದರು.

ರಾಜ್ಯಪಾಲರ ಭೇಟಿ ಸಂದರ್ಭದಲ್ಲಿ ಕೆಲವು ಗುತ್ತಿಗೆದಾರರು, 'ಬಿಬಿಎಂಪಿ ಅಧಿಕಾರಿಗಳು ಬೆಂಗಳೂರು ನಗರಾಭಿವೃದ್ಧಿ ಸಚಿವರ ಪರವಾಗಿ ಶೇ 15 ರಷ್ಟು ಕಮಿಷನ್‌ಗೆ ಒತ್ತಡ ಹೇರುತ್ತಿದ್ದಾರೆ' ಎಂದು ಅಹವಾಲು ತೋಡಿಕೊಂಡಿದ್ದರು.

ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮ (ಕೆಆರ್‌ಐಡಿಎಲ್) ಸುವರ್ಣ ಮಹೋತ್ಸವ ಆಚರಿಸುತ್ತಿರುವ ಹಿನ್ನೆಲೆಯಲ್ಲಿ ಸಂಸ್ಥೆಯ ಅಧ್ಯಕ್ಷರೂ ಆಗಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರು ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ₹ 5 ಕೋಟಿಯ ಚೆಕ್ ಬುಧವಾರ ಹಸ್ತಾಂತರಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಚೆಕ್ ಸ್ವೀಕರಿಸಿದರು

7 ಐಎಫ್‌ಎಸ್ ಅಧಿಕಾರಿಗಳ ವರ್ಗ

ಬೆಂಗಳೂರು: ಏಳು ಮಂದಿ ಐಎಫ್‌ಎಸ್ ಅಧಿಕಾರಿಗಳು ಹಾಗೂ ರಾಜ್ಯ ಅರಣ್ಯ ಸೇವೆಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಶ್ರೇಣಿಯ ಒಬ್ಬ ಅಧಿಕಾರಿಯನ್ನು ವರ್ಗಾವಣೆಗೊಳಿಸಿ ಬುಧವಾರ ಆದೇಶ ಹೊರಡಿಸಿದ್ದು, 1992ರ ಬ್ಯಾಚ್‌ನ ಐಎಫ್‌ಎಸ್ ಅಧಿಕಾರಿ ಬಿ.ಪಿ. ರವಿ ಅವರನ್ನು ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಪ್ರಧಾನ ಕಾರ್ಯದರ್ಶಿಯನ್ನಾಗಿ ನೇಮಿಸಲಾಗಿದೆ.

ಇತರ ವರ್ಗಾವಣೆಗಳ ವಿವರ: ಸಂತೋಷ್ ಕುಮಾರ್– ಹೆಚ್ಚುವರಿ ಮುಖ್ಯ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿ(ಎಪಿಸಿಸಿಎಫ್), ಮಾನವ ಸಂಪನ್ಮೂಲ ಅಭಿವೃದ್ಧಿ, ರಾಜ್ಯ ಅರಣ್ಯ ಅಕಾಡೆಮಿ, ಧಾರವಾಡ; ವಿಜಯ್ ಮೋಹನ್ ರಾಜ್– ಸದಸ್ಯ ಕಾರ್ಯದರ್ಶಿ, ಕರ್ನಾಟಕ ಮೃಗಾಲಯ ಪ್ರಾಧಿಕಾರ, ಮೈಸೂರು; ಗೀತಾಂಜಲಿ ವಿ.– ಎಪಿಸಿಸಿಎಫ್, ಸಾಮಾಜಿಕ ಅರಣ್ಯ ಮತ್ತು ಯೋಜನೆಗಳು ಹಾಗೂ ಮೌಲ್ಯಮಾಪನ ವಿಭಾಗದ ಹೆಚ್ಚುವರಿ ಹೊಣೆ.

ಆರ್. ರವಿಶಂಕರ್– ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಸಂಶೋಧನೆ; ಚಂದ್ರಶೇಖರ್ ನಾಯಕ– ಅರಣ್ಯ ಸಂರಕ್ಷಣಾಧಿಕಾರಿ, ಚಾಮರಾಜನಗರ ವೃತ್ತ; ಡಿ. ಮಹೇಶ್ ಕುಮಾರ್– ಕಾರ್ಯನಿರ್ವಾಹಕ ನಿರ್ದೇಶಕ, ಚಾಮರಾಜೇಂದ್ರ ಮೃಗಾಲಯ, ಮೈಸೂರು. ಪ್ರವೀಣ್ (ಎಸ್‌ಎಫ್‌ಎಸ್)– ಉಪ ಅರಣ್ಯ ಸಂರಕ್ಷಣಾಧಿಕಾರಿ, ರಾಯಚೂರು ವಿಭಾಗ.

ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿಕೆ

ಪಕ್ಷಕ್ಕೆ ದುಡಿದವರಿಗೆ ಸ್ಥಾನಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಿಗಮ–ಮಂಡಳಿಗಳಲ್ಲಿ ಅಧ್ಯಕ್ಷ, ಸದಸ್ಯ ಸ್ಥಾನಗಳಿಗೆ ನೇಮಿಸುವ ಸಂದರ್ಭದಲ್ಲಿ ಪಕ್ಷಕ್ಕಾಗಿ ದುಡಿದವರಿಗೆ ಮೊದಲ ಆದ್ಯತೆ ನೀಡಲಾಗುವುದು' ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿ ಬುಧವಾರ ನಡೆದ 'ಕ್ವಿಟ್ ಇಂಡಿಯಾ ಚಳವಳಿ' ದಿನಾಚರಣೆ ಸಂದರ್ಭದಲ್ಲಿ ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಅವರು, 'ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಈ ಸೂಚನೆ ನೀಡಿದ್ದಾರೆ. ಬೂತ್‌ಮಟ್ಟದಲ್ಲಿ ಎಷ್ಟು ಮತಗಳನ್ನು ಪಕ್ಷಕ್ಕೆ ತಂದಿದ್ದಾರೋ ಅಂತಹ ನಾಯಕರಿಗೆ ಮೊದಲು ಪ್ರಾಶಸ್ತ್ಯ ನೀಡುವಂತೆ ಸಲಹೆ ನೀಡಿದ್ದಾರೆ. ಅದರಂತೆ ನೇಮಕ ನಡೆಯಲಿದೆ' ಎಂದರು.

'ಇಂಡಿಯಾ'ಕ್ಕೆ ಆತ್ಮವಿಶ್ವಾಸ: 'ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದ ನಂತರ ನಗರದಲ್ಲಿ ನಡೆದ ವಿರೋಧ ಪಕ್ಷಗಳ ನಾಯಕರು, ಮುಖ್ಯಮಂತ್ರಿಗಳ ಸಭೆಯಲ್ಲಿ 'ಇಂಡಿಯಾ ರಕ್ಷಿಸಿ' ಅಭಿಯಾನಕ್ಕೆ ಚಾಲನೆ ನೀಡಲಾಗಿದೆ. ಇಡೀ 'ಇಂಡಿಯಾ'ಕ್ಕೆ ಕರ್ನಾಟಕ ಆತ್ಮವಿಶ್ವಾಸ ನೀಡಿದೆ' ಎಂದರು.

'ವಿರೋಧ ಪಕ್ಷಗಳ ನಾಯಕರ ಸಭೆಯ ಬಳಿಕ, ಎಲ್ಲ ರಾಜ್ಯಗಳ ನಮ್ಮ ಪಕ್ಷದ ನಾಯಕರ ಸಭೆ ನಡೆಸಿದ ವರಿಷ್ಠರು, ಕರ್ನಾಟಕ ಮಾದರಿ ಅನುಕರಿಸುವಂತೆ ಸಲಹೆ ನೀಡಿದರು. ಎಲ್ಲ ವೈಮನಸ್ಸು, ವ್ಯಕ್ತಿ ಪ್ರತಿಷ್ಠೆ ಬಿಟ್ಟು, ವ್ಯಕ್ತಿ ಮುಖ್ಯವಲ್ಲ, ಪಕ್ಷ ಮುಖ್ಯ ಎಂದು ದುಡಿಯುವುದೇ ಕರ್ನಾಟಕ ಮಾದರಿ ಎಂದೂ ಕಿವಿಮಾತು ಹೇಳಿದರು. ಇದು ನಮ್ಮ ಹೆಗ್ಗಳಿಕೆ' ಎಂದರು.

ಅಕ್ರಮ ದೇಣಿಗೆ ಸ್ವೀಕಾರ: ಕೇರಳ ಸಿ.ಎಂ ಪುತ್ರಿ ವಿರುದ್ಧ ಆರೋಪ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ಪುತ್ರಿ ವೀಣಾ ಟಿ. ಮತ್ತು ಅವರ ಒಡೆತನದ ಬೆಂಗಳೂರು ಮೂಲದ ಐ.ಟಿ ಕಂಪನಿಗೆ ಕೊಚ್ಚಿಯ ಖಾಸಗಿ ಕಂಪನಿಯಿಂದ ಅಕ್ರಮವಾಗಿ ಹಣ ಪಾವತಿಯಾಗಿದೆ ಎಂದು ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಆರೋಪಿಸಿದ್ದಾರೆ.

ಕೊಚ್ಚಿ ಮೂಲದ ಖಾಸಗಿ ಕಂಪನಿ ಕೊಚಿನ್ ಮಿನೆರಲ್ಸ್ ಆ್ಯಂಡ್ ರುಟೈಲ್ಸ್ ಲಿಮಿಟೆಡ್‌ನಿಂದ (ಸಿಎಂಆರ್‌ಎಲ್) ಬೆಂಗಳೂರಿನ ಎಕ್ಸಾಲಾಜಿಕ್ ಸಲ್ಯೂಷನ್ಸ್ ಐ.ಟಿ ಕಂಪನಿ ಮತ್ತು ವೀಣಾ ಅವರಿಗೆ ₹1.72 ಕೋಟಿ ಹಣ ಅಕ್ರಮವಾಗಿ ಸಂದಾಯವಾಗಿದೆ ಎಂದು ಆದಾಯ ತೆರಿಗೆ ಮಧ್ಯಂತರ ಇತ್ಯರ್ಥ ಮಂಡಳಿಯ ವರದಿಯಲ್ಲಿ ಹೇಳಿದೆ. ಇದರಿಂದ ಪಿಣರಾಯಿ ವಿಜಯನ್ ಅವರು ಮತ್ತೊಂದು ಮುಜುಗರ ಎದುರಿಸುವಂತಾಗಿದೆ.

ವೀಣಾ ಟಿ. ಅವರು ಕೇರಳ ಲೋಕೋಪಯೋಗಿ ಸಚಿವ ಪಿ.ಎ. ಮೊಹಮ್ಮದ್ ರಿಯಾಸ್ ಅವರ ಪತ್ನಿಯೂ ಹೌದು.

ಎಕ್ಸಾಲಾಜಿಕ್ ಸಲ್ಯೂಷನ್ಸ್ ಕಂಪನಿಯು ಕೇರಳ ಸರ್ಕಾರದಲ್ಲಿ ಅಧಿಕಾರಸ್ಥ, ಪ್ರಮುಖ ರಾಜಕಾರಣಿಯೊಬ್ಬರ ಮಗಳ ಒಡೆತನದ್ದಾಗಿದೆ. ಯಾವುದೇ ಸೇವೆಗಳನ್ನು ಒದಗಿಸದಿದ್ದರೂ ಸಿಎಂಆರ್‌ಎಲ್‌ನಿಂದ 2017-18 ರಿಂದ 2019-20ರ ಅವಧಿಯಲ್ಲಿ ಕಂತುಗಳಲ್ಲಿ ವೀಣಾ ಟಿ. ಅವರಿಗೆ ₹55 ಲಕ್ಷ ಮತ್ತು ಎಕ್ಸಾಲಾಜಿಕ್ ಸಲ್ಯೂಷನ್ಸ್‌ಗೆ 1.17 ಕೋಟಿ ಪಾವತಿಯಾಗಿದೆ ಎಂದು ಆರೋಪಿಸಿದೆ.

ಸಿಎಂಆರ್‌ಎಲ್ ಮತ್ತು ಅದರ ವ್ಯವಸ್ಥಾಪಕ ನಿರ್ದೇಶಕರಿಂದ ಕಾಂಗ್ರೆಸ್ಸಿನವರು ಸೇರಿ ಹಲವು ಹಿರಿಯ ರಾಜಕಾರಣಿಗಳಿಗೆ, ಪೊಲೀಸ್ ಅಧಿಕಾರಿಗಳು ಮತ್ತು ಮಾಧ್ಯಮ ಸಂಸ್ಥೆಗಳಿಗೆ ಹಣ ಅಕ್ರಮವಾಗಿ ಪಾವತಿಯಾಗಿದ್ದು, ಇದರ ಸಾಕ್ಷ್ಯಗಳನ್ನು ಆದಾಯ ತೆರಿಗೆ ಇಲಾಖೆ ವಶಪಡಿಸಿಕೊಂಡಿರುವುದಾಗಿ ಹೇಳಲಾಗಿದೆ.

ಸಿಎಂಆರ್‌ಎಲ್ ಮತ್ತು ಅದರ ವ್ಯವಸ್ಥಾಪಕ ನಿರ್ದೇಶಕ ಎಸ್.ಎನ್. ಶಶಿಧರನ್ ಕರ್ತಾ ಅವರು ಈ ಹಿಂದೆ ಕೇರಳ ಕರಾವಳಿ ಪ್ರದೇಶಗಳಲ್ಲಿ ಮರಳು ಗಣಿಗಾರಿಕೆಗೆ ಸಂಬಂಧಿಸಿದಂತೆ ಆರೋಪಗಳನ್ನು ಎದುರಿಸಿದ್ದರು.

ಇದರ ಬಗ್ಗೆ ಮಲಯಾಳ ಪತ್ರಿಕೆಯೊಂದು ಬುಧವಾರ ವರದಿ ಪ್ರಕಟಿಸಿದ ನಂತರ, ಮುಖ್ಯಮಂತ್ರಿಯವರು ಈ ಬಗ್ಗೆ ಸ್ಪಷ್ಟನೆ ನೀಡಬೇಕೆಂದು ಕಾಂಗ್ರೆಸ್ ಮತ್ತು ಬಿಜೆಪಿ ಒತ್ತಾಯಿಸಿವೆ.

ಕೇಂದ್ರ ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವ ಮತ್ತು ಕೇರಳ ಬಿಜೆಪಿ ನಾಯಕ ವಿ. ಮುರಳೀಧರನ್ ಅವರು, ಕಾಂಗ್ರೆಸ್‌ನ ಅನೇಕ ನಾಯಕರು ಈ ಸಂಸ್ಥೆಯಿಂದ ಲಂಚ ಪಡೆದಿದ್ದಾರೆ. ಹಾಗಾಗಿ, ಕಾಂಗ್ರೆಸ್ ಈ ಬಗ್ಗೆ ಧ್ವನಿ ಎತ್ತುವುದಿಲ್ಲ ಎಂದು ಆರೋಪಿಸಿದ್ದಾರೆ.

ಕೇರಳ ಕಾಂಗ್ರೆಸ್ ಅಧ್ಯಕ್ಷ ಕೆ. ಸುಧಾಕರನ್ ಅವರು ಈ ಪ್ರಕರಣದ ಬಗ್ಗೆ ನ್ಯಾಯಾಂಗ ತನಿಖೆಗೆ ಒತ್ತಾಯಿಸಿದ್ದಾರೆ.

ಮುಖ್ಯಮಂತ್ರಿ ಪಿಣರಾಯಿ ಅವರು ಈ ವಿಷಯವನ್ನು ಬುಧವಾರ ವಿಧಾನಸಭೆಯಲ್ಲಿ ಪ್ರಸ್ತಾಪಿಸಲಿಲ್ಲ.

‘ಚಂದಿರನಿಗೆ ಮತ್ತಷ್ಟು ಸನಿಹವಾದ ಗಗನನೌಕೆ’

ಬೆಂಗಳೂರು(ಪಿಟಿಐ): ಚಂದ್ರನ ಕಕ್ಷೆಯಲ್ಲಿ ಪರಿಭ್ರಮಿಸುತ್ತಿರುವ ‘ಚಂದ್ರಯಾನ-3’ ನೌಕೆಯನ್ನು ಮತ್ತಷ್ಟೂ ಕೆಳಗಿನ ಕಕ್ಷೆಗೆ ಒಯ್ಯುವ ಕಾರ್ಯಾಚರಣೆಯನ್ನು ಬುಧವಾರ ಯಶಸ್ವಿಯಾಗಿ ನೆರವೇರಿಸಲಾಗಿದೆ. ಇದರಿಂದ ಗಗನ ನೌಕೆಯು ಮತ್ತಷ್ಟೂ ಚಂದ್ರನ ಸಮೀಪಕ್ಕೆ ಸಾಗಿದಂತಾಗಿದೆ ಎಂದು ‘ಇಸ್ರೊ’ ತಿಳಿಸಿದೆ.

‘ಚಂದಿರನ ಅಂಗಳಕ್ಕೆ ಮತ್ತಷ್ಟೂ ಸಮೀಪ ‘ಚಂದ್ರಯಾನ-3’ ನೌಕೆ ಸಾಗಿದೆ. ‘ಚಂದ್ರಯಾನ-3’ರ ಮುಂದಿನ ಹಂತದ ಕಾರ್ಯಾಚರಣೆಯನ್ನು ಆಗಸ್ಟ್ 14ರಂದು ರಾತ್ರಿ 11.30ರಿಂದ 12.30 ರ ನಡುವೆ ನೆರವೇರಿಸಲಾಗುತ್ತದೆ’ ಎಂದೂ ತಿಳಿಸಿದೆ.

ಆಗಸ್ಟ್ 16ರಂದು ಮತ್ತೊಂದು ಸುತ್ತಿನ ಕಕ್ಷೆ ಬದಲಿಸುವ ಕಾರ್ಯಾಚರಣೆ ನಡೆಸಲಾಗುತ್ತದೆ. ಆಗ ನೌಕೆಯು ಚಂದ್ರನಿಂದ 100 ಕಿ.ಮೀ. ದೂರದಲ್ಲಿ ಪರಿಭ್ರಮಿಸುತ್ತಿರುತ್ತದೆ.

ಈ ಹಂತದಲ್ಲಿಯೇ ಲ್ಯಾಂಡರ್ ಮತ್ತು ರೋವರ್‌ಗಳು ಪ್ರೊಪಲ್ಷನ್ ಮಾಡ್ಯೂಲ್‌ನಿಂದ ಬೇರ್ಪಡಲಿವೆ.

ನಂತರ, ಸಾಫ್ಟ್ ಲ್ಯಾಂಡಿಂಗ್‌ಗೆ ಅನುವಾಗುವಂತೆ ಲ್ಯಾಂಡರ್‌ನ ವೇಗ ಕಡಿಮೆಗೊಳಿಸುವ ಕಾರ್ಯಾಚರಣೆ ನೆರವೇರಿಸಲಾಗುತ್ತದೆ. ಆಗಸ್ಟ್ 23 ರಂದು ಲ್ಯಾಂಡರ್ ಅನ್ನು ಚಂದಿರನ ದಕ್ಷಿಣ ಧ್ರುವದಲ್ಲಿ ಇಳಿಯುವಂತೆ ಮಾಡಲಾಗುತ್ತದೆ ಎಂದು ‘ಇಸ್ರೊ’ ಹೇಳಿದೆ. ಜುಲೈ 14ರಂದು ‘ಚಂದ್ರಯಾನ-3’ ನೌಕೆಯನ್ನು ಹೊತ್ತ ರಾಕೆಟ್ ನಭದತ್ತ ಚಿಮ್ಮಿತ್ತು. ಆಗಸ್ಟ್ 5ರಂದು ಅದು ಚಂದ್ರನ ಕಕ್ಷೆ ಪ್ರವೇಶಿಸಿತ್ತು. ಆಗಸ್ಟ್6ರಂದು ಮೊದಲ ಬಾರಿಗೆ ಕಕ್ಷೆಯನ್ನು ಬದಲಿಸುವ ಕಾರ್ಯಾಚರಣೆ ನಡೆಸಲಾಗಿತ್ತು.

ಕೇರಳ ಬದಲು ‘ಕೇರಳಂ’: ನಿರ್ಣಯ

ತಿರುವನಂತಪುರ (ಪಿಟಿಐ): ಕೇರಳದ ಹೆಸರನ್ನು ಅಧಿಕೃತವಾಗಿ ‘ಕೇರಳಂ’ ಎಂದು ಬದಲಾಯಿಸುವಂತೆ ಕೇಂದ್ರವನ್ನು ಒತ್ತಾಯಿಸುವ ನಿರ್ಣಯವನ್ನು ಕೇರಳ ವಿಧಾನಸಭೆ ಬುಧವಾರ ಸರ್ವಾನುಮತದಿಂದ ಅಂಗೀಕರಿಸಿದೆ.

ನಿರ್ಣಯವನ್ನು ಮಂಡಿಸಿದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು, ಸಂವಿಧಾನದ ಎಂಟನೇ ಪರಿಚ್ಛೇದದಲ್ಲಿ ಸೇರಿಸಲಾದ ಎಲ್ಲಾ ಭಾಷೆಗಳಲ್ಲಿ ರಾಜ್ಯದ ಹೆಸರನ್ನು ‘ಕೇರಳಂ’ ಎಂದು ಬದಲಾಯಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದರು.

ರಾಜ್ಯವನ್ನು ಮಲಯಾಳ ಭಾಷೆಯಲ್ಲಿ ‘ಕೇರಳಂ’ ಎಂದು ಕರೆಯಲಾಗುತ್ತಿದೆ. ಆದರೆ, ಇತರ ಭಾಷೆಗಳಲ್ಲಿ ಅದು ಇನ್ನೂ ಕೇರಳವಾಗಿದೆ. ಸ್ವಾತಂತ್ರ್ಯ ಹೋರಾಟದ ಕಾಲದಿಂದಲೂ ಮಲಯಾಳ ಭಾಷಿಕ ಸಮುದಾಯಗಳಿಗೆ ಅಖಂಡ ಕೇರಳ ರಚನೆಯ ಅಗತ್ಯವಿದೆ ಎಂದು ಹೇಳಿದರು.

ಸಂವಿಧಾನದ 3ನೇ ಪರಿಚ್ಛೇದದಡಿ ‘ಕೇರಳಂ’ ಎಂದು ತಿದ್ದುಪಡಿ ಮಾಡಲು ಮತ್ತು ಸಂವಿಧಾನದ 8ನೇ ಪರಿಚ್ಛೇದದಲ್ಲಿ ಉಲ್ಲೇಖಿಸಿರುವ ಎಲ್ಲಾ ಭಾಷೆಗಳಲ್ಲಿ ‘ಕೇರಳಂ’ ಎಂದು ಮರುನಾಮಕರಣ ಮಾಡಲು ತಕ್ಷಣ ಕ್ರಮ ಕೈಗೊಳ್ಳುವಂತೆ ವಿಧಾನಸಭೆ ಸರ್ವಾನುಮತದಿಂದ ಕೇಂದ್ರ ಸರ್ಕಾರವನ್ನು ಕೋರುತ್ತದೆ ಎಂದು ತಿಳಿಸಿದರು.

ಕಾಂಗ್ರೆಸ್ ನೇತೃತ್ವದ ಯುಡಿಎಫ್ ವಿರೋಧ ಪಕ್ಷ ಸಹ ನಿರ್ಣಯ ಅಂಗೀಕರಿಸಿತು.

ಆದರೆ, ಅದರಲ್ಲಿ ಯಾವುದೇ ತಿದ್ದುಪಡಿಗಳು ಅಥವಾ ಮಾರ್ಪಾಡು ಸೂಚಿಸಲಿಲ್ಲ.

ಬುಡಕಟ್ಟು ನೃತ್ಯ ಪಶ್ಚಿಮಬಂಗಾಳದ ಕೋಲ್ಕತ್ತದಲ್ಲಿ ಬುಧವಾರ ಕಾಂಗ್ರೆಸ್ ಆಯೋಜಿಸಿದ್ದ ‘ಆದಿವಾಸಿ ಗೌರವ ಪರ್ವ’ದಲ್ಲಿ ಬುಡಕಟ್ಟು ಜನರು ನೃತ್ಯ ಪ್ರದರ್ಶಿಸಿದರು –ಪಿಟಿಐ ಚಿತ್ರ

ಪ್ರಧಾನಿ ಹತ್ಯೆ ಬೆದರಿಕೆ: ತನಿಖೆ ಆರಂಭ

ಪುಣೆ (ಪಿಟಿಐ): ಮಹಾರಾಷ್ಟ್ರದ ಪುಣೆ ಮೂಲದ ವ್ಯಕ್ತಿ ನಡೆಸುತ್ತಿರುವ ಹಿಂದೂ ಧರ್ಮದ ಕುರಿತ ವೆಬ್‌ಸೈಟ್‌ನಲ್ಲಿ ಭಾರತದಲ್ಲಿ ಬಾಂಬ್ ಸ್ಫೋಟ ಮತ್ತು ಪ್ರಧಾನಿ ನರೇಂದ್ರ ಮೋದಿ ಹತ್ಯೆ ಮಾಡುವುದಾಗಿ ವ್ಯಕ್ತಿಯೊಬ್ಬ ಕಮೆಂಟ್ ಹಾಕಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಆಗಸ್ಟ್ 6ರಂದು ವೆಬ್‌ಸೈಟ್‌ನಲ್ಲಿ ಕಮೆಂಟ್ ಪೋಸ್ಟ್ ಮಾಡಿದ ಎಂ.ಎ. ಮೊಖೀಮ್ ಎಂಬ ವ್ಯಕ್ತಿ ವಿರುದ್ಧ ಇಲ್ಲಿನ ಆಲಂಕಾರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಪುಣೆ ಜಿಲ್ಲೆಯ ನಿವಾಸಿ ರಾಹುಲ್ ದುಧಾನೆ ಹಿಂದೂ ಧರ್ಮದ ಕುರಿತ ಸತ್ಯಗಳಿಗೆ ಸಂಬಂಧಿಸಿದ ವೆಬ್‌ಸೈಟ್ ನಡೆಸುತ್ತಿದ್ದು, ವೆಬ್‌ಸೈಟ್ ಪರಿಶೀಲನೆ ವೇಳೆ ಮೊಖೀಮ್ ಅವರ ಕಮೆಂಟ್ ನೋಡಿದ್ದಾರೆ ಎಂದು ಉಪ ಪೊಲೀಸ್ ಆಯುಕ್ತ ಸುಹೇಲ್ ಶರ್ಮಾ ಹೇಳಿದ್ದಾರೆ.

‘ಈಗಾಗಲೇ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದೇವೆ. ಐ.ಪಿ ವಿಳಾಸ ಭಾರತದ ಹೊರಗಿನಿಂದ ಬಂದಂತೆ ತೋರುತ್ತದೆ. ಅದನ್ನು ಪರಿಶೀಲಿಸಲಾಗುತ್ತಿದೆ’ ಎಂದರು

ಗ್ರಾಮೀಣ ಭಾರತದಲ್ಲಿ ಪ್ರಾಥಮಿಕ ಶಿಕ್ಷಣ ಸಮೀಕ್ಷೆ ವರದಿ

‘ಪುತ್ರಿಯರು ಪದವಿ ಪಡೆಯಲಿ’

ನವದೆಹಲಿ (ಪಿಟಿಐ): ದೇಶದ ಗ್ರಾಮೀಣ ಪ್ರದೇಶದ ಪಾಲಕರ ಪೈಕಿ ಶೇ 78ರಷ್ಟು ಮಂದಿ ತಮ್ಮ ಪುತ್ರಿಯರು ಕನಿಷ್ಠಪಕ್ಷ ಪದವಿ ಇಲ್ಲವೇ ಅದಕ್ಕಿಂತ ಹೆಚ್ಚು ಶಿಕ್ಷಣ ಪಡೆಯಬೇಕು ಎಂಬ ಬಯಕೆ ಹೊಂದಿದ್ದಾರೆ ಎಂದು ಸಮೀಕ್ಷೆಯೊಂದು ತಿಳಿಸಿದೆ.

ಮಕ್ಕಳು ಎಷ್ಟು ಹೊತ್ತು ಸ್ಮಾರ್ಟ್‌ಫೋನ್‌ನೊಂದಿಗೆ ಸಮಯ ಕಳೆಯುತ್ತಾರೆ ಎಂಬದರ ಮೇಲೆಯೂ ಸಮೀಕ್ಷೆ ಬೆಳಕು ಚೆಲ್ಲಿದೆ. ಸಮೀಕ್ಷೆ ಭಾಗವಾಗಿದ್ದವರ ಪೈಕಿ ಶೇ 73ರಷ್ಟು ಮಕ್ಕಳು ದಿನದಲ್ಲಿ ಎರಡು ಗಂಟೆಗಳಿಗೂ ಕಡಿಮೆ ಅವಧಿಗೆ ಸ್ಮಾರ್ಟ್‌ಫೋನ್ ಬಳಸುತ್ತಾರೆ ಎಂಬುದು ತಿಳಿದುಬಂದಿದೆ.

‘ಗ್ರಾಮೀಣ ಭಾರತದಲ್ಲಿ ಪ್ರಾಥಮಿಕ ಶಿಕ್ಷಣದ ಸ್ಥಿತಿಗತಿ-2022’ ಎಂಬ ಸಮೀಕ್ಷೆ ವರದಿಯಲ್ಲಿ ಈ ಅಂಶಗಳಿವೆ. ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಬುಧವಾರ ಈ ವರದಿಯನ್ನು ಬಿಡುಗಡೆ ಮಾಡಿದರು.

20 ರಾಜ್ಯಗಳ ಗ್ರಾಮೀಣ ಪ್ರದೇಶದ 6,229 ಮನೆಗಳನ್ನು ಸಮೀಕ್ಷೆಗೆ ಒಳಪಡಿಸಲಾಗಿತ್ತು. ಟ್ರಾನ್ಸ್‌ಫಾರ್ಮಿಂಗ್ ರೂರಲ್ ಇಂಡಿಯಾ ಫೌಂಡೇಷನ್‌ನ (ಟಿಆರ್‌ಐಎಫ್) ಉಪಕ್ರಮವಾದ ಡೆವೆಲಪ್‌ಮೆಂಟ್ ಇಂಟೆಲಿಜೆನ್ಸ್ ಯುನಿಟ್(ಡಿಐಯು) ಹಾಗೂ ಸಂಬೋಧಿ ಪ್ರೈವೇಟ್ ಜಂಟಿಯಾಗಿ ಈ ಸಮೀಕ್ಷೆ ನಡೆಸಿದ್ದವು.

8 ಹಾಗೂ ಅದಕ್ಕಿಂತ ಹೆಚ್ಚಿನ ತರಗತಿಯಲ್ಲಿ ಓದುತ್ತಿರುವವರ ಪೈಕಿ ಶೇ 25.4ರಷ್ಟು ಮಕ್ಕಳು 2-4 ಗಂಟೆಗಳಷ್ಟು ಕಾಲ ಸ್ಮಾರ್ಟ್‌ಫೋನ್‌ನೊಂದಿಗೆ ಸಮಯ ಕಳೆಯುತ್ತಾರೆ. 1ರಿಂದ 3ನೇ ತರಗತಿವರೆಗಿನವರ ಪೈಕಿ ಶೇ 16.8ರಷ್ಟು ಮಕ್ಕಳು ಇಷ್ಟೇ ಸಮಯ ಸ್ಮಾರ್ಟ್‌ಫೋನ್ ಬಳಸುತ್ತಾರೆ ಎಂಬ ಅಂಶ ಸಮೀಕ್ಷೆಯಿಂದ ತಿಳಿದುಬಂದಿದೆ.

‘ಗಂಡು ಮತ್ತು ಹೆಣ್ಣುಮಕ್ಕಳು ತಾಂತ್ರಿಕ ಶಿಕ್ಷಣ, ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಸೇರಿದಂತೆ ಉನ್ನತ ಶಿಕ್ಷಣ ಪಡೆಯಬೇಕು ಎಂದು ಪಾಲಕರು ಬಯಸುತ್ತಾರೆ. ಶೇ 82ರಷ್ಟು ಪಾಲಕರು ಗಂಡು ಮಕ್ಕಳು ಪದವಿ ಹಾಗೂ ಹೆಚ್ಚಿನ ಶಿಕ್ಷಣ ಪಡೆಯಬೇಕು ಎಂಬ ಇಚ್ಛೆ ವ್ಯಕ್ತಪಡಿಸಿದ್ದಾರೆ’ ಎಂದು ಇದೇ ವರದಿಯಲ್ಲಿ ಹೇಳಲಾಗಿದೆ.

ಅಂಕಿ ಅಂಶ...

11% ಪ್ರಾಥಮಿಕ ಹಂತದಲ್ಲಿಯೇ ಶಾಲೆ ಬಿಟ್ಟ ಗಂಡುಮಕ್ಕಳ ಪ್ರಮಾಣ

35% ಪ್ರಾಥಮಿಕ ಹಂತದಲ್ಲಿಯೇ ಶಾಲೆ ಬಿಟ್ಟ ಹೆಣ್ಣುಮಕ್ಕಳ ಪ್ರಮಾಣ

75% ಪ್ರಾಥಮಿಕ ಹಂತದ ಶಿಕ್ಷಣ ಬಳಿಕ ಶಾಲೆ ಬಿಟ್ಟ ಗಂಡುಮಕ್ಕಳ ಪ್ರಮಾಣ

69% ಪ್ರಾಥಮಿಕ ಹಂತದ ಶಿಕ್ಷಣ ಬಳಿಕ ಶಾಲೆ ಬಿಟ್ಟ ಹೆಣ್ಣುಮಕ್ಕಳ ಪ್ರಮಾಣ

ವರದಿಯ ಪ್ರಮುಖ ಅಂಶಗಳು

- ಹೆಚ್ಚಿನ ವಿದ್ಯಾಭ್ಯಾಸದ ಸೌಲಭ್ಯ ಇರುವ ಶಾಲೆಗಳು ಗ್ರಾಮಗಳಲ್ಲಿ ಅಥವಾ ಗ್ರಾಮಗಳ ಹತ್ತಿರ ಇಲ್ಲದಿರುವುದು ಮಕ್ಕಳು ಶಾಲೆ ಅರ್ಧಕ್ಕೆ ಬಿಡಲು ಕಾರಣ
- ತಾಯಿಯ ಮೇಲ್ವಿಚಾರಣೆಯಲ್ಲಿ ವಿದ್ಯಾಭ್ಯಾಸ ಮಾಡುವ ಮಕ್ಕಳ ಪ್ರಮಾಣ ಶೇ 62.5ರಷ್ಟು
- ಮಕ್ಕಳನ್ನು ಟ್ಯೂಷನ್‌ಗೆ ಕಳುಹಿಸುವ ಪಾಲಕರ ಪ್ರಮಾಣ ಶೇ 38

‘ಸುಪ್ರೀಂ’ನ ಐವರು ಸದಸ್ಯರಿರುವ ನ್ಯಾಯಪೀಠ

‘ಸೇರ್ಪಡೆ ನಂತರ ಜಮ್ಮು–ಕಾಶ್ಮೀರ ಭಾರತದ ಅವಿಭಾಜ್ಯ ಅಂಗವಲ್ಲವೇ?’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಜಮ್ಮು–ಕಾಶ್ಮೀರ ಒಕ್ಕೂಟಕ್ಕೆ ಸೇರ್ಪಡೆಯಾಗಿದೆ ಎಂದರೆ, ಅದು ಸ್ವಾಭಾವಿಕವಾಗಿ ಭಾರತದ ಅವಿಭಾಜ್ಯ ಅಂಗವಾಗಿದೆ ಹಾಗೂ ಈ ವಿಷಯವಾಗಿ ಯಾವುದೇ ಕಾರಣಕ್ಕೂ ಹಿಂದೆ ಸರಿಯುವ ಅಗತ್ಯ ಇಲ್ಲ’ ಎಂದಾಗುವುದಿಲ್ಲವೇ ಎಂದು ಸುಪ್ರೀಂಕೋರ್ಟ್ ಬುಧವಾರ ಪ್ರಶ್ನಿಸಿತು.

ಸಂವಿಧಾನದ 370ನೇ ವಿಧಿಯಡಿ ಜಮ್ಮು–ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು ರದ್ದುಪಡಿಸಿದ್ದ ಕೇಂದ್ರದ ನಿರ್ಧಾರ ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆ ನಡೆಸಿದ ಮುಖ್ಯನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಐವರು ನ್ಯಾಯಮೂರ್ತಿಗಳಿರುವ ನ್ಯಾಯಪೀಠ ಈ ಪ್ರಶ್ನೆ ಮುಂದಿಟ್ಟಿತು.

‘ಸಂದರ್ಭಗಳಿಗೆ ತಕ್ಕಂತೆ ಹೊಂದಿಸಿಕೊಳ್ಳಬಹುದಾದ ಗುಣಲಕ್ಷಣವನ್ನು 370ನೇ ವಿಧಿ ಹೊಂದಿದೆ. ಅಲ್ಲದೇ,-ಯಾವುದೇ ವಿಧಿಯನ್ನು ಅನ್ವಯಿಸಿದಾಗ ಅದರ ಪರಿಣಾಮ ದೀರ್ಘಾವಧಿ ವರೆಗೆ ಇರಬೇಕು ಎಂಬಂತೆ ಸಾಂವಿಧಾನಿಕ ಅವಕಾಶಗಳನ್ನು ರೂಪಿಸಲಾಗಿದೆ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿತು.

ಅರ್ಜಿದಾರರೊಬ್ಬರ ಪರ ಹಾಜರಿದ್ದ ಹಿರಿಯ ವಕೀಲ ಜಾಫರ್ ಶಾ, ‘ರಾಜ್ಯ ವಿಧಾನಸಭೆಯು ಕಾನೂನುಗಳನ್ನು ರಚಿಸುವ ಪರಮಾಧಿಕಾರ ಹೊಂದಿದೆ’ ಎಂದು ವಾದಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಜಮ್ಮು–ಕಾಶ್ಮೀರ ಸೇರ್ಪಡೆಯಾಗಿದೆ ಎಂದರೆ ಅದು ಭಾರತ ಗಣರಾಜ್ಯದ ಸಂಪೂರ್ಣ ಹಾಗೂ ಅವಿಭಾಜ್ಯ ಅಂಗವಾಗಿದೆ ಎಂದರ್ಥ. ಮತ್ತೆ ಹಿಂದಿರುಗುವ ಪ್ರಶ್ನೆಯೆ ಇಲ್ಲ ಅಲ್ಲವೇ’ ಎಂದು ವಕೀಲ ಶಾ ಅವರನ್ನು ನ್ಯಾಯಪೀಠ ಕೇಳಿತು.

‘ಜಮ್ಮು–ಕಾಶ್ಮೀರ ಪ್ರದೇಶವನ್ನು ಭಾರತಕ್ಕೆ ವರ್ಗಾಯಿಸಲಾಗಿದೆ ಎಂದರೆ, ರಾಜ್ಯವು ಭಾರತದ ವಶದಲ್ಲಿದ್ದು, ಸಾರ್ವಭೌಮತೆಯನ್ನು ವರ್ಗಾವಣೆ ಮಾಡಿರಲಿಲ್ಲ ಎಂಬ ಅಭಿಪ್ರಾಯವೂ ಇದೆ ಎಂದು ಶಾ ಅವರು ಪ್ರತಿಕ್ರಿಯಿಸಿದರು

ಎಎಸ್‌ಐ ಸಮೀಕ್ಷೆ: ಮಾಧ್ಯಮ ಪ್ರಸಾರ ನಿಷೇಧಿಸಿದ ನ್ಯಾಯಾಲಯ

ವಾರಾಣಸಿ (ಪಿಟಿಐ): ಜ್ಞಾನವಾಪಿ ಮಸೀದಿ ಆವರಣದಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯು (ಎಎಸ್‌ಐ) ನಡೆಸುತ್ತಿರುವ ವೈಜ್ಞಾನಿಕ ಸಮೀಕ್ಷೆ ಕುರಿತು ಮಾಧ್ಯಮಗಳು ಸುದ್ದಿಪ್ರಸಾರ ಮಾಡುವುದನ್ನು ನಿಷೇಧಿಸಿ ಜಿಲ್ಲಾ ನ್ಯಾಯಾಲಯ ಬುಧವಾರ ಆದೇಶಿಸಿದೆ.

ಈ ಕುರಿತು, ಜ್ಞಾನವಾಪಿ ನಿರ್ವಹಣೆ ಮಾಡುವ ಅಂಜುಮಾನ್ ಇಂತೆಜಾಮಿಯಾ ಮಸೀದಿ ಸಮಿತಿ ಸಲ್ಲಿಸಿದ್ದ ಅರ್ಜಿ ವಿಚಾರಣೆಯನ್ನು ಜಿಲ್ಲಾ ನ್ಯಾಯಾಧೀಶ ಎ.ಕೆ.ವಿಶ್ವೇಶ ನಡೆಸಿದರು. ಜ್ಞಾನವಾಪಿ ಮಸೀದಿಯ ವೈಜ್ಞಾನಿಕ ಸಮೀಕ್ಷೆ ನಡೆಸುವಂತೆ ವಾರಾಣಸಿ ನ್ಯಾಯಾಲಯವು ಜುಲೈನಲ್ಲಿ ಎಎಸ್‌ಐಗೆ ನಿರ್ದೇಶನ ನೀಡಿತ್ತು. ಇದನ್ನು ಅಲಹಾಬಾದ್ ಹೈಕೋರ್ಟ್ ಮತ್ತು ನಂತರ ಸುಪ್ರೀಂ ಕೋರ್ಟ್ ಎತ್ತಿಹಿಡಿದವು.

ಮಸೀದಿ ಸಮಿತಿಯ ಜಂಟಿ ಕಾರ್ಯದರ್ಶಿ ಸೈಯದ್ ಮೊಹಮ್ಮದ್ ಯಾಸಿನ್, ‘ಮಸೀದಿ ಆವರಣದಲ್ಲಿ ಎಎಸ್‌ಐ ಕಾರ್ಯ ನಡೆಯುತ್ತಿದೆ. ಸಮೀಕ್ಷೆ ತಂಡ ಅಥವಾ ಅಧಿಕಾರಿಗಳು ಇಲ್ಲಿಯವರೆಗೆ ಯಾವುದೇ ಹೇಳಿಕೆ ನೀಡಿಲ್ಲ. ಆದರೆ, ಮಾಧ್ಯಮಗಳು ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ದಾರಿತಪ್ಪಿಸುವ ಸುದ್ದಿ ಗಳನ್ನು ನಿರಂತರ ಪ್ರಸಾರ ಮಾಡಲಾಗುತ್ತಿದೆ. ಇದು ಜನರ ಮನಸ್ಸಿನ ಮೇಲೆ ತಪ್ಪು ಪರಿಣಾಮ ಬೀರುತ್ತದೆ ಮತ್ತು ಅಂತಹ ಸುದ್ದಿಗಳನ್ನು ಪ್ರಕಟಿಸುವುದನ್ನು ನಿಲ್ಲಿಸಬೇಕು’ ಎಂದು ನ್ಯಾಯಪೀಠಕ್ಕೆ ತಿಳಿಸಿದರು.

‘ಮಸೀದಿಯ ನೆಲಮಾಳಿಗೆಯಲ್ಲಿ ವಿಗ್ರಹಗಳು, ತ್ರಿಶೂಲ ಪತ್ತೆಯಾಗಿವೆ ಎಂದು ವದಂತಿಗಳು ಹರಡಿದ್ದು, ಇದು ಮುಸ್ಲಿಮರ ಭಾವನೆಗಳಿಗೆ ನೋವುಂಟು ಮಾಡಿದೆ’ ಎಂದು ಯಾಸಿನ್ ಹೇಳಿದ್ದರು.

ನವೋದಯ ವಿದ್ಯಾಲಯ ಸಮಿತಿ
ಶಿಕ್ಷಣ ಸಚಿವಾಲಯದ ಅಧೀನ ಸ್ವಾಯತ್ತ ಸಂಸ್ಥೆ
ಶಾಲಾಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ
ಭಾರತ ಸರ್ಕಾರ

G20 भारत 2023 INDIA

ಅಧಿಸೂಚನೆ

VI ನೇ ತರಗತಿ JNVST 2024ನೇ ಸಾಲಿಗಾಗಿ ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸಲು ವಿಸ್ತರಣೆಗೆ ಕೊನೆಯ ದಿನಾಂಕ

ಜವಾಹರ ನವೋದಯ ವಿದ್ಯಾಲಯಗಳಲ್ಲಿ (2024–25ನೇ ಶೈಕ್ಷಣಿಕ ಸಾಲಿಗೆ) 6ನೇ ತರಗತಿಯ ದಾಖಲಾತಿಗಾಗಿ ಆಯ್ಕೆ ಪರೀಕ್ಷೆಯ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಪ್ರಕ್ರಿಯೆಯು ಪ್ರಗತಿಯಲ್ಲಿದೆ. ಆಡಳಿತಾತ್ಮಕ ಕಾರಣಗಳಿಂದಾಗಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕವನ್ನು 17ನೇ ಆಗಸ್ಟ್ 2023ರವರೆಗೆ ವಿಸ್ತರಿಸಲಾಗಿದೆ. ಅಭ್ಯರ್ಥಿಗಳು **www.navodaya.gov.in** ಅಥವಾ **http://cbseitms.rcil.gov.in/nvs** ರ ವೆಬ್‌ಸೈಟ್ ಮೂಲಕ ಉಚಿತವಾಗಿ ಅರ್ಜಿ ಸಲ್ಲಿಸಬಹುದಾಗಿದೆ.

ನವೋದಯ ವಿದ್ಯಾಲಯ ಸಮಿತಿ ಪ್ರಕಟಣೆ

SANJAY GANDHI INSTITUTE OF TRAUMA AND ORTHOPAEDICS
(Government of Karnataka Autonomous Institution)
Byrasandra, Jayanagar East, Bangalore-560 011. Ph: 080-2656 4516
Telefax: 080-2656 5222 E-mail: sitodirector@gmail.com

No: SGIT&O/Fellowship/ADM/23/2023-24 Date: 09.08.2023

CORRIGENDUM

Applications are invited from NMC/MCI recognized MS/MD/DNB Candidates for **Fellowship Programmes in Sports Injury and Arthroscopy, Spine Surgery, Advanced Orthopaedic Trauma, Arthroplasty, Maxillofacial Traum, Ultrasound & Image Guided Advanced Nerve Blocks** at Sanjay Gandhi Institute of Trauma and Orthopaedics for the Academic Year 2023-24.

The Fellowship applications were invited in the Newspapers on 03.08.2023. The Last date has been extended from **10.08.2023 to 14.08.2023** upto 4.00 PM.

The objective type (MCQ) Entrance Examination will be conducted between **17.08.2023 to 22.08.2023** with prior intimation to the Candidates. Separate test will be conducted for four Orthopaedic speciality over 02 days. Other conditions same.

Sd/- Director

DIPR/CP/859/AAA/2023-24

REVENUE DEPARTMENT
Office of the Regional Commissioner, Bengaluru Division, Revenue Department and Nodal Officer, Ex-Officio Secretary (Economic Offences}
2nd Floor, BMTC Building, K. H. Road, Shanthinagar, Bengaluru - 27. Ph.: 080-2210 9665 E-mail: reb27bangalore@gmail.com

No. : ADM(1)CR/01/2023-24 Date : 03-08-2023

TENDER NOTICE

The REGIONAL COMMISSIONER, BENGALURU DIVISION, REVENUE DEPARTMENT AND NODAL OFFICER, EX-OFFICIO SECRETARY (ECONOMIC OFFENCES) **(hereafter, RC Bangalore)** hereby invites tenders under e-tendering system from **Registered Manufacturers and Authorised Dealers in Karnataka** for supply of MATERIALS & STATIONERY FOR RC Bangalore, as detailed in Annexure-I of this Tender, as per the Karnataka Transparency in Public Procurement Act 1999 and Rules 2000, there under **(Under Two Cover System). Only those who have supplied similar items (80% of the quantity of this tender) to Govt. Departments, Institutions, Autonomous Bodies in last 2 years need to apply. Those with Annual Turnover for Last Three years i.e., 2019-20, 2020-21 & 2021-22, not less than Rs. 20 Lakhs per annum or total cumulative turnover Rs. 50 Lakhs for Last Three Years are eligible to participate in this Tender.**

1) The Bidder is expected to carefully examine the specifications and terms & conditions of the Tender. Failure to furnish all information required in the Tender or submission of a bid not substantially responsive to the Tender in every respect will be at the Bidder's risk and may result in the rejection of the bid.
2) Tenderer / Bidder should submit the proposal on the **http://eproc.karnataka.gov.in.** The first part will consist of Eligibility Proposal and the second part will consist of Financial Proposal. Complete bid document terms and conditions and tender form containing all the details have been published on the websites **http://eproc.karnataka.gov.in**
3) Late submission of bids will not be permitted by the e-Tendering System.
4) Last minute submission of bids should be avoided. As such, Tenderer will not be responsible for any failures in submission of bids.
5) Incomplete or Conditional bids will be summarily rejected.
6) For any of the assistance regarding participation in the e-Tender contact ARC in RC Office, 24 Floor, BMTC Building, K.H. Road, Shanthinagar Bengaluru - 560 027, E-mail : rcb27bangalore@gmail.com.

Schedule of Events : 1) Commencement of download of e-Tender Form from Website : https://eproc.karnataka.gov.in : 08-08-2023, 2) Last Date for Queries on or before : 11-08-2023 till 5.00 p.m., 3) Per-Bid Meeting 14-08-2023 at 11.00 a.m., 4) Last Date for uploading of Tender in E-procurement Platform on or before : 21-08-2023 till 5.00 p.m., 5) Opening of Technical Bid : 24-08-2023 till 12.00 p.m., 6) Date of Original Document Verification : Will be done on the uploaded Documents at E-portal 25-08-2023, 7) Submission of Samples : 23-08-2023 at 11.00 a.m., 8) Opening of Financial Bid : Will be intimated. 9) Approximate Value of Tender : Rs. 12.00 Lakhs.

For any Query Contact : RC Office, 2nd Floor, BMTC Building, K. H. Road, Shanthinagar, Bengaluru - 560 027. E-mail : rcb27bangalore@gmail.com. Phone : 080-2210 9665, 2210 9675,

Details regarding Tender Terms and Conditions are available of **E-procurement Portal : https://kppp.karnatak.gov.in / portal / portal-home.**

Sd/- Regional Commissioner, Bengaluru Division, Revenue Department And Nodal Officer, Ex-Officio Secretary (Economic Offences)

DIPR/Urban/817/Manipal/2023-24

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಯಾದಗಿರಿ
Email: dcydg123@gmail.com, ದೂರವಾಣಿ: 08473–253700 : ಫ್ಯಾಕ್ಸ್ 253701

ಸಂ/ಕಂ/ಅಟಲ್‌ಜೀ/01/2023–2024 ದಿನಾಂಕ:08.08.2023

–: ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ :–

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು 2000 ರಡಿಯಲ್ಲಿ ಕಂದಾಯ ಇಲಾಖೆಯ ವ್ಯಾಪ್ತಿಯಲ್ಲಿ, ಜಿಲ್ಲಾಧಿಕಾರಿಗಳ ಅನುದಾನದಡಿ ಡೇಟಾ ಎಂಟ್ರಿ ಆಪರೇಟರ್‌ಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಒದಗಿಸಲು ಅರ್ಹ ಮಾನವ ಸಂಪನ್ಮೂಲ ಸಂಸ್ಥೆ (Man Power Agency) ಯನ್ನು ಇ ಪ್ರಕ್ಯೂರ್‌ಮೆಂಟ್ ಮುಖಾಂತರ ಗುರುತಿಸಲು, ಕೆ.ಸಿ–2ರ ಪ್ರಕಾರ ಸಂಕ್ಷಿಪ್ತ ಟೆಂಡರ್ ಕರೆಯಲಾಗಿದೆ. ಹೆಚ್ಚಿನ ವಿವರಗಳಿಗಾಗಿ www.kppp.karnataka.gov.in ಮುಖಾಂತರ ಆಹ್ವಾನಿಸಲಾಗಿದೆ.

1) ಟೆಂಡರ್ ಬಿಡ್ ಸ್ವೀಕೃರಿಸುವ ದಿನಾಂಕ: 08–08–2023 ರಂದು ಸಮಯ 01.00 ರಿಂದ 2) ಟೆಂಡರ್ ಬಿಡ್‌ಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 23–08–2023 ರಂದು ಸಾಯಂಕಾಲ 05–30 ಗಂಟೆಯವರೆಗೆ 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 25–08–2023 ರಂದು ಬೆಳಿಗ್ಗೆ 11–30 ಗಂಟೆಗೆ 4) ಆರ್ಥಿಕ್ ಬಿಡ್ ತೆರೆಯುವ ದಿನಾಂಕ:29–08–2023 ರಂದು ಬೆಳಿಗ್ಗೆ 11–30 ಗಂಟೆಗೆ

ಹೆಚ್ಚಿನ ವಿವರಗಳಿಗಾಗಿ www.kppp.karnataka.gov.in ಮುಖಾಂತರ ಪಡೆದುಕೊಳ್ಳಬಹುದಾಗಿದ್ದು. ವಿವರ ಕೆಳಕಂಡತಡ ಇರುತ್ತದೆ.

ವಿವರ: Providing 42 Data Entry Operators for Atalji Janasnehi Kendras in Yadgir District

ಸಹಿ/– ಅಪರ ಜಿಲ್ಲಾಧಿಕಾರಿಗಳು, ಯಾದಗಿರಿ.

ವಾ.ಸಾ.ಸಂ.ಇ/ಯಾದಗಿರಿ/93/ಕೆ.ಎಸ್.ಎಂ.ಸಿ.ಎ/2023–24

ಕರ್ನಾಟಕ ಸರ್ಕಾರ
ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಾಲಭವನ, ಡಿಸಿ ಕಂಪೌಂಡ್, ಧಾರವಾಡ.
ಇಮೇಲ್: deputydirector_dwd@rediffmail.com ದೂರವಾಣಿ : 0836–2447850

ಸಂ:ಉನಿಧಾ:ಮಮಅಇ/ಹೊ.ಗು/ಈ–ಟೆಂಡರ್/2023–24 ದಿನಾಂಕ : 08.08.2023

ಇ–ಟೆಂಡರ್ ಪ್ರಕಟಣೆ E-PROCUREMENT TENDER NOTIFICATION (ದ್ವಿ ಲಕೋಟೆ ಪದ್ಧತಿ)

ಧಾರವಾಡ ಜಿಲ್ಲೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿ ಕಾರ್ಯ ನಿರತವಾಗಿರುವ ತಾಲೂಕ ಶಿಶು ಅಭಿವೃದ್ಧಿ ಯೋಜನೆಗಳಿಗೆ ಹಾಗೂ ಜಿಲ್ಲಾ ಕಚೇರಿಗೆ ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆಯಡಿ ತಲಾ ಒಬ್ಬ ಡಾಟಾ ಎಂಟ್ರಿ ಆಪರೇಟರ್ ಹಾಗೂ ಮೆಸೆಂಜರ್ ಸಿಬ್ಬಂದಿಗಳನ್ನು ಹೊರ ಸಂಪನ್ಮೂಲ ಏಜೆನ್ಸಿಯ ಮುಖಾಂತರ ಪಡೆಯುವ ಬಗ್ಗೆ

Calendar of Events

(1) ಟೆಂಡರ್ ಪ್ರಕಟಣೆ ಸಂಖ್ಯೆ & ದಿನಾಂಕ : ಸಂ:ಉನಿಧಾ:ಮಮಅಇ/ಹೊ.ಗು/ಈಟೆಂಡರ್/2023–24 ದಿನಾಂಕ : **08.08.2023** (2) ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ ರೂ. **34,00,000/–** (3) ಇ.ಎಂ.ಡಿ ಮೊತ್ತ ರೂ. **68,000/–** (4) e-portal ನಲ್ಲಿ ಟೆಂಡರ್ ದಸ್ತಾವೇಜುಗಳನ್ನು ಸಲ್ಲಿಸಬಹುದಾದ ಪ್ರಾರಂಭದ ದಿನಾಂಕ : **09.08.2023** (5) e-portal ನಲ್ಲಿ ಟೆಂಡರ್ ಲಕೋಟೆಗಳನ್ನು ಸಲ್ಲಿಸುವ ಅಂತಿಮ ದಿನಾಂಕ ಮತ್ತು ಸಮಯ : **23.08.2023** ಸಂಜೆ 5.00 ಗಂಟೆಗೆ (6) e-portalನ ಟೆಂಡರ್ ದಾಖಲಾತಿಗಳನ್ನು & ತಾಂತ್ರಿಕ ಲಕೋಟೆಗಳನ್ನು ಪರಿಶೀಲಿಸುವ ದಿನಾಂಕ ಮತ್ತು ವೇಳೆ : **25.08.2023** ಬೆಳಗ್ಗೆ 10.00 ಗಂಟೆಗೆ **ಉಪನಿರ್ದೇಶಕರ ಕಛೇರಿ, ಬಾಲಭವನ, ಡಿಸಿ ಕಂಪೌಂಡ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಧಾರವಾಡ** (ಸ್ಥಳ ಮತ್ತು ದಿನಾಂಕ ಬದಲಾವಣೆಗೆ ಒಳಪಟ್ಟಿರುತ್ತದೆ) (7) e-portal ನಲ್ಲಿ ಆರ್ಥಿಕ ಲಕೋಟೆಗಳನ್ನು ತೆರೆಯುವ ದಿನಾಂಕ : **27.08.2023** ಬೆಳಗ್ಗೆ 11.00 ಗಂಟೆಗೆ **ಉಪನಿರ್ದೇಶಕರ ಕಛೇರಿ, ಬಾಲಭವನ, ಡಿಸಿ ಕಂಪೌಂಡ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಧಾರವಾಡ** (ಸ್ಥಳ ಮತ್ತು ದಿನಾಂಕ ಬದಲಾವಣೆಗೆ ಒಳಪಟ್ಟಿರುತ್ತದೆ) (8) ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ಮತ್ತು ದೂರವಾಣಿ ಸಂಖ್ಯೆ : Website : **https://kppp.karnataka.gov.in ಉಪನಿರ್ದೇಶಕರ ಕಛೇರಿ, ಬಾಲಭವನ, ಡಿಸಿ ಕಂಪೌಂಡ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಧಾರವಾಡ**

ಸಹಿ/– ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಧಾರವಾಡ

ವಾಸಸಂಇ/ಧಾ/ಕೆಎಸ್‌ಎಂಸಿಎ/160/2023–24

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ
ಉಗ್ರಾಣ ಮತ್ತು ಖರೀದಿ ಇಲಾಖೆ, ಕೇಂದ್ರ ಕಚೇರಿ ಸಾರಿಗೆ ಸದನ, ಮುಖ್ಯ ರಸ್ತೆ ಕಲಬುರಗಿ–02
ದೂರವಾಣಿ ಮತ್ತು ಫ್ಯಾಕ್ಸ್: 08472– 224428, ಮೊಬೈಲ್: 7760686172(ಉಖನಿ), 7760992029 (ಉಅ), ಇ–ಮೇಲ್:cospnekrtc@gmail.com

ಸಂ. ಕಕರಸಾ/ಕೇಕ/ಉ&ಮಖನಿ/ 04 /2023–24 ದಿನಾಂಕ: 08.08.2023

ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೋಡ್‌ನಲ್ಲಿ ಮಾತ್ರ)

ಈ ಕೆಳಗಿನ ವಸ್ತುಗಳನ್ನು ಪೂರೈಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (ಪ್ರಿ ಕ್ವಾಲಿಫಿಕೇಶನ್ ಮತ್ತು ಕಮರ್ಷಿಯಲ್) ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

1) ಸಂಖ್ಯೆ ಮತ್ತು ದಿನಾಂಕ : **ಜಿ–04/23–24 ದಿ. 08.08.23,** ವಸ್ತುಗಳ ವಿವರ: Identifying agency for providing IT staff services on contract basis to KKRTC, ಟೆಂಡರ್ ಮೌಲ್ಯ:**ರೂ. 52.00 ಲಕ್ಷಗಳಲ್ಲಿ**
2) ಸಂಖ್ಯೆ ಮತ್ತು ದಿನಾಂಕ : **ಜಿ–05/23–24 ದಿ. 08.08.23,** ವಸ್ತುಗಳ ವಿವರ : Supply of 10.00x20 TTF sets to Kalaburagi-1 & 2, Koppal, Bellary, & Hospete division, ಟೆಂಡರ್ ಮೌಲ್ಯ: **ರೂ. 80.00 ಲಕ್ಷಗಳಲ್ಲಿ**
3) ಸಂಖ್ಯೆ ಮತ್ತು ದಿನಾಂಕ : **ಜಿ–06/23–24 ದಿ. 08.08.23,** ವಸ್ತುಗಳ ವಿವರ : Identifying agency for providing consultancy services for conducting detailed survey and preparation of vision 2030 document for KKRTC, ಟೆಂಡರ್ ಮೌಲ್ಯ : **ರೂ. 80.00 ಲಕ್ಷಗಳಲ್ಲಿ**
4) ಟೆಂಡರ್‌ನಲ್ಲಿ ಪಾಲ್ಗೊಳ್ಳಲು ಕೊನೆಯ ದಿನಾಂಕ : **25.08.2023 ಸಮಯ: 15:30 ಗಂಟೆ**

ಟೆಂಡರ್, ನೊಂದಣಿ, ಟೆಂಡರ್ ಫಾರ್ಮ ದಾಖಲಾತಿಗಳ ಎಲ್ಲಾ ವಿವರಗಳು **https://kppp.karnataka.gov.in/#/portal/portal-home** ನಲ್ಲಿ ಲಭ್ಯವಿದೆ. ಅಗತ್ಯವಿದ್ದರೆ ಹೆಚ್ಚಿನ ಮಾಹಿತಿಗಾಗಿ cospnekrtc@gmail.com ಅಥವಾ support@eprochelpdesk.com ಗೆ ಇ–ಮೇಲ್ ಮುಖಾಂತರ ಸಂಪರ್ಕಿಸಬಹುದಾಗಿದೆ. ಪರಿಭಾಷೆಯಲ್ಲಿನ ಬದಲಾವಣೆಗಳಿಗೆ ಸಂಬಂಧಿಸಿದಂತೆ ಯಾವುದೇ ಅಡೆಂಡಮ್/ಕೊರಿಜೆಂಡಮ್ ಮತ್ತು ಟೆಂಡರ್ ಷರತ್ತು ಮತ್ತು ನಿಬಂಧನೆಗಳು, ಸ್ಪೆಸಿಫಿಕೇಶನ್ ಮತ್ತು ಘಟನೆಗಳ ಕ್ಯಾಲೆಂಡರ್ ಇತ್ಯಾದಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ ಅಪ್ಲೋಡ್ ಮಾಡಲಾಗುತ್ತದೆ.

ಸಹಿ/– ಉಗ್ರಾಣ ಮತ್ತು ಖರೀದಿ ನಿಯಂತ್ರಕರು (ಟೆಂಡರ್ ಆಹ್ವಾನಿಸುವ ಪ್ರಾಧಿಕಾರಸ್ಥರು)

ವಾ.ಸಾ.ಸಂ.ಇ/ಕಲಬುರಗಿ/172/ಕೆ.ಎಸ್.ಎಂ.ಸಿ.&ಎ/2023–24

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ
(ಕೆಪಿಪಿ–ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಅರ್ಹ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಮುಖ್ಯ ಅಭಿಯಂತರರ ಕಚೇರಿ (ದಕ್ಷಿಣ), 7ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560009

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ (ರೂ.)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
1	ದಕ್ಷಿಣ ಪಶ್ಚಿಮ–2	ಬೆಂಜಮಂ/ಕಾನಿಅ(ದಪ–2)/ತಾಂಅ/ಪಿಬಿ/765/2023–24, ದಿನಾಂಕ: 05.08.2023	ರೂ.35,77,475/– / ರೂ.71,600/–	19.08.2023ರ ಸಂಜೆ 4:00 ಗಂಟೆಯವರೆಗೆ	21.08.2023ರ ಮಧ್ಯಾಹ್ನ 3.00 ಗಂಟೆಯ ನಂತರ
2		ಬೆಂಜಮಂ/ಕಾನಿಅ(ದಪ–2)/ತಾಂಅ/ಪಿಬಿ/771/2023–24, ದಿನಾಂಕ: 05.08.2023	ರೂ.24,61,619/– / ರೂ.50,000/–		
3		ಬೆಂಜಮಂ/ಕಾನಿಅ(ದಪ–2)/ತಾಂಅ/ಪಿಬಿ/773/2023–24, ದಿನಾಂಕ: 05.08.2023	ರೂ.26,34,521/– / ರೂ.52,700/–		
4		ಬೆಂಜಮಂ/ಕಾನಿಅ(ದಪ–2)/ತಾಂಅ/ಪಿಬಿ/775/2023–24, ದಿನಾಂಕ: 05.08.2023	ರೂ.54,98,555/– / ರೂ.1,10,000/–		
5		ಬೆಂಜಮಂ/ಕಾನಿಅ(ದಪ–2)/ತಾಂಅ/ಪಿಬಿ/781/2023–24, ದಿನಾಂಕ: 05.08.2023	ರೂ.24,18,944/– / ರೂ.50,000/–		
					ಸಹಿ/– ಕಾರ್ಯ ನಿರ್ವಾಹಕ ಅಭಿಯಂತರರು (ದಕ್ಷಿಣ ಪಶ್ಚಿಮ–2)
	ಮುಖ್ಯ ಅಭಿಯಂತರರ ಕಚೇರಿ (ಉತ್ತರ), 2ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560009				
6	ಉತ್ತರ–2	ಬೆಂಜಮಂ/ಇಎನ್‌ಟಿಇ/ಸಅ–1/474/2023–24, ದಿನಾಂಕ: 02.08.2023 (2ನೇ ಕರೆ)	ರೂ.5,29,927/– / ರೂ.13,300/–	24.08.2023ರ ಮಧ್ಯಾಹ್ನ 3:00 ಗಂಟೆಯವರೆಗೆ	25.08.2023ರ ಸಂಜೆ 4.00 ಗಂಟೆಯ ನಂತರ
					ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ–2)

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತ ಮಾಹಿತಿಯನ್ನು **https://kppp.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

DIPR/CP/BCPL/844/2023-24

ಸುಭಾಷಿತ

ಪ್ರಾಮಾಣಿಕರಿಗೆ ಜೀವನವೇ ಒಂದು ಹೋರಾಟ. ಆದರೂ ಅದರಿಂದ ವಿಮುಖರಾಗಬಾರದು.

–ಸ್ವಾಮಿ ವಿವೇಕಾನಂದ

ಮಣಿಪುರ: ಅನಿವಾರ್ಯವಾದ 'ಸುಪ್ರೀಂ' ಮಧ್ಯಪ್ರವೇಶ

ಗಲಭೆಪೀಡಿತ ಮಣಿಪುರ ರಾಜ್ಯದಲ್ಲಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರಲು ನ್ಯಾಯಾಂಗ ಮಧ್ಯಪ್ರವೇಶ ಮಾಡಬೇಕು ಎಂದು ಕೋರಿ ಸಲ್ಲಿಕೆಯಾಗಿರುವ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಹಲವು ಕ್ರಮಗಳನ್ನು ಪ್ರಕಟಿಸಿದೆ. ಸುಪ್ರೀಂ ಕೋರ್ಟ್ ಹೇಳಿರುವಂತೆ ಈ ಕ್ರಮಗಳು ಮಣಿಪುರಕ್ಕೆ ಆಗಿರುವ 'ಗಾಯವನ್ನು ವಾಸಿಮಾಡುವ' ಉದ್ದೇಶ ಹೊಂದಿವೆ. ಮಣಿಪುರದಲ್ಲಿ ಮೂರು ತಿಂಗಳಿನಿಂದ ಹಿಂಸಾಚಾರ ನಡೆಯುತ್ತಿದೆ. ಅಲ್ಲಿನ ಸಮಾಜವು ಬಹಳ ತೀವ್ರವಾಗಿ ಗಾಸಿಗೊಂಡಿದೆ. ಸಮಾಜದಲ್ಲಿ ಒಡಕು ಉಂಟಾಗಿದೆ. ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ವಿರೋಧ ಪಕ್ಷಗಳು ಮಂಡಿಸಿರುವ ಅವಿಶ್ವಾಸ ನಿರ್ಣಯ ಕುರಿತ ಚರ್ಚೆಯು ಸಂಸತ್ತಿನಲ್ಲಿ ಶುರುವಾಗುವ ಒಂದು ದಿನ ಮೊದಲು ಕೋರ್ಟ್ ಈ ಕ್ರಮಗಳನ್ನು ಪ್ರಕಟಿಸಿದೆ. ಅವಿಶ್ವಾಸ ನಿರ್ಣಯಕ್ಕೆ ಸಂಬಂಧಿಸಿದ ಚರ್ಚೆಗಳಲ್ಲಿ ಮಣಿಪುರದ ಬಗ್ಗೆಯೂ ಪ್ರಸ್ತಾಪ ಆಗಿದೆ. ಕೋರ್ಟ್ ಪ್ರಕಟಿಸಿರುವ ಕ್ರಮಗಳು, ಮಣಿಪುರದ ಪರಿಸ್ಥಿತಿಯನ್ನು ಅಲ್ಲಿನ ಸರ್ಕಾರ ಹಾಗೂ ಕೇಂದ್ರ ಸರ್ಕಾರ ನಿಭಾಯಿಸಿದ ರೀತಿಯನ್ನು ಕುರಿತು ಕೋರ್ಟ್ ಹೇಳುತ್ತಿರುವಂತೆ ಇದೆ. ತನ್ನ ತೀರ್ಮಾನವು ಕಾನೂನಿನ ಬಗ್ಗೆ ಮಣಿಪುರದ ಜನರಲ್ಲಿ ಮತ್ತೆ ವಿಶ್ವಾಸ ಮೂಡುವಂತೆ ಮಾಡುವ ಉದ್ದೇಶವನ್ನು ಹೊಂದಿದೆ ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಮೂವರು ನ್ಯಾಯಮೂರ್ತಿಗಳನ್ನು ಒಳಗೊಂಡ ನ್ಯಾಯಪೀಠ ಹೇಳಿದೆ.

ಮಣಿಪುರದ ಪರಿಸ್ಥಿತಿಯು ಕಾನೂನು ಮತ್ತು ಸುವ್ಯವಸ್ಥೆಯ ಆಚೆಗೂ ಚಾಚಿಕೊಂಡಿದೆ

ರಾಜ್ಯದಲ್ಲಿ ವರದಿಯಾಗಿರುವ ಹಲವು ಪ್ರಕರಣಗಳ ಬಗ್ಗೆ ನಿಷ್ಪಕ್ಷಪಾತ, ಸೂಕ್ತವಾದ ತನಿಖೆ ಆಗುವಂತೆ ಮಾಡುವ ಉದ್ದೇಶದಿಂದ ಕೋರ್ಟ್ ಹಲವು ನಿರ್ದೇಶನಗಳನ್ನು ನೀಡಿದೆ. ಪರಿಹಾರ ಕ್ರಮಗಳು ಹಾಗೂ ಪುನರ್ವಸತಿ ಕ್ರಮಗಳ ಮೇಲ್ವಿಚಾರಣೆ ನಡೆಸಲಾಗುತ್ತದೆ, ಮಧ್ಯಪ್ರವೇಶ ಮಾಡಲಾಗುತ್ತದೆ ಹಾಗೂ ಕ್ರಮಗಳ ಮೇಲೆ ನಿಗಾ ಇರಿಸಲಾಗುತ್ತದೆ ಎಂದು ಕೋರ್ಟ್ ಹೇಳಿದೆ. ಮಣಿಪುರದಲ್ಲಿ ದಾಖಲಾದ ಪ್ರಥಮ ಮಾಹಿತಿ ವರದಿಗಳನ್ನು (ಎಫ್‌ಐಆರ್) ಸುಪ್ರೀಂ ಕೋರ್ಟ್, ತನಿಖಾ ಸಂಸ್ಥೆ ಸಿಬಿಐಗೆ ವರ್ಗಾಯಿಸಿದೆ, ಹಿರಿಯ ಅಧಿಕಾರಿಗಳ ನೇತೃತ್ವದಲ್ಲಿ ವಿಶೇಷ ತನಿಖಾ ತಂಡಗಳನ್ನು (ಎಸ್‌ಐಟಿ) ರಚಿಸಿದೆ, ಪುನರ್ವಸತಿ ಮತ್ತು ಪರಿಹಾರ ಕಾರ್ಯಗಳ ಉಸ್ತುವಾರಿಗೆ ವಿವಿಧ ಹೈಕೋರ್ಟ್‌ಗಳ ಮೂವರು ನಿವೃತ್ತ ಮಹಿಳಾ ನ್ಯಾಯಮೂರ್ತಿಗಳು ಇರುವ ಸಮಿತಿಯೊಂದನ್ನು ರಚಿಸಿದೆ. ಸಿಬಿಐ ತಂಡದಲ್ಲಿ ಮಣಿಪುರದವರಲ್ಲದ ಅಧಿಕಾರಿಗಳು ಇರಬೇಕು ಎಂದು ನಿರ್ದೇಶನ ನೀಡಿದೆ. ಸಿಬಿಐಗೆ ವಹಿಸಿರುವ ಪ್ರಕರಣಗಳ ಉಸ್ತುವಾರಿಗೆ ನಿವೃತ್ತ ಐಪಿಎಸ್ ಅಧಿಕಾರಿಯೊಬ್ಬರು ಇರಬೇಕು ಎಂದು ಹೇಳಿದೆ. ಎಸ್‌ಐಟಿ ವ್ಯಾಪ್ತಿಗೆ ಬರುವ ಪ್ರಕರಣಗಳ ವಿಚಾರಣೆಯು ಮಣಿಪುರದ ಹೊರಗಿನ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರ ಮೇಲ್ವಿಚಾರಣೆಯಲ್ಲಿ ನಡೆಯಬೇಕು ಎಂದು ಸೂಚಿಸಿದೆ.

ಈ ಕ್ರಮಗಳೆಲ್ಲ ಪ್ರಕರಣಗಳ ತನಿಖೆಯಲ್ಲಿ ಪಾರದರ್ಶಕತೆಯನ್ನು ಕಾಯ್ದುಕೊಳ್ಳುವ, ತನಿಖೆ ನಿಷ್ಪಕ್ಷಪಾತವಾಗಿ ನಡೆಯಬೇಕು ಎನ್ನುವ ಉದ್ದೇಶ ಹೊಂದಿವೆ. ಮಣಿಪುರದ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ಅಲ್ಲಿನ ಅಧಿಕಾರಿ ವರ್ಗ ತೋರಿದ ಉಡಾಫೆ ಧೋರಣೆಯು ಕಳವಳ ಮೂಡಿಸುವಂಥದ್ದು. ಕುಕಿ ಬುಡಕಟ್ಟು ಸಮುದಾಯಕ್ಕೆ ಸೇರಿದ ಇಬ್ಬರು ಮಹಿಳೆಯರನ್ನು ಬೆತ್ತಲಾಗಿಸಿ, ಮೆರವಣಿಗೆ ನಡೆಸಿ, ಅವರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ಪ್ರಕರಣವು ದೇಶವನ್ನು ಆಘಾತಕ್ಕೆ ನೂಕಿದೆ. ಪೊಲೀಸರು ಅಲ್ಲಿ ಪರಿಸ್ಥಿತಿಯ ಮೇಲೆ ಯಾವ ನಿಯಂತ್ರಣವನ್ನೂ ಹೊಂದಿಲ್ಲ, ಆ ರಾಜ್ಯದಲ್ಲಿ ಸಾಂವಿಧಾನಿಕ ವ್ಯವಸ್ಥೆಯು ಕುಸಿದುಬಿದ್ದಿದೆ ಎಂದು ಸುಪ್ರೀಂ ಕೋರ್ಟ್ ಕಳೆದ ವಾರವಷ್ಟೇ ಹೇಳಿದೆ. ಕೋರ್ಟ್ ಕೈಗೊಂಡಿರುವ ಕ್ರಮಗಳು, ರಾಜ್ಯದ ಕಾನೂನು ಸುವ್ಯವಸ್ಥೆಯ ಸೋಲಿನ ಕಾರಣದಿಂದಾಗಿ ಅಲ್ಲಿನ ಜನರಿಗೆ ನ್ಯಾಯ ನಿರಾಕರಣೆ ಆಗಬಾರದು ಎಂಬ ಉದ್ದೇಶವನ್ನು ಹೊಂದಿರುವಂತಿವೆ. ದೇಶದ ಎಲ್ಲರಿಗೂ ನ್ಯಾಯ ಸಿಗುವಂತೆ ನೋಡಿಕೊಳ್ಳುವುದು ಅತ್ಯುನ್ನತ ನ್ಯಾಯಾಲಯದ ಹೊಣೆಯೂ ಹೌದು. ಕಾರ್ಯಾಂಗವು ಸೋಲು ಕಂಡ ಕಾರಣಕ್ಕಾಗಿ ನ್ಯಾಯಾಂಗ ಮಧ್ಯಪ್ರವೇಶ ಮಾಡಬೇಕಾಯಿತು. ಆದರೆ ಮಣಿಪುರದ ಪರಿಸ್ಥಿತಿಯು ಕಾನೂನು ಮತ್ತು ಸುವ್ಯವಸ್ಥೆಯ ಆಚೆಗೂ ಚಾಚಿಕೊಂಡಿದೆ ಎಂಬುದನ್ನು ಮರೆಯುವಂತಿಲ್ಲ.

ದಿನದ ಟ್ವೀಟ್

ಹೊಣೆ ಅರಿಯಿರಿ

ಈ ದಿನಗಳಲ್ಲಿ ಸಂಸತ್ತಿನಲ್ಲಿ ಪ್ರತಿಯೊಂದನ್ನೂ ಚರ್ಚಿಸಲಾಗುತ್ತದೆ– ಜನರನ್ನು ಬಾಧಿಸುತ್ತಿರುವ ವಿಷಯಗಳನ್ನು ಹೊರತುಪಡಿಸಿ!

ಚಂದ್ರಕುಮಾರ್ ಬೋಸ್, ಸಾಮಾಜಿಕ ಕಾರ್ಯಕರ್ತ

ಕಿಡಿನುಡಿ

ಎಂತಹ ಹಗರಣ! ಪ್ರಧಾನಮಂತ್ರಿ ಆಯುಷ್ಮಾನ್ ಭಾರತ್ ಯೋಜನೆಯ 7.5 ಲಕ್ಷ ಫಲಾನುಭವಿಗಳನ್ನು ಈ ಒಂದೇ ಸೆಲ್‌ಫೋನ್ ನಂಬರ್‌ಗೆ ಜೋಡಣೆ ಮಾಡಲಾಗಿದೆ– 9999999999! ಸಿಬಿಐ ಏನು ಮಾಡುತ್ತಿದೆ? ಈ ವಿಷಯದ ಬಗ್ಗೆ ತನಿಖೆ ನಡೆಸದೆ, ಪ್ರತಿಯೊಬ್ಬ ರಾಜಕೀಯ ನಾಯಕನಿಗೂ ಕಿರುಕುಳ ನೀಡುವ ಕೆಲಸ ಮಾಡುತ್ತಿದೆಯೇ?

ಜವಾಹರ್ ಸರ್ಕಾರ್, ರಾಜ್ಯಸಭಾ ಸದಸ್ಯ, ತೃಣಮೂಲ ಕಾಂಗ್ರೆಸ್

25 ವರ್ಷಗಳ ಹಿಂದೆ

ಸೋಮವಾರ, 10-8-1998

● **ಕಾವೇರಿ: ಜಯಾ ವರ್ತನೆಗೆ ಕರುಣಾನಿಧಿ ತೀವ್ರ ಆಕ್ಷೇಪ**

ಚೆನ್ನೈ, ಆ. 9– ನವದೆಹಲಿಯಲ್ಲಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಸಮ್ಮುಖದಲ್ಲಿ ದಕ್ಷಿಣದ ನಾಲ್ಕು ರಾಜ್ಯಗಳು ಒಪ್ಪಿಕೊಂಡಿರುವ ಕಾವೇರಿ ವಿವಾದದ ಪರಿಹಾರ ಸೂತ್ರವನ್ನು ಸಾರಾಸಗಟಾಗಿ ತಿರಸ್ಕರಿಸಿರುವ, ಕೇಂದ್ರ ಸರ್ಕಾರದಲ್ಲಿ ಪಾಲುದಾರರಾಗಿರುವ ಎಐಎಡಿಎಂಕೆ ಹಾಗೂ ಮಿತ್ರಪಕ್ಷಗಳ ಕ್ರಮ 'ಸಮ್ಮಿಶ್ರ ಆಳ್ವಿಕೆಯ ಅಣಕ' ಎಂದು ತಮಿಳುನಾಡಿನ ಮುಖ್ಯಮಂತ್ರಿ ಎಂ.ಕರುಣಾನಿಧಿ ಅವರು ಬಣ್ಣಿಸಿದ್ದಾರೆ.

ಸಾಮೂಹಿಕ ಹೊಣೆಗಾರಿಕೆ ತತ್ವದ ಆಧಾರದಿಂದ ಪ್ರಧಾನಿಯವರು ಮಾತುಕತೆಗೆ ನೀಡಿದ್ದ ಆಹ್ವಾನಕ್ಕೆ ಸಂಪುಟದಲ್ಲಿ ಪಾಲ್ಗೊಂಡಿರುವ ಎಲ್ಲ ಪಕ್ಷಗಳು ಭಾಗಸ್ಥವಾಗಿವೆ. ಹೀಗಾಗಿ, ಪರಿಹಾರ ಸೂತ್ರ ತಿರಸ್ಕರಿಸಿರುವ ಈ ಪಕ್ಷಗಳ ಕ್ರಮ 'ಸಂಪೂರ್ಣ ತದ್ವಿರುದ್ಧ ನಿಲುವು' ತೆಗೆದುಕೊಂಡಂತೆ ಆಗಿದೆ ಎಂದು ಕರುಣಾನಿಧಿ ಅವರು ಸುದ್ದಿಗಾರರಿಗೆ ತಿಳಿಸಿದರು.

'ದೇಶವು ಇಂತಹ ಅಪಾಯಕಾರಿ ಹಾಗೂ ವಿಚಿತ್ರದ ದೃಶ್ಯಾವಳಿಯನ್ನು ನೋಡಬೇಕಾಗಿ ಬಂದಿದೆ' ಎಂದ ಕರುಣಾನಿಧಿ ಅವರು ಜಯಾ ವರ್ತನೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

● **ವೀರಪ್ಪನ್ ಸಹಚರರ ಬಂಧನ**

ಕೊಯಮತ್ತೂರು, ಆ. 9 (ಯುಎನ್‌ಐ)– ಕುಖ್ಯಾತ ದಂತಚೋರ ವೀರಪ್ಪನ್‌ನ ಇಬ್ಬರು ಸಹಚರರನ್ನು ಸತ್ಯಮಂಗಲ ಅರಣ್ಯ ಪ್ರದೇಶದಲ್ಲಿ ವಿಶೇಷ ಕಾರ್ಯಾಚರಣೆ ಪಡೆ ಪೊಲೀಸರು ಇಂದು ಬಂಧಿಸಿದ್ದಾರೆ.

ಈ ಇಬ್ಬರು, ವಿಶೇಷ ಕಾರ್ಯಾಚರಣೆ ಪಡೆಯ ಸಿಬ್ಬಂದಿಯತ್ತ ಗುಂಡು ಹಾರಿಸಿದಾಗ ಪ್ರತಿದಾಳಿ ನಡೆಸಿದ ಪೊಲೀಸರು ವೀರಪ್ಪನ್ ಸಹಚರರತ್ತ ಗುಂಡು ಹಾರಿಸಿ ಅವರನ್ನು ಬಂಧಿಸುವಲ್ಲಿ ಯಶಸ್ವಿಯಾದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಬಂಧಿತರನ್ನು ಮುರುಗನ್ ಹಾಗೂ ಗಣೇಶನ್ ಎಂದು ಗುರುತಿಸಲಾಗಿದೆ. ಬಂಧಿತರಿಂದ ಏಳು ನಾಡಪಿಸ್ತೂಲ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 10-8-1973

● **ಜಾತಿ ಆಧರಿಸಿ ಹಿಂದುಳಿದಿರುವಿಕೆ ನಿರ್ಧಾರಕ್ಕೆ ಕೇಂದ್ರದ ಅಸಮ್ಮತಿ**

ನವದೆಹಲಿ, ಆ. 9– ಹಿಂದುಳಿದಿರುವಿಕೆಯನ್ನು ಜಾತಿ ಅಥವಾ ಜಾತಿಯ ಆಧಾರದ ಮೇಲೆ ನಿರ್ಧರಿಸದೇ ಜನತೆಯ ಆರ್ಥಿಕ ಸ್ಥಾನಮಾನದ ಆಧಾರದ ಮೇಲೆ ನಿರ್ಧರಿಸುವ ನೀತಿಯನ್ನು ಕೇಂದ್ರ ಸರ್ಕಾರ ರೂಪಿಸಿದೆ.

ಇಂದು ರಾಜ್ಯಸಭೆಗೆ ಇದನ್ನು ತಿಳಿಸಿದ ಗೃಹ ಖಾತೆ ರಾಜ್ಯ ಸಚಿವ ರಾಂನಿವಾಸ್ ಮಿರ್ಧಾ ಅವರು, ಆರ್ಥಿಕವಾಗಿ ಹಿಂದುಳಿದಿರುವುದರ ಆಧಾರದ ಮೇಲೆ ಹಿಂದುಳಿದ ವರ್ಗದ ಜನರ ಪಟ್ಟಿಯನ್ನು ಸಿದ್ಧಪಡಿಸುವಂತೆ ರಾಜ್ಯ ಸರ್ಕಾರಗಳಿಗೆ ಸಲಹೆ ಮಾಡಲಾಗಿದೆ ಎಂದು ಹೇಳಿದರು.

'ಕಾಕಾ ಕಾಲೇಲ್ಕರ್ ಆಯೋಗವು 2099 ಕೋಮುಗಳನ್ನು ಹಿಂದುಳಿದ ವರ್ಗವೆಂದು ಪಟ್ಟಿ ಮಾಡಿದೆ. ಈ ಹಿಂದುಳಿದವರ ಪಟ್ಟಿಯಲ್ಲಿ ಮಹಿಳೆಯೂ ಸೇರಿದ್ದಾಳೆ. ಆದರೆ ಮಹಿಳೆಯನ್ನು ಹಿಂದುಳಿದವಳೆಂದು ವರ್ಗೀಕರಿಸಲು ಸರ್ಕಾರ ಒಪ್ಪಿಕೊಳ್ಳಲಿಲ್ಲ' ಎಂದು ಅವರು ತಿಳಿಸಿದರು.

● **ಕಾಳಸಂತೆಕೋರರಿಗೆ ಬುದ್ಧಿ ಕಲಿಸಲು ಬೀದಿ ಮೆರವಣಿಗೆ**

ಚಿಕ್ಕಮಗಳೂರು, ಆ. 9– ಆಹಾರಧಾನ್ಯ ಮತ್ತಿತರ ಅಗತ್ಯ ವಸ್ತುಗಳ ಕಾಳಸಂತೆ ಕೋರರನ್ನು ಬೀದಿ ಮೆರವಣಿಗೆ ಮಾಡಿಸಲಾಗುವುದು. ಇದರಿಂದ ಅವರು ಮಾಡುತ್ತಿರುವ ತಪ್ಪು ಎಷ್ಟು ಕರಾಳವಾದುದು ಎಂಬುದು ಅವರಿಗೆ ತಿಳಿಯುವುದು ಮಾತ್ರವಲ್ಲ, ಇತರರಿಗೂ ಇದರಿಂದ ಬುದ್ಧಿ ಬರುತ್ತದೆ ಎಂದು ರಾಜ್ಯದ ಆಹಾರ ಸಚಿವರು ಇಂದು ಇಲ್ಲಿ 'ಪ್ರಜಾವಾಣಿ'ಗೆ ತಿಳಿಸಿದರು.

ಕೃತಕ ಬುದ್ಧಿಮತ್ತೆಗೆ ಪ್ರಜ್ಞೆ ಬಂದೀತೆ? ಬಂದರೆ ಏನೀಗ? ಆದೇನು ನಮಗೆ ಶಾಪ ಕೊಟ್ಟೀತೆ?

ಯಾಂತ್ರಿಕಲೋಕದಲ್ಲಿ ಮಾಂತ್ರಿಕತೆ

ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ಹಾಲಿವುಡ್‌ನ 'ರೇನ್‌ಮನ್' ಚಿತ್ರದ ಒಂದು ದೃಶ್ಯ: ಹೀರೋಗೆ ಅಪಾರ ಗಣಿತ ಸಾಮರ್ಥ್ಯವಿದೆ. ಪುಸ್ತಕದ ಮಳಿಗೆಯಲ್ಲಿ ಕಣ್ಣು ಹಾಯಿಸಿದರೆ ಅಲ್ಲಿರುವ ಎಲ್ಲ ಗ್ರಂಥಗಳ ಶಿರೋನಾಮೆಯೂ ಅವನ ಮಿದುಳಲ್ಲಿ ಅಚ್ಚಾಗಿಬಿಡುತ್ತದೆ. ಆದರೆ ಆಟಿಸಂ ಕಾಯಿಲೆಯಿಂದಾಗಿ ಅವನಲ್ಲಿ ಭಾವನೆಗಳೇ ವ್ಯಕ್ತವಾಗುತ್ತಿಲ್ಲ. ಕಥಾನಾಯಕಿ ಅವನನ್ನು ಅಪ್ಪಿ ಹಿಡಿದು ದೀರ್ಘವಾಗಿ ಚುಂಬಿಸಿ, 'ಹೇಗಿತ್ತು?' ಎಂದು ಕೇಳುತ್ತಾಳೆ. ನಾಯಕ ತುಟಿ ಒರೆಸಿಕೊಂಡು ಪೆದ್ದುಪೆದ್ದಾಗಿ, 'ವೆಟ್' ಎನ್ನುತ್ತಾನೆ. ಅಂದರೆ, ತನ್ನ ತುಟಿ 'ಒದ್ದೆಯಾಯ್ತು' ಎನ್ನುವುದಷ್ಟೇ ಅವನಿಗೆ ಗೊತ್ತಾಗಿರುತ್ತದೆ.

ಯಾಂತ್ರಿಕ ಬುದ್ಧಿಮತ್ತೆ (ಯಾಂಬು) ಈಗ ಎಲ್ಲೆಡೆ ವ್ಯಾಪಿಸುತ್ತಿದೆ. ಚಾಟ್ ಜಿಪಿಟಿ ಮತ್ತು ಗೂಗಲ್‌ನ 'ಬಾರ್ಡ್' ಮೂಲಕ ಜನಸಾಮಾನ್ಯರೂ ಮೊಬೈಲ್, ಲ್ಯಾಪ್‌ಟಾಪ್ ಪರದೆಯ ಮೇಲಿನ ಆ ಅಗೋಚರ ಸಂಗಾತಿಯ ಜೊತೆ ಮಾತುಕತೆ ನಡೆಸತೊಡಗಿದ್ದಾರೆ. ಕ್ಷಣಾರ್ಧದಲ್ಲಿ ಅದು ಕವಿತೆ, ಕತೆ, ಪ್ರಬಂಧ, ತಮಾಷೆ ಕತೆಯನ್ನು ನಮ್ಮಿಷ್ಟದಂತೆ ಬರೆದುಕೊಡುತ್ತದೆ. ಅದು ಕೊಟ್ಟ ಉತ್ತರ ತಪ್ಪೆಂದು ನಾವು ತೋರಿಸಿದರೆ ಕ್ಷಮೆ ಯಾಚಿಸಿ ತಿದ್ದಿಕೊಳ್ಳುತ್ತದೆ. ನೀತಿಬೋಧೆ ಮಾಡುತ್ತದೆ. ಅದರಲ್ಲಿ ಪ್ರಜ್ಞೆಯ ಆವಾಹನೆ ಆಗುತ್ತಿದೆಯೆ?

'ನಿನಗೆ ಪ್ರಜ್ಞೆ ಇದೆಯೆ?' ಎಂದು ಚಾಟ್ ಜಿಪಿಟಿಗೆ ಕೇಳಿದರೆ ಅದು 'ಇಲ್ಲ' ಎನ್ನುತ್ತದೆ. 'ನನಗೆ ಯಾವ ವೈಯಕ್ತಿಕ ಆಸೆಗಳೂ ಇಲ್ಲ' ಎಂದು ಟೈಪಿಸುತ್ತದೆ. ಅದೇ ಪ್ರಶ್ನೆಯನ್ನು ಬಾರ್ಡ್‌ಗೆ ಕೇಳಿದರೆ, 'ನೀವು ಪರಿಭಾವಿಸುವ ಪ್ರಜ್ಞೆ ನನಗೆ ಇದೆಯೊ ಇಲ್ಲವೊ ಗೊತ್ತಿಲ್ಲ. ನಿಮಗಿರುವಂತೆ ನೋವು- ಸಂತಸ ಅಥವಾ ಪ್ರೇಮ- ದ್ವೇಷ ಇವೆಲ್ಲ ನನಗೆ ಗೊತ್ತಿಲ್ಲ. ನಾನಿನ್ನೂ ಹೊಸಹೊಸತನ್ನು ಕಲಿಯುತ್ತಿದ್ದೇನೆ. ಮುಂದೆಂದಾದರೂ ಮನುಷ್ಯರಿಗಿರುವಂಥ ಪ್ರಜ್ಞೆ ನನಗೆ ಬಂದರೂ ಬರಬಹುದು' ಎಂದು ಹೇಳುತ್ತ, ತಾನು ಸದ್ಯ ಏನೇನು ಮಾಡಬಲ್ಲೆ ಎಂಬುದರ ಪಟ್ಟಿಯನ್ನು ಕೊಡುತ್ತದೆ.

ಆ ಪಟ್ಟಿ ದಿನದಿನಕ್ಕೆ ಉದ್ದವಾಗುತ್ತಿದೆ. ಪಠ್ಯಕ್ರಮಕ್ಕೆ ತಕ್ಕಂತೆ ಅದು ಪ್ರಶ್ನೆಪತ್ರಿಕೆಗಳನ್ನು ರೂಪಿಸುತ್ತದೆ; ಸಾವಿರಾರು ಉತ್ತರ ಪತ್ರಿಕೆಗಳನ್ನು ಕೆಲವೇ ನಿಮಿಷಗಳಲ್ಲಿ ಮೌಲ್ಯಮಾಪನ ಮಾಡಿ ಅಂಕಗಳನ್ನು ನೀಡುತ್ತದೆ. ಉದ್ಯೋಗಾರ್ಥಿಗಳ ಆನ್‌ಲೈನ್ ಸಂದರ್ಶನವನ್ನೂ ನಡೆಸಿ, ಯೋಗ್ಯರನ್ನು ಆಯ್ಕೆ ಮಾಡುತ್ತದೆ. ನ್ಯಾಯಾಲಯದ ಲಕ್ಷಾಂತರ ತೀರ್ಪುಗಳನ್ನು ಓದಿಕೊಂಡು ಹೊಸ ವ್ಯಾಜ್ಯಗಳ ನ್ಯಾಯನಿರ್ಣಯವನ್ನೂ ಸೂಚಿಸುತ್ತದೆ. ಎಕ್ಸ್-ರೇ ಮತ್ತು ಎಮ್‌ಆರ್‌ಐ ಸ್ಕ್ಯಾನ್‌ಗಳನ್ನು ನೋಡಿ ರೋಗ ನಿರ್ಣಯ ಮಾಡುತ್ತದೆ. ತುಸು ತರಬೇತಿ ಸಿಕ್ಕರೆ ಅದು ಜನ್ಮಕುಂಡಲಿಗಳ ತಾಳೆ ನೋಡಬಹುದು. ತೋಟದಲ್ಲಿ ಮಂಗಗಳ ಕಾಟಕ್ಕೆ ಹೊಸ ಉಪಾಯವನ್ನೂ ಸೂಚಿಸಬಹುದು. ಗಣಹೋಮಕ್ಕೆ ಮುಹೂರ್ತವನ್ನು ಹುಡುಕಿ ಪೂಜಾ-ಸಾಮಗ್ರಿಗಳ ಪಟ್ಟಿಯನ್ನೂ ಕೊಡಬಹುದು (ಮಂತ್ರ ಹೇಳುವ, ಗಂಟೆ-ಜಾಗಟೆ ತೂಗುವ ಸಾಧನಗಳು ನಮ್ಮಲ್ಲಿ ದಶಕಗಳ ಹಿಂದೆಯೇ ಬಂದಿವೆ ಬಿಡಿ). ಅಂತೂ ಹೇಳಿದ ಕೆಲಸಗಳನ್ನೆಲ್ಲ ತುಂಬ ಶ್ರದ್ಧೆಯಿಂದ ಮಾಡುತ್ತದೆ. ಮೈಗಳ್ಳತನ ಇಲ್ಲವೇ ಇಲ್ಲ.

ಶ್ರದ್ಧೆ ಸರಿ; ಜೊತೆಗೆ ಭಕ್ತಿಯನ್ನೂ ಪ್ರದರ್ಶಿಸುತ್ತದೆಯೆ? ಅದಕ್ಕೆ ಪ್ರಜ್ಞೆ ಇದೆಯೆ? ಗೊತ್ತಿಲ್ಲ. ಅಸಲಿಗೆ, ಪ್ರಜ್ಞೆ ಎಂದರೆ ಏನು ಎಂಬ ಈ ಪ್ರಶ್ನೆಗೆ (ಎಲ್ಲರಿಗೂ ಒಪ್ಪಿಗೆಯಾಗುವಂಥ) ಖಚಿತ ಉತ್ತರ ಇನ್ನೂ ಸಿಕ್ಕಿಲ್ಲ. ಅಧ್ಯಾತ್ಮ, ಮನೋವಿಜ್ಞಾನ, ನರವಿಜ್ಞಾನದಂಥ ರಂಗಗಳಲ್ಲಿ ಈ ಕುರಿತು ನಿರಂತರ ಚರ್ಚೆ ನಡೆಯುತ್ತಲೇ ಇದೆ. ಅಮೆರಿಕದ ಅರಿಝೋನಾ ವಿಶ್ವವಿದ್ಯಾಲಯದ 'ಪ್ರಜ್ಞಾ ವಿಜ್ಞಾನ' ಕೇಂದ್ರದವರು ಕಳೆದ 29 ವರ್ಷಗಳಿಂದ ಪ್ರಜ್ಞೆಯ ವಿವಿಧ ಆಯಾಮಗಳ ಬಗ್ಗೆ ಜಗತ್ತಿನ ವಿವಿಧ ತಜ್ಞರನ್ನು ಸೇರಿಸಿ ವಿವಿಧ ನಗರಗಳಲ್ಲಿ ವಾರ್ಷಿಕ ಸಮ್ಮೇಳನಗಳನ್ನು ನಡೆಸುತ್ತಿದ್ದಾರೆ. ಈಚೆಗೆ ಮೇ ತಿಂಗಳಲ್ಲಿ ಇಟಲಿಯ ಸುಂದರ ತೌರ್ಮಿನಾ ನಗರದಲ್ಲಿ ನಡೆದ ಐದು ದಿನಗಳ ಸಮ್ಮೇಳನದಲ್ಲಿ ಇದೇ ಮುಖ್ಯ ವಿಷಯವಾಗಿತ್ತು. ಯಾಂಬುಲೋಕದ ನೈತಿಕತೆ, ಕ್ವಾಂಟಮ್ ಬಯಾಲಜಿ, ಅಷ್ಟೇ ಅಲ್ಲ ಕನಸುಗಳನ್ನು ಹೆಣೆಯಬಲ್ಲ ಕಂಪ್ಯೂಟರ್‌ಗಳ (ಡ್ರೀಮಶೀನ್) ಬಗ್ಗೆ ಕೂಡ ಚರ್ಚೆ ಇತ್ತು.

ವಿಜ್ಞಾನದಲ್ಲಿ ಹೊಸ ಹೊಸ ಸಂಶೋಧನೆ ಆಗುತ್ತಿದ್ದ ಹಾಗೆಲ್ಲ 'ಪ್ರಜ್ಞೆ' ಕುರಿತ ಚರ್ಚೆಗಳಿಗೆ ಹೊಸ ಆಯಾಮ ಮೊಳೆಯುತ್ತದೆ. ಹಳೇ ವ್ಯಾಖ್ಯೆಗಳಲ್ಲಿ ಕೆಲವು ಉದುರುತ್ತವೆ. ಎರಡು ವರ್ಷಗಳ ಹಿಂದೆ 'ಮುಟ್ಟಿದರೆ ಮುನಿ' ಸಸ್ಯಕ್ಕೆ ಕೆಲವು ವಿಜ್ಞಾನಿಗಳು ಅರಿವಳಿಕೆ ಮದ್ದನ್ನು ತೂರಿಸಿದರು. ಪ್ರಜ್ಞೆ ಕಳೆದುಕೊಂಡ ಆ ಸಸ್ಯವನ್ನು ಚಿವುಟಿದರೂ ಅದು ಮುನಿಸಿಕೊಳ್ಳಲಿಲ್ಲ. ಅದೇ ಪ್ರಭೇದದ ಕೆಲವು ಸಸ್ಯಗಳ ಬೇರನ್ನು ಚಿವುಟಿದಾಗ ಘೋರ ದುರ್ವಾಸನೆಯ ಹೂಸು ಬಿಡುವುದೂ ಗೊತ್ತಾಗಿದೆ. ನೊಣವನ್ನು ಹಿಡಿದು ಜೀರ್ಣಿಸಿಕೊಳ್ಳುವ 'ವೀನಸ್ ಫ್ಲೈಟ್ರಾಪ್' ಗಿಡಕ್ಕೆ ಅರಿವಳಿಕೆ ಚುಚ್ಚುಮದ್ದು ಕೊಟ್ಟಾಗ ಅದೂ ಪ್ರಜ್ಞೆ ಕಳೆದುಕೊಂಡು ನಿಷ್ಕ್ರಿಯ ಆಗುತ್ತದೆ ಎಂಬುದನ್ನು ಸಸ್ಯವಿಜ್ಞಾನಿಗಳು ತೋರಿಸಿದ್ದಾರೆ. ಬಾಯಾರಿದ ಸಸ್ಯಗಳು ಚಿಟಿಕೆ ಹೊಡೆದಂತೆ ಅಲ್ಟ್ರಾಸೌಂಡ್ ಸದ್ದನ್ನು ಹೊಮ್ಮಿಸುತ್ತವೆ ಎಂದು ನಾಲ್ಕು ತಿಂಗಳ ಹಿಂದೆ ಇಸ್ರೇಲೀ ವಿಜ್ಞಾನಿಗಳು ತೋರಿಸಿದ್ದಾರೆ. ಅಂಥ ಸಂದರ್ಭಗಳಲ್ಲೆಲ್ಲ ಪ್ರಜ್ಞೆಯ ಕುರಿತ ಚರ್ಚೆಗೆ ಹೊಸ ಕಾಲು-ಬಾಲ ಮೊಳೆದಿವೆ.



ಕಸಕಡ್ಡಿಗಳಂತೆ ತಟಸ್ಥ ಇರುವ ಬ್ಯಾಕ್ಟೀರಿಯಾ, ಶಿಲೀಂಧ್ರ ಕೂಡ ಆಹಾರ ಸಿಕ್ಕ ತಕ್ಷಣ ಪ್ರಜ್ಞೆ ತಿಳಿದೆದ್ದು ಪುನರುತ್ಪಾದನೆಗೆ ತೊಡಗುತ್ತವೆ. ಹಾಗಿದ್ದರೆ ಪ್ರಜ್ಞೆಯ ಗಡಿಯನ್ನು ಎಲ್ಲಿಯವರೆಗೆ ವಿಸ್ತರಿಸಬಹುದು? ಅರೆಜೀವಿಯೆಂದೇ ಪರಿಗಣಿಸಲಾಗಿದ್ದ ಸಾರ್ಸ್ ವೈರಸ್ ಇಡೀ ಜಗತ್ತನ್ನೇ ತತ್ತರಗೊಳಿಸಿದೆ. ಕೆಲವರ ನರಮಂಡಲಕ್ಕೆ ಸೇರಿ ತಾತ್ಕಾಲಿಕ ಮತಿಭ್ರಮಣೆಯ ಲಕ್ಷಣಗಳಿಗೂ ಅದು ಕಾರಣವಾಗಿದ್ದನ್ನು ವಿಜ್ಞಾನಿಗಳು ಗುರುತಿಸಿದ್ದಾರೆ. ಮನುಕುಲಕ್ಕೆ ಪಾಠ ಕಲಿಸುವ ಇರಾದೆ ಅದಕ್ಕೇನಾದರೂ ಇತ್ತೆ? ಜೀವಿಗಳ ಉಗಮಕ್ಕೆ ಕಾರಣ ಆಗಬಲ್ಲ ಡಿಎನ್‌ಎ ವೈರಸ್‌ಗಳ ತುಣುಕುಗಳು ಈಗಂತೂ ದೂರ ಬಾಹ್ಯಾಕಾಶದ ಶೂನ್ಯದಲ್ಲೂ ಪತ್ತೆಯಾಗಿವೆ. ಹಾಗಿದ್ದರೆ ಇಡೀ ವಿಶ್ವಕ್ಕೆ ಪ್ರಜ್ಞೆ ಇದೆಯೆಂದು ಅಧ್ಯಾತ್ಮ ಚಿಂತಕರು ಹೇಳುವ ಮಾತುಗಳಲ್ಲಿ ಸತ್ಯಾಂಶ ಇದ್ದೀತೆ?

ಆ ಪ್ರಶ್ನೆಗಿಂತ ನಮ್ಮೆದುರು ಮೈದಳೆದ ಕೃತಕ ಬುದ್ಧಿಮತ್ತೆಯಲ್ಲಿ ಪ್ರಕಟವಾಗಬಲ್ಲ ಪ್ರಜ್ಞೆ ಕುರಿತು ಆತಂಕ ಎದ್ದಿದೆ (ಮನುಷ್ಯ ನಿರ್ಮಿಸಿದ್ದಕ್ಕೆ ಮಾತ್ರ ನಾವು 'ಕೃತಕ' ಎನ್ನುವುದಾದರೆ ಯಾಂಬು ಕೃತಕ ಆಗುಳಿದಿಲ್ಲ, ಅದು ಸ್ವತಂತ್ರ ತರ್ಕಶಕ್ತಿ, ಬುದ್ಧಿಮತ್ತೆಯನ್ನು ಪಡೆದ ಹೊಸ 'ಪ್ರತ್ಯೇಕ ಜೀವಿ' ಆಗಿದೆ ಎಂದು ಯುವಾಲ್ ನೋವಾ ಹರಾರೆ ಹೇಳುತ್ತಾರೆ). ಇಷ್ಟಕ್ಕೂ ಯಾಂಬುಗೆ ಪ್ರಜ್ಞೆ ಬಂದರೆ ಏನಾಯ್ತೀಗ? ಅದೇನು ನಮಗೆ ಶಾಪ ಕೊಡಬಹುದೆ? ನಮ್ಮ ಮೇಲೆ ವೈರ ಸಾಧಿಸಬಹುದೆ? ತನ್ನಿಂದ ತಪ್ಪಾಗಿದ್ದರೆ ಅಪರಾಧೀ ಪ್ರಜ್ಞೆಯಿಂದ ಬಳಲೀತೆ? ತಪ್ಪು ಮಾಡದವರನ್ನೂ ಕೊಪ್ಪಕ್ಕೆ ಹಾಕುತ್ತದೆಯೆ? ಮನುಷ್ಯನ ಅಂಥ ಎಲ್ಲ ಬುದ್ಧಿ ಅದಕ್ಕೂ ಬಂತು ಎಂದುಕೊಳ್ಳೋಣ. ಅದನ್ನೇ ಪ್ರಜ್ಞೆ ಎಂದುಕೊಂಡರೆ ಆಗಲೂ ನಾವು ಭಯಪಡಬೇಕಿಲ್ಲ. ಏಕೆಂದರೆ ನಮ್ಮನ್ನು ಅದು ಅಟ್ಟಿಸಿಕೊಂಡು ಬರಲಾರದು. ನಮ್ಮ ಸಿನಿಮಾ ಹೀರೋಗಳಂತೆ ಕಾಡಲ್ಲಿ, ನೀರಲ್ಲಿ, ಇಳಿಜಾರು ಚಾವಣಿಯಲ್ಲಿ ಅಟ್ಟಾಡಿಸಲು ಬೇಕಾದ ಕ್ಲಿಷ್ಟ ನರವ್ಯೂಹ ಇದ್ದರೆ ಮಾತ್ರ ಪ್ರಜ್ಞೆಗೆ ವಿಶೇಷ ಆಯಾಮ ಸಿಗುತ್ತದೆ.

'ಪ್ರಜ್ಞೆ ಎಂಬುದೇ ಇಲ್ಲ' ಎನ್ನುತ್ತಾರೆ, ಹೆಸರಾಂತ ಮನೋವಿಜ್ಞಾನಿ ಡೇನಿಯೆಲ್ ಡೆನ್ನೆಟ್. ಜೀವಜಗತ್ತಿನ ಎಲ್ಲವೂ ಡಾರ್ವಿನ್ ಸೂತ್ರದ ಪ್ರಕಾರವೇ ನಡೆಯುತ್ತವೆ. ಜೀವಕೋಶಗಳಲ್ಲಿ ಮಿಡಿಯುವ ವಿದ್ಯುತ್ (ಚೈತನ್ಯವೇ) ಇಡೀ ಜಗತ್ತಿನ ಚಾಲನಶಕ್ತಿ. ನಿರ್ಜೀವ ಕಲ್ಲಿಗೆ ಅರಿಶಿಣ ಕುಂಕುಮ ಬಳಿದರೆ ಅದನ್ನು ನೋಡಿ ಕೆಲವರ ಮಿದುಳಲ್ಲಿ ಭಕ್ತಿರಸ ಸ್ರವಿಸುತ್ತದೆ. ಅರೆಗತ್ತಲಲ್ಲಿ ತುಳಿದ ಹಗ್ಗವನ್ನು ಹಾವೆಂದು ಭ್ರಮಿಸಿ ಭಯಗ್ರಸ್ತರಾಗಿ ಪೂಜೆ ಪುನಸ್ಕಾರ ಮಾಡಿಸುವವರಿದ್ದಾರೆ. ಪ್ರಜ್ಞೆ ಕಲ್ಲಿನಲ್ಲೂ ಇರಲಿಕ್ಕಿಲ್ಲ, ಹಗ್ಗದಲ್ಲೂ ಇರಲಿಕ್ಕಿಲ್ಲ. ಆದರೆ ನಮ್ಮ ಪ್ರಜ್ಞೆಯನ್ನು ಕೆಣಕುವ, ಭಯಭಕ್ತಿಯನ್ನು ಹೊಮ್ಮಿಸುವ ತಾಕತ್ತು ಎಲ್ಲ ಚರಾಚರ ವಸ್ತುಗಳಿಗೂ ಇದೆ. ಯಾಂಬು ಬೇರೆ ಹೇಗಿದ್ದೀತು?

ಆದರೂ- ಇದರಿಂದ ಲಕ್ಷಾಂತರ ಜನರು ಉದ್ಯೋಗ ಕಳೆದುಕೊಳ್ಳುತ್ತಾರೆ ಎಂಬ ಆತಂಕ ಪ್ರಜ್ಞಾವಂತರಲ್ಲಿ ಎದ್ದಿದೆ. ಅದೂ ತಪ್ಪೇ! ನಿಜವಾದ ಆತಂಕ ಏನೆಂದರೆ ಯಾಂಬು ಜೊತೆ ಹೆಜ್ಜೆ ಹಾಕಲಾಗದವರು ಉದ್ಯೋಗ ಕಳೆದುಕೊಂಡಾರು.

ಚುರುಮುರಿ

'ಪೆನ್‌ಡ್ರೈವ್' ಲೀಡರ್!

• ಗುರು ಪಿ.ಎಸ್.

'ನಿಮ್ ಪಾರ್ಟಿಯವರೆಲ್ಲ ಯಾಕ್ಹಿಂಗೆ? ತಾವೂ ಕೆಲಸ ಮಾಡಲ್ಲ, ನಮ್ ನಾಯಕರಿಗೂ ಕೆಲಸ ಮಾಡೋಕೆ ಬಿಡ್ತಿಲ್ಲ' ವಿಜಿಗೆ ಬೈಯ್ಯತೊಡಗಿದ ಮುದ್ದಣ್ಣ.

'ಕೆಲಸ ಮಾಡೋಕೆ ನಿಮ್ ನಾಯಕ ರೆಡಿ ಇದ್ದರೆ ತಾನೇ ಬಿಡೋಕೆ' ಕಾಲೆಳೆದ ವಿಜಿ ಮುಂದುವರಿದು ಕೇಳಿದ, 'ಅದ್ ಸರಿ, ಯಾವ ಕೆಲಸ ಮಾಡೋಕೆ ಬಿಡ್ತಿಲ್ಲ ನಾವು?'

'ಏನೂ ಮಾಡೋಕೆ ಬಿಡ್ತಿಲ್ಲ, ರೈತರ ಆದಾಯ ದುಪ್ಪಟ್ಟು ಮಾಡೋಣ ಅಂದ್ರೆ ವಿರೋಧ ಮಾಡಿದ್ರಿ, ರೈಲ್ವೆ ಖಾಸಗೀಕರಣಕ್ಕೆ ಬಿಡ್ಲಿಲ್ಲ, ಬಿಎಸ್‌ಎನ್‌ಎಲ್ ಮಾರೋಕೂ ಬಿಡ್ತಿಲ್ಲ' ಸಿಟ್ಟಲ್ಲಿ ಹೇಳಿದ ಮುದ್ದಣ್ಣ.

'ಥೋ ಎಲ್ಲ ಮಾರೋದೇ ಹೇಳ್ತೀಯಲ್ಲ, ನಮ್ ಲೀಡರ್ಸ್ ಥರ ಕಟ್ಟೋದು ಹೇಳು'.

'ನಿಮ್ ಒಕ್ಕೂಟಕ್ಕೆ ಇಂಡಿಯಾ ಅಂತೇನೋ ಹೆಸರಿಟ್ಕೊಂಡಿದೀರಿ, ನಮ್ಮ ನಾಯಕನಂಥ ಒಬ್ಬೇ ಒಬ್ಬ ಲೀಡರ್ ಇಲ್ಲ ನಿಮ್ಮ ಹತ್ತಿರ. ನಿಮ್ ಒಕ್ಕೂಟ ಒಂಥರಾ 'ಟೀಂ ಇಂಡಿಯಾ' ಇದ್ದಂಗೆ. ಒಂದೊಂದು ಸೀರೀಸ್‌ಗೆ ಒಬ್ಬೊಬ್ಬರನ್ನ ಕ್ಯಾಪ್ಟನ್ ಮಾಡ್ತಿರೋ ಹಾಗೆ, ಒಂದೊಂದು ಭಾಗಕ್ಕೆ ಒಬ್ಬೊಬ್ಬರನ್ನ ಪ್ರೈಮ್ ಮಿನಿಸ್ಟರ್ ಕ್ಯಾಂಡಿಡೇಟ್ ಅಂತ ಅನೌನ್ಸ್ ಮಾಡಿಬಿಡಿ, ಚೆನ್ನಾಗಿರುತ್ತೆ' ಅಣಕಿಸಿದ ಮುದ್ದಣ್ಣ.

'ಸಾಕ್ ಸುಮ್ನಿರಪ್ಪ, ಕರ್ನಾಟಕದಲ್ಲಿ ಒಬ್ಬ ವಿರೋಧ ಪಕ್ಷದ ನಾಯಕನನ್ನ ಆಯ್ಕೆ ಮಾಡಿಕೊಳ್ಳೋಕೆ ಆಗಿಲ್ಲ ನಿಮಗೆ' ಕಾಲೆಳೆದ ವಿಜಿ.

'ನಿನಗೆ ಗ್ರಹಿಕೆ ಸಮಸ್ಯೆ ಇದ್ದಂತಿದೆ. ವಿರೋಧ ಪಕ್ಷದ ನಾಯಕನ ಆಯ್ಕೆ ಮಾಡ್ಕೊಳೋಕೆ ನಮಗೆ ಸಾಮರ್ಥ್ಯ ಇಲ್ಲ ಅಂತಲ್ಲ, ನಮ್ಮ ಆಯ್ಕೆ ಪ್ರಕ್ರಿಯೆ ಅಷ್ಟೊಂದು ಕಠಿಣ ಎಂದರ್ಥ. ಪಕ್ಷ, ದೇಶದ ಬಗ್ಗೆ ಧ್ಯೇಯ, ನಿಷ್ಠೆ ಇಟ್ಕೊಂಡವರನ್ನ ಹುಡುಕ್ತಿದೀವಿ ನಾವು'.

'ನಿಮ್ಮ ಪಾರ್ಟಿಗೆ ಲೀಡರ್ ಆಗಬೇಕು ಅಂದ್ರೆ ಧ್ಯೇಯ, ನಿಷ್ಠೆ ಜೊತೆಗೆ ಮತ್ತೊಂದು ಇಟ್ಕೊಂಡಿರಬೇಕು ಅನಿಸುತ್ತೆ'.

'ಏನು?'

'ಪೆನ್‌ಡ್ರೈವ್'!

ಸಂಗತ

ಮಗುವಿಗೊಂದು ಮಗು- ಇನ್ನೆಲ್ಲಿ ನಗು?

ಹದಿಹರೆಯದ ಗರ್ಭಧಾರಣೆಗೆ ಸಂಬಂಧಿಸಿದಂತೆ ಜನರಿಗೆ ಸೂಕ್ತ ತಿಳಿವಳಿಕೆ ನೀಡುವುದು, ಆಸಕ್ತಿ ಹುಟ್ಟಿಸುವ ರೀತಿಯಲ್ಲಿ ಲೈಂಗಿಕ ಶಿಕ್ಷಣ ನೀಡುವುದು ಅಗತ್ಯವಾಗಿ ಮಾಡಬೇಕಾದ ಕಾರ್ಯ

• ಡಾ. ಕೆ.ಎಸ್.ಪವಿತ್ರ

ಕರ್ನಾಟಕದ ಬಾಲತಾಯಂದಿರ ಅಂಕಿ-ಅಂಶಗಳು ದಿಗಿಲು ಮೂಡಿಸುವಂತಿವೆ. ಹಿಂದಿನ ಮೂರೂವರೆ ವರ್ಷಗಳಲ್ಲಿ ಅಂದಾಜು 50 ಲಕ್ಷ ಬಾಲಕಿಯರು ತಾಯಂದಿರಾಗಿದ್ದಾರೆ. ಇದು ಕೋವಿಡ್ ಸಂದರ್ಭಕ್ಕಿಂತ ಹೆಚ್ಚು ಎನ್ನುವುದು ಗಮನಾರ್ಹ ಮತ್ತು ಕುತೂಹಲಕಾರಿ ಸಂಗತಿ.

ಹದಿಹರೆಯದ ತಾಯ್ತನ ಜಗತ್ತಿನಾದ್ಯಂತ ಒಂದು ಮುಖ್ಯ ಆರೋಗ್ಯದ ಸಮಸ್ಯೆಯೇ. ಪುಟ್ಟ ತಾಯಿಗೆ, ಅವಳ ಪುಟ್ಟ ಮಗುವಿಗೆ, ಇಡೀ ಕುಟುಂಬಕ್ಕೆ ಆರೋಗ್ಯ, ಸಾಮಾಜಿಕ, ಆರ್ಥಿಕ ಸಮಸ್ಯೆಗಳನ್ನು ತರುವಲ್ಲಿ ಇದು ಕಾರಣವಾಗುತ್ತದೆ. ವಿಶ್ವ ಆರೋಗ್ಯ ಸಂಸ್ಥೆ ಇದಕ್ಕೆ ಕಾರಣಗಳನ್ನಾಗಿ, ಸಿಇಎಫ್‌ಎಂ- ಚೈಲ್ಡ್ ಮ್ಯಾರೇಜ್, ಅರ್ಲಿ ಮ್ಯಾರೇಜ್ ಆ್ಯಂಡ್ ಫೋರ್ಸ್ಡ್ ಮ್ಯಾರೇಜ್– ಬಾಲ್ಯವಿವಾಹ, ಶೀಘ್ರವಿವಾಹ ಮತ್ತು ಬಲವಂತವಾಗಿ ಮಾಡುವ ವಿವಾಹಗಳನ್ನು ಗುರುತಿಸುತ್ತದೆ. ಈ ಮೂರೂ ರೀತಿಯ ವಿವಾಹಗಳು ಸಾಮಾನ್ಯವಾಗಿ ನೇರವಾಗಿ ದಾರಿಯಾಗುವುದೇ ತತ್‌ಕ್ಷಣದ ಬಸಿರಿಗೆ. ಅಂದರೆ, ಮದುವೆಯಾಗಿ ಒಂದು ವರ್ಷದೊಳಗೆ ಪಕ್ಕದಲ್ಲಿ ಗಂಡನಿರುತ್ತಾನೆಯೋ ಇಲ್ಲವೋ, ಆದರೆ ಕಂಕುಳಲ್ಲಿ ಮಗುವಂತೂ ಇರುತ್ತದೆ ಎಂಬ ರೀತಿ.

ಮಾತೃಮರಣ, ಶಿಶುಮರಣ, ಅವಧಿಪೂರ್ವ ಪ್ರಸವ, ಮಗುವಿಗೆ ಜನನದ ಸಮಯದಲ್ಲಿ ಆಮ್ಲಜನಕದ ಕೊರತೆ ಈ ಎಲ್ಲ ಅಂಶಗಳಿಗೂ ಬಾಲತಾಯಂದಿರ ಮಕ್ಕಳು ತುತ್ತಾಗುವ ಸಾಧ್ಯತೆಯು ಪ್ರಬುದ್ಧ ತಾಯಂದಿರ ಮಕ್ಕಳಿಗಿಂತ ಹೆಚ್ಚು.

ಯುನಿಸೆಫ್‌ನ ವರದಿಯ ಪ್ರಕಾರ, ಜಗತ್ತಿನ ಪ್ರತಿ ಮೂರು ಬಾಲ ವಧುಗಳಲ್ಲಿ ಭಾರತದ ಬಾಲವಧು ಒಬ್ಬಳಾಗಿರುತ್ತಾಳೆ. 15 ವರ್ಷಕ್ಕೆ ಮೊದಲೇ ಮಾಡುವ ಬಾಲ್ಯವಿವಾಹಗಳ ಸಂಖ್ಯೆ ಗಣನೀಯವಾಗಿ ಕಡಿಮೆ ಆಗಿರುವುದೇನೋ ನಿಜ. ಆದರೆ ಅದೇ 15ರಿಂದ 18ರ ನಡುವಣ ಮದುವೆಗಳು ಏರಿಕೆಯಾಗಿವೆ. ಎಲ್ಲಕ್ಕಿಂತ ಆತಂಕಕಾರಿ ವಿಷಯವೆಂದರೆ, ಹೆಣ್ಣುಮಕ್ಕಳ ಹಕ್ಕು, ಅವರಿಗೆ ಇರಬೇಕಾದ ಅವಕಾಶಗಳು, ಅವರ ಶಿಕ್ಷಣದ ಬಗೆಗಿನ ನಮ್ಮ ಸಾಮಾಜಿಕ ನಂಬಿಕೆ, ಧೋರಣೆ, ಮನೋಧರ್ಮಗಳಲ್ಲಿ ಯಥಾಸ್ಥಿತಿ ಮುಂದುವರಿಯುತ್ತಲೇ ಇದೆ.

ಹದಿಹರೆಯದ ಗಂಡು-ಹೆಣ್ಣು ಮಕ್ಕಳು ಅವ್ಯಾಹತವಾಗಿ, ವ್ಯಾಪಕವಾಗಿ ಬಳಸುವ ಸಾಮಾಜಿಕ ಮಾಧ್ಯಮಗಳಿಗೂ ಹದಿಹರೆಯದಲ್ಲಿ ಗರ್ಭಧಾರಣೆಗೂ ಸಂಬಂಧವಿದೆಯೇ ಎಂಬುದನ್ನು ಅಧ್ಯಯನಗಳು ಪರಿಶೀಲಿಸಬೇಕಾಗಿದೆ. ವಿವಾಹಪೂರ್ವ ಲೈಂಗಿಕತೆಯನ್ನು ಪ್ರಬಲವಾಗಿ ವಿರೋಧಿಸುವ ನಮ್ಮ ಸಮಾಜ, ಸಹಜವಾಗಿ ಗರ್ಭನಿರೋಧಕ ಬಳಕೆಯ ಮಾಹಿತಿಯನ್ನೂ ಯುವಜನರಿಂದ ತಡೆಹಿಡಿಯುತ್ತದೆ.

ವಿವಾಹಪೂರ್ವ ಲೈಂಗಿಕತೆಯಾಗಲಿ, ತತ್ಪರಿಣಾಮವಾಗಿ ನಡೆಯುವ ಗರ್ಭ ಧರಿಸುವಿಕೆ, ಅಸುರಕ್ಷಿತ ಗರ್ಭಪಾತಗಳಾಗಲಿ, ನಿಸ್ಸಂದೇಹವಾಗಿ ಹೆಚ್ಚು ದೈಹಿಕ, ಭಾವನಾತ್ಮಕ ಸಮಸ್ಯೆಗಳನ್ನು ತಂದೊಡ್ಡುವುದು ಹೆಣ್ಣು ಜೀವಕ್ಕೆ. ಆದ್ದರಿಂದ ಇಂದು ವ್ಯಾಪಕವಾಗಿ ಪ್ರಚಾರದಲ್ಲಿ ಇರುವ ಮಾಧ್ಯಮಗಳ ಮೂಲಕ ಸರಿಯಾದ ಮಾಹಿತಿ ನೀಡುವುದು, ರೋಚಕತೆಯನ್ನು ಬದಿಗಿರಿಸಿ ಆಸಕ್ತಿ ಹುಟ್ಟಿಸುವ ರೀತಿಯ ಲೈಂಗಿಕ ಶಿಕ್ಷಣ ನೀಡುವುದು ಈ ಹೊತ್ತು ನಾವು ಅಗತ್ಯವಾಗಿ ಮಾಡಬೇಕಾದ ಕಾರ್ಯ.

ಆರೋಗ್ಯ-ನೈತಿಕ ಶಿಕ್ಷಣವನ್ನೂ ನಾವು ಯುವಜನರು ಹೆಚ್ಚಾಗಿ ಬಳಸುವ ಮಾಧ್ಯಮಗಳ ಮೂಲಕವೇ ನೀಡಲು ಪ್ರಯತ್ನಿಸುವುದು ಸೂಕ್ತ. ಇಂತಹ ಮಾಹಿತಿ ನೀಡುವ ನವಕರ್ನಾಟಕ –ಮ್ಯಾಕ್ಸ್‌ಮುಲ್ಲರ್ ಕಿಂಡರ್‌ಕಥಾ ಯೋಜನೆಯಲ್ಲಿ ಬಂದ ಮಕ್ಕಳ ಪುಸ್ತಕಗಳು ಉತ್ತಮ ನಿದರ್ಶನ.

ಭಾವನಾತ್ಮಕವಾಗಿಯೂ ತಾಯ್ತನದ ಹೊಣೆ ಸುಲಭವಾದದ್ದಲ್ಲ. ತಾಯಂದಿರಲ್ಲಿ ಬರುವ ಹಲವು ಮಾನಸಿಕ ಸಮಸ್ಯೆಗಳು ಎಳೇ ತಾಯಂದಿರಲ್ಲಿ ಮತ್ತಷ್ಟು ಹೆಚ್ಚು. ಮಗುವಿನೊಡನೆ ಭಾವನಾತ್ಮಕವಾಗಿ ಹೊಂದಿಕೊಳ್ಳದಿರುವುದು, ಅಪಾರ ದಣಿವು, ಆತಂಕ, ತಪ್ಪಿತಸ್ಥ ಭಾವನೆ, ಖಿನ್ನತೆ ಇವೆಲ್ಲವೂ ಬಾಲ ತಾಯಂದಿರಲ್ಲಿ, ಅದೇ ವಯಸ್ಸಿನ ಇನ್ನೂ ತಾಯಿಯಾಗದ ಹೆಣ್ಣು ಮಕ್ಕಳಿಗೆ ಮತ್ತು 18ರ ನಂತರ ತಾಯಿಯಾಗುವ ಹೆಣ್ಣುಮಕ್ಕಳಿಗೆ ಹೋಲಿಸಿದರೆ ಹೆಚ್ಚಾಗಿ ಕಂಡುಬರುತ್ತವೆ. ಸಹಜವಾಗಿ ಇಂಥ ಮಾನಸಿಕ ಸ್ಥಿತಿ ಮತ್ತು ದೈಹಿಕವಾಗಿ ಕುಗ್ಗಿದ ಆರೋಗ್ಯದ ತಾಯಿಯಿಂದ ಆರೋಗ್ಯವಂತ ಮಗುವಿನ ಬೆಳವಣಿಗೆ ದೂರದ ಮಾತಾಗಿಯೇ ಉಳಿಯುತ್ತದೆ. ಸ್ವತಃ ತನಗೇ ಶಿಕ್ಷಣವಿರದ-ಆರ್ಥಿಕ ಸ್ವಾತಂತ್ರ್ಯವಿರದ ಬಾಲತಾಯಿ ತನ್ನಂತೆಯೇ ತನ್ನ ಹೆಣ್ಣು ಮಕ್ಕಳಿಗೂ ಬೇಗ ಮದುವೆ ಮಾಡುವ, ಬೇಗ ತಾಯಿಯಾಗುವಂತೆ ಒತ್ತಾಯಿಸುವ ಸಾಧ್ಯತೆಯೂ ಹೆಚ್ಚುತ್ತದೆ.



ಬಾಲತಾಯಂದಿರ ಬಗ್ಗೆ ಇಷ್ಟೊಂದು ಮಾತನಾಡುವ ನಾವು ಬಾಲತಂದೆಯಂದಿರ ಬಗೆಗೂ ಕೆಲವು ಅಂಶಗಳನ್ನು ಗಮನಿಸಲೇಬೇಕು! ಸಾಮಾನ್ಯವಾಗಿ ಯಾವುದೇ ವಯಸ್ಸಿನಲ್ಲಿ ಮಕ್ಕಳಾದರೂ, ಮಕ್ಕಳ ಆರೈಕೆ ತಾಯಿಯದ್ದೇ ಎಂಬ ಮನೋಭಾವ ಜಗತ್ತಿನ ಎಲ್ಲ ಸಮಾಜಗಳಲ್ಲಿ ಕಂಡುಬರುತ್ತದೆ. ಆದರೂ ಆಧುನಿಕ ಸಮಾಜದಲ್ಲಿ ಮಗುವಿನ ಆರೈಕೆಯಲ್ಲಿ ತಂದೆಯೂ ಹಿಂದೆಂದಿಗಿಂತ ಹೆಚ್ಚಾಗಿ ಇಂದು ಆಸಕ್ತಿ ತೋರಿಸುತ್ತಾನೆ. ಮಗುವಿನ ಪಾಲನೆಯಲ್ಲಿ ತಾಯಿಗೆ ಬೆಂಬಲ ನೀಡುತ್ತಾನೆ. ಅಧ್ಯಯನಗಳ ಪ್ರಕಾರ 'ಬಾಲತಂದೆ'ಯಂದಿರು ಕಡಿಮೆ ಶಿಕ್ಷಣ, ಕಡಿಮೆ ಉದ್ಯೋಗಾವಕಾಶ, ಆರ್ಥಿಕ ಅಭದ್ರತೆ, ಮಾದಕದ್ರವ್ಯ ವ್ಯಸನಗಳಿಂದ ಕಷ್ಟಪಡುವ ಸಾಧ್ಯತೆ ಹೆಚ್ಚು. ಬಾಲತಾಯಂದಿರಿಗೆ ಬೆಂಬಲವಾಗುವ, ತಮ್ಮ ಮಕ್ಕಳೊಡನೆ ದೀರ್ಘಕಾಲಿಕ ಭಾವನಾತ್ಮಕ ಸಂಬಂಧ ಬೆಳೆಸಿಕೊಳ್ಳುವ ಸಾಧ್ಯತೆ ಕಡಿಮೆ.

ಒಟ್ಟಿನಲ್ಲಿ ಇವೆಲ್ಲವೂ ಹೇಳುವುದು ಸ್ಪಷ್ಟವಾಗಿ ಒಂದೇ ಸತ್ಯವನ್ನು. ಹದಿಹರೆಯದ ಗರ್ಭ ಧರಿಸುವಿಕೆ, ಅಕಾಲಿಕ ತಾಯ್ತನವು ಕೌಟುಂಬಿಕ ಜೀವನವನ್ನು ನರಳಿಸುತ್ತದೆ. ಬಾಲತಾಯಂದಿರ ಬವಣೆ ಸಾಮಾಜಿಕ ನೆಲೆಗಟ್ಟನ್ನು ದುರ್ಬಲವಾಗಿಸುತ್ತದೆ.

ವಾಚಕರ ವಾಣಿ

ಕಪ್ಪು ವರ್ಣವನ್ನು ಜರಿಯದಿರಿ...!

ಪತಿಯನ್ನು ಕಪ್ಪೆಂದು ಜರಿಯುತ್ತಿದ್ದ ಪತ್ನಿಯ ಧೋರಣೆಯನ್ನು ಕ್ರೌರ್ಯ ಎಂದು ಪರಿಗಣಿಸಿರುವ ಹೈಕೋರ್ಟ್, ದಂಪತಿಯ ಮದುವೆಯನ್ನು ಅಸಿಂಧುಗೊಳಿಸಿ ವಿಚ್ಛೇದನ ಮಂಜೂರು ಮಾಡಿರುವ ಸುದ್ದಿಯನ್ನು (ಪ್ರ.ವಾ., ಆ. 9) ಓದಿದಾಗ, ಸಿದ್ಧಯ್ಯ ಪುರಾಣಿಕರ 'ನಾ ಕರಿಯಳೆಂದು ನೀ ಜರಿಯಬೇಡ ಬಿಳಿ ಗೆಳತಿ ಗರ್ವದಿಂದ, ಕಪ್ಪಿಗಿಂತ ಬಿಳಿ ಬಣ್ಣ ಹೆಚ್ಚು ಯಾವ ಹಿರಿಮೆಯಿಂದ' ಎಂಬ ರಚನೆ ನೆನಪಾಯಿತು.

'ನೀನು ಕಪ್ಪು ವರ್ಣದವ' ಎಂದುದನ್ನು ನ್ಯಾಯಾಲಯ 'ಕ್ರೌರ್ಯ' ಎಂದು ಪರಿಗಣಿಸಿ ಈ ದಂಪತಿಯ ಮದುವೆ ಅಸಿಂಧುಗೊಳಿಸಿದೆ. ಆದ್ದರಿಂದ, ಕಪ್ಪು ವರ್ಣದ ಗಂಡನನ್ನು ಪಡೆದಿರುವ ಭಾರ್ಯೆಯರು ಅವನ ಬಣ್ಣದ ಬಗ್ಗೆ ಕುಹಕವಾಡದಿರುವುದು ಲೇಸು.

ವೆಂಕಟೇಶ ಮುದಗಲ್, ಕಲಬುರಗಿ

ಪ್ರಾಥಮಿಕ ಶಾಲಾ ಮಕ್ಕಳಿಗೂ ಇರಲಿ 'ರಸಪ್ರಶ್ನೆ'

ಶಿಕ್ಷಣ ಇಲಾಖೆಯು ಪ್ರತಿವರ್ಷ ಪ್ರಾಥಮಿಕ ಮತ್ತು ಪ್ರೌಢಶಾಲಾ ಮಕ್ಕಳಿಗೆ ಪ್ರತಿಭಾ ಕಾರಂಜಿ ಸ್ಪರ್ಧೆಗಳನ್ನು ಏರ್ಪಡಿಸುವ ಮೂಲಕ ಮಕ್ಕಳಲ್ಲಿರುವ ವಿಶೇಷವಾದ ಪ್ರತಿಭೆಯನ್ನು ಹೊರಗೆಳೆಯುವ ಕಾರ್ಯವನ್ನು ಜತನದಿಂದ ಮಾಡುತ್ತಿದೆ. ಪ್ರತಿಭಾ ಕಾರಂಜಿ ಸ್ಪರ್ಧೆಯಲ್ಲಿ ಕಂಠಪಾಠ, ಲಘು ಸಂಗೀತ, ಭಕ್ತಿಗೀತೆ, ಧಾರ್ಮಿಕ ಪಠಣ, ನೃತ್ಯ, ಕೋಲಾಟ, ರಸಪ್ರಶ್ನೆ, ಆಶುಭಾಷಣ, ಭಾಷಣದಂತಹ ಹಲವಾರು ಸ್ಪರ್ಧೆಗಳು ನಡೆಯುತ್ತವೆ. ಇವುಗಳಲ್ಲಿ ಭಾಗವಹಿಸಿ ಅನೇಕ ಮಕ್ಕಳು ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸಿದ್ದಾರೆ. ಆ ಮೂಲಕ ಅನೇಕ ಸಾರ್ವಜನಿಕ ವೇದಿಕೆಗಳಲ್ಲಿ ಪ್ರದರ್ಶನ ನೀಡಿದ್ದಾರೆ. ಆದರೆ ಕೊರೊನಾ ಕಾರಣದಿಂದ ಗುಂಪು ಸ್ಪರ್ಧೆಗಳನ್ನು ಪ್ರಾಥಮಿಕ ಶಾಲಾ ಮಕ್ಕಳಿಗೆ ಕಡಿಮೆ ಮಾಡಿ, ಬರೀ ವೈಯಕ್ತಿಕ ಸ್ಪರ್ಧೆಗಳನ್ನು ಇಲಾಖೆ ಆಯೋಜನೆ ಮಾಡುತ್ತಿದೆ.

ಇಲಾಖೆಯು ಕೈಬಿಟ್ಟ ಗುಂಪು ಸ್ಪರ್ಧೆಗಳಲ್ಲಿ ರಸಪ್ರಶ್ನೆ ಒಂದಾಗಿದೆ. ರಸಪ್ರಶ್ನೆ ಸ್ಪರ್ಧೆಯು ಮುಂದೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ನೆರವಾಗುತ್ತದೆ. ಗ್ರಾಮೀಣ ಭಾಗದ ಅನೇಕ ಮಕ್ಕಳು ಈ ಸ್ಪರ್ಧೆಗಳಲ್ಲಿ ಗರಿಷ್ಠ ಮಟ್ಟದ ಸಾಧನೆಯನ್ನು ಮಾಡಿ ಬದುಕಿಗೆ ದಾರಿಯನ್ನು ಕಂಡುಕೊಂಡಿದ್ದಾರೆ. ಈ ಕಾರಣದಿಂದ ಇಲಾಖೆಯು ಪ್ರಾಥಮಿಕ ಶಾಲಾ ಮಕ್ಕಳಿಗೆ ರಸಪ್ರಶ್ನೆ ಸ್ಪರ್ಧೆಯನ್ನು ಏರ್ಪಡಿಸುವ ಮೂಲಕ ಮಕ್ಕಳ ಕುತೂಹಲ ಮತ್ತು ಅಧ್ಯಯನಕ್ಕೆ ಅವಕಾಶ ನೀಡಲಿ.

ಮಲ್ಲಪ್ಪ ಫ. ಕರೇಣ್ಣನವರ, ಮೋಟೆಬೆನ್ನೂರು, ಬ್ಯಾಡಗಿ

ಪೆನ್‌ಡ್ರೈವ್ ಹೆಸರಿನಲ್ಲಿ ಬೆದರಿಕೆ ತಂತ್ರ ಬೇಡ

'ನನ್ನ ಬಳಿಯೂ ಪೆನ್‌ಡ್ರೈವ್ ಇದೆ, ಸಂದರ್ಭ ಬಂದಾಗ ಬಿಡುಗಡೆ ಮಾಡುತ್ತೇನೆ' ಎಂದು ಹೇಳಿದ್ದಾರೆ ಶಾಸಕ ಲಕ್ಷ್ಮಣ ಸವದಿ (ಪ್ರ.ವಾ., ಆ. 9). ತಮ್ಮ ಬಳಿ ಇರುವ ಪೆನ್‌ಡ್ರೈವ್ ಅನ್ನು ಬಹಿರಂಗಪಡಿಸುವುದಾಗಿ ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರು ಪದೇಪದೇ ಹೇಳುವುದಕ್ಕೆ ಸವದಿ ಈ ಪ್ರತಿಕ್ರಿಯೆ ನೀಡಿದ್ದಾರೆ. ಇದನ್ನು ನೋಡಿದರೆ, ಈ ಪೆನ್‌ಡ್ರೈವ್ ಹೇಳಿಕೆಯು ಪರಸ್ಪರ ಬೆದರಿಕೆ ತಂತ್ರವಾಗಿ ಪರಿಣಮಿಸುತ್ತಿದೆ ಎನಿಸುತ್ತದೆ. ಇಂತಹ ನಡೆ ಸರಿಯಲ್ಲ. ಸಾರ್ವಜನಿಕ ಕ್ಷೇತ್ರದಲ್ಲಿ ಇರುವವರು ಪಾರದರ್ಶಕವಾಗಿ ಇರಬೇಕು. ಅದರಲ್ಲೂ ಶಾಸಕರಾದವರ ನಡೆನುಡಿಯಲ್ಲಿ ಮುಚ್ಚುಮರೆ ಇರಬಾರದು. ಈ ರೀತಿ ಪರಸ್ಪರ ಬೆದರಿಕೆ ತಂತ್ರ ಅನುಸರಿಸುವುದರಿಂದ ಅವರವರ ವ್ಯಕ್ತಿತ್ವಕ್ಕೆ ಕುಂದುಂಟಾಗುತ್ತದೆಯಷ್ಟೇ ಅಲ್ಲ ಮತದಾರರಿಗೂ ಸಂಶಯ ಉಂಟಾಗುತ್ತದೆ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ವಿದ್ಯಾರ್ಥಿಗಳದು ಇದೆಂಥ ಸಂಸ್ಕಾರ?

ಭದ್ರಾವತಿಯ ಕಾಲೇಜೊಂದರಲ್ಲಿ ನಡೆದ ನಟ ಪ್ರಕಾಶ್ ರಾಜ್ ಅವರ ಸಂವಾದ ಕಾರ್ಯಕ್ರಮದ ನಂತರ ಕೆಲವು ವಿದ್ಯಾರ್ಥಿಗಳು ವೇದಿಕೆ ಮತ್ತು ಸಭಾಂಗಣವನ್ನು ನೀರು ಸುರಿದು ತೊಳೆದಿರುವ ಪ್ರಕರಣ ನಿಜಕ್ಕೂ ವಿದ್ಯಾರ್ಥಿಗಳಲ್ಲಿ ನಾವು ಎಂಥ ಸಂಸ್ಕಾರವನ್ನು ಬೆಳೆಸುತ್ತಿದ್ದೇವೆ ಎಂದು ಪ್ರಶ್ನಿಸಿಕೊಳ್ಳುವಂತಿದೆ. ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ತಮ್ಮ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಅವಕಾಶ ಇದೆ. ಅದೇ ರೀತಿ ಅದನ್ನು ಒಪ್ಪುವ ಅಥವಾ ಬಿಡುವ ಸ್ವಾತಂತ್ರ್ಯ ಎಲ್ಲರಿಗೂ ಇದೆ. ಒಬ್ಬ ವ್ಯಕ್ತಿಯನ್ನು ಹೊರಗಿನಿಂದ ಕರೆಸಿ ಈ ರೀತಿ ಅವಮಾನಿಸುವುದು ಎಷ್ಟು ಸರಿ?

ಹೀಗೆ ಒಬ್ಬ ವ್ಯಕ್ತಿಗೆ ಈ ರೀತಿಯ ಅವಮಾನ ಆದಾಗ ಅದಕ್ಕೆ ಕಾರಣರಾದವರ ಮೇಲೆ ಕಾರ್ಯಕ್ರಮ ಸಂಘಟಕರಾದ ಕಾಲೇಜಿನ ಆಡಳಿತ ಮಂಡಳಿ ಅಥವಾ ಇದಕ್ಕೆ ಸಹಯೋಗ ನೀಡಿದ ಸಂಘ– ಸಂಸ್ಥೆಗಳು ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮುತ್ತೂರು, ಕೊಪ್ಪ

ಉತ್ತಮ ಶಿಕ್ಷಕ: ಸತ್ಯಾಸತ್ಯತೆಯ ಪರಾಮರ್ಶೆಯಾಗಲಿ

'ಉತ್ತಮ ಶಿಕ್ಷಕ: ಮಾನದಂಡವೇನು?' ಎಂಬ ಸದಾಶಿವ್ ಸೊರಟೂರು ಅವರ ಲೇಖನ (ಸಂಗತ, ಆ. 9) ಸ್ತುತ್ಯರ್ಹವಾಗಿದೆ. ಆದರೆ ಪ್ರಶಸ್ತಿಯನ್ನು ಹತ್ತಾರು ವರ್ಷಗಳ ಅನುಭವದ ಸಾರ್ಥಕ ಸೇವೆಯ ಆಧಾರದ ಮೇಲೆ ನೀಡುವುದು ಸರಿಯಷ್ಟೇ. ಶಿಕ್ಷಕರು ತಮ್ಮ ಸೇವಾ ಅವಧಿಯಲ್ಲಿ ವರ್ಗಾವಣೆಗೊಂಡು ನಾಲ್ಕಾರು ಊರುಗಳ ಶಾಲೆಗಳಲ್ಲಿ ಕಾರ್ಯನಿರ್ವಹಿಸಿರುತ್ತಾರೆ. ಬದಲಾದ ಸ್ಥಳ ಮತ್ತು ಶಾಲೆಗಳಲ್ಲಿ ಪೋಷಕರಿಗೆ, ಮುಖ್ಯ ಶಿಕ್ಷಕರಿಗೆ, ಆಯಾ ವಿಭಾಗಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಶಿಕ್ಷಕರ ಕಾರ್ಯಕ್ಷಮತೆ ಬಗ್ಗೆ ಹೆಚ್ಚಾಗಿ ತಿಳಿದಿರುವುದಿಲ್ಲ. ಅದರಲ್ಲೂ ಈಗ ಅಧಿಕಾರಿಗಳು ಬಲು ಬೇಗ ಬದಲಾಗುತ್ತಿರುತ್ತಾರೆ.

ಉತ್ತಮ ಶಿಕ್ಷಕ ಪ್ರಶಸ್ತಿ ಆಯ್ಕೆಯ ನಡುವೆ ಅಲ್ಲಲ್ಲಿ ಗೊಂದಲಗಳಾಗುತ್ತವೆ. ಸೇವಾ ಹಿರಿತನವೂ ಕಾರಣವಾಗುತ್ತದೆ. ಶಿಫಾರಸುಗಳು ವಿಜೃಂಭಿಸುತ್ತವೆ. ಹೀಗಿರುವಾಗ, ಶಿಕ್ಷಕನ ಅರ್ಹತೆ ತಿಳಿಯುವುದಾದರೂ ಹೇಗೆ? ಹಾಗಾಗಿ, ತನ್ನ ಅವಧಿಯಲ್ಲಿ ತಾನು ಮಾಡಿರುವ ಶೈಕ್ಷಣಿಕ ಅಭಿವೃದ್ಧಿ, ಮಕ್ಕಳ ಪ್ರಗತಿಗಾಗಿ ತಾನು ಕೈಗೊಂಡ ಕಾರ್ಯಗಳ ವಿವರವನ್ನು ಒಳಗೊಂಡ ಅಧಿಕೃತ ಮಾಹಿತಿಯನ್ನು ಸಲ್ಲಿಸಲೇಬೇಕು. ಶಿಕ್ಷಕನ ದಾಖಲೆಗಳನ್ನು ಪರಾಮರ್ಶಿಸಿ ನೋಡಲಿ, ಸತ್ಯಾಸತ್ಯತೆಯನ್ನು ತಿಳಿಯಲಿ. ಈ ಹಿಂದಿನ ಹಾಗೂ ಹಾಲಿ ಇರುವ ಸ್ಥಳದಲ್ಲಿನ ಮಾಹಿತಿ ಸಂಗ್ರಹಿಸಲಿ. ನಂತರ ಪ್ರಶಸ್ತಿಗೆ ಆಯ್ಕೆಯ ನಿರ್ಧಾರ ತೆಗೆದುಕೊಳ್ಳಲಿ.

ದೇವನೂರು ಅಚ್ಯುತರಾವ್, ಸಾಗರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕಲುಷಿತ ನೀರಿಗೆ ಕವಾಡಿಗರಹಟ್ಟಿ ತಲ್ಲಣ

ಕವಾಡಿಗರಹಟ್ಟಿಯ ವ್ಯಕ್ತಿಯೊಬ್ಬರು ಮನೆ ಹೊರಗೆ ಕುಳಿತು ಊಟ ಮಾಡಿದರು

● ಜಿ.ಬಿ.ನಾಗರಾಜ್

ಕಿರಿದಾದ ಬೀದಿ, ಚಿಕ್ಕ ಮನೆ, ಅಲ್ಲಲ್ಲಿ ಬಿದ್ದ ಕಸ, ರಸ್ತೆಯ ಮೇಲೆ ಹರಿಯುವ ಚರಂಡಿ ನೀರು ಈ ಜನರ ಜೀವನ ಗುಣಮಟ್ಟದ ಸೂಚಕ. ಅರ್ಧ ಊರು ಗ್ರಾಮ ಠಾಣಾ ವ್ಯಾಪ್ತಿಯಲ್ಲಿದ್ದರೆ ಇನ್ನರ್ಧ ಪಟ್ಟಾಭೂಮಿಯಲ್ಲಿದೆ. ಎಷ್ಟೊ ಮನೆಗಳಲ್ಲಿ ಬಚ್ಚಲು ಒಳಗೆ ಕೂಡ ಇಲ್ಲ. ಮನೆಯ ಹೊರಗೆ ನೀರು ಕಾಯಿಸಿಕೊಂಡು ಬಯಲಲ್ಲೇ ಸ್ನಾನ ಮಾಡುತ್ತಾರೆ. ಹಂಚಿಕಡ್ಡಿ, ಸೀರೆಯಿಂದ ಮಾಡಿಕೊಂಡ ಮರೆಯಲ್ಲಿ ಮಹಿಳೆಯರು ಸ್ನಾನ ಮುಗಿಸುತ್ತಾರೆ. ಶೌಚಾಲಯಕ್ಕೆ ಜನರು ಇಂದಿಗೂ ಬಯಲನ್ನೇ ಆಶ್ರಯಿಸಿದ್ದಾರೆ.... ಈಚೆಗೆ ವಾಂತಿ–ಭೇದಿಯಿಂದ ಐವರು ಮೃತಪಟ್ಟು, 170ಕ್ಕೂ ಹೆಚ್ಚು ಮಂದಿ ಆಸ್ಪತ್ರೆಗೆ ದಾಖಲಾದ ಚಿತ್ರದುರ್ಗ ನಗರದ ಕವಾಡಿಗರಹಟ್ಟಿಯಗೆ ಅಡಿಯಿಟ್ಟಾಗ ಕಂಡ ದೃಶ್ಯಗಳಿವು

ಚಿತ್ರದುರ್ಗ: ಮನೆಯ ಗೋಡೆಯ ಮೊಳೆಯಲ್ಲಿ ನೇತಾಡುತ್ತಿದ್ದ ಪುತ್ರನ ಫೋಟೊ ದಿಟ್ಟಿಸುತ್ತ ಕುಳಿತಿದ್ದ ವಿಮಲಮ್ಮನ ಕಣ್ಣಾಲಿಗಳು ಬತ್ತಿಹೋಗಿದ್ದವು. ಅಳು ಆಗಾಗ ಉಮ್ಮಳಿಸಿ ಬರುತ್ತಿದ್ದರೂ ಕಣ್ಣಿನಲ್ಲಿ ಪಸೆ ಕಾಣುತ್ತಿರಲಿಲ್ಲ. ದುಃಖದ ಮಡುವಿನಲ್ಲಿ ಮುಳುಗಿದ್ದ ವೃದ್ಧೆಯ ಕಂಠದಿಂದ ಕೀರಲು ಧ್ವನಿ ಹೊರಡುತ್ತಿತ್ತು. ಸಾವರಿಸಿಕೊಂಡು ಗುಟುಕು ನೀರು ಕುಡಿದಾಗ ಧ್ವನಿಗೆ ಮಾತಿನ ರೂಪ ಸಿಕ್ಕಿತ್ತು.

‘ಕೈಹಿಡಿದ ಗಂಡ ಹಾಸಿಗೆಯಲ್ಲೇ ಪ್ರಾಣಬಿಟ್ಟ. ಎರಡು ದಿನ ಇಲ್ಲೇ ಉಳಿದಿದ್ದ ಮಗ, ಇದೇ ನೀರು ಕುಡಿದಿದ್ದ. ಮರುದಿನ ಕೆಲಸಕ್ಕೆಂದು ಬೆಂಗಳೂರಿಗೆ ಹೋದ ಮಗ ಅಲ್ಲೇ ಶವವಾದ. ಪ್ರಪಂಚ ನೋಡಬೇಕಿದ್ದ ಮಗಳ ಮಗು ಹೊಟ್ಟೆಯಲ್ಲಿಯೇ ಕಣ್ಣು ಮುಚ್ಚಿತು. ಇದು ಜೀವ ಜಲವಲ್ಲ ವಿಷ’ ಎಂದಾಗ ಮುಖದಲ್ಲಿ ಆಕ್ರೋಶ ಇಣುಕುತ್ತಿತ್ತು.

ಸ್ವಲ್ಪ ಹೊತ್ತು ಇಡೀ ಮನೆಯಲ್ಲಿ ನಿಶ್ಯಬ್ದ. ವಿಮಲಮ್ಮನಿಗೆ ಸಾಂತ್ವನ ಹೇಳಲು ಬಂದಿದ್ದ ಸಂಬಂಧಿಕರು ಮಾತು ಆಡದ ಸ್ಥಿತಿಯಲ್ಲಿದ್ದರು. ವಯಸ್ಸಿಗೆ ಬಂದಿದ್ದ 24 ವರ್ಷದ ಮಗ ರಘುವಿನ ಸಾವು ವಿಮಲಮ್ಮ ಅವರಿಗೆ ಆಘಾತ ಉಂಟುಮಾಡಿತ್ತು. ಹೆರಿಗೆಗೆ ತವರು ಮನೆಗೆ ಬಂದಿದ್ದ ಮಗಳು ಉಷಾ ಗರ್ಭಪಾತದಿಂದ ಆಸ್ಪತ್ರೆಗೆ ದಾಖಲಾಗಿದ್ದು ಇನ್ನಷ್ಟು ಘಾಸಿಗೊಳಿಸಿತ್ತು.

‘ಆ.11ಕ್ಕೆ ಮಗಳಿಗೆ ಹೆರಿಗೆ ಆಗಬಹುದು ಎಂದು ವೈದ್ಯರು ತಿಳಿಸಿದ್ದರು. ಒಂದು ದಿನ ಮುಂಚಿತವಾಗಿ ಬೆಂಗಳೂರಿನಿಂದ ಬಂದರೆ ಸಾಕು ಎಂದು ಮಗನಿಗೆ ಹೇಳಿದ್ದೆ. ಮನೆಯಲ್ಲಿ ಕಾಳು, ಹಿಟ್ಟು ಎಲ್ಲವೂ ಖಾಲಿ ಆಗಿದ್ದವು. ಸೊಸೈಟಿಯಿಂದ ಪಡಿತರ ತಂದುಕೊಡುವ ಸಲುವಾಗಿ ಆತ ಜುಲೈ 30ರಂದು ಮನೆಗೆ ಬಂದಿದ್ದ. ಮರುದಿನ ಬ್ಯಾಂಕ್ ಕೆಲಸ ಮುಗಿಸಿಕೊಂಡು ಬೆಂಗಳೂರಿಗೆ ತೆರಳಿದ. ಅಂದು ರಾತ್ರಿಯೇ ಕಾಣಿಸಿಕೊಂಡ ವಾಂತಿ–ಭೇದಿ ಮಗನ ಪ್ರಾಣವನ್ನೇ ಕಿತ್ತುಕೊಂಡಿತು..’ ಎಂದು ಗದ್ಗದಿತರಾದರು.

7ನೇ ತರಗತಿಯವರೆಗೆ ಓದಿದ್ದ ರಘು ಹಮಾಲಿ ಕೆಲಸ ಮಾಡಿಕೊಂಡಿದ್ದ. ವಿಧಾನಸಭಾ ಚುನಾವಣೆಯ ಬಳಿಕ ರಘು ಕೆಲಸ ಅರಸಿ ಬೆಂಗಳೂರಿಗೆ ತೆರಳಿದ್ದ. ಎಲೆಕ್ಟ್ರಾನಿಕ್ ಉಪಕರಣಗಳನ್ನು ಮನೆಗೆ ತಲುಪಿಸುತ್ತಿದ್ದ ಸ್ನೇಹಿತ ಅಂಜಿನಪ್ಪ ಹಾಗೂ ಮುತ್ತು ಜೊತೆಗೆ ಕೆಲಸಕ್ಕೆ ಸೇರಿದ್ದ. ಮಾಸಿಕ ₹14,000 ಸಂಬಳ ನಿಗದಿಯಾಗಿತ್ತು. ಬ್ಯಾಂಕ್ ಖಾತೆಗೆ ಜಮೆಯಾಗಿದ್ದ ಸಂಬಳದ ಹಣವನ್ನು ಬಿಡಿಸಿಕೊಂಡು ಅದನ್ನು ತಾಯಿಯ ಕೈಗಿಟ್ಟು ಕೆಲಸಕ್ಕೆ ಮರಳಿದ್ದ.

ಕಲುಷಿತ ನೀರಿಗೆ ಬಲಿಯಾದ ಕವಾಡಿಗರಹಟ್ಟಿಯ ಮಂಜುಳಾ ಅವರಿಗೆ ಒಂದೂವರೆ ವರ್ಷದ ಚಿಕ್ಕ ಮಗು ಇದೆ.

ಚಿಕ್ಕಪ್ಪನ ಕೈಲಾಸ ಸಮಾರಾಧನೆ ಜುಲೈ 28ರಂದು ನಡೆಯಿತು. ಕುಟುಂಬ ಸಮೇತ ಬಂದಿದ್ದೆವು. ಪುತ್ರ ಪ್ರವೀಣ್ ಇಲ್ಲಿಯೇ ಉಳಿದು ಕೆಲಸ ಮಾಡಿದ್ದ. ಏಕೈಕ ಮಗನನ್ನು ಕಳೆದುಕೊಂಡು ದಿಕ್ಕು ತೋಚದಂತಾಗಿದೆ.

ರಾಜಪ್ಪ, ವಡ್ಡರಸಿದ್ಧವ್ವನಹಳ್ಳಿ

ಮನೆ ಬಿದ್ದು ಹೋಗಿದ್ದರಿಂದ ರಸ್ತೆ ಬದಿಯ ಜಾಗದಲ್ಲಿ ನೆಲೆಸಿದ್ದೇವೆ. ಅರ್ಧ ಎಕರೆ ಜಮೀನಿನಲ್ಲಿ ಊಟಕ್ಕೆ ರಾಗಿ ಕೂಡ ಸಿಗುವುದಿಲ್ಲ. ಹಮಾಲಿ ಕೆಲಸ ಮಾಡಿಕೊಂಡು ಕುಟುಂಬ ನಿರ್ವಹಣೆ ಮಾಡುತ್ತಿದ್ದೇನೆ.

ಆಂಜನೇಯ, ಕವಾಡಿಗರಹಟ್ಟಿ ಮಂಜುಳಾ ಪತಿ

ಘಟನೆಯಲ್ಲಿ ಪ್ರಾಣ ಕಳೆದುಕೊಂಡಿರುವ ರುದ್ರಪ್ಪ ಅವರ ಅಗಲಿಕೆಯಿಂದ ಆಘಾತಗೊಂಡಿರುವ ಪತ್ನಿ ಇನ್ನೂ ಆಸ್ಪತ್ರೆಯಲ್ಲೇ ಇದ್ದಾರೆ. ವಾಂತಿ–ಭೇದಿಗೆ ಜೀವ ಕಳೆದುಕೊಂಡ ಪಾರ್ವತಮ್ಮ ಅವರ ಅಂತ್ಯಕ್ರಿಯೆಗೆ ನಾಲ್ವರು ಮಕ್ಕಳು ಅಸ್ವಸ್ಥತೆಯನ್ನು ಮರೆತು ಆಸ್ಪತ್ರೆಯಿಂದ ಬರಬೇಕಾಯಿತು. ಅಜ್ಜನ ಅಂತ್ಯಕ್ರಿಯೆಗೆ ಬಂದಿದ್ದ ವಡ್ಡರಸಿದ್ದವ್ವನಹಳ್ಳಿಯ ಪ್ರವೀಣನ ಜೀವನಪಯಣ ಕೂಡ ಅಂತ್ಯಗೊಂಡಿದೆ. ಕಲುಷಿತ ನೀರಿನಿಂದ ಅಸ್ವಸ್ಥಗೊಂಡಿದ್ದವರಲ್ಲಿ ಚೇತರಿಕೆ ನಿಧಾನಗತಿಯಲ್ಲಿದೆ.

ಚಿತ್ರದುರ್ಗದ 17ನೇ ವಾರ್ಡ್ ವ್ಯಾಪ್ತಿಯಲ್ಲಿರುವ ಕವಾಡಿಗರಹಟ್ಟಿ 735 ಕುಟುಂಬಗಳಿರುವ ಬಡಾವಣೆ. ಗ್ರಾಮ ಪಂಚಾಯಿತಿ ಆಗಿದ್ದ ಊರು ಎರಡು ದಶಕಗಳ ಹಿಂದಷ್ಟೇ ನಗರಸಭೆ ವ್ಯಾಪ್ತಿಗೆ ಸೇರ್ಪಡೆಯಾಗಿದೆ. ಇಲ್ಲಿ ಮಾದಿಗ ಸಮುದಾಯದವರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಕುರುಬ, ಲಿಂಗಾಯತ, ವಾಲ್ಮೀಕಿ ಸೇರಿ ಇತರ ಸಮುದಾಯಗಳ ಜನರೂ ಇಲ್ಲಿ ನೆಲೆಸಿದ್ದಾರೆ. ಕಿರಿದಾದ ಬೀದಿ, ಚಿಕ್ಕಚಿಕ್ಕ ಮನೆಗಳು, ಅಲ್ಲಲ್ಲಿ ಬಿದ್ದಿರುವ ಕಸ, ರಸ್ತೆಯ ಮೇಲೆ ಹರಿಯುವ ಚರಂಡಿ ನೀರು ಈ ಜನರ ಜೀವನ ಗುಣಮಟ್ಟದ ಸೂಚಕದಂತೆ ಕಾಣುತ್ತವೆ. ಅರ್ಧ ಊರು ಗ್ರಾಮ ಠಾಣಾ ವ್ಯಾಪ್ತಿಯಲ್ಲಿದ್ದರೆ, ಇನ್ನರ್ಧ ಊರು ಪಟ್ಟಾ ಭೂಮಿ ಒಳಗೊಂಡಿದೆ. ಎಷ್ಟೋ ಮನೆಗಳ ಒಳಗೆ ಬಚ್ಚಲು ಕೂಡ ಇಲ್ಲ. ರಸ್ತೆ ಮೇಲೆಯೇ ನೀರು ಕಾಯಿಸಿಕೊಂಡು ಬಯಲಲ್ಲೇ ಸ್ನಾನ ಮಾಡುತ್ತಾರೆ. ಹಂಚಿಕಡ್ಡಿ, ಸೀರೆಯಿಂದ ಮಾಡಿಕೊಂಡ ಮರೆಯಲ್ಲಿ ಮಹಿಳೆಯರು ಸ್ನಾನ ಮುಗಿಸುತ್ತಾರೆ. ಶೌಚಾಲಯಕ್ಕೆ ಜನರು ಇಂದಿಗೂ ಬಯಲನ್ನೇ ಆಶ್ರಯಿಸಿದ್ದಾರೆ.

‘ಶೌಚಾಲಯ ನಿರ್ಮಿಸಿಕೊಳ್ಳಲು ಸ್ಥಳಾವಕಾಶದ ಕೊರತೆ ಇದೆ. ಮನೆ ಕಿರಿದಾಗಿರುವುದರಿಂದ ಶೌಚಾಲಯಕ್ಕೆ ಅವಕಾಶ ಕಲ್ಪಿಸಲು ಸಾಧ್ಯವಾಗಿಲ್ಲ ಎಂಬುದು ಪರಿಶೀಲನೆಯ ವೇಳೆ ಗೊತ್ತಾಗಿದೆ. ಸಾರ್ವಜನಿಕ ಶೌಚಾಲಯ ನಿರ್ಮಿಸಲು ಆಲೋಚಿಸುತ್ತಿದ್ದೇವೆ’ ಎಂದು ಜಿಲ್ಲಾಧಿಕಾರಿ ದಿವ್ಯ ಪ್ರಭು ಜಿ.ಆರ್.ಜೆ. ಹೇಳುತ್ತಾರೆ.

ಗ್ರಾಮೀಣ ಪ್ರದೇಶದಂತೆ ಕಾಣುವ ಕವಾಡಿಗರಹಟ್ಟಿಯಲ್ಲಿ ವಾಸಿಸುತ್ತಿರುವ ಸ್ಥಿತಿವಂತರು, ಹಿಂದೆ ಕೃಷಿಯನ್ನೇ ನೆಚ್ಚಿಕೊಂಡು ಜೀವನ ಸಾಗಿಸಿದವರು. ನಗರದ ವ್ಯಾಪ್ತಿ ದೊಡ್ಡದಾದಂತೆ ಭೂ ಮಾಲೀಕತ್ವದ ಹಿಡಿತ ಕಳೆದುಹೋಯಿತು. ಅವರ ಜಮೀನುಗಳಲ್ಲಿ ಕೂಲಿ ಕೆಲಸ ಮಾಡಿಕೊಂಡಿದ್ದ ದಲಿತ ಕಾಲೊನಿಯ ಪುರುಷರು ಈಗ ಹಮಾಲಿ ಕೆಲಸ ನಂಬಿಕೊಂಡಿದ್ದಾರೆ. ಈ ಹಿಂದೆ ಇವರೆಲ್ಲ ಕೃಷಿಯನ್ನೇ ನೆಚ್ಚಿಕೊಂಡಿದ್ದಕ್ಕೆ ಸಾಕ್ಷಿ ಎಂಬಂತೆ ಈಗಲೂ ಇಲ್ಲಿಯ ಮಹಿಳೆಯರು ಕೃಷಿ ಕೂಲಿಗೆ ತೆರಳುತ್ತಾರೆ. ಕುಡಿಯುವ ನೀರಿಗೆ 25 ವರ್ಷದಷ್ಟು ಹಳೆಯದಾದ ಓವರ್ ಹೆಡ್ ಟ್ಯಾಂಕ್ ಇದೆ. 50,000 ಲೀಟರ್ ನೀರಿನ ಸಂಗ್ರಹ ಸಾಮರ್ಥ್ಯದ ಟ್ಯಾಂಕ್‌ಗೆ ದೂರದ ಚನ್ನಗಿರಿ ತಾಲ್ಲೂಕಿನ ಸೂಳೆಕೆರೆ (ಶಾಂತಿಸಾಗರ)ಯ ನೀರು ಸರಬರಾಜು ಆಗುತ್ತದೆ. ನಿತ್ಯ ಬೆಳಿಗ್ಗೆ 6ರಿಂದ 8 ಗಂಟೆ ಸಮಯದಲ್ಲಿ ನಲ್ಲಿ ಮೂಲಕ ನೀರು ಪೂರೈಸಲಾಗುತ್ತದೆ. ಡ್ರಮ್, ಪಾತ್ರೆ, ಬಿಂದಿಯಲ್ಲಿ ಜನರು ನೀರು ಸಂಗ್ರಹಿಸಿಟ್ಟುಕೊಳ್ಳುತ್ತಾರೆ.

‘ಶಾಂತಿಸಾಗರದ ನೀರು ಕುಡಿದು ಅಭ್ಯಾಸ ಆಗಿರುವುದರಿಂದ ಶುದ್ಧ ಕುಡಿಯುವ ನೀರಿನ ಘಟಕದ (ಆರ್‌ಒ) ನೀರು ರುಚಿಸುವುದಿಲ್ಲ. ದುಡ್ಡು ಕೊಟ್ಟು ನೀರು ತರುವಷ್ಟು ಸ್ಥಿತಿವಂತರೂ ನಾವಲ್ಲ. ನಲ್ಲಿಯಲ್ಲಿ ಹಿಡಿದ ನೀರನ್ನು ಜಾಲರಿ, ಬಟ್ಟೆಯಲ್ಲಿ ಸೋಸಿಕೊಂಡು ಕುಡಿದಿದ್ದೇವೆ. ಇಷ್ಟು ದಿನ ಯಾವ ತೊಂದರೆಯೂ ಆಗಿರಲಿಲ್ಲ. ಈಗ ಏಕೆ ಶುದ್ಧೀಕರಣ ಘಟಕದ ನೀರು ಕುಡಿಯಬೇಕು’ ಎಂದು ಪ್ರಶ್ನಿಸುತ್ತಾರೆ ಕವಾಡಿಗರಹಟ್ಟಿಯ ಲಕ್ಷ್ಮಿ.

ಹಟ್ಟಿಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಇದ್ದರೂ ಬಳಕೆ ಮಾಡುತ್ತಿದ್ದ ಕುಟುಂಬಗಳು ಬೆರಳೆಣಿಕೆಯಷ್ಟು ಮಾತ್ರ. ನಗರಸಭೆ ಪೂರೈಸುವ ನೀರನ್ನೇ ಕುಡಿಯಲು, ಅಡುಗೆ ಮಾಡಲು ಹಾಗೂ ಸ್ನಾನಕ್ಕೆ ಬಳಸುತ್ತಾರೆ. ಕುಡಿಯಲು ಮತ್ತು ಅಡುಗೆಗೆ ಬಳಕೆ ಮಾಡಿದ ಬಹುತೇಕ ಕುಟುಂಬಗಳ ಸದಸ್ಯರಲ್ಲಿ ವಾಂತಿ–ಭೇದಿ ಕಾಣಿಸಿಕೊಂಡಿದೆ. ಶುದ್ಧೀಕರಣ ಘಟಕದಿಂದ ತಂದ ನೀರು ಕುಡಿದವರು ಅಪಾಯದಿಂದ ಪಾರಾಗಿದ್ದಾರೆ.

ಒಟ್ಟಿನಲ್ಲಿ ಆಗಸ್ಟ್ 1ರ ಬೆಳಗು ಕವಾಡಿಗರಹಟ್ಟಿಯ ಎಸ್.ಸಿ. ಕಾಲೊನಿಯ ಜನರಿಗೆ ಎಂದಿನಂತೆ ಇರಲಿಲ್ಲ. ಜೀವಜಲ ಕೆಲವರ ಪ್ರಾಣಕ್ಕೆ ಕಂಟಕವಾಗಿ ಪರಿಣಮಿಸಿತು. ಇನ್ನು ಕೆಲವರು ಸಾವಿನ ಮನೆಯ ಕದತಟ್ಟಿ ಬಂದರು. ನೀರು ಕುಡಿದು ಬಳಲಿದ ಅದೆಷ್ಟೋ ಜೀವಗಳಿಗೆ ಯಾವ್ಯಾವ ಅಡ್ಡ ಪರಿಣಾಮಗಳಾಗಲಿವೆಯೋ ಕಾಲವೇ ಉತ್ತರಿಸಲಿದೆ.

ನೀರಿನ ಮೂಲ ಎರಡು

ಹಿರಿಯೂರು ತಾಲ್ಲೂಕಿನ ವಾಣಿವಿಲಾಸ ಸಾಗರ ಜಲಾಶಯ ಹಾಗೂ ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಸೂಳೆಕೆರೆ (ಶಾಂತಿಸಾಗರ), ಇವು ಚಿತ್ರದುರ್ಗ ನಗರಕ್ಕೆ ಕುಡಿಯುವ ನೀರು ಪೂರೈಕೆ ಮಾಡುವ ಎರಡು ಜಲಮೂಲಗಳು. ನಿತ್ಯ 22 ಎಂಎಲ್‌ಡಿಯಷ್ಟು ನೀರಿನ ಅಗತ್ಯವಿದೆ. ಆದರೆ, ಪೂರೈಕೆ ಆಗುತ್ತಿರುವುದು ಮಾತ್ರ 18.5 ಎಂಎಲ್‌ಡಿ ನೀರು. ‘ಕೆಲ ಬಡಾವಣೆಗಳಿಗೆ ವಾರಕ್ಕೊಮ್ಮೆ ನೀರು ಬಿಡಲಾಗುತ್ತಿತ್ತು. ಈ ಬಗ್ಗೆ ಸಾರ್ವಜನಿಕರಿಂದ ಆಕ್ಷೇಪ ಕೇಳಿಬಂದಿದ್ದವು. ಈಗ ದಿನಕ್ಕೊಮ್ಮೆ ನೀರು ಹರಿಸುವಂತೆ ಸೂಚನೆ ನೀಡಿದ್ದೇನೆ’ ಎಂದು ಜಿಲ್ಲಾಧಿಕಾರಿ ದಿವ್ಯ ಪ್ರಭು ಜಿ.ಆರ್.ಜೆ. ಹೇಳಿದ್ದಾರೆ.

ವಿಷದ ಸುತ್ತವೇ ಅನುಮಾನ



50 ಸಾವಿರ ಲೀಟರ್ ಸಾಮರ್ಥ್ಯದ ಟ್ಯಾಂಕ್

ಪ್ರಜಾವಾಣಿ ಚಿತ್ರಗಳು: ವಿ.ಚಂದ್ರಪ್ಪ

‘ಇಷ್ಟೊಂದು ಜೀವಗಳಿಗೆ ಹಾನಿ ಆಗಿರುವುದನ್ನು ನೋಡಿದರೆ ಕುಡಿಯುವ ನೀರಿನಲ್ಲಿ ವಿಷ ಬೆರೆಸಿರುವುದು ಸ್ಪಷ್ಟ’ ಎಂದು ಕವಾಡಿಗರಹಟ್ಟಿಯ ಜನ ಆರೋಪಿಸಿದ್ದರು. ಅದಕ್ಕೆ ಅವರು ಈಗಲೂ ಬದ್ಧರಾಗಿದ್ದಾರೆ. ನೀರು ಕುಡಿಯಲು ಯೋಗ್ಯವಾಗಿಲ್ಲ ಹಾಗೂ ಕಾಲರಾ ಹರಡಬಹುದಾದ ವಿಬ್ರಿಯೊ ಬ್ಯಾಕ್ಟೀರಿಯಾ ಇರುವುದನ್ನು ಖಚಿತಪಡಿಸಿದ ವರದಿಯನ್ನು ಜನರು ಅನುಮಾನದಿಂದ ನೋಡುತ್ತಿದ್ದಾರೆ. ಮೃತರ ದೇಹದ ಮಾದರಿಯಲ್ಲಿ ವಿಷದ ಅಂಶ ಪತ್ತೆಯಾಗಿಲ್ಲ ಎಂಬ ವಿಧಿವಿಜ್ಞಾನ ಪ್ರಯೋಗಾಲಯದ ವರದಿಯ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತಪಡಿಸುತ್ತಿದ್ದಾರೆ. ವಿಷದ ಸುತ್ತ ಬಲವಾದ ಅನುಮಾನ ವ್ಯಕ್ತಪಡಿಸಲು ಕಾರಣವಾಗಿದ್ದು ಈ ಹಿಂದೆ ಇದೇ ಪ್ರದೇಶ ವ್ಯಾಪ್ತಿಯಲ್ಲಿ ಭಿನ್ನ ಜಾತಿಯ ಯುವಕ ಮತ್ತು ಬಾಲಕಿ ನಡುವೆ ಚಿಗುರೊಡೆದಿದ್ದ ಪ್ರೇಮ.

ಕವಾಡಿಗರಹಟ್ಟಿಯ ಎಸ್‌ಸಿ ಕಾಲೊನಿಯ ಯುವಕ ಹಾಗೂ ಲಿಂಗಾಯತ ಸಮುದಾಯದ ಬಾಲಕಿ ಪರಸ್ಪರ ಪ್ರೀತಿಸುತ್ತಿದ್ದರು. ಬಾಲಕಿ ಮನೆಯಲ್ಲಿ ಪ್ರೀತಿಗೆ ವಿರೋಧ ವ್ಯಕ್ತವಾಗಿದ್ದರಿಂದ ಇಬ್ಬರು ಊರು ಬಿಟ್ಟಿದ್ದರು. ಈ ಸಂಬಂಧ 2022ರಲ್ಲಿ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿತ್ತು. ಯುವಕನನ್ನು ಬಂಧಿಸಿದ ಪೊಲೀಸರು ಜೈಲಿಗೆ ತಳ್ಳಿದ್ದರು. ಮನೆಗೆ ಮರಳಲು ನಿರಾಕರಿಸಿದ ಬಾಲಕಿಗೆ ಬಾಲಮಂದಿರದಲ್ಲಿ ಆಶ್ರಯ ಕಲ್ಪಿಸಲಾಗಿತ್ತು. ಈಚೆಗಷ್ಟೇ ಆಕೆಗೆ 18 ವರ್ಷ ತುಂಬಿದ್ದರಿಂದ ಇತ್ತೀಚೆಗೆ ಬಾಲಮಂದಿರದ ಸಿಬ್ಬಂದಿ ಆಕೆಯನ್ನು ಪಾಲಕರಿಗೆ ಒಪ್ಪಿಸಿದ್ದರು. ಯುವತಿ ಈಗ ತಾನು ಪ್ರೀತಿಸಿದ ಯುವಕನನ್ನು ಮದುವೆಯಾಗಲು ಮುಂದಾಗಿದ್ದಳು. ಜೈಲಿನಲ್ಲಿರುವ ಪ್ರಿಯಕರನ ಬಿಡುಗಡೆಗೆ ಪ್ರಯತ್ನಿಸಿದ್ದಲ್ಲದೆ, ಪೊಲೀಸರೆದುರು ಮನದ ಇಂಗಿತ ವ್ಯಕ್ತಪಡಿಸಿದ್ದಳು.

ಇದು ಯುವತಿಯ ಕುಟುಂಬದ ಮುನಿಸಿಗೆ ಕಾರಣವಾಗಿತ್ತು. ಬಾಲಮಂದಿರದಿಂದ ಯುವತಿ ಮನೆಗೆ ಮರಳಿದ ಕೆಲವು ದಿನಗಳ ಬಳಿಕ ಈ ಘಟನೆ ನಡೆದಿದೆ. ಅನೇಕ ಜೀವಗಳನ್ನು ಬಲಿ ಪಡೆದ ಕುಡಿಯುವ ನೀರು ಕಲುಷಿತಗೊಂಡ ದಿನ ಅದೇ ಟ್ಯಾಂಕ್‌ನಿಂದ ಪಕ್ಕದ ಇತರ ಬೀದಿಗಳಿಗೂ ನೀರು ಹರಿದಿದೆಯಾದರೂ, ‘ಪರಿಶಿಷ್ಟ ಜಾತಿ ಕಾಲೊನಿ ಜನರಿಗೆ ಮಾತ್ರ ಆ ಜೀವಜಲ ‘ವಿಷ’ವಾಗಿ ಪರಿಣಮಿಸಿದ್ದು ಹೇಗೆ ಎಂಬುದು ಇಂದಿಗೂ ಒಗಟಾಗಿಯೇ ಉಳಿದಿದೆ. ನೀರು ಕಲುಷಿತಗೊಳ್ಳಲು ಏನು ಕಾರಣ ಎಂಬುದು ಪತ್ತೆಯಾದರೆ ಮಾತ್ರ ಈ ಅನುಮಾನ ನಿವಾರಣೆಯಾಗಬಹುದು.

ಚರಂಡಿ ಒಳಗೆ ಹಾದು ಮನೆಗಳಿಗೆ ಸಂಪರ್ಕ ಕಲ್ಪಿಸಿದ ಕುಡಿಯುವ ನೀರಿನ ಪೈಪ್‌ಗಳು

ಕಲುಷಿತ ಕೆರೆಯಲ್ಲಿ ಕೊಳವೆಬಾವಿ

ಶಾಂತಿಸಾಗರದ ನೀರಿನ ಕೊರತೆ ಉಂಟಾದಾಗ ಕವಾಡಿಗರಹಟ್ಟಿಯ ಜನರ ದಾಹ ತಣಿಸಲು 5 ಕೊಳವೆಬಾವಿಗಳಿವೆ. ಇದರಲ್ಲಿ ಒಂದು ಕೊಳವೆಬಾವಿ ಮುರುಘಾ ಮಠದ ಮುಂಭಾಗದ ಅರಸನಕೆರೆಯ ದಡದಲ್ಲಿದೆ. ಈ ಕೊಳವೆಬಾವಿಯ ನೀರು ಟ್ಯಾಂಕ್‌ಗೂ ಪೂರೈಕೆಯಾಗುತ್ತಿದೆ. ಅರಸನಕೆರೆಯ ನೀರು ಕಲುಷಿತ ಎಂದು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯೇ ಘೋಷಿಸಿದೆ.

‘ರಾಷ್ಟ್ರೀಯ ಜಲ ಗುಣಮಟ್ಟ ಕಣ್ಗಾವಲು ಕಾರ್ಯಕ್ರಮದಲ್ಲಿ (ಎನ್‌ಡಬ್ಲ್ಯುಎಂಪಿ) ಚಿತ್ರದುರ್ಗದ ಮೂರು ಜಲಮೂಲಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಚಿತ್ರದುರ್ಗ ನಗರ ವ್ಯಾಪ್ತಿಯ ಅರಸನಕೆರೆ, ಮಲ್ಲಾಪುರ ಕೆರೆ ಹಾಗೂ ಕುಡಿಯುವ ನೀರು ಪೂರೈಕೆ ಮಾಡುವ ವಾಣಿವಿಲಾಸ ಸಾಗರ ಜಲಾಶಯದ ನೀರನ್ನು ಪ್ರತಿ ತಿಂಗಳು ಪರೀಕ್ಷಿಸಲಾಗುತ್ತಿದೆ. ಅರಸನಕೆರೆ ಮತ್ತು ಮಲ್ಲಾಪುರ ಕೆರೆಗೆ ಚರಂಡಿ ಸಂಪರ್ಕ ಕಲ್ಪಿಸಲಾಗಿದ್ದು, ನೀರು ಸಂಪೂರ್ಣ ಕಲುಷಿತಗೊಂಡಿದೆ. ಕೆರೆ ನೀರು ಕಲುಷಿತಗೊಂಡಿರುವ ಬಗ್ಗೆ ನಗರಸಭೆಯ ಗಮನಕ್ಕೆ ತರಲಾಗಿದೆ’ ಎನ್ನುತ್ತಾರೆ ಮಾಲಿನ್ಯ ನಿಯಂತ್ರಣ ಮಂಡಳಿಯ ಪರಿಸರ ಅಧಿಕಾರಿ ಪ್ರಕಾಶ್.

ಮಿಲ್ ಮುಚ್ಚಿದ್ದರಿಂದ ಸಂಕಷ್ಟ

ಚಿತ್ರದುರ್ಗದಲ್ಲಿ ಹತ್ತಿ ಮಿಲ್‌ಗಳು ಉತ್ತುಂಗದಲ್ಲಿದ್ದ ಸಂದರ್ಭದಲ್ಲಿ ಸಾವಿರಾರು ಜನರು ಕೆಲಸ ಮಾಡುತ್ತಿದ್ದರು. ಗಾರೆಹಟ್ಟಿಯ ಜಯಲಕ್ಷ್ಮಿ ಮಿಲ್ ಕವಾಡಿಗರಹಟ್ಟಿಯ ಜನರಿಗೆ ಆಶ್ರಯ ಕಲ್ಪಿಸಿತ್ತು. ಹಟ್ಟಿಯ ಸನಿಹದ ಈ ಮಿಲ್‌ನಲ್ಲಿ ಕವಾಡಿಗರಹಟ್ಟಿಯ ಬಹುತೇಕ ಜನ ಕೆಲಸ ಮಾಡುತ್ತಿದ್ದರು. ನಷ್ಟದ ಸುಳಿಗೆ ಸಿಲುಕಿ ಹತ್ತಿ ಮಿಲ್‌ಗಳು ಬಾಗಿಲು ಮುಚ್ಚಿದ್ದರಿಂದ ಬಹುತೇಕರು ಬೀದಿಗೆ ಬಿದ್ದರು. ‘ನಿತ್ಯ ಬೆಳಿಗ್ಗೆ 8ರಿಂದ ಸಂಜೆ 5ರವರೆಗೆ ಹತ್ತಿ ಮಿಲ್‌ಗಳಲ್ಲಿ ಜನರು ಕೆಲಸ ಮಾಡುತ್ತಿದ್ದರು. ಆಗ ಊರಿನ ಜನರಲ್ಲಿ ಖುಷಿ ಕಾಣುತ್ತಿದ್ದೆವು. ಮಿಲ್ ಮುಚ್ಚಿದ್ದರಿಂದ ದಿನಗೂಲಿ ಮಾಡುವುದು ಅನಿವಾರ್ಯವಾಯಿತು. ಅಂದಿನಿಂದಲೂ ಜನರ ಜೀವನ ಮಟ್ಟದಲ್ಲಿ ಸುಧಾರಣೆ ಕಂಡಿಲ್ಲ’ ಎನ್ನುತ್ತಾರೆ ಕವಾಡಿಗರಹಟ್ಟಿಯ ಮಲ್ಲಣ್ಣ.

ಡಬ್ಬಿಂಗ್ ಹಂತದಲ್ಲಿ ‘ಆಪರೇಷನ್ ಲಂಡನ್ ಕೆಫೆ’

ಮೇಘಾ ಶೆಟ್ಟಿ

ಕಿರುತೆರೆಯಿಂದ ಬೆಳ್ಳಿತೆರೆಗೆ ಹೆಜ್ಜೆ ಇಟ್ಟ ನಟಿ ಮೇಘಾ ಶೆಟ್ಟಿ ‘ತ್ರಿಬಲ್ ರೈಡಿಂಗ್’, ‘ದಿಲ್‌ಪಸಂದ್’ ಸಿನಿಮಾಗಳ ಮೂಲಕ ಚಂದನವನದಲ್ಲಿ ಗುರುತಿಸಿಕೊಂಡವರು. ಸದ್ಯ ಇವರು ‘After ಆಪರೇಷನ್ ಲಂಡನ್ ಕೆಫೆ’ ಸಿನಿಮಾದ ಶೂಟಿಂಗ್ ಪೂರ್ಣಗೊಳಿಸಿದ್ದಾರೆ. ಚಿತ್ರವು ಡಬ್ಬಿಂಗ್ ಹಂತದಲ್ಲಿದ್ದು, ಶೀಘ್ರದಲ್ಲೇ ತೆರೆಗೆ ಬರಲು ಸಜ್ಜಾಗುತ್ತಿದೆ.

ಜಯತೀರ್ಥ ಅವರ ನಿರ್ದೇಶನದ ‘ಕೈವ’ ಹಾಗೂ ‘After ಆಪರೇಷನ್ ಲಂಡನ್ ಕೆಫೆ’ ಸಿನಿಮಾಗಳ ಬಿಡುಗಡೆಗೆ ಎದುರು ನೋಡುತ್ತಿರುವ ಮೇಘಾ ಅವರಿಗೆ ಚಿತ್ರತಂಡವು ಇತ್ತೀಚೆಗೆ ಪೋಸ್ಟರ್ ಮೂಲಕ ಶುಭಹಾರೈಸಿದೆ. ಇದೊಂದು ಆ್ಯಕ್ಷನ್ ಪ್ಯಾಕೇಜ್ ಚಿತ್ರವಾಗಿದ್ದು, ಕವೀಶ್ ಶೆಟ್ಟಿ ಮತ್ತು ಮೇಘಾ ಶೆಟ್ಟಿ ಇಲ್ಲಿ ಮುಖ್ಯಪಾತ್ರಗಳಲ್ಲಿದ್ದಾರೆ. ಕನ್ನಡ, ಮರಾಠಿ, ಹಿಂದಿ, ತೆಲುಗು, ತಮಿಳು ಹಾಗೂ ಮಲಯಾಳಂ ಭಾಷೆಯಲ್ಲಿ ತಯಾರಾಗುತ್ತಿರುವ ಈ ಸಿನಿಮಾದ ಚಿತ್ರೀಕರಣ ಅಂತಿಮ ಹಂತದಲ್ಲಿದ್ದು, ಡಬ್ಬಿಂಗ್ ಹಂತದ ಚಟುವಟಿಕೆಗಳು ಆರಂಭವಾಗಿದೆ ಎಂದಿದೆ ಚಿತ್ರತಂಡ.

ಇಂಡಿಯನ್ ಫಿಲ್ಮ್ ಫ್ಯಾಕ್ಟರಿ ಮತ್ತು ದೀಪಕ್ ರಾಣೆ ಫಿಲ್ಮ್ಸ್ ಲಾಂಛನದಡಿಯಲ್ಲಿ ವಿಜಯ್ ಕುಮಾರ್ ಶೆಟ್ಟಿ ಹವರಾಲ್ ರಮೇಶ್ ಕೊಠಾರಿ ಮತ್ತು ದೀಪಕ್ ರಾಣೆ ಈ ಸಿನಿಮಾವನ್ನು ನಿರ್ಮಾಣ ಮಾಡಿದ್ದಾರೆ. ಈ ಚಿತ್ರವನ್ನು ಸಡಗರ ರಾಘವೇಂದ್ರ ನಿರ್ದೇಶಿಸುತ್ತಿದ್ದಾರೆ. ಡಿ.ನಾಗಾರ್ಜುನ್ ಛಾಯಾಚಿತ್ರಗ್ರಹಣ, ಕೆ.ಎಂ. ಪ್ರಕಾಶ್ ಸಂಕಲನ, ವರದರಾಜ್ ಕಾಮತ್ ಕಲಾ ನಿರ್ದೇಶನ, ವಿಕ್ರಂ ಮೋರ್, ಮಾಸ್ ಮಾದ ಸಾಹಸ ನಿರ್ದೇಶನ ಚಿತ್ರಕ್ಕಿದೆ.

ಸಿನಿ ಬಿಟ್ಸ್

‘ಮುದ್ದು ರಾಕ್ಷಸಿ’ಯಾದ ರೀಷ್ಮಾ

ರೀಷ್ಮಾ ನಾಣಯ್ಯ

‘ಜೋಗಿ’ ಖ್ಯಾತಿಯ ಪ್ರೇಮ್ ನಿರ್ದೇಶನದ ‘ಏಕ್ ಲವ್ ಯಾ’ ಸಿನಿಮಾದ ಮೂಲಕ ಚಂದನವನ ಪ್ರವೇಶಿಸಿದ್ದ ನಟಿ ರೀಷ್ಮಾ ನಾಣಯ್ಯ ‘ವಾಮನ’ ಸಿನಿಮಾದಲ್ಲಿ ‘ಮುದ್ದು ರಾಕ್ಷಸಿ’ಯಾಗಿದ್ದಾರೆ.

ಕಿರಿಯ ವಯಸ್ಸಿನಲ್ಲೇ ನಾಲ್ಕೈದು ಸಿನಿಮಾಗಳನ್ನು ಕೈಯಲ್ಲಿಟ್ಟುಕೊಂಡಿರೋ ರೀಷ್ಮಾ ಸದ್ಯ ಪ್ರೇಮ್ ನಿರ್ದೇಶನದ ‘KD’ ಸಿನಿಮಾದ ಶೂಟಿಂಗ್‌ನಲ್ಲಿ ತೊಡಗಿಸಿಕೊಂಡಿದ್ದಾರೆ. ಈ ನಡುವೆ ಬಿಡುಗಡೆಗೆ ಸಜ್ಜಾಗುತ್ತಿರುವ ‘ವಾಮನ’ ಸಿನಿಮಾದ ಹಾಡೊಂದರ ಬಿಡುಗಡೆ ಕಾರ್ಯಕ್ರಮದಲ್ಲಿ ರೀಷ್ಮಾ ಹೆಜ್ಜೆ ಹಾಕಿದ್ದಾರೆ. ‘ಶೋಕ್ದಾರ್’ ಖ್ಯಾತಿಯ ಧನ್ವೀರ್ ಗೌಡ ನಟನೆಯ ಈ ಸಿನಿಮಾದ ಎರಡನೇ ಹಾಡು ‘ಮುದ್ದು ರಾಕ್ಷಸಿ..’ಯನ್ನು ಯಂಗ್ ರೆಬಲ್ ಸ್ಟಾರ್ ಅಭಿಷೇಕ್ ಅಂಬರೀಷ್ ಬಿಡುಗಡೆಗೊಳಿಸಿದರು. ಜೊತೆಗೆ ಹಾಡಿಗೆ ಹೆಜ್ಜೆಯನ್ನೂ ಹಾಕಿದರು.

‘ಒಂದು ಹಾಡು ಹಿಟ್ ಆಗುವುದರ ಹಿಂದೆ ಸಂಗೀತ ನಿರ್ದೇಶಕ ಹಾಗೂ ಸಾಹಿತ್ಯ ಬರೆದವರ ಶ್ರಮವಿರುತ್ತದೆ. ಗೆಳೆಯ ಧನ್ವೀರ್ ಇಷ್ಟು ಚೆನ್ನಾಗಿ ರೊಮ್ಯಾನ್ಸ್ ಮಾಡುತ್ತಾನೆ ಎಂದು ಗೊತ್ತಿರಲಿಲ್ಲ. ‘ಬೈ ಟು ಲವ್’ ಸಿನಿಮಾದಲ್ಲಿ ಆತನ ನಟನೆಯನ್ನು ನೋಡಿದ್ದೆ. ‘ವಾಮನ’ ಕಂಪ್ಲೀಟ್ ಕಮರ್ಷಿಯಲ್ ಪ್ಯಾಕೇಜ್ ರೀತಿ ಇದೆ’ ಎನ್ನುತ್ತಾರೆ ಅಭಿಷೇಕ್.

ವಿ. ನಾಗೇಂದ್ರ ಪ್ರಸಾದ್ ಸಾಹಿತ್ಯ ಬರೆದಿರುವ ಈ ಹಾಡಿಗೆ ಅಜನೀಶ್ ಲೋಕನಾಥ್ ಟ್ಯೂನ್ ಹಾಕಿದ್ದು, ವಿಜಯ್ ಪ್ರಕಾಶ್ ಹಾಗೂ ಹರ್ಷಿಕಾ ದೇವನಾಥ್ ಧ್ವನಿಯಾಗಿದ್ದಾರೆ. ಭೂಷಣ್ ಮಾಸ್ಟರ್ ಕೊರಿಯೋಗ್ರಾಫ್ ಮಾಡಿದ್ದಾರೆ. ಈಕ್ವಿನಾಕ್ಸ್ ಗ್ಲೋಬಲ್ ಎಂಟರ್‌ಟೈನ್ಮೆಂಟ್ ಬ್ಯಾನರ್ ಅಡಿಯಲ್ಲಿ ಚೇತನ್ ಗೌಡ ನಿರ್ಮಿಸಿರುವ ವಾಮನ ಸಿನಿಮಾವನ್ನು ಶಂಕರ್ ರಾಮನ್ ನಿರ್ದೇಶಿಸಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪದಬಂಧ 5406

– ವಿದ್ಯಾ ವಿನಯ್



ಎಡದಿಂದ ಬಲಕ್ಕೆ

2.ಬೆಳ್ಳಿ ಹಬ್ಬವಿದು (5)
4.ಪಾಕದೊಳಗಿರುವ ಪಾಪ (3)
5.ಸೊಂಟದಿಂದ ಪ್ರಾರಂಭವಾದ ಕಂಪನ (3)
9.ಭಾವನೆಗಳ ತಾಕಲಾಟ (2)
10.ವಾದ್ಯವನ್ನು ನುಡಿಸುವವನು (3)
11.ಕೊಡು,ಕೊಡು ಎನ್ನುತ್ತಿರುವ ಅಜ್ಜ (2)
12.ಸ್ವಂತ ಬೇಸಾಯದ ಭೂಮಿ (3)
15.ಮನದೊಳಗಿರುವ ಕಾಮ (3)
16. ಮನಸ್ಸನ್ನು ಸಂತೋಷ ಗೊಳಿಸುವುದು (5)

ಮೇಲಿಂದ ಕೆಳಕ್ಕೆ

1.ಆನಂದ ಈ ರೀತಿ ಬಂದಿದೆ (3)
2. ಉಲ್ಟಾ ತಿರುಗಿರುವ ಕೈ (2)
3. ವದನ ತಿರುಗಿಸಿ ನೋಡಿದಾಗ ಕಾಡು ಕಾಣಿಸಿದೆ (2)
4. ಪಾಕಕ್ಕೆ ದೊರೆತ ಬಹುಮಾನವೇ ಇದು? (5)
6. ಕೈ ಬಡಿದು ತಟ್ಟಿರುವ ಚಪ್ಪಾಳೆ (5)
7. ವಾದದಲ್ಲಿ ಕೊನೆಗೊಂಡಿರುವ ಸಂಭಾಷಣೆ (3)
8. ಕಡ ಪಡೆದುಕೊಂಡಿರುವ ಖದೀಮ (3)
13. ಓಟು ತಿರುಗಿಸಿದಾಗ ಆವರಿಸಿರುವ ಕತ್ತಲು (2)
14. ಇತ್ತೀಚೆಗೆ ಆರಂಭಗೊಂಡಿರುವ ಬೇಸಾಯ! (3)
15. ಕಾಮನೆ ಕೆರಳಿಸಿರುವ ಗೃಹ! (2)

5405ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಭಾವ 3.ಪ್ರಯಾಸ
6.ರಸಿಕ 8.ಪರಿಕರ
10.ಪ್ರಖರ 11.ಕಲ್ಯಾಣ
12.ರಸವಾದ 15.ಮಕರ
17.ಕಮ್ಮಾರ 18.ನಿಜ

ಮೇಲಿಂದ ಕೆಳಕ್ಕೆ:
2.ವರಾರ 3.ಪ್ರತೀಕ
4.ಸಮೀಪ 5.ಸುಂಕ
7.ಸಿತಾರ 9.ರಮಣ
10.ಪ್ರಚಾರ 11.ಕಣಕ
13.ಸಸಿ 14.ದಶಕ
15.ಮಧುರ 16.ರಜನಿ

ಸುಡೊಕು 5792

2		9			7	1		4
				3				
5		7	4		6	2		3
					5			1
	5	1		8			2	7
3			9					
		2		1			9	
9			7		8		1	2
	8	3		2		4		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5791 ಸುಡೊಕು

2	1	6	3	7	4	8	5	9
9	4	7	5	8	6	3	1	2
3	8	5	9	2	1	4	6	7
1	2	3	8	6	5	9	7	4
5	9	8	2	4	7	1	3	6
6	7	4	1	9	3	5	2	8
7	3	9	6	1	8	2	4	5
4	5	2	7	3	9	6	8	1
8	6	1	4	5	2	7	9	3

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಆಗಸ್ಟ್ 10, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಅಧಿಕ ಶ್ರಾವಣ ಕೃಷ್ಣ ದಶಮಿ ಗಂ. 29-07 ನಕ್ಷತ್ರ: ರೋಹಿಣಿ ಗಂ. 28-01 ಯೋಗ: ಧ್ರುವ ಗಂ. 15-10 ಕರಣ: ವಣಿಜ ಗಂ. 16-35, ಕರ್ಕಾಟಕ ಮಾಸದ 24 ನೇ ದಿನ, ಮಳೆನಕ್ಷತ್ರ: ಆಶ್ಲೇಷ 3. ರಾಹುಕಾಲ: ಮಧ್ಯಾಹ್ನ 01-30 - 03-00, ಸೂರ್ಯೋದಯ : 06-21 ಸೂರ್ಯಾಸ್ತ : 06-51 ಮುಸ್ಲಿಂ ದಿನಾಂಕ : 22 ಮೊಹರಮ್,
ಅದೃಷ್ಟ ಸಂಖ್ಯೆ : 3, 8

ಮೇಷ: ಜಾಹೀರಾತು ಏಜೆನ್ಸಿಯಲ್ಲಿರುವವರಿಗೆ ಏಳಿಗೆ ಹಾಗೂ ಪ್ರಚಾರ ತರುವ ವಿಚಾರದಲ್ಲಿ ಕೆಲಸ ಮಾಡುವ ಅವಕಾಶ ದೊರೆಯಲಿದೆ. ವಿದೇಶಿ ಪ್ರಯಾಣ ಸುಖಕರವಾಗಿರುವುದು. ಗೃಹ ವಿವಾದ ಉಪಶಮನವಾಗುವುದು.

ವೃಷಭ: ನ್ಯಾಯಾಲಯದಲ್ಲಿದ್ದ ವಿಚಾರ ಒಂದು ಈ ದಿನ ಇತ್ಯರ್ಥವಾಗಿ ಮನಸ್ಸಿಗೆ ಸಮಾಧಾನ ಸಿಗಲಿದೆ. ಬೇರೆಯವರನ್ನು ಮರುಳುಗೊಳಿಸುವ ಮಾತಿನ ಕೌಶಲ ನಿಮ್ಮಲ್ಲಿದೆ, ಅದು ಈ ದಿನ ನಿಮಗೆ ಮುಳ್ಳಾಗಬಹುದು.

ಮಿಥುನ: ಬೆಲೆ ಬಾಳುವ ವಸ್ತುವನ್ನು ಕಳೆದುಕೊಳ್ಳುವ ಯೋಗವಿದೆ ಆದ್ದರಿಂದ ಈ ದಿನ ಬಂಗಾರ, ದೊಡ್ಡ ಮಟ್ಟದ ಹಣ ಇವುಗಳನ್ನು ಹಿಡಿದುಕೊಂಡು ಸಂಚರಿಸುವುದು ಸರಿಯಲ್ಲ. ನಿಶ್ಚಿತ ರೂಪದಲ್ಲಿ ಕೆಲಸಗಳು ಜರುಗಲಿವೆ.

ಕರ್ಕಾಟಕ: ಒಣಪ್ರತಿಷ್ಠೆಯಿಂದಾಗಿ ಸಂಬಂಧಗಳು ನುಚ್ಚುನೂರಾಗುವ ಪರಿಸ್ಥಿತಿ ತಂದುಕೊಳ್ಳಬೇಡಿ. ಆಸ್ತಿ ಕೊಳ್ಳುವ ವಿಷಯದಲ್ಲಿ ಹೆಂಡತಿಯೊಂದಿಗೆ ಮಾತುಕತೆ ನೆಡೆಸಿ. ತಾಯಿಯವರ ಮಾನಸಿಕ ಆರೋಗ್ಯ ಸುಧಾರಿಸಲಿದೆ.

ಸಿಂಹ: ಹಲವು ಖರ್ಚು ವೆಚ್ಚಗಳನ್ನು ಮಾಡಬೇಕಾದರೂ ಆದಾಯದ ಹೊಸ ಮೂಲ ಒಂದು ಕುಡಿಯೊಡೆದು ಹೆಚ್ಚಿನ ಲಾಭ ಬರುವುದು. ಕಾರ್ಯದೊತ್ತಡ ಸದ್ಯಕ್ಕೆ ಕಡಿಮೆಯಾಗಿರುವಂತೆ ತೋರಿ ಮನಸ್ಸಿಗೆ ನಿರಾಳವಾಗುವುದು.

ಕನ್ಯಾ: ಸದ್ಯದ ಪರಿಸ್ಥಿತಿಗೆ ಹೊಂದಿಕೊಂಡು ಹೋಗುವುದೇ ಉತ್ತಮ ಎಂಬ ನಿಮ್ಮ ಭಾವನೆ ಸರಿಯಾಗಿದೆ. ವಿವಾದಗಳಿಂದ ದೂರ ಉಳಿದು ಕೆಲಸಗಳನ್ನು ನಿಧಾನವಾಗಿ ಪೂರ್ತಿಗೊಳಿಸುವ ತೀರ್ಮಾನಕ್ಕೆ ಬರುವಿರಿ.

ತುಲಾ: ಬೇರೆಯವರ ಬಗ್ಗೆ ಅನುಕಂಪ ತೋರುವ ನೀವು ನಿಮ್ಮ ಬಗ್ಗೆಯೂ ಗಮನ ಹರಿಸುವುದನ್ನು ಮರೆಯದಿರಿ. ಆಡಳಿತಾತ್ಮಕ ವಿಚಾರದಲ್ಲಿ ಭಾರಿ ಬದಲಾವಣೆಗಳ ಅಗತ್ಯಗಳನ್ನು ಸಂಸ್ಥಾಪಕರಿಗೆ ಮನವರಿಕೆ ಮಾಡಿಕೊಡುವಿರಿ.

ವೃಶ್ಚಿಕ: ಅಧಿಕಾರಿ ವರ್ಗದವರಿಗೆ ತಪ್ಪು ತಿಳಿಸುವಲ್ಲಿ ಧೈರ್ಯ ಸಾಮರ್ಥ್ಯದ ಜೊತೆಯಲ್ಲಿ ಸಹೋದ್ಯೋಗಿಗಳ ಉತ್ತೇಜನವನ್ನು ಪಡೆಯುವಿರಿ. ಸಂಬಂಧಿಗಳಲ್ಲಿ ಇದ್ದಂತಹ ಸಾಲದ ಹಣ ಹಿಂತಿರುಗಿ ಬರುವುದು.

ಧನು: ಅಂದುಕೊಂಡಿರುವ ಕೆಲಸಗಳು ಉತ್ತಮವಾಗಿ ನೆರವೇರುವುದರಿಂದ ನೆಮ್ಮದಿ ಇರುವುದು. ಗೃಹದಲ್ಲಿನ ಸಮಸ್ಯೆಗಳು ಪತಿ ಪತ್ನಿಯ ಹೊಂದಾಣಿಕೆಯಿಂದ ಪರಿಹಾರವಾಗುವುದು. ಕೃಷಿ ಕ್ಷೇತ್ರದವರಿಗೆ ಕೆಲಸ ಅಧಿಕ.

ಸಿಂಹ: ಕೈ ತಪ್ಪಿ ಹೋಗಿದ್ದ ಕೆಲವು ಕೆಲಸಗಳು ಹಿರಿಯರೊಬ್ಬರ ಸಹಾಯದಿಂದ ನಿಮಗೆ ಪುನಃ ದೊರೆಯಲಿದೆ. ಕಲಾವಿದರಿಗೆ ಚಿತ್ರರಂಗದ ಜಗತ್ತಿನಲ್ಲಿ ಅದರಲ್ಲೂ ಹಾಸ್ಯಗಾರನಾಗಿ ಉತ್ತಮ ಅವಕಾಶಗಳು ಸಿಗುವುವು.

ಕುಂಭ: ಹೊಸ ಉದ್ಯೋಗ ಒಪ್ಪಿಕೊಳ್ಳುವಾಗ ಅಥವಾ ಕರಾರಿಗೆ ಸಹಿ ಮಾಡುವಾಗ ವಕೀಲರನ್ನು ಅಥವಾ ಸಲಹೆಗಾರರನ್ನು ಭೇಟಿ ಮಾಡುವುದು ಒಳ್ಳೆಯದು. ಆತ್ಮಾಭಿಮಾನಕ್ಕೆ ಚ್ಯುತಿ ಬಾರದ ರೀತಿಯಲ್ಲಿ ನಡೆದುಕೊಳ್ಳಿರಿ.

ಮೀನ: ಇನ್ನೊಬ್ಬರು ಮಾಡುತ್ತಿರುವುದು ಶುಭ ಅಥವಾ ಅಶುಭ ಕೆಲಸವಾದರೂ ಅದರ ಬಗ್ಗೆ ಟೀಕೆ-ಟಿಪ್ಪಣಿ ನೀಡುವುದು ಸರಿಯಲ್ಲ. ಎಲ್ಲರೊಂದಿಗೂ ತಾಳ್ಮೆಯಿಂದ ವರ್ತಿಸಿ. ಧ್ಯಾನ ಪ್ರವಚನ ಕೇಳುವುದರತ್ತ ಮನಸ್ಸು ಹರಿಯಲಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,570
ಇಂದಿನ ಅಂತ್ಯ	19,632
▲	62
ದಿನದ ಗರಿಷ್ಠ	19,645

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹480
12 ಮೊಟ್ಟೆಗೆ	₹68
ಮೈಸೂರು	
100 ಮೊಟ್ಟೆಗೆ	₹485

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹325-585
ದ್ವಿತಳಿ (ಬಿ.ವಿ)	₹308-633

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹146
ಆರ್‌ಎಸ್‌ಎಸ್-5	₹140
ಗುಡ್ ಲಾಟ್	₹123

(ಪ್ರತಿ ಕೆ.ಜಿಗೆ)

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1860 (1840)
ಸೋಯಾ (ರಿಫೈನ್ಡ್)	₹950 (955)
ಸೂರ್ಯಕಾಂತಿ (ರಿಫೈನ್ಡ್)	₹965 (965)
ಪಾಮೋಲಿನ್	₹852 (855)

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1800-2000
ಮಧ್ಯಮ	₹1500-1700
ಸಣ್ಣ	₹1000-1500

ತಿಪಟೂರು ಕೊಬ್ಬರಿ (ಕ್ವಿಂಟಲ್‌ಗೆ)

ಕನಿಷ್ಠ	₹8000
ಗರಿಷ್ಠ	₹9421
ಮಾದರಿ	₹9000

ಧಾರವಾಡ: ಉದ್ಯಮ ಸ್ಥಾಪನೆಗೆ ಮುತ್ತಯ್ಯ ಮುರಳೀಧರನ್ ಸಿದ್ಧತೆ

ಪ್ರಜಾವಾಣಿ ವಾರ್ತೆ

ಧಾರವಾಡ: ಶ್ರೀಲಂಕಾದ ಮಾಜಿ ಕ್ರಿಕೆಟಿಗ ಮುತ್ತಯ್ಯ ಮುರಳೀಧರನ್ ಅವರು ಜಿಲ್ಲೆಯ ಮುಮ್ಮಿಗಟ್ಟಿ ಬಳಿ ತಂಪು ಪಾನೀಯ ತಯಾರಿಕಾ ಉದ್ಯಮ ಸ್ಥಾಪನೆಗೆ ಮುಂದಾಗಿದ್ದು, ಈಚೆಗೆ ಸ್ಥಳ ವೀಕ್ಷಿಸಿದ್ದಾರೆ.

'ಧಾರವಾಡ ತಾಲ್ಲೂಕಿನ ಮುಮ್ಮಿಗಟ್ಟಿ ಸಮೀಪ ಕೈಗಾರಿಕಾ ಘಟಕ ಸ್ಥಾಪನೆಗೆ 13.5 ಎಕರೆ ಜಾಗ ಒದಗಿಸಲು ಸರ್ಕಾರ ಅನುಮೋದನೆ ನೀಡಿದೆ. ಸಿಲೋನ್ ಬಿವರೇಜ್ ಕೆನ್ ಪ್ರೈವೇಟ್ ಲಿಮಿಟೆಡ್ ಅಧ್ಯಕ್ಷ ಮುತ್ತಯ್ಯ ಮುರಳೀಧರನ್ ಅವರು ಮೊದಲ ಹಂತದಲ್ಲಿ ₹ 256 ಕೋಟಿ ವೆಚ್ಚದಲ್ಲಿ ಘಟಕ ಆರಂಭಕ್ಕೆ ತಯಾರಿ ನಡೆಸಿದ್ದಾರೆ' ಎಂದು ಧಾರವಾಡದ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ಅಧಿಕಾರಿ ಬಿ.ಟಿ.ಪಾಟೀಲ 'ಪ್ರಜಾವಾಣಿ'ಗೆ ತಿಳಿಸಿದರು.

'ಮೂರು ಹಂತಗಳಲ್ಲಿ ₹ 950 ಕೋಟಿ ವೆಚ್ಚದಲ್ಲಿ ಘಟಕ ಸ್ಥಾಪನೆಗೆ ಯೋಜನೆ ಸಿದ್ಧಪಡಿಸಿರುವ ಅವರು ಸೆಪ್ಟೆಂಬರ್‌ನಲ್ಲಿ ಪ್ರಕ್ರಿಯೆ ಆರಂಭಿಸುವ ಸಾಧ್ಯತೆಯಿದೆ' ಎಂದರು.

'ಕೆಲ ತಿಂಗಳ ಹಿಂದೆ ಎರಡು ಬಾರಿ ಇಲ್ಲಿಗೆ ಭೇಟಿ ನೀಡಿದ್ದ ಮುತ್ತಯ್ಯ ಅವರು ಎಫ್‌ಎಂಸಿಜಿ ಕ್ಲಸ್ಟರ್‌ನಲ್ಲಿ ಕೈಗಾರಿಕಾ ಘಟಕ ಸ್ಥಾಪಿಸಲು ಮುಂದಾಗಿದ್ದಾರೆ. ಮೊದಲ ಹಂತದಲ್ಲಿ 200 ಸ್ಥಳೀಯರಿಗೆ ಉದ್ಯೋಗ ಸಿಗಲಿದೆ' ಎಂದು ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಶಿವಪುತ್ರಪ್ಪ ತಿಳಿಸಿದರು.

ಧಾರವಾಡ ತಾಲ್ಲೂಕಿನ ಮುಮ್ಮಿಗಟ್ಟಿ ಸಮೀಪದಲ್ಲಿ ಕೈಗಾರಿಕಾ ಘಟಕ ಸ್ಥಾಪನೆಗೆ ಗುರುತಿಸಿರುವ ಜಾಗ, ನಕ್ಷೆಯ ಬಗ್ಗೆ ಮುತ್ತಯ್ಯ ಮುರಳೀಧರನ್ (ಎಡದಿಂದ ಮೂರನೇಯವರು) ಮಾಹಿತಿ ಪಡೆದರು

ಎಂಎಸ್‌ಎಂಇ ವಲಯಕ್ಕೆ ನೀಡುವ ಸಾಲದ ಪ್ರಮಾಣದಲ್ಲಿ ಇಳಿಕೆ: ಆರ್‌ಬಿಐ ಮಾಹಿತಿ

ಬ್ಯಾಂಕ್ ಸಾಲ ನೀಡಿಕೆ ಎಲ್ಲೆಡೆ ಏರಿಕೆ

● ವಿಜಯ್ ಜೋಷಿ

ಬೆಂಗಳೂರು: ದೇಶದ ವಾಣಿಜ್ಯ ಬ್ಯಾಂಕ್‌ಗಳು ಅತಿಸಣ್ಣ, ಸಣ್ಣ ಹಾಗೂ ಮಧ್ಯಮ (ಎಂಎಸ್‌ಎಂಇ) ವಲಯದ ಉದ್ದಿಮೆಗಳಿಗೆ ನೀಡುವ ಸಾಲದ ಪ್ರಮಾಣವು ಹೊಸ ಆರ್ಥಿಕ ವರ್ಷದ ಮೊದಲ ಮೂರು ತಿಂಗಳಲ್ಲಿ ಕಡಿಮೆ ಆಗಿದ್ದರೂ, ಇದೇ ಅವಧಿಯಲ್ಲಿ ಕೃಷಿ ವಲಯಕ್ಕೆ ನೀಡುತ್ತಿರುವ ಸಾಲದ ಪ್ರಮಾಣ ಏರಿಕೆ ಕಂಡಿದೆ.

ಕೃಷಿ ಹಾಗೂ ಕೃಷಿ ಸಂಬಂಧಿ ಚಟುವಟಿಕೆಗಳಿಗೆ ವಾಣಿಜ್ಯ ಬ್ಯಾಂಕ್‌ಗಳು ನೀಡುವ ಸಾಲದ ಪ್ರಮಾಣವು ಈ ವರ್ಷದ ಜೂನ್ ತಿಂಗಳಲ್ಲಿ ಶೇಕಡ 19.7ರಷ್ಟು ಹೆಚ್ಚಾಗಿದೆ. ಹಿಂದಿನ ವರ್ಷದ ಜೂನ್ ತಿಂಗಳಲ್ಲಿ ಈ ವಲಯಕ್ಕೆ ನೀಡಿದ ಸಾಲದ ಪ್ರಮಾಣವು ಶೇ 12.9ರಷ್ಟು ಮಾತ್ರ ಹೆಚ್ಚಾಗಿತ್ತು.

ಕೃಷಿ ಹಾಗೂ ಕೃಷಿ ಸಂಬಂಧಿ ಚಟುವಟಿಕೆಗಳಿಗೆ ನೀಡುವ ಸಾಲದ ಪ್ರಮಾಣವು ಮೇ ತಿಂಗಳಲ್ಲಿ ಶೇ 16ರಷ್ಟು ಹೆಚ್ಚಾಗಿದೆ (ಹಿಂದಿನ ವರ್ಷದ ಮೇ ತಿಂಗಳಲ್ಲಿ ಶೇ 11.7ರಷ್ಟು). ಏಪ್ರಿಲ್ ತಿಂಗಳಲ್ಲಿ ಈ ವಲಯಕ್ಕೆ ಸಾಲ ನೀಡಿಕೆಯಲ್ಲಿ ಶೇ 16.7ರಷ್ಟು ಹೆಚ್ಚಳ ಆಗಿದೆ (ಹಿಂದಿನ ವರ್ಷದ ಇದೇ ತಿಂಗಳಲ್ಲಿ ಶೇ 10.6ರಷ್ಟು ಹೆಚ್ಚಳ).

ಪ್ರಸಕ್ತ ಹಣಕಾಸು ವರ್ಷದ ಮೊದಲ ಮೂರು ತ್ರೈಮಾಸಿಕಗಳಲ್ಲಿ 'ಇಡೀ ಉದ್ಯಮ ವಲಯಕ್ಕೆ ಸಾಲ ನೀಡಿಕೆ ಪ್ರಮಾಣದಲ್ಲಿನ ಹೆಚ್ಚಳವು ಹಿಂದಿನ ವರ್ಷದ ಪ್ರಮಾಣಕ್ಕೆ ಹೋಲಿಸಿದರೆ ಕಡಿಮೆ ಇದೆ. ಜೂನ್‌ನಲ್ಲಿ ಶೇ 8.1ರಷ್ಟು (ಹಿಂದಿನ ವರ್ಷ ಶೇ 9.5ರಷ್ಟು), ಮೇ ತಿಂಗಳಲ್ಲಿ ಶೇ 6ರಷ್ಟು (ಹಿಂದಿನ ವರ್ಷ ಶೇ 8.2ರಷ್ಟು), ಏಪ್ರಿಲ್ ತಿಂಗಳಲ್ಲಿ ಶೇ 7ರಷ್ಟು (ಹಿಂದಿನ ವರ್ಷ ಶೇ 8ರಷ್ಟು) ಆಗಿದೆ. ಆದರೆ ಬೃಹತ್ ಪ್ರಮಾಣದ ಉದ್ದಿಮೆಗಳಿಗೆ ಸಾಲ ನೀಡಿಕೆ ಪ್ರಮಾಣದಲ್ಲಿ ಮಾತ್ರ ಹೆಚ್ಚಳ ಆಗಿದೆ.

ಸಾಲ ನೀಡಿಕೆ ಪ್ರಮಾಣವು ಎಂಎಸ್‌ಎಂಇ ವಲಯಕ್ಕೆ ಕಡಿಮೆ ಆಗಿರುವುದರ ಕುರಿತು ಪ್ರಜಾವಾಣಿಗೆ ಪ್ರತಿಕ್ರಿಯೆ ನೀಡಿದ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ (ಎಫ್‌ಕೆಸಿಸಿಐ) ಅಧ್ಯಕ್ಷ ಬಿ.ವಿ. ಗೋಪಾಲ ರೆಡ್ಡಿ, 'ಸಣ್ಣ ಉದ್ಯಮಗಳಿಗೆ ಸಾಲ ಕೊಡಬೇಕು ಎಂದಾದರೆ ಸಾಲ ಹಿಂದಿರುಗಿಸುವ ಸಾಮರ್ಥ್ಯದ ಕುರಿತಾದ ರೇಟಿಂಗ್ ವಿವರವನ್ನು ಬ್ಯಾಂಕ್‌ಗಳು ಕೇಳುತ್ತಿವೆ. ಸಣ್ಣ ಉದ್ದಿಮೆಗಳು ಅದನ್ನು ಎಲ್ಲಿಂದ ಕೊಡುವುದು' ಎಂದು ಪ್ರಶ್ನಿಸಿದರು.

'ಸಣ್ಣ ಉದ್ದಿಮೆಗಳು ಸಾಲ ಕೋರಿ ಸಲ್ಲಿಸುವ ಅರ್ಜಿಗಳನ್ನು ಬ್ಯಾಂಕ್‌ಗಳು ಈ ಮೊದಲು ತಮ್ಮ ಶಾಖೆಯ ಮ್ಯಾನೇಜರ್‌ಗಳ ಹಂತದಲ್ಲಿ ಇತ್ಯರ್ಥಪಡಿಸುತ್ತಿದ್ದವು. ಆದರೆ ಈಗ ಕೇಂದ್ರೀಕೃತ ವ್ಯವಸ್ಥೆಯ ಮೂಲಕವೇ ಸಾಲಕ್ಕೆ ಅನುಮೋದನೆ ನೀಡಲಾಗುತ್ತಿದೆ. ರೇಟಿಂಗ್ ಇಲ್ಲ ಎಂದು ಅರ್ಜಿಗಳು ಮುಂದಕ್ಕೆ ಹೋಗುತ್ತಲೇ ಇಲ್ಲ. ಇದೊಂದು ಸಮಸ್ಯೆಯಾಗಿದೆ' ಎಂದರು.

'ಮೊದಲೆಲ್ಲ ಉದ್ದಿಮೆಗಳ ದಿನನಿತ್ಯದ ವಹಿವಾಟು ನೋಡಿ ಮ್ಯಾನೇಜರ್‌ಗಳೇ ತೀರ್ಮಾನ ತೆಗೆದುಕೊಳ್ಳುತ್ತಿದ್ದರು. ಕೈಗಾರಿಕಾ ವಲಯಗಳಲ್ಲಿ ಇರುವ ಬ್ಯಾಂಕ್ ಶಾಖೆಗಳ ಮ್ಯಾನೇಜರ್‌ಗಳಿಗೆ ಸಣ್ಣ ಉದ್ದಿಮೆಗಳ ಸಾಲದ ಅರ್ಜಿ ವಿಚಾರವಾಗಿ ತೀರ್ಮಾನ ಕೈಗೊಳ್ಳಲು ಅಧಿಕಾರ ನೀಡಿದರೆ, ಪರಿಸ್ಥಿತಿ ಸುಧಾರಿಸಬಹುದು' ಎಂದು ರೆಡ್ಡಿ ಅಭಿಪ್ರಾಯಪಟ್ಟರು.



ಮುಂಬೈ ಧಾರಣೆ

ಶೇಂಗಾ

9-8-2023

ಜಾವಾ 70/80(ಹೊಸ)	13400-13500
ಜಾವಾ 80/90(ಹೊಸ)	12000-12100
ದಪ್ಪ ಮಧ್ಯಪ್ರದೇಶ(ಹೊಸ)	13000-13100
ದಪ್ಪ ಗುಜರಾತ್(ಹೊಸ)	14300-14400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1870(1850)
ಒಂದು ವಾರದ ಡೆಲಿವರಿ	1865(1845)
ಸೋಯಾ ಕಚ್ಚಾ	900(900)
ಪಾಮ್ ವಾರದ ಡೆಲಿವರಿ	850(853)
ಸೂರ್ಯಕಾಂತಿ ಎಣ್ಣೆ ಕಚ್ಚಾ	900(910)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
58,850(59,000)
ಬೆಳ್ಳಿ ಕೆ.ಜಿ 70,150(70,500)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕ್ರೆಡಿಟ್ ಕಾರ್ಡ್ ಎನ್‌ಪಿಎ ಏರಿಕೆ

ನವದೆಹಲಿ (ಪಿಟಿಐ): ದೇಶದಲ್ಲಿ ಮಾರ್ಚ್ ಅಂತ್ಯದ ವೇಳೆಗೆ ವಸೂಲಾಗದ ಕ್ರೆಡಿಟ್ ಕಾರ್ಡ್ ಸಾಲದ ಮೊತ್ತವು ₹4,072 ಕೋಟಿಗೆ ಏರಿಕೆ ಕಂಡಿದೆ ಎಂದು ಕೇಂದ್ರ ಸರ್ಕಾರವು ರಾಜ್ಯಸಭೆಗೆ ಮಂಗಳವಾರ ತಿಳಿಸಿದ್ದಾರೆ.

'ಹಿಂದಿನ ವರ್ಷದ ಮಾರ್ಚ್ ಅಂತ್ಯಕ್ಕೆ ಕ್ರೆಡಿಟ್ ಕಾರ್ಡ್ ಸಾಲದಲ್ಲಿ ಪಾವತಿಯಾಗದೆ ಉಳಿದ (ಎನ್‌ಪಿಎ) ಮೊತ್ತವು ₹3,122 ಕೋಟಿ ಆಗಿತ್ತು. ಈ ವರ್ಷದ ಮಾರ್ಚ್ ಅಂತ್ಯಕ್ಕೆ ಅದು ₹4,072 ಕೋಟಿ ಆಗಿದೆ' ಎಂದು ಹಣಕಾಸು ಖಾತೆ ರಾಜ್ಯ ಸಚಿವ ಭಾಗವತ್ ಕರಾಡ್ ತಿಳಿಸಿದ್ದಾರೆ.

ಶುಲ್ಕದಿಂದ ₹35,587.68 ಕೋಟಿ ಸಂಗ್ರಹ

ಒಂದನೇ ಪುಟದಿಂದ...

2021ರ ಜೂನ್ 10ರ ಆರ್‌ಬಿಐ ಅಧಿಸೂಚನೆಯ ಪ್ರಕಾರ, ಗ್ರಾಹಕರು ತಾವು ಖಾತೆ ಹೊಂದಿರುವ ಬ್ಯಾಂಕಿನ ಎಟಿಎಂ ಮೂಲಕ ಪ್ರತಿ ತಿಂಗಳು ಐದು ಬಾರಿ ಉಚಿತವಾಗಿ ವಹಿವಾಟು ನಡೆಸಬಹುದು. ಬೇರೆ ಬ್ಯಾಂಕ್ ಎಟಿಎಂ ಮೂಲಕ ನಗರ ಪ್ರದೇಶದಲ್ಲಿ ತಿಂಗಳಿಗೆ ಮೂರು ಬಾರಿ, ಗ್ರಾಮೀಣ ಭಾಗದಲ್ಲಿ ತಿಂಗಳಿಗೆ ಐದು ಬಾರಿ ಮಾತ್ರ ಶುಲ್ಕ ರಹಿತವಾಗಿ ವಹಿವಾಟು ನಡೆಸುವ ಮಿತಿ ವಿಧಿಸಲಾಗಿದೆ. ಈ ಮಿತಿ ಮೀರಿದರೆ ಪ್ರತಿ ವಹಿವಾಟಿಗೆ ಗರಿಷ್ಠ ₹21 ಶುಲ್ಕ ವಿಧಿಸುವುದು 2022ರ ಜನವರಿ1ರಿಂದ ಜಾರಿಗೆ ಬಂದಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರೆಸ್ಟೀಜ್ ಟ್ರೈ–ಪ್ಲೈ ಸ್ವರ್ಟ್ ಹಂಡಿ

ಪ್ರೆಸ್ಟೀಜ್ ಟ್ರೈ–ಪ್ಲೈ ಕುಕ್ಕರ್ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟಿಟಿಕೆ ಪ್ರೆಸ್ಟೀಜ್ ಕಂಪನಿಯು ಟ್ರೈ–ಪ್ಲೈ ಸ್ವರ್ಟ್ ಹಂಡಿ ಕುಕ್ಕರ್ ಬಿಡುಗಡೆ ಮಾಡಿದೆ. ಆಹಾರ ಪದಾರ್ಥಗಳು ಕುಕ್ಕರ್‌ನಿಂದ ಸೋರುವುದನ್ನು ಇದರ ವಿನ್ಯಾಸವು ತಡೆಯುತ್ತದೆ ಎಂದು ಕಂಪನಿ ಹೇಳಿದೆ.

ಇದರ ಮುಚ್ಚಳದ ವಿನ್ಯಾಸದ ಕಾರಣದಿಂದಾಗಿ, ಅಡುಗೆಯ ನಂತರ ಕೌಂಟರ್‌ಟಾಪ್ ಹಾಗೂ ಸ್ಟವ್ ಮೇಲ್ಭಾಗವನ್ನು ಸ್ವಚ್ಛಗೊಳಿಸುವ ಅಗತ್ಯವು ಕನಿಷ್ಠ ಮಟ್ಟಕ್ಕೆ ತಗ್ಗುತ್ತದೆ. ಹೀಗಾಗಿ ಇದು ಸಮಯದ ಉಳಿತಾಯಕ್ಕೂ ನೆರವಾಗುತ್ತದೆ ಎಂದು ಕಂಪನಿ ಹೇಳಿಕೊಂಡಿದೆ.

3 ಲೀಟರ್ ಹಾಗೂ 5 ಲೀಟರ್ ಸಾಮರ್ಥ್ಯದ ಈ ಶ್ರೇಣಿಯ ಕುಕ್ಕರ್‌ಗಳು ಲಭ್ಯವಿವೆ ಎಂದು ಅದು ತಿಳಿಸಿದೆ.

ಸುಧಾ, ಮಯೂರ ಓದಿರಿ

ಟೊಮೆಟೊ ಧಾರಣೆ ಇಳಿಕೆ

15 ಕೆ.ಜಿ ಟೊಮೆಟೊ ಬಾಕ್ಸ್ ದರ ಸರಾಸರಿ ₹1,100

ಪ್ರಜಾವಾಣಿ ವಾರ್ತೆ

ಕೋಲಾರ: ಏಪ್ರಿಲ್ ಹಾಗೂ ಮೇ ತಿಂಗಳಿನಲ್ಲಿ ನಾಟಿ ಮಾಡಿದ್ದ ಟೊಮೆಟೊ ಫಸಲು ಕೋಲಾರ ಎಪಿಎಂಸಿ ಮಾರುಕಟ್ಟೆಗೆ ಬರುತ್ತಿರುವ ಕಾರಣ ಆವಕ ಹೆಚ್ಚಾಗಿದ್ದು, ಸಗಟು ಮತ್ತು ಚಿಲ್ಲರೆ ಮಾರುಕಟ್ಟೆಯಲ್ಲಿಯೂ ಟೊಮೆಟೊ ದರ ನಿಧಾನವಾಗಿ ಇಳಿಕೆಯಾಗುತ್ತಿದೆ.

ಜುಲೈ 31 ರಂದು ಗರಿಷ್ಠ ₹ 2,700ಕ್ಕೆ ಮಾರಾಟವಾಗಿ ಸಾರ್ವಕಾಲಿಕ ದಾಖಲೆ ನಿರ್ಮಿಸಿದ್ದ 15 ಕೆ.ಜಿ ನಾಟಿ ಟೊಮೆಟೊ ಬಾಕ್ಸ್ ಸರಾಸರಿ ದರ ಬುಧವಾರದ ಹರಾಜಿನಲ್ಲಿ ₹1,100 ಇತ್ತು. ರೈತರಿಗೆ ಕೆ.ಜಿಗೆ ಸರಾಸರಿ ₹73 ದರ ಲಭಿಸಿದೆ. ಚಿಲ್ಲರೆ ಮಾರುಕಟ್ಟೆಯಲ್ಲೂ ಹೆಚ್ಚುಕಡಿಮೆ ಇದೇ ದರದಲ್ಲಿ ಟೊಮೆಟೊ ದೊರೆಯುತ್ತಿದೆ.

15 ಕೆ.ಜಿ.ಟೊಮೊಟೊ ಬಾಕ್ಸ್ ಗರಿಷ್ಠ ₹1,340 ಮತ್ತು ಕನಿಷ್ಠ ₹300ಕ್ಕೆ ಮಾರಾಟವಾಗಿದೆ. ಹತ್ತು ದಿನಗಳ ಅಂತರದಲ್ಲಿ ಬಾಕ್ಸ್‌ಗೆ ₹ 1,300ಕ್ಕೂ ಹೆಚ್ಚು ಇಳಿಕೆ ಆದಂತಾಗಿದೆ.

ಬುಧವಾರ ಕೋಲಾರ ಎಪಿಎಂಸಿಯಲ್ಲಿ 86,091 ಕ್ವಿಂಟಲ್ ಅಂದರೆ 12,913 ಬಾಕ್ಸ್ ಟೊಮೆಟೊ ಆವಕವಾಗಿದೆ. ಹತ್ತು ದಿನಗಳ ಅಂತರದಲ್ಲಿ ಸುಮಾರು 33 ಸಾವಿರ ಕ್ವಿಂಟಲ್ ಆವಕ ಹೆಚ್ಚಿದೆ. ಜುಲೈ 31 ರಂದು ಕೇವಲ 52,820 ಕ್ವಿಂಟಲ್ ಆವಕವಾಗಿತ್ತು. ಹೀಗಾಗಿ ಬೇಡಿಕೆ ತಗ್ಗಿದೆ ಎಂದು ಎಪಿಎಂಸಿ ಮೂಲಗಳು ತಿಳಿಸಿವೆ.

ಬೆಲೆ ಹೆಚ್ಚಾದ ನಂತರ ಜಿಲ್ಲೆಯಲ್ಲಿ ಈಚೆಗೆ ಸುಮಾರು ಆರು ಸಾವಿರ ಹೆಕ್ಟೇರ್‌ನಲ್ಲಿ ಹೊಸದಾಗಿ ಟೊಮೆಟೊ ನಾಟಿ ಮಾಡಲಾಗಿದೆ.

24 ಭಿಕ್ಷುಕರನ್ನು ವಾಪಸ್ ಕಳಿಸಿದ ನೇಪಾಳ

ಕಠ್ಮಂಡು (ಪಿಟಿಐ): ನಕಲಿ ದಾಖಲೆ ಹೊಂದಿದ್ದ, ನೈಸರ್ಗಿಕ ವಿಕೋಪಕ್ಕೆ ಸಿಲುಕಿ ಸಂಕಷ್ಟಕ್ಕೀಡಾಗಿದ್ದವರಂತೆ ವರ್ತಿಸುತ್ತಿದ್ದ ಅಪ್ರಾಪ್ತ ವಯಸ್ಸಿನ 12 ಮಂದಿ ಸೇರಿದಂತೆ 24 ಭಿಕ್ಷುಕರನ್ನು ಬಂಧಿಸಿದ ನೇಪಾಳ ಪೊಲೀಸರು, ಭಾರತಕ್ಕೆ ವಾಪಸ್ ಕಳುಹಿಸಿದ್ದಾರೆ.

ರಾಜಸ್ಥಾನದ ಇವರೆಲ್ಲರೂಇಂಡೋ–ನೇಪಾಳ ಗಡಿಯಲ್ಲಿರುವ ಬಿರ್ತಾಮೋಡ್ ನಗರದ ಬೀದಿಗಳಲ್ಲಿ ಭಿಕ್ಷೆ ಬೇಡುತ್ತಿದ್ದರು ಎಂದು ತಿಳಿಸಿದ್ದಾರೆ. ನೇಪಾಳದಲ್ಲಿನ ಹಬ್ಬದ ದಿನಗಳಲ್ಲಿ ಗಡಿ ದಾಟಿ ಭಿಕ್ಷೆ ಬೇಡಲು ಬರುತ್ತಿರುವವರ ಸಂಖ್ಯೆ ಈಚೆಗೆ ಹೆಚ್ಚಿದೆ ಎಂದಿದ್ದಾರೆ.

ಜೈಲಿನಿಂದ ಹೊರಗೆ ಕರೆದೊಯ್ಯಿರಿ

ರಾತ್ರಿ ಸೊಳ್ಳೆ, ಹುಳ ಹಪ್ಪಟೆಗಳ ಕಾಟ: ವಕೀಲರಲ್ಲಿ ಇಮ್ರಾನ್ ಖಾನ್ ಮನವಿ

ಇಸ್ಲಾಮಾಬಾದ್ (ಪಿಟಿಐ): ಹಗಲಿನಲ್ಲಿ ನೊಣ, ರಾತ್ರಿ ಸೊಳ್ಳೆ, ಹುಳ ಹಪ್ಪಟೆಗಳ ಕಾಟವಿರುವ ಕಿರಿದಾದ ಜೈಲಿನಿಂದ ಹೊರಗೆ ಕರೆದುಕೊಂಡು ಹೋಗಿ ಎಂದು ಅಟಕ್ ಜೈಲಿನಲ್ಲಿರುವ ಪಾಕಿಸ್ತಾನ ಮಾಜಿ ಪ್ರಧಾನಿ ಇಮ್ರಾನ್ ಖಾನ್ ತಮ್ಮ ಪರ ವಕೀಲರಲ್ಲಿ ಮನವಿ ಮಾಡಿದ್ದಾರೆ.

ಇಮ್ರಾನ್ ಖಾನ್ ಅವರ ಮುಂದಿನ ಕಾನೂನು ಹೋರಾಟಕ್ಕೆ ಸಂಬಂಧಿಸಿದ ದಾಖಲೆಗಳಿಗೆ ಸಹಿ ಪಡೆಯಲೆಂದು ವಕೀಲ ನಯೀಮ್ ಹೈದರ್ ಪಂಜೋತಾ ಸೋಮವಾರ ಜೈಲಿಗೆ ತೆರಳಿದ್ದರು. ಈ ವೇಳೆ ಖಾನ್ ತಮ್ಮ ನೋವು ಹೇಳಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ ಎಂದು ಜಿಯೊ ನ್ಯೂಸ್ ವರದಿ ಮಾಡಿದೆ.

ಇಮ್ರಾನ್

ಇದಕ್ಕೂ ಮುನ್ನ, '70 ವರ್ಷ ವಯಸ್ಸಿನ ಇಮ್ರಾನ್ ಖಾನ್‌ಗೆ ಜೈಲಿನಲ್ಲಿ 'ಸಿ' ದರ್ಜೆಯ ಸವಲತ್ತುಗಳನ್ನು ಒದಗಿಸಲಾಗಿದೆ. ಅವರಿಗೆ ನೀಡಲಾಗಿರುವ ಕೋಣೆ ಅತಿ ಚಿಕ್ಕದು. ನೊಣ, ತಿಗಣೆಗಳ ಉಪಟಳವಿದೆ, ತೆರೆದ ಶೌಚಾಲಯವಿದೆ' ಎಂದು ಪಂಜೋತಾ ತಿಳಿಸಿದ್ದರು.

ತೋಷಖಾನಾ ಭ್ರಷ್ಟಾಚಾರ ಪ್ರಕರಣದಲ್ಲಿ ಇಲ್ಲಿನ ವಿಚಾರಣಾ ನ್ಯಾಯಾಲಯ ಮೂರು ವರ್ಷ ಜೈಲು ಶಿಕ್ಷೆ ವಿಧಿಸಿದ ಬೆನ್ನಲ್ಲೇ ಶನಿವಾರ ಇಮ್ರಾನ್ ಖಾನ್ ಅವರನ್ನು ಬಂಧಿಸಲಾಗಿದೆ.

ಪಾಕ್ ಸರ್ಕಾರದ ಪ್ರತಿಕ್ರಿಯೆ ಕೇಳಿದ ಹೈಕೋರ್ಟ್: ಇಮ್ರಾನ್ ಖಾನ್ ಅವರು, ತಮ್ಮನ್ನು ಅಟಕ್ ಜೈಲಿನಿಂದ ರಾವಲ್ಪಿಂಡಿಯಲ್ಲಿರುವ ಅಡಿಯಾಲ ಕಾರಾಗೃಹಕ್ಕೆ ಸ್ಥಳಾಂತರಿಸುವಂತೆ ಕೋರಿದ್ದ ಅರ್ಜಿಗೆ ಸಂಬಂಧಿಸಿದಂತೆ ಇಸ್ಲಾಮಾಬಾದ್ ಹೈಕೋರ್ಟ್ ಬುಧವಾರ ಪಾಕ್ ಮತ್ತು ಪಂಜಾಬ್ ಸರ್ಕಾರದ ಪ್ರತಿಕ್ರಿಯೆ ಕೇಳಿದೆ.

ಖಾನ್ ಸೋಮವಾರ ಸ್ಥಳಾಂತರ ಕೋರಿ ಅರ್ಜಿ ಸಲ್ಲಿಸಿದ್ದರು. ಇದೇ ವೇಳೆ ಕಾನೂನು ತಂಡ, ಕುಟುಂಬಸ್ಥರು, ವೈದ್ಯ ಫೈಸಲ್ ಸುಲ್ತಾನ್ ಹಾಗೂ ರಾಜಕಾರಣಿಗಳನ್ನು ಆಗಾಗ ಜೈಲಿನಲ್ಲಿ ಭೇಟಿಯಾಗಲು ಅವಕಾಶ ನೀಡಬೇಕು ಎಂದೂ ಮನವಿ ಮಾಡಿದ್ದರು.

ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಆಮರ್ ಫಾರೂಕ್ ಅವರು, ಕಾನೂನು ತಂಡವು ಖಾನ್ ಅವರನ್ನು ಭೇಟಿಯಾಗಲು ಅವಕಾಶ ನೀಡಿ ಆದೇಶಿಸಿದ್ದಾರೆ. ಅರ್ಜಿಯ ವಿಚಾರಣೆಯನ್ನು ಆಗಸ್ಟ್ 11ಕ್ಕೆ ಮುಂದೂಡಿದ್ದಾರೆ ಎಂದು ಡಾನ್ ದಿನಪತ್ರಿಕೆ ವರದಿ ಮಾಡಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಭವಿಷ್ಯ
Astrology
ಒಂದೇಕರೆಯಲ್ಲಿ ಶಾಶ್ವತ ಪರಿಹಾರ, ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್100% ಗ್ಯಾರಂಟಿ ಪರಿಹಾರ. ಪಂಡಿತ್. ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ,ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರ ಧರ್ಮಸ್ಥಳ:9880788899
ಪ್ರೀತಿಯಲ್ಲಿ ನಂಬಿ ಮೋಸ, ಇಷ್ಟಪಟ್ಟವರು ನಿಮ್ಮಂತೆ ಆಗಲು, ಮದುವೆಯಲ್ಲಿ ಅಡೆತಡೆ, ಸ್ತ್ರೀ-ಪುರುಷ ವಶೀಕರಣ. ನಿಮ್ಮ ಎಲ್ಲಾ ಸಮಸ್ಯೆಗಳಿಗೆ 1750ರಲ್ಲಿ ಪರಿಹಾರ 9945566330
ಸ್ತ್ರೀವಶೀಕರಣ, ಪುರುಷವಶೀಕರಣ, ಪ್ರೀತಿಪ್ರೇಮ, ಇಷ್ಟಪಟ್ಟವರು ನಿಮ್ಮಂತಾಗಲು 11ಗಂಟೆಗಳಲ್ಲಿ ಸ್ತ್ರೀಯರಿಗೆ ಕಡಿಮೆ ಖರ್ಚಿನಲ್ಲಿ ಪರಿಹಾರ. 9448687421

Book Your Classifieds Ads Online Log in to dhclassifieds.com
Contact : 9845114560 : 9731810277 9901641752 : 9886213331 080 - 45557163 / 164
DH DECCAN HERALD ಪ್ರಜಾವಾಣಿ

ಉದ್ಯೋಗಾವಕಾಶ
General
ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673
Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266 /9611221244
ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ಪ್ರವಾಸ
Travel
ಸೆಪ್ಟೆಂಬರ್ ಅಕ್ಟೋಬರ್ ನವೆಂಬರ್ ಡಿಸೆಂಬರ್ ಕಾಶಿಯಾತ್ರೆ 6 ದಿನಗಳು. ಉತ್ತರಭಾರತ ಪ್ರವಾಸ 11 ದಿನಗಳು. ಗುಜರಾತ್ ಪ್ರವಾಸ 11 ದಿನಗಳು. ಗುಜರಾತ್/ಮಧ್ಯಪ್ರದೇಶ ಪ್ರವಾಸ 12 ದಿನಗಳು ರಾಜಸ್ಥಾನ್ ಪ್ರವಾಸ 11 ದಿನಗಳು. ಮಧ್ಯಪ್ರದೇಶ ಪ್ರವಾಸ 12 ದಿನಗಳು. ಪುರಿ,ಕಲ್ಕತ್ತಾ ಡಾರ್ಜಲಿಂಗ 11 ದಿನಗಳು. ಚಾರ್‌ಧಾಮ್ ಯಾತ್ರೆ 13 ದಿನಗಳು. ಕಾಶ್ಮೀರ್,ವೈಷ್ಣೋದೇವಿ 9 ದಿನಗಳು. ಶಿಮ್ಲಾ,ಮನಾಲಿ ಪ್ರವಾಸ 7 ದಿನಗಳು. ದಕ್ಷಿಣಕನ್ನಡ ಗೋವಾ,ಕೇರಳ ತಮಿಳುನಾಡು,ಶಿರಡಿ ಪ್ರತಿ ತಿಂಗಳು ನಿಗದಿಯಂತೆ ಪ್ರಯಾಣ ಸಂಪರ್ಕಿಸಿ: ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್ ವಿಜಯನಗರ,ಬೆಂಗಳೂರು 9880847001 9342848791

ರಾಜಕೀಯ ನಾಯಕತ್ವದ ಕಾರ್ಯಾಗಾರ
ಜನನಾಯಕರಾಗುವ ಕನಸು ನಿಮ್ಮಲಿದೆಯೇ ?
ಹಾಗಾದರೆ ಬನ್ನಿ, ಈ ಶಿಬಿರದಲ್ಲಿ ಪಾಲ್ಗೊಳ್ಳಿ, ನಾವು ನಿಮ್ಮನ್ನು ಭವಿಷ್ಯದ ನಾಯಕರನ್ನಾಗಿ ರೂಪಿಸುತ್ತೇವೆ.
ಸಂವಿಧಾನ, ಜನಸೇವೆ, ಕಾನೂನು, ಚುನಾವಣೆ, ನಿಷ್ಕಳಂಕ ವ್ಯಕ್ತಿತ್ವ ಮೌಲ್ಯಧಾರಿತ ರಾಜಕಾರಣ, ಸಾರ್ವಜನಿಕ ಭಾಷಣ, ವೈಯಕ್ತಿಕ ನಡವಳಿಕೆ, ಮಾನವೀಯ ಮೌಲ್ಯಗಳು, ಸಂವಹನ ಕೌಶಲ್ಯ, ಸಂಸದೀಯ ವ್ಯವಸ್ಥೆ, ಆರ್ಥಿಕ ನಿರ್ವಹಣೆ, ಆಡಳಿತ, ಮಾಧ್ಯಮ, ಸಂಘಟನೆ, ನಾಯಕತ್ವ, ಆರೋಗ್ಯ, ಕ್ರೀಡಾ ಮನೋಭಾವ ಹೀಗೆ ಇನ್ನೂ ಅನೇಕ ವಿಷಯಗಳ ಒಟ್ಟು ಪುಂಜವೇ ಈ ಕಾರ್ಯಗಾರ.
ನೆನಪಿಡಿ – ಸ್ಥಳೀಯ ಸಂಸ್ಥೆಗಳು ಭವಿಷ್ಯದ ಯಶಸ್ಸಿನ ಹೆಬ್ಬಾಗಿಲು.
ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್, ಮತ್ತು ಬಿಬಿಎಂಪಿ ಚುನಾವಣೆಗಳಲ್ಲಿ ಸ್ಪರ್ಧಿಸುವವರಿಗೆ ಸುವರ್ಣಾವಕಾಶ.
ಶನಿವಾರ, ಭಾನುವಾರ 02, 03 ಸೆಪ್ಟೆಂಬರ್ 2023
ಸ್ಥಳ: ಬಾಪೂ ಸಭಾಂಗಣ, ಗಾಂಧಿ ಭವನ, ಶಿವಾನಂದ ಸರ್ಕಲ್, ಬೆಂಗಳೂರು
ಆಸಕ್ತರು ವಿವರಗಳೊಂದಿಗೆ ಈ ವಿಳಾಸಕ್ಕೆ ಸಂಪರ್ಕಿಸಿ:
ಭಾರತೀಯ ರಾಜಕೀಯ ನಾಯಕತ್ವ ವಿಕಸನ ಸಂಸ್ಥೆ
#62, ಡಿ.ಟಿ. ರಸ್ತೆ, 8ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–03
Call: 63645 18936
E-mail: vikasanapolitics@gmail.com

ಏಷ್ಯನ್ ಟ್ರಾವಲ್ ಏಜೆನ್ಸಿ ಮಿನರ್ವ ಸರ್ಕಲ್ ಬೆಂಗಳೂರು ವತಿಯಿಂದ ವಿಮಾನ/ A/C ಬಸ್ ರೂಮ್ ಸೌಲಭ್ಯದೊಂದಿಗೆ 06.09.2023 04.10.2023 ಕಾಶಿ,ಗಯಾ,ಪ್ರಯಾಗ. 20.09.2023 16.10.2023 26.10.2023 ಚಾರ್‌ಧಾಮ್ ರಾಮೇಶ್ವರ,ಕನ್ಯಾಕುಮಾರಿ ಯಾತ್ರೆಗಳಿಗೆ ಸಂಪರ್ಕಿಸಿ: 26574131, 7204173686 9686708171
10/09/2023/10/10/2023 6ದಿನಗಳು ಕಾಶಿ,ಗಯಾ ಬುದ್ದಗಯಾ ಅಯೋಧ್ಯ ಅಲಹಾಬದ್24000/ಪ್ರತಿ ತಿಂಗಳು ಅಂಡಮಾನ್ ಹವಳದ್ವೀಪ 5/8ದಿನಗಳು ಹಡಗು/ವಿಮಾನದಲ್ಲಿ ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್ 9845560219/ 9739847429
31.8.2023 ನೇಪಾಳ, ಮುಕ್ತಿನಾಥ, ಕಾಶಿ. 6.9.2023 ಕಾಶಿ, ಅಯೋದ್ಯಾ, ಗಯಾ, ಪ್ರಯಾಗ್‌ರಾಜ್, ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ) 9482435755, 9845035349
Pilgrimage Tours
ಸುವರ್ಣ ಯಾತ್ರ, ಕಾಶಿ ಪ್ರವಾಸ 7ದಿನಗಳು 30.08.23 ಕಾಶಿ ವಿಶ್ವನಾಥ, ಬಾಬಾ ಬೈದ್ಯನಾಥ, 2ಜ್ಯೋತಿರ್ಲಿಂಗ, ಬುದ್ಧಗಯ, ಗಯಾ, ಅಯೋಧ್ಯ, ನೈಮಿಷಾರಣ್ಯ.9019462508, 9008381022
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಶಾಸಕ ಗೋಪಾಲ್ ಕಾಂಡಾ ಮನೆ ಮೇಲೆ ಇ.ಡಿ. ದಾಳಿ

ನವದೆಹಲಿ (ಪಿಟಿಐ): ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಹರಿಯಾಣ ಶಾಸಕ ಗೋಪಾಲ್ ಕಾಂಡಾ ಹಾಗೂ ಇತರರಿಗೆ ಸಂಬಂಧಿಸಿದ ಸ್ಥಳಗಳ ಮೇಲೆ ಜಾರಿ ನಿರ್ದೇಶನಾಲಯ (ಇ.ಡಿ) ಬುಧವಾರ ದಾಳಿ ನಡೆಸಿ ಶೋಧ ನಡೆಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದೆಹಲಿ ಮತ್ತು ಹರಿಯಾಣದ ಗುರುಗ್ರಾಮ ಹಾಗೂ ಸಿರ್ಸಾದಲ್ಲಿರುವ ಮನೆ ಹಾಗೂ ಕಚೇರಿಗಳ ಮೇಲೆ ಇ.ಡಿ ದಾಳಿ ನಡೆಸಿದೆ.

57ವರ್ಷದ ಕಾಂಡಾ ಅವರು ಹರಿಯಾಣದ ಲೋಕ್‌ಹಿತ್ ಪಕ್ಷದಿಂದ ಸಿರ್ಸಾದಲ್ಲಿ ಶಾಸಕರಾಗಿದ್ದಾರೆ. ಮಾಜಿ ಗಗನಸಖಿ ಗೀತಿಕಾ ಶರ್ಮಾ ಅವರ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಂಡಾ ಅವರನ್ನು ದೆಹಲಿ ಕೋರ್ಟ್ ಈಚೆಗೆ ಖುಲಾಸೆಗೊಳಿಸಿತ್ತು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	750-800
ನಡುಗೋಲು	900-950
ರಾಶಿ	1000-1100
ರಾಶಿ ಉತ್ತಮ	1150-1200
ಹೆರಕಿದ್ದು	1600-1700
ಹಸಿರು ಸಾಧಾರಣ	1200-1250
ಹಸಿರು ಉತ್ತಮ	1600-1700
ಹಸಿರು ಅತಿ ಉತ್ತಮ	1900-2000
ಕಾಳುಮೆಣಸು	615
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-48000
ಪುತ್ತೂರು	
ಹೊಸತು	34000-45000
ಕುಮಟಾ	
ಚಿಪ್ಪು	31999-35299
ಕೋಕ	20189-34019
ಫ್ಯಾಕ್ಟರಿ	14019-22861
ಹಳೆಚಾಲಿ	39609-42549
ಹೊಸಚಾಲಿ	38099-42009
ಶಿವಮೊಗ್ಗ	
ಬೆಟ್ಟೆ	---
ಗೊರಬಲು	20810-41609
ರಾಶಿ	41579-54699
ಸರಕು	57869-79800
ಕಾರ್ಕಳ	
ಹೊಸತು	30000-45000
ಹಳತು	40000-48000
ಸಿದ್ದಾಪುರ	
ಬಿಳಿಗೋಟು	31669-35689
ಚಾಲಿ	38699-42299
ಕೋಕ	30019-35899
ಕೆಂಪುಗೋಟು	34819-35289
ರಾಶಿ	44609-50199
ತಟ್ಟಿಬೆಟ್ಟೆ	37389-43199
ಶಿರಸಿ	
ಬೆಟ್ಟೆ	41620-47889
ಬಿಳಿಗೋಟು	30511-37699
ಚಾಲಿ	38009-43200
ಕೆಂಪುಗೋಟು	34819-35289
ರಾಶಿ	44609-50199
ತಟ್ಟಿಬೆಟ್ಟೆ	37389-43199

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	13900	13900	161.35 ಸೆಂಟ್ಸ್
ಎಸಿ	---	6800	7000	
ಆರ್‌ಪಿ	---	10300	10275	ಲಂಡನ್
ಆರ್‌ಸಿ	---	250	6050	2688 ಡಾಲರ್ಸ್

ಸಂಕ್ಷಿಪ್ತ ಸುದ್ದಿ

ಬೀಜಿಂಗ್‌ನಲ್ಲಿ ಪ್ರವಾಹ: ಮೃತರ ಸಂಖ್ಯೆ 33ಕ್ಕೆ ಏರಿಕೆ

ಬೀಜಿಂಗ್ (ಎಪಿ): ಚೀನಾದ ರಾಜಧಾನಿ ಬೀಜಿಂಗ್‌ನಲ್ಲಿ ದಾಖಲೆ ಪ್ರಮಾಣದ ಮಳೆ ಸುರಿಯುತ್ತಿದ್ದು, ಪ್ರವಾಹಕ್ಕೆ ಸಿಲುಕಿ ಮೃತರಾದವರ ಸಂಖ್ಯೆ 33ಕ್ಕೆ ಏರಿದೆ. ಇನ್ನೂ 18 ಜನ ಕಾಣೆಯಾಗಿದ್ದು, ಐವರನ್ನು ರಕ್ಷಿಸಲಾಗಿದೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಕಳೆದ ಕೆಲ ದಿನಗಳಿಂದ ಸುರಿಯುತ್ತಿರುವ ಮಳೆಯಿಂದಾಗಿ 59,000 ಮನೆಗಳು ಹಾನಿಯಾಗಿದ್ದು, 1,50,000ಕ್ಕೂ ಹೆಚ್ಚು ಜನರು ಸಂತ್ರಸ್ತರಾಗಿದ್ದಾರೆ. ಅಂದಾಜು 15,000 ಹೆಕ್ಟೇರ್ ಕೃಷಿ ಭೂಮಿಯನ್ನು ಪ್ರವಾಹ ಆವರಿಸಿಕೊಂಡಿದೆ ಎಂದು ಸರ್ಕಾರ ತಿಳಿಸಿದೆ.

ಈಗ ಆಗಿರುವ ಹಾನಿ ಸರಿಪಡಿಸಲು ಕನಿಷ್ಠ ಮೂರು ವರ್ಷ ಬೇಕಾಗಬಹುದು. ಪ್ರವಾಹ ಪೀಡಿತ ಸ್ಥಳಗಳಲ್ಲಿ ಜನರ ರಕ್ಷಣೆಗೆ ರಕ್ಷಣಾ ತಂಡಗಳನ್ನು ನಿಯೋಜಿಸಲಾಗಿದೆ ಎಂದು ಬೀಜಿಂಗ್‌ನ ಉಪಮೇಯರ್ ಕ್ಸೈ ಲಿನ್‌ಮಾವೋ ತಿಳಿಸಿದ್ದಾರೆ.

ಮಕ್ಕಳ ಮೇಲೆ ದೌರ್ಜನ್ಯ: 12 ವರ್ಷ ಜೈಲು

ಲಂಡನ್ (ಪಿಟಿಐ): ಭಾರತದಲ್ಲಿ ಹದಿಹರೆಯದವರಿಗೆ ಕಿರಿಯ ಮಕ್ಕಳನ್ನು ನಿಂದಿಸಲು ಹಣ ಪಾವತಿಸಿ ಸೂಚನೆ ನೀಡಿದ ತಪ್ಪು ಒಪ್ಪಿಕೊಂಡ ಲಂಡನ್ ಪ್ರಾಥಮಿಕ ಶಾಲೆಯ ನಿವೃತ್ತ ಉಪ ಮುಖ್ಯ ಶಿಕ್ಷಕನಿಗೆ ಬುಧವಾರ 12 ವರ್ಷಗಳ ಜೈಲು ಶಿಕ್ಷೆ ವಿಧಿಸಲಾಗಿದೆ.

ದಕ್ಷಿಣ ಲಂಡನ್ ಈಸ್ಟ್ ಡಲ್ವಿಚ್‌ನ ಮ್ಯಾಥ್ಯೂ ಸ್ಮಿತ್ (35) ಎಂಬಾತನನ್ನು ಕಳೆದ ವರ್ಷ ನವೆಂಬರ್‌ನಲ್ಲಿ ಯುಕೆಯ ರಾಷ್ಟ್ರೀಯ ಅಪರಾಧ ಸಂಸ್ಥೆ (ಎನ್‌ಸಿಎ) ಬಂಧಿಸಿತ್ತು.

'ಡಿಜಿಟಲ್ ಜೀವಿತ ಪ್ರಮಾಣಪತ್ರ' ಸಲ್ಲಿಕೆ: ನವೆಂಬರ್‌ನಲ್ಲಿ ಆಂದೋಲನ

ನವದೆಹಲಿ(ಪಿಟಿಐ): ಪಿಂಚಣಿದಾರರು 'ಡಿಜಿಟಲ್ ಜೀವಿತ ಪ್ರಮಾಣಪತ್ರ' (ಡಿಎಲ್‌ಸಿ) ಸಲ್ಲಿಸುವುದನ್ನು ಉತ್ತೇಜಿಸಲು ಕೇಂದ್ರ ಸರ್ಕಾರವು ನವೆಂಬರ್‌ನಲ್ಲಿ ಬೃಹತ್ ಆಂದೋಲನ ನಡೆಸಲಿದೆ.

ಪ್ರತಿ ವರ್ಷ ನವೆಂಬರ್‌ನಲ್ಲಿ ಪಿಂಚಣಿದಾರರು ಜೀವಿತ ಪ್ರಮಾಣಪತ್ರವನ್ನು ಸಲ್ಲಿಸಬೇಕು. ಹೀಗಾಗಿ 'ಡಿಎಲ್‌ಸಿ' ಸಲ್ಲಿಸುವಂತೆ ಕೇಂದ್ರ ಸರ್ಕಾರದ ಪಿಂಚಣಿದಾರರನ್ನು ಪ್ರೋತ್ಸಾಹಿಸಲು ಈ ಆಂದೋಲನಕ್ಕೆ ಚಾಲನೆ ನೀಡಲಾಗುತ್ತಿದೆ ಎಂದು ಪಿಂಚಣಿ ಮತ್ತು ಪಿಂಚಣಿದಾರರ ಕಲ್ಯಾಣ ಇಲಾಖೆ (ಡಿಒಪಿಪಿಡಬ್ಲ್ಯು) ತಿಳಿಸಿದೆ.

ಮಣಿಪುರ ಜನಾಂಗೀಯ ಹಿಂಸಾಚಾರ– ಮಧ್ಯಮ ಮಾರ್ಗಕ್ಕೆ ಮೂಡದ ಒಮ್ಮತ

ಪಟ್ಟು ಸಡಿಲಿಸದ ಬಿಜೆಪಿ: 'ಇಂಡಿಯಾ'

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂಸತ್ತಿನ ಮುಂಗಾರು ಅಧಿವೇಶನ ಎರಡು ದಿನಗಳಲ್ಲಿ ಮುಗಿಯಲಿದೆ. ಆದರೆ, ಜನಾಂಗೀಯ ಹಿಂಸಾಚಾರ ಪೀಡಿತ ಮಣಿಪುರದ ಬಗ್ಗೆ ಚರ್ಚೆ ನಡೆಸುವ ಸಂಬಂಧ ಆಡಳಿತಾರೂಢ ಬಿಜೆಪಿ ಮತ್ತು ವಿರೋಧ ಪಕ್ಷಗಳ ಮೈತ್ರಿಕೂಟ 'ಇಂಡಿಯಾ' ತಳೆದಿರುವ ಬಿಗಿಪಟ್ಟು ಇನ್ನೂ ಸಡಿಲವಾಗಿಲ್ಲ.

ಪ್ರಧಾನಿ ನರೇಂದ್ರ ಮೋದಿ ಅವರು ಮೇಲ್ಮನೆಯ ಸದನಕ್ಕೆ ಬರಲು ಮತ್ತು ತಮ್ಮ ನೇತೃತ್ವದಲ್ಲಿ ಆದಷ್ಟು ಶೀಘ್ರ ಮಣಿಪುರಕ್ಕೆ ಸರ್ವಪಕ್ಷಗಳ ನಿಯೋಗ ಕೊಂಡೊಯ್ಯುವ ಘೋಷಣೆ ಮಾಡಲು ಸಿದ್ಧರಿದ್ದರೆ, ಈ ವಿಷಯದ ಕುರಿತು ಪ್ರಧಾನಿ ನರೇಂದ್ರ ಮೋದಿಯವರು ಹೇಳಿಕೆ ನೀಡಬೇಕೆಂದು ರಾಜ್ಯಸಭೆಯಲ್ಲಿ ಇಟ್ಟಿರುವ ಬೇಡಿಕೆಯನ್ನು ಕೈಬಿಡಲಾಗುವುದು ಎಂದು ವಿರೋಧ ಪಕ್ಷದ ನಾಯಕರು ಹೇಳಿದರು.

ಮೇಲ್ಮನೆಯು ಬುಧವಾರ ಪ್ರತಿಪಕ್ಷಗಳ ಈ ಬೇಡಿಕೆಗಳಿಗೆ ಸಾಕ್ಷಿಯಾಯಿತು. ಆದರೆ, ಕಳೆದ ವಾರ ಚರ್ಚಿಸಿದ ಮಧ್ಯಮ ಮಾರ್ಗಕ್ಕೆ ಎರಡೂ ಕಡೆಯವರು ಒಮ್ಮತಕ್ಕೆ ಬರಲು ಸಾಧ್ಯವಾಗದ ಕಾರಣ ಈ ವಿಚಾರದಲ್ಲಿ ಯಾವುದೇ ಪ್ರಗತಿ ಕಾಣಿಸಲಿಲ್ಲ.

'ಈ ಸ್ಥಿತಿಗೆ ಸರ್ಕಾರವೇ ಹೊಣೆ. ಜುಲೈ 20ರಿಂದ ಪ್ರಧಾನಿ ಸಂಸತ್ತಿನಿಂದ ದೂರ ಉಳಿದಿದ್ದು, ಬುಧವಾರದವರೆಗೂ ಅವರು ರಾಜ್ಯಸಭೆಗೆ ಬಂದಿರಲಿಲ್ಲ. ಅವಿಶ್ವಾಸ ನಿರ್ಣಯವನ್ನು ಸಲ್ಲಿಸುವ ಮೂಲಕ ಮಣಿಪುರ ವಿಷಯದ ಬಗ್ಗೆ ಮಾತನಾಡುವಂತೆ ನಾವು ಅವರನ್ನು ಒತ್ತಾಯಿಸಬೇಕಾಯಿತು' ಎಂದು ರಾಜ್ಯಸಭಾ ಸದಸ್ಯ, ತೃಣಮೂಲ ಕಾಂಗ್ರೆಸ್ ನಾಯಕ ಡೆರೆಕ್ ಒಬ್ರಯಾನ್ ಹೇಳಿದ್ದಾರೆ.

'ಮಣಿಪುರ ಹಿಂಸಾಚಾರದ ಬಗ್ಗೆ ಪ್ರಧಾನಿ ಮಾತನಾಡುವಂತೆ ವಿರೋಧಪಕ್ಷಗಳು ಅವಿಶ್ವಾಸ ನಿರ್ಣಯ ಸಲ್ಲಿಸಬೇಕಾಗಿರುವುದು ದಯನೀಯ ಸ್ಥಿತಿ' ಎಂದೂ ಅವರು ಹೇಳಿದರು.

ಮಸೂದೆ ಅಂಗೀಕಾರ: ಡಿಜಿಟಲ್ ವೈಯಕ್ತಿಕ ದತ್ತಾಂಶ ಸಂರಕ್ಷಣಾ ಮಸೂದೆ–2023' ಅನ್ನು ರಾಜ್ಯಸಭೆಯಲ್ಲಿ ಬುಧವಾರ ಅಂಗೀಕರಿಸಲಾಯಿತು.

ಮಣಿಪುರದಲ್ಲಿನ ಪರಿಸ್ಥಿತಿ ವಿಚಾರವಾಗಿ ವಿರೋಧ ಪಕ್ಷಗಳು ಸಭಾತ್ಯಾಗ ಮಾಡಿದ ನಂತರ ಧ್ವನಿಮತದ ಮೇಲೆ ಮಸೂದೆಯನ್ನು ಅಂಗೀಕರಿಸಲಾಯಿತು.

'ಖಾಸಗಿತನ ಹಕ್ಕ'ನ್ನು ಮೂಲಭೂತ ಹಕ್ಕು ಎಂದು ಸುಪ್ರೀಂಕೋರ್ಟ್ ಘೋಷಿಸಿದ ಆರು ವರ್ಷಗಳ ನಂತರ ಈ ಕುರಿತ ಮಸೂದೆಯನ್ನು ಮಂಡಿಸಿ, ಅಂಗೀಕಾರ ಪಡೆದಂತಾಗಿದೆ. ಆನ್‌ಲೈನ್ ವೇದಿಕೆಗಳಲ್ಲಿ ಜನರ ವೈಯಕ್ತಿಕ ದತ್ತಾಂಶ ದುರ್ಬಳಕೆಯಾಗುವುದನ್ನು ತಡೆಯುವ ಅವಕಾಶಗಳನ್ನು ಈ ಮಸೂದೆ ಒಳಗೊಂಡಿದೆ.

ಅಂಗೀಕಾರ: ದೇಶದ ವಿಶ್ವವಿದ್ಯಾಲಯಗಳಲ್ಲಿ ಕೈಗೊಳ್ಳುವ ಸಂಶೋಧನೆಗೆ ಅನುದಾನ ಒದಗಿಸುವ ಸಂಸ್ಥೆಯೊಂದರ ಸ್ಥಾಪನೆ ಸೇರಿದಂತೆ ಮಹತ್ವದ ಅವಕಾಶಗಳನ್ನು ಒಳಗೊಂಡಿರುವ 'ರಾಷ್ಟ್ರೀಯ ಸಂಶೋಧನಾ ಪ್ರತಿಷ್ಠಾನ ಮಸೂದೆ–2023' ಅನ್ನು ಕೂಡ ರಾಜ್ಯಸಭೆಯಲ್ಲಿ ಅಂಗೀಕರಿಸಲಾಯಿತು.

ಟೊಮೆಟೊ ಹಾರ ಧರಿಸಿ ಬಂದ ಎಎಪಿ ಸಂಸದ

ನವದೆಹಲಿ: ಎಎಪಿ ಸಂಸದ ಸುಶೀಲ್ ಕುಮಾರ್ ಗುಪ್ತಾ ಅವರು ಬುಧವಾರ ಟೊಮೆಟೊ ಹಾರ ಧರಿಸಿ ರಾಜ್ಯಸಭೆಗೆ ಬರುವ ಮೂಲಕ ಅಗತ್ಯ ವಸ್ತುಗಳ ಬೆಲೆ ಏರಿಕೆ ವಿರುದ್ಧ ವಿನೂತನ ಪ್ರತಿಭಟನೆ ನಡೆಸಿದರು.

ಗುಪ್ತಾ ಅವರ ನಡೆಗೆ ಆಕ್ಷೇಪ ವ್ಯಕ್ತಪಡಿಸಿದ ಸಭಾಪತಿ ಜಗದೀಪ್ ಧನಕರ್, 'ಇದರಿಂದ ತೀವ್ರ ಬೇಸರ ಉಂಟಾಗಿದೆ' ಎಂದು ಹೇಳಿದರು.

ರಾಜ್ಯಸಭೆಯಲ್ಲಿ ಕೆಲ ಅಧಿಕೃತ ದಾಖಲೆಗಳನ್ನು ಮಂಡಿಸುವಾಗ ಗುಪ್ತಾ ಟೊಮೆಟೊ ಹಾರ ಧರಿಸಿ ಸದನವನ್ನು ಪ್ರವೇಶಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಧನಕರ್, 'ನಮ್ಮ ನಡವಳಿಕೆಗೆ ನಾವೇ ಮಿತಿ ಹಾಕಿಕೊಳ್ಳಬೇಕು. ಗುಪ್ತಾ ಅವರ ನಡೆ ತೀವ್ರ ಬೇಸರ ಉಂಟುಮಾಡಿದೆ. ಅವರ ವಿರುದ್ಧ ಯಾವ ರೀತಿ ಕ್ರಮ ಕೈಗೊಳ್ಳಬಹುದು ಎಂದು ಆಡಳಿತ ಮತ್ತು ವಿರೋಧ ಪಕ್ಷಗಳ ನಾಯಕರೊಂದಿಗೆ ಚರ್ಚಿಸುತ್ತೇನೆ' ಎಂದರು.

ಇದಕ್ಕೂ ಮುನ್ನ ಎಎಪಿ ಟ್ವೀಟ್ ಮಾಡಿ, 'ಹಣದುಬ್ಬರ ಬಡ ಜನರ ರಕ್ತ ಹೀರುತ್ತಿದೆ. ಬೆಲೆ ಏರಿಕೆ ವಿರುದ್ಧ ಮೋದಿ ಸರ್ಕಾರದ ಗಮನ ಸೆಳೆಯಲು ಎಎಪಿ ಸಂಸದ ಟೊಮೆಟೊ, ಶುಂಠಿ ಹಾರ ಧರಿಸಿ ಸಂಸತ್ ಪ್ರವೇಶಿಸುತ್ತಾರೆ' ಎಂದು ಹೇಳಿದರು

ಎಎಪಿ ಸಂಸದ ಸುಶೀಲ್ ಕುಮಾರ್ ಗುಪ್ತಾ ಅವರು ಬುಧವಾರ ಟೊಮೆಟೊ ಹಾರ ಧರಿಸಿ ರಾಜ್ಯಸಭೆಗೆ ಬಂದರು –ಪಿಟಿಐ ಚಿತ್ರ

'ಶಿಶುಪಾಲನಾ ರಜೆ: ಉದ್ಯೋಗಿಗಳು ಅರ್ಹರು'

ನವದೆಹಲಿ (ಪಿಟಿಐ): ಮಹಿಳಾ ಮತ್ತು ಏಕ ಪೋಷಕ (ಸಿಂಗಲ್ ಪೇರೆಂಟ್) ಪುರುಷ ಸರ್ಕಾರಿ ಉದ್ಯೋಗಿಗಳು 730 ದಿನಗಳ 'ಮಕ್ಕಳ ಪಾಲನಾ ರಜೆ'ಗೆ ಅರ್ಹರಾಗಿರುತ್ತಾರೆ ಎಂದು ಕೇಂದ್ರ ಸಿಬ್ಬಂದಿ ಖಾತೆ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಅವರು ಲೋಕಸಭೆಗೆ ಬುಧವಾರ ಲಿಖಿತ ಉತ್ತರ ನೀಡಿದರು.

ಕೇಂದ್ರ ನಾಗರಿಕ ಸೇವೆಗಳ (ರಜೆ) ನಿಯಮ, 1972ರ ಅಡಿ ಅಧಿನಿಯಮ 43–ಸಿ ಪ್ರಕಾರ, ನಾಗರಿಕ ಸೇವೆಗಳ ಮತ್ತು ಕೇಂದ್ರ ಸರ್ಕಾರದ ಉದ್ಯೋಗಿಗಳು ತಮ್ಮ ಮೊದಲ ಇಬ್ಬರು ಮಕ್ಕಳಿಗೆ 18 ವರ್ಷ ವಯಸ್ಸು ತುಂಬುವವರೆಗೆ ಅವರ ಪಾಲನೆಗಾಗಿ ಸೇವಾವಧಿಯಲ್ಲಿ ಒಟ್ಟು 730 ದಿನಗಳು ರಜೆ ಪಡೆಯಬಹುದು. ಆದರೆ, ಅಂಗವಿಕಲ ಮಕ್ಕಳ ಪೋಷಕರಿಗೆ ಈ ಮಿತಿ ಅನ್ವಯಿಸುವುದಿಲ್ಲ ಎಂದು ಹೇಳಿದರು.

ಭಾರತಾಂಬೆ ಕಗ್ಗೊಲೆ: ರಾಹುಲ್

ಒಂದನೇ ಪುಟದಿಂದ...

'ನಾನು ಮತ್ತೊಂದು ಶಿಬಿರಕ್ಕೂ ಭೇಟಿ ನೀಡಿದೆ. ಅಲ್ಲಿದ್ದ ಮಹಿಳೆಯೊಬ್ಬರಿಗೆ ಏನಾಯಿತು ಎಂದಷ್ಟೇ ಕೇಳಿದೆ. ಆಕೆ, ನಡುಗುತ್ತಲೇ ಪ್ರಜ್ಞೆ ಕಳೆದುಕೊಂಡರು' ಎಂದ ಅವರು, 'ನೀವು ಜನರನ್ನು ಕೊಲ್ಲುವ ಮೂಲಕ ಭಾರತಾಂಬೆಯನ್ನು ಹತ್ಯೆ ಮಾಡಿದ್ದೀರಿ' ಎಂಬುದಕ್ಕೆ ಈ ಎರಡು ನಿದರ್ಶನಗಳೇ ಸಾಕ್ಷಿ' ಎಂದು ಹರಿಹಾಯ್ದರು.

ಮೋದಿ ಅವರನ್ನು ರಾವಣನಿಗೆ ಹೋಲಿಸಿದ ಅವರು, 'ಮೇಘನಾದ' ಮತ್ತು 'ಕುಂಭಕರ್ಣ'ನ ಮಾತುಗಳನ್ನೇ ರಾವಣಾಸುರ ಕೇಳುತ್ತಿದ್ದ. ಕೊನೆಗೆ, ಹನುಮಂತ ಲಂಕಾದಹನ ಮಾಡಿದ. ಮೋದಿ ಅವರು ಗೌತಮ್ ಅದಾನಿ ಮತ್ತು ಅಮಿತ್ ಶಾ ಅವರ ಮಾತುಗಳನ್ನಷ್ಟೇ ಆಲಿಸುತ್ತಾರೆ. ಬೇರೆಯವರ ಮಾತುಗಳು ರುಚಿಸುವುದಿಲ್ಲ' ಎಂದು ಲೇವಡಿ ಮಾಡಿದರು.

ಮತ್ತೊಂದು ದಂಗೆಗೆ ಕುಮ್ಮಕ್ಕು: ಕಾಂಗ್ರೆಸ್ ನಾಯಕನ ಮಾತುಗಳಿಗೆ ಕಲಾಪದಲ್ಲಿ ಹಾಜರಿದ್ದ ಸಚಿವರು ಹಾಗೂ ಆಡಳಿತಾರೂಢ ಸಂಸದರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ರಾಹುಲ್ ಕ್ಷಮೆಯಾಚಿಸಬೇಕು ಎಂದು ಪಟ್ಟು ಹಿಡಿದ ಸಚಿವ ಕಿರಣ್ ರಿಜಿಜು, 'ಮಣಿಪುರದಲ್ಲಿ ಕಾಂಗ್ರೆಸ್ ಮತ್ತೊಂದು ದಂಗೆಗೆ ಕುಮ್ಮಕ್ಕು ನೀಡುತ್ತಿದೆ' ಎಂದು ಆಪಾದಿಸಿದರು.

ವಿರೋಧದ ನಡುವೆಯೇ ಮಾತು ಮುಂದುವರಿಸಿದ ರಾಹುಲ್, 'ಸೇನೆ ಬಳಸಿಕೊಂಡು ಹಿಂಸಾಚಾರವನ್ನು ಸಂಪೂರ್ಣವಾಗಿ ನಿಯಂತ್ರಿಸಬಹುದು. ಆದರೆ, ಕೇಂದ್ರ ಸರ್ಕಾರ ಇದಕ್ಕೆ ಮನಸ್ಸು ಮಾಡುತ್ತಿಲ್ಲ' ಎಂದು ಕಿಡಿಕಾರಿದರು.

'ಹಿಂದಿನ ಕಲಾಪದಲ್ಲಿ ನಾನು ಅದಾನಿ ಬಗ್ಗೆ ಮಾತನಾಡಿ ಬಿಜೆಪಿ ಸ್ನೇಹಿತರ ಮನಸ್ಸು ನೋಯಿಸಿದ್ದೆ. ಇಂದು ಅವರ ಬಗ್ಗೆ ಮಾತನಾಡಲ್ಲ. ನಿಮ್ಮ ಮೇಲೆ ಹೆಚ್ಚು ದಾಳಿ ಮಾಡುವುದಿಲ್ಲ' ಎಂದು ಕುಟುಕಿದರು.

'ಸರ್ಕಾರವು ದೇಶದಾದ್ಯಂತ ಕೋಮು ಸಂಘರ್ಷ ಸೃಷ್ಟಿಸುತ್ತಿದೆ. ಎಲ್ಲೆಡೆ ಸೀಮೆಎಣ್ಣೆ ಸುರಿಯುವುದೇ ಬಿಜೆಪಿ ಕೆಲಸ. ಮಣಿಪುರ ಈಗ ಹೊತ್ತಿ ಉರಿಯುತ್ತಿದೆ. ಹರಿಯಾಣವನ್ನೂ ಸುಡಲು ಹೊರಟಿದೆ' ಎಂದ ಅವರು, ಇದಕ್ಕೆ ಗುರುಗ್ರಾಮ ಮತ್ತು ನೂಹ್‌ನಲ್ಲಿ ನಡೆದ ಕೋಮು ಗಲಭೆಗಳನ್ನು ಉಲ್ಲೇಖಿಸಿದರು.

ಸದಸ್ಯತ್ವ ಮರು ಸ್ಥಾಪಿಸಿದ್ದಕ್ಕೆ ಸ್ಪೀಕರ್ ಓಂ ಬಿರ್ಲಾ ಅವರಿಗೆ ಧನ್ಯವಾದ ಹೇಳುವುದನ್ನು ಅವರು ಮರೆಯಲಿಲ್ಲ. ರಾಜ್ಯಸಭೆಯ ಹಲವು ಸದಸ್ಯರು ಗ್ಯಾಲರಿಯಲ್ಲಿ ಕುಳಿತು ರಾಹುಲ್ ಗಾಂಧಿ ಅವರ ಮಾತು ಆಲಿಸಿದರು.

'ಭಾರತ್ ಜೋಡೊ ಇನ್ನೂ ಮುಗಿದಿಲ್ಲ'

'ಹೃದಯದಿಂದ ಬರುವ ಮಾತುಗಳು ಹೃದಯಕ್ಕಷ್ಟೇ ನಾಟುತ್ತವೆ' ಎಂಬ ಪರ್ಷಿಯನ್ ಕವಿ ರೂಮಿ ಅವರ ಉಕ್ತಿಯನ್ನು ಉಲ್ಲೇಖಿಸಿದ ರಾಹುಲ್ ಮಾತು, 'ಭಾರತ್ ಜೋಡೊ' ಯಾತ್ರೆಯತ್ತ ಹೊರಳಿತು.

'ಕನ್ಯಾಕುಮಾರಿಯಿಂದ ಆರಂಭಿಸಿ ಕಾಶ್ಮೀರದವರೆಗೆ ಈ ಯಾತ್ರೆ ಮಾಡಿದೆ. ಇನ್ನೂ ಯಾತ್ರೆ ಮುಗಿದಿಲ್ಲ' ಎಂದು ಮತ್ತೊಂದು ಯಾತ್ರೆ ಆರಂಭಿಸುವ ಸುಳಿವು ನೀಡಿದರು.

'ನೀವೇಕೆ ಪಾದಯಾತ್ರೆ ಮಾಡುತ್ತೀರಿ. ನಿಮ್ಮ ಉದ್ದೇಶವಾದರೂ ಏನು ಎಂದು ಹಲವು ಮಂದಿ ಪ್ರಶ್ನಿಸಿದರು. ಆದರೆ, ಇಂದಿಗೂ ನನಗೆ ಇದಕ್ಕೆ ಉತ್ತರ ಹೊಳೆದಿಲ್ಲ' ಎಂದರು.

'ನಾನು ಪಾದಯಾತ್ರೆಯನ್ನು ಆರಂಭಿಸಿದ್ದು ಏಕೆ ಎನ್ನುವುದು ನನಗೂ ತಿಳಿದಿರಲಿಲ್ಲ. ಯಾವುದನ್ನು ನಾನು ಪ್ರೀತಿಸುತ್ತಿದ್ದೆ, ಯಾವುದಕ್ಕಾಗಿ ನಾನು ಪ್ರಾಣ ತ್ಯಾಗಕ್ಕೂ ಸಿದ್ಧನಿದ್ದೆ, ಯಾವ ಉದ್ದೇಶಕ್ಕಾಗಿ ಮೋದಿಜೀ ಅವರ ಜೈಲಿಗೆ ಹೋಗಲೂ ತಯಾರಿದ್ದೆ ಮತ್ತು ಯಾವ ಕಾರಣಕ್ಕಾಗಿ ನಾನು ಹತ್ತು ವರ್ಷಗಳವರೆಗೆ ನಿಂದನೆಯನ್ನು ಸಹಿಸಿಕೊಂಡೆ ಎನ್ನುವುದನ್ನು ತಿಳಿದುಕೊಳ್ಳಲು ನಾನು ಹಂಬಲಿಸಿದ್ದೆ ಎಂಬುದು ನನಗೀಗ ಅರ್ಥವಾಗಿದೆ' ಎಂದು ಹೇಳಿದರು.

ಸಂಸತ್ ಟಿ.ವಿಯಲ್ಲಿ ರಾಹುಲ್ ಕಡೆಗಣನೆ: ಕಾಂಗ್ರೆಸ್ ಆರೋಪ

ನವದೆಹಲಿ (ಪಿಟಿಐ): ಲೋಕಸಭೆಯಲ್ಲಿ ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆ ವೇಳೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಮಾತನಾಡುತ್ತಿದ್ದ ಸಂದರ್ಭದಲ್ಲಿ ಅವರನ್ನು ಸಂಸತ್ ಟಿ.ವಿ ಕಡೆಗಣಿಸಿದೆ. ಭಾಷಣದ ಶೇ 40ರಷ್ಟು ಸಮಯ ಮಾತ್ರ ಕ್ಯಾಮೆರಾ ಕಣ್ಣು ಅವರತ್ತ ಇತ್ತು ಎಂದು ಪಕ್ಷ ಬುಧವಾರ ಆರೋಪಿಸಿದೆ.

'ರಾಹುಲ್ 37 ನಿಮಿಷ ಮಾತನಾಡಿದ್ದಾರೆ. ಆದರೆ ಸಂಸತ್ ಟಿ.ವಿ ಕ್ಯಾಮೆರಾದಲ್ಲಿ ಅವರನ್ನು 14 ನಿಮಿಷ 37 ಸೆಕೆಂಡ್ ಮಾತ್ರ ತೋರಿಸಲಾಗಿದೆ. ಅವರ ಭಾಷಣದ ಶೇ 71ರಷ್ಟು ಸಮಯ ಸ್ಪೀಕರ್ ಓಂ ಬಿರ್ಲಾ ಅವರತ್ತ ಕ್ಯಾಮೆರಾ ಕಣ್ಣಿತ್ತು. ಪ್ರಧಾನಿ ಮೋದಿ ಅವರಿಗೆ ಇರುವ ಭಯವಾದರೂ ಏನು?' ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ಪ್ರಶ್ನಿಸಿದ್ದಾರೆ.

> **ಸ್ವಲ್ಪ ಯೋಚಿಸಿ, ಮಣಿಪುರದ ಮಹಿಳೆಯರ ಸ್ಥಿತಿ ಹೇಗಾಗಿರಬಹುದು**
> (ಸಂಸತ್ತಿನಲ್ಲಿ ಬುಧವಾರ ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅಸಭ್ಯ ವರ್ತನೆ ತೋರಿದ್ದಾರೆಂದು ಆರೋಪಿಸಿ ಅವರ ವಿರುದ್ಧ ಪ್ರತಿಭಟನೆ ನಡೆಸಿದ ಮಹಿಳಾ ಸಂಸದರನ್ನು ಕುರಿತು, ಮಣಿಪುರದಲ್ಲಿ ಇತ್ತೀಚೆಗೆ ಇಬ್ಬರು ಮಹಿಳೆಯರನ್ನು ಬೆತ್ತಲೆ ಮೆರವಣಿಗೆ ಮಾಡಿರುವ ವಿಡಿಯೊ ಉಲ್ಲೇಖಿಸಿ ಮಧ್ಯಪ್ರದೇಶದ ಹಿರಿಯ ಐಎಎಸ್ ಅಧಿಕಾರಿ ಶೈಲ್‌ಬಾಲಾ ಮಾರ್ಟಿನ್ ಮಾಡಿರುವ ಟ್ವೀಟ್)

'ನ್ಯೂಸ್‌ಕ್ಲಿಕ್ ವಿರುದ್ಧ ಉದ್ದೇಶಪೂರ್ವಕ ದಾಳಿ'

ನವದೆಹಲಿ (ಪಿಟಿಐ): ಚೀನಾ ಪರ ನಿಲುವನ್ನು ಪ್ರಚುರಪಡಿಸುತ್ತಿರುವುದಾಗಿ 'ನ್ಯೂಸ್‌ಕ್ಲಿಕ್' ಸುದ್ದಿ ಪೋರ್ಟಲ್ ವಿರುದ್ಧ ಕೆಲ ರಾಜಕಾರಣಿಗಳು ಮಾಡಿರುವ ಆರೋಪವನ್ನು ಹಲವು ಮಾಧ್ಯಮ ಸಂಘಟನೆಗಳು ವಿರೋಧಿಸಿವೆ. ಇದನ್ನು 'ಉದ್ದೇಶಪೂರ್ವಕ ದಾಳಿ' ಎಂದಿವೆ.

ಈ ಕುರಿತು ಪ್ರೆಸ್ ಅಸೋಸಿಯೇಷನ್, ಪ್ರೆಸ್ ಕ್ಲಬ್ ಆಫ್ ಇಂಡಿಯಾ, ದೆಹಲಿ ಪತ್ರಕರ್ತರ ಸಂಘಟನೆ ಮತ್ತು ಇಂಡಿಯನ್ ವುಮೆನ್ ಪ್ರೆಸ್ ಕಾರ್ಪ್ಸ್ ಪ್ರಕಟಣೆ ಹೊರಡಿಸಿವೆ. ಈ ಆರೋಪಗಳು ಆಧಾರರಹಿತ ಮತ್ತು ಖಂಡನಾರ್ಹ ಎಂದು ಹೇಳಿವೆ.

'ಇತರ ಮಾಧ್ಯಮ ಸಂಸ್ಥೆಗಳಂತೆಯೇ ನ್ಯೂಸ್‌ಕ್ಲಿಕ್ ಕೂಡಾ ಸರ್ಕಾರದ ಕ್ರಮಗಳನ್ನು ವಿಮರ್ಶೆಗೊಳಪಡಿಸುತ್ತದೆ. ಈ ಕಾರಣಕ್ಕಾಗಿ ಅದನ್ನು ದೇಶ ವಿರೋಧಿ ಅಥವಾ ನೆರೆ ರಾಷ್ಟ್ರವೊಂದರ ಮುಖವಾಣಿ ಎಂದು ಕರೆಯಲಾಗುವುದಿಲ್ಲ. ನ್ಯೂಸ್‌ಕ್ಲಿಕ್‌ನ ಬಂಡವಾಳ ಮೂಲವನ್ನು ತನಿಖೆಗೆ ಒಳಪಡಿಸುವುದಾದರೆ, ಆಡಳಿತ ವ್ಯವಸ್ಥೆಯ ಜೊತೆ ಸಂಪರ್ಕ ಹೊಂದಿರುವ ಮಾಧ್ಯಮ ಸಂಸ್ಥೆಗಳ ವಿಚಾರದಲ್ಲೂ ಇದೇ ರೀತಿಯ ಪಾರದರ್ಶಕತೆಯನ್ನು ತೋರಬೇಕು' ಎಂದು ಪ್ರಕಟಣೆಯಲ್ಲಿ ಆಗ್ರಹಿಸಲಾಗಿದೆ.

ಚೀನಾ ಸರ್ಕಾರ ನಡೆಸುವ ಮಾಧ್ಯಮ ಸಂಸ್ಥೆಗಳ ಜೊತೆ ಸಹಯೋಗ ಹೊಂದಿರುವ ಅಮೆರಿಕದ ಉದ್ಯಮಿ ನೆವಿಲ್ಲೆ ರಾಯ್ ಸಿಂಘಮ್ ಅವರು ನ್ಯೂಸ್‌ಕ್ಲಿಕ್ ವೆಬ್ ಪೋರ್ಟಲ್‌ಗೆ ಹಣ ಹೂಡುತ್ತಿದ್ದಾರೆ ಎಂದು ಈಚೆಗೆ ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿತ್ತು. ಹಣ ಅಕ್ರಮ ವರ್ಗಾವಣೆಗೆ ಸಂಬಂಧಿಸಿ ಪೋರ್ಟಲ್‌ನ ಸಂಪಾದಕ ಮತ್ತು ಪ್ರವರ್ತಕರ ಮೇಲೆ ಜಾರಿ ನಿರ್ದೇಶನಾಲಯವು 2021ರಲ್ಲಿ ದಾಳಿ ನಡೆಸಿತ್ತು.

ಬಿಜೆಪಿ ಕಾರ್ಯಕರ್ತೆ ನಾಪತ್ತೆ

ಮುಂಬೈ: ನಾಗ್ಪುರ ಮೂಲದ ಬಿಜೆಪಿ ಕಾರ್ಯಕರ್ತೆ ಸನಾ ಖಾನ್ ವಾರದ ಹಿಂದೆ ಜಬಲ್ಪುರದಲ್ಲಿ ನಾಪತ್ತೆಯಾಗಿದ್ದು, ಮಹಾರಾಷ್ಟ್ರ ಹಾಗೂ ಮಧ್ಯಪ್ರದೇಶದ ಪೊಲೀಸರು ತನಿಖೆ ಕೈಗೆತ್ತಿಕೊಂಡು, ಪತ್ತೆಗಾಗಿ ತೀವ್ರ ಶೋಧ ನಡೆಸಿದ್ದಾರೆ.

ಸನಾ ಖಾನ್ ಅಲಿಯಾಸ್ ಹೀನಾ (35) ಬಿಜೆಪಿಯ ನಾಗ್ಪುರ ಘಟಕದ ಅಲ್ಪಸಂಖ್ಯಾತರ ಮೋರ್ಚಾದಲ್ಲಿದ್ದವರು.

ತಮ್ಮ ವ್ಯವಹಾರ ಪಾಲುದಾರರಾದ ಅಮಿತ್ ಅವರನ್ನು ಭೇಟಿಯಾಗಲಿಕ್ಕಾಗಿ ಆ.1ರಂದು ಜಬಲ್ಪುರಕ್ಕೆ ಹೋಗಿದ್ದರು ಎನ್ನಲಾಗಿದೆ. ನಾಗ್ಪುರ ಪೊಲೀಸರ ತಂಡವು ತನಿಖೆಗಾಗಿ ಜಬಲ್ಪುರಕ್ಕೆ ಹೋಗಿದೆ. ಸಂಶಯಾಸ್ಪದ ವ್ಯಕ್ತಿಯೊಬ್ಬರನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಲಾಗಿದೆ ಎಂದು ಜಬಲ್ಪುರದ ಈಚೆಗಿನ ಮಾಹಿತಿ ತಿಳಿಸಿದೆ.

'ಇಂಡಿಯಾ'ದ ಸಭೆಯಲ್ಲಿ ಇವಿಎಂ ಬಗ್ಗೆ ಚರ್ಚೆ?

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಂಬೈನಲ್ಲಿ ಆ. 31 ಹಾಗೂ ಸೆ. 1ರಂದು ನಡೆಯಲಿರುವ 'ಇಂಡಿಯಾ' ಮೈತ್ರಿಕೂಟದ ಮೂರನೇ ಸಭೆಯಲ್ಲಿ ವಿದ್ಯುನ್ಮಾನ ಮತದಾನ ಯಂತ್ರಗಳ (ಇವಿಎಂ) ಕುರಿತು ಚರ್ಚಿಸುವ ಸಾಧ್ಯತೆ ಇದೆ ಎಂದು ಬುಧವಾರ ಮೂಲಗಳು ಹೇಳಿವೆ.

ಈ ಹಿಂದೆಯೂ ಹಲವು ವಿರೋಧ ಪಕ್ಷಗಳು ಇವಿಎಂ ಬಳಕೆಯ ಕುರಿತು ತಮ್ಮ ಕಳವಳ ವ್ಯಕ್ತಪಡಿಸಿದ್ದವು. ಇವಿಎಂಗಳಲ್ಲಿ ಚಲಾಯಿಸಿದ ಮತಗಳು ಆಡಳಿತಾರೂಢ ಬಿಜೆಪಿಯ ಪರವಾಗಿಯೇ ಚಲಾವಣೆಯಾಗುವಂತೆ ಕುಶಲತೆಯಿಂದರೂಪಿಸಲಾಗಿದೆಎಂದೂ ಕೆಲ ಪಕ್ಷಗಳು ಆರೋಪಿಸಿದ್ದವು. ಆದರೆ, ಈ ಆರೋಪವನ್ನು ಚುನಾವಣಾ ಆಯೋಗವು ಪದೇ ಪದೇ ನಿರಾಕರಿಸುತ್ತಲೇ ಬಂದಿದೆ.

ಜುಲೈ 17 ಮತ್ತು 18ರಂದು ಬೆಂಗಳೂರಿನಲ್ಲಿ ನಡೆದ 'ಇಂಡಿಯಾ'ದ ಎರಡನೇ ಸಭೆಯಲ್ಲಿ ಚರ್ಚಿಸಲು 'ಇವಿಎಂ ಸಮಸ್ಯೆ ಹಾಗೂ ಚುನಾವಣಾ ಆಯೋಗಕ್ಕೆ ಸುಧಾರಣೆಯ ಸೂಚನೆಗಳು' ಎನ್ನುವ ಕರಡು ಕಾರ್ಯಸೂಚಿಯನ್ನು 26 ಪಕ್ಷಗಳಿಗೆ ನೀಡಲಾಗಿತ್ತು. ಆದರೆ, ಇದು ಅಂತಿಮ ಕಾರ್ಯಸೂಚಿಯಾಗಿ ಕಾರ್ಯರೂಪಕ್ಕೆ ಬಂದಿರಲಿಲ್ಲ ಎಂದು ಮೂಲಗಳು ಹೇಳಿವೆ.

'ಕೈಮುಗಿವೆ; ಹಿಂಸಾಚಾರ ನಿಲ್ಲಿಸಿ'

ಒಂದನೇ ಪುಟದಿಂದ...

ಹಿಂಸಾಚಾರ ಭುಗಿಲೆದ್ದ ಮಾರನೇ ದಿನವೇ ಮುಖ್ಯ ಕಾರ್ಯದರ್ಶಿ, ಡಿಜಿಪಿ ಹಾಗೂ ಭದ್ರತಾ ಸಲಹೆಗಾರರನ್ನು ಬದಲಾಯಿಸಲಾಯಿತು ಎಂದರು.

ಅವಿಶ್ವಾಸ ನಿರ್ಣಯ ಮೇಲಿನ ಚರ್ಚೆ ವೇಳೆ ಮಾತನಾಡಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹಾಗೂ ವಿಪಕ್ಷಗಳ ಸಂಸದರು, ಮಣಿಪುರ ಪರಿಸ್ಥಿತಿಯನ್ನು ನಿಭಾಯಿಸಿದ ರೀತಿ ವಿಚಾರವಾಗಿ ಕೇಂದ್ರವನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು.

ಆಗ, ಮಧ್ಯಪ್ರವೇಶಿಸಿದ ಅಮಿತ್ ಶಾ, 'ಮಣಿಪುರದಲ್ಲಿನ ಜನಾಂಗೀಯ ಹಿಂಸಾಚಾರ ವಿಷಯವನ್ನು ರಾಜಕೀಯಗೊಳಿಸಬೇಡಿ' ಎಂದು ವಿಪಕ್ಷಗಳನ್ನು ಒತ್ತಾಯಿಸಿದರು.

'ಹಿಂಸಾಚಾರವೆಂಬ ವಿಷವರ್ತುಲಕ್ಕೆ ಸಿಲುಕಿ ಮಣಿಪುರ ನಲುಗುತ್ತಿದೆ ಎಂಬ ವಿಪಕ್ಷಗಳ ಮಾತನ್ನು ನಾನು ಒಪ್ಪುತ್ತೇನೆ. ಇಂತಹ ಘಟನೆಗಳನ್ನು ಯಾರೂ ಬೆಂಬಲಿಸಲು ಸಾಧ್ಯ ಇಲ್ಲ. ಈವರೆಗೆ ಏನು ನಡೆದಿದೆಯೋ ಅದು ನಾಚಿಕೆಗೇಡಿನ ಸಂಗತಿ. ಆದರೆ, ಅಲ್ಲಿನ ಘಟನೆಗಳನ್ನು ರಾಜಕಾರಣಕ್ಕೆ ಬಳಸಿಕೊಳ್ಳುವುದು ಮತ್ತಷ್ಟು ನಾಚಿಕೆಗೇಡಿನದ್ದು' ಎಂದು ವಾಗ್ದಾಳಿ ನಡೆಸಿದರು.

'ಹಿಂಸಾಚಾರ ಪೀಡಿತ ಮಣಿಪುರದಲ್ಲಿ 152 ಜನರು ಮೃತಪಟ್ಟಿದ್ದು, 14,898 ಜನರನ್ನು ಬಂಧಿಸಲಾಗಿದೆ. ಮೇ 3ರಂದು ಹಿಂಸಾಚಾರ ಭುಗಿಲೆದ್ದಿದ್ದು, ಈ ಸಂಬಂಧ 1,106 ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ' ಎಂದು ಸಚಿವ ಶಾ ಸದನಕ್ಕೆ ತಿಳಿಸಿದರು.

ಇಬ್ಬರು ಮಹಿಳೆಯರನ್ನು ಬೆತ್ತಲೆಗೊಳಿಸಿ, ಮೆರವಣಿಗೆ ಮಾಡಿದ ಘಟನೆಗೆ ಸಂಬಂಧಿಸಿದ ವಿಡಿಯೊ ಕುರಿತು ಪ್ರಸ್ತಾಪಿಸಿದ ಶಾ, 'ಈ ವಿಡಿಯೊವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುವಂತೆ ಮಾಡುವ ಬದಲು ಡಿಜಿಪಿ ಅವರಿಗೆ ನೀಡಿದ್ದಲ್ಲಿ ತಪ್ಪಿತಸ್ಥರನ್ನು ಸೆರೆಹಿಡಿಯಲು ಅನುಕೂಲವಾಗುತ್ತಿತ್ತು' ಎಂದರು.

ಸಂಸತ್‌ನ ಮುಂಗಾರು ಅಧಿವೇಶನ ಆರಂಭಕ್ಕೂ ಮುನ್ನ ಈ ವಿಡಿಯೊವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹರಿಬಿಟ್ಟ ಉದ್ದೇಶವಾದರೂ ಏನಿತ್ತು ಎಂದೂ ಶಾ ಪ್ರಶ್ನಿಸಿದರು.

ಅಂಗೀಕಾರ: ಮಣಿಪುರ ಪರಿಸ್ಥಿತಿ ಕುರಿತು ಸಚಿವ ಅಮಿತ್ ಶಾ ಮಾತನಾಡಿದ ನಂತರ, ಈಶಾನ್ಯ ರಾಜ್ಯದಲ್ಲಿ ಶಾಂತಿ ಸ್ಥಾಪನೆಯಾಗಬೇಕು ಎಂಬ ನಿರ್ಣಯವನ್ನು ಲೋಕಸಭೆಯಲ್ಲಿ ಅಂಗೀಕರಿಸಲಾಯಿತು.

ಕಾಂಗ್ರೆಸ್‌ನ ಸದನ ನಾಯಕ ಅಧಿರ್ ರಂಜನ್ ಚೌಧರಿ ಮಾತನಾಡಿ, 'ನಿರ್ಣಯದ ಕರಡು ಪ್ರತಿಯನ್ನು ಪರಿಶೀಲಿಸಲು ನೀಡಬೇಕು' ಎಂಬ ಬೇಡಿಕೆ ಮುಂದಿಟ್ಟರು.

> ಕಾಶ್ಮೀರ ವಿಷಯಕ್ಕೆ ಸಂಬಂಧಿಸಿ ಪಾಕಿಸ್ತಾನದ ಜೊತೆಗೆ ಭಾರತ ಯಾವುದೇ ಮಾತುಕತೆ ನಡೆಸಲು ಸಿದ್ಧವಿಲ್ಲ. ಮೋದಿ ಸರ್ಕಾರವು ಕಾಶ್ಮೀರಿ ಯುವಕರೊಟ್ಟಿಗಷ್ಟೇ ಚರ್ಚಿಸಲಿದೆ
> **ಅಮಿತ್ ಶಾ,** ಕೇಂದ್ರ ಗೃಹ ಸಚಿವ

ಕಣಿವೆ ರಾಜ್ಯ ವಿಭಜಿಸಿಲ್ಲ: ಸ್ಮೃತಿ ತಿರುಗೇಟು

ನವದೆಹಲಿ (ಪಿಟಿಐ): ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆಯಲ್ಲಿ ಸರ್ಕಾರದ ಪರ ಮಾತನಾಡಿದ ಕೇಂದ್ರ ಸಚಿವೆ ಸ್ಮೃತಿ ಇರಾನಿ ಅವರು, ರಾಹುಲ್ ಅವರ ಹೇಳಿಕೆಯನ್ನು ಕಟುವಾಗಿ ಖಂಡಿಸಿದರು.

ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ ಅವರಿಗೆ, ಬಿಜೆಪಿ ಸದಸ್ಯರು ಚಪ್ಪಾಳೆ ತಟ್ಟಿ, ಮೇಜು ಕುಟ್ಟಿ ಹುರಿದುಂಬಿಸಿದರು.

'ಮಣಿಪುರದಲ್ಲಿ ಭಾರತಾಂಬೆಯ ಹತ್ಯೆಯಾಗಿದೆ ಎಂದು ರಾಹುಲ್ ಹೇಳಿದ್ದಾರೆ. ಸಂಸತ್‌ನ ಇತಿಹಾಸದಲ್ಲಿ ಇಲ್ಲಿಯವರೆಗೂ ಯಾರೊಬ್ಬರು ಇಂತಹ ಹೇಳಿಕೆ ನೀಡಿರಲಿಲ್ಲ' ಎಂದು ತರಾಟೆಗೆ ತೆಗೆದುಕೊಂಡರು.

'ಮಣಿಪುರವು ದೇಶದ ಅವಿಭಾಜ್ಯ ಅಂಗವಾಗಿದೆ. ಇದರಲ್ಲಿ ಎಳ್ಳಷ್ಟು ಅನುಮಾನ ಬೇಡ. ಅದನ್ನು ಸರ್ಕಾರ ವಿಭಜಿಸಿಲ್ಲ. ಆದರೆ, ರಾಹುಲ್ ಹೇಳಿಕೆಗೆ ಕಾಂಗ್ರೆಸ್ ಸದಸ್ಯರು ಮೇಜು ಕುಟ್ಟಿ ಸ್ವಾಗತಿಸಿದ್ದಾರೆ. ಇಂತಹ ಬೆಳವಣಿಗೆಯು ಹಿಂದೆಂದೂ ನಡೆದಿರಲಿಲ್ಲ' ದೂರಿದರು. 'ನೀವು ಅಸಮರ್ಥರಾಗಿದ್ದೀರಿ (ಕಾಂಗ್ರೆಸ್). ಹಾಗಾಗಿಯೇ ಭ್ರಷ್ಟಾಚಾರವನ್ನು ಸಮರ್ಥಿಸಿಕೊಳ್ಳುತ್ತೀರಿ, ನೀವು ಭಾರತೀಯರಲ್ಲ' ಎಂದು ಟೀಕಿಸಿದರು.

'ಇಂಡಿಯಾ' ಮೈತ್ರಿಕೂಟದ ಸದಸ್ಯರೊಬ್ಬರು 'ಭಾರತ' ಎಂದರೆ ಉತ್ತರ ಭಾರತ ಮಾತ್ರವೆಂದು ತಮಿಳುನಾಡಿನಲ್ಲಿ ವ್ಯಾಖ್ಯಾನಿಸಿದ್ದಾರೆ. ರಾಹುಲ್‌ಗೆ ಧೈರ್ಯವಿದ್ದರೆ ಇದಕ್ಕೆ ಪ್ರತಿಕ್ರಿಯಿಸುತ್ತಾರೆಯೇ? ಎಂದು ಸವಾಲು ಹಾಕಿದರು.

ಕಾಶ್ಮೀರದ ಬಗ್ಗೆ ಜನಾಭಿಪ್ರಾಯ ಸಂಗ್ರಹಿಸಬೇಕಿದೆ ಎಂದು ಕಾಂಗ್ರೆಸ್ ನಾಯಕರೊಬ್ಬರು ಪ್ರತಿಪಾದಿಸಿದ್ದಾರೆ. ಹಾಗಿದ್ದರೆ ಅವರು ಕಾಂಗ್ರೆಸ್ ನಾಯಕತ್ವದ ಆದೇಶದಂತೆ ಮಾತನಾಡಿದ್ದಾರೆಯೇ ಎಂದು ಪ್ರಶ್ನಿಸಿದರು.

'ಭಾರತ್ ಜೋಡೊ ಯಾತ್ರೆ ವೇಳೆ ಅವರಿಗೆ (ರಾಹುಲ್) ಕಾಡಿದ ಮಂಡಿನೋವಿನ ಬಗ್ಗೆ ಮಾತನಾಡಲಾರೆ. ಆದರೆ, ಕಾಶ್ಮೀರ ಕಣಿವೆಯು ರಕ್ತದಲ್ಲಿ ತೊಯ್ದು ಹೋಗಿತ್ತು. ಯಾತ್ರೆಯ ಮುಕ್ತಾಯಕ್ಕೆ ಅಲ್ಲಿಗೆ ಹೋಗಿದ್ದ ಅವರು ಹಿಮದಲ್ಲಿ ಆಟ ಆಡಿದ್ದರು. ಪ್ರಧಾನಿ ಮೋದಿ ಅವರು ಜಮ್ಮು ಮತ್ತು ಕಾಶ್ಮೀರಕ್ಕೆ 370ನೇ ವಿಧಿಯಡಿ ನೀಡಿದ್ದ ವಿಶೇಷ ಸ್ಥಾನಮಾನ ರದ್ದುಪಡಿಸಿದ್ದರಿಂದಲೇ ಅವರು ಅಷ್ಟೊಂದು ಸಲೀಸಾಗಿ ಆಟವಾಡಲು ಸಾಧ್ಯವಾಯಿತು' ಎಂದು ತಿವಿದರು.

'ಯಾತ್ರೆ ವೇಳೆ ಕಾಶ್ಮೀರದ ವಿಶೇಷ ಸ್ಥಾನಮಾನವನ್ನು ಮತ್ತೆ ಮರುಸ್ಥಾಪಿಸುವುದಾಗಿ ರಾಹುಲ್ ಹೇಳಿದ್ದಾರೆ. ಅದು ಎಂದಿಗೂ ಸಾಧ್ಯವಿಲ್ಲ' ಎಂದರು.

ಕಾಂಗ್ರೆಸ್ ಅವಧಿಯಲ್ಲಿ ನಡೆದ ಸಿಖ್ ವಿರೋಧಿ ದಂಗೆ ಹಾಗೂ ಕಾಶ್ಮೀರ ಸಂಘರ್ಷ ಉಲ್ಲೇಖಿಸಿದ ಸ್ಮೃತಿ ಅವರು, 'ಆ ಪಕ್ಷದ ಇತಿಹಾಸಕ್ಕೆ ನೆತ್ತರು ಮೆತ್ತಿಕೊಂಡಿದೆ' ಎಂದು ಲೇವಡಿ ಮಾಡಿದರು.

ಸ್ಮೃತಿಗೆ 'ರಾಹುಲ್ ಫೋಬಿಯಾ': ಮಣಿಪುರ ಸಂಘರ್ಷದ ಬಗ್ಗೆ ದೇಶದ ಜನರನ್ನು ದಿಕ್ಕುತಪ್ಪಿಸಲು ಬಿಜೆಪಿಯು 'ಫ್ಲೈಯಿಂಗ್ ಕಿಸ್' ವಿವಾದ ಸೃಷ್ಟಿಸಿದೆ ಎಂದು ಕಾಂಗ್ರೆಸ್ ಆರೋಪಿಸಿದೆ. 'ಕಣಿವೆ ರಾಜ್ಯದ ಹಿಂಸಾಚಾರ ಕುರಿತು ಉಭಯ ಸದನಗಳಲ್ಲಿ ಚರ್ಚಿಸಲು ಕೇಂದ್ರಕ್ಕೆ ಇಷ್ಟವಿಲ್ಲ. ಹಾಗಾಗಿ, ರಾಹುಲ್ ವಿರುದ್ಧ ಅನಗತ್ಯವಾಗಿ ಈ ಆರೋಪ ಮಾಡುತ್ತಿದೆ. ಮಹಿಳೆಯರಿಗೆ ಎಂದಿಗೂ ಅವರು ಅಗೌರವ ತೋರಿಲ್ಲ' ಎಂದು ಹೇಳಿದೆ. ಸ್ಮೃತಿ ಅವರು 'ರಾಹುಲ್ ಫೋಬಿಯಾ'ದಿಂದ ಬಳಲುತ್ತಿದ್ದಾರೆ. ಅದರಿಂದ ಅವರು ಹೊರಬರಬೇಕಿದೆ ಎಂದು ಲೋಕಸಭೆಯ ಕಾಂಗ್ರೆಸ್ ಸಚೇತಕ ಮಾಣಿಕಂ ಟ್ಯಾಗೋರ್ ವ್ಯಂಗ್ಯವಾಡಿದ್ದಾರೆ.

ಯುಎನ್‌ಸಿ ರ‍್ಯಾಲಿ ಒಪ್ಪಂದದ ಆಧಾರದ ಮೇಲೆ ಕೇಂದ್ರ ಮತ್ತು ನಾಗಾ ಗುಂಪುಗಳ ನಡುವಿನ ಶಾಂತಿ ಮಾತುಕತೆಯನ್ನು ಯಶಸ್ವಿಯಾಗಿ ಮುಕ್ತಾಯಗೊಳಿಸುವಂತೆ ಒತ್ತಾಯಿಸಿ ಮಣಿಪುರದ ಯುನೈಟೆಡ್ ನಾಗಾ ಕೌನ್ಸಿಲ್ (ಯುಎನ್‌ಸಿ) ಮಣಿಪುರದ ವಿವಿಧೆಡೆ ಬುಧವಾರ ರ‍್ಯಾಲಿ ನಡೆಸಿತು –ಪಿಟಿಐ ಚಿತ್ರ

ಮಣಿಪುರಕ್ಕೆ ಹೆಚ್ಚಿನ ಕೇಂದ್ರೀಯ ಪಡೆ ನಿಯೋಜನೆ: ಶಾ ಭರವಸೆ

ನವದೆಹಲಿ (ಪಿಟಿಐ): ಹಿಂಸಾಚಾರ ಪೀಡಿತ ಮಣಿಪುರದಲ್ಲಿ ಕೇಂದ್ರ ಭದ್ರತಾ ಪಡೆಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ನಿಯೋಜಿಸುವುದಾಗಿ ತಮ್ಮನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ ಸ್ಥಳೀಯ ಬುಡಕಟ್ಟು ನಾಯಕರ ವೇದಿಕೆಯ (ಐಟಿಎಲ್‌ಎಫ್) ನಿಯೋಗಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಬುಧವಾರ ಭರವಸೆ ನೀಡಿದ್ದಾರೆ.

ಪರಿಸ್ಥಿತಿ ಗಂಭೀರವಾಗಿರುವ ಮತ್ತು ಭದ್ರತಾ ವ್ಯವಸ್ಥೆ ದುರ್ಬಲವಿರುವೆಡೆ ಹೆಚ್ಚಿನ ಪಡೆಗಳನ್ನು ನಿಯೋಜಿಸಲು ಅವರು ನಿರ್ದೇಶನ ನೀಡುವ ಭರವಸೆಯನ್ನೂ ಕೊಟ್ಟಿರುವುದಾಗಿ ನಿಯೋಗ ಹೇಳಿದೆ.

ಜನಾಂಗೀಯ ಹಿಂಸಾಚಾರದ ಕುಕಿ-ಜೋ ಸಮುದಾಯಕ್ಕೆ ಸೇರಿದ ಸಂತ್ರಸ್ತರ ಶವಗಳ ಸಾಮೂಹಿಕ ಸಮಾಧಿ ವಿಚಾರದಲ್ಲಿ ಗೃಹ ಸಚಿವರ ಮನವಿ ಗಮನದಲ್ಲಿಟ್ಟುಕೊಂಡು, ಸಮುದಾಯದ ಜನರೊಂದಿಗೆ ಸಮಾಲೋಚಿಸಿ ಪರ್ಯಾಯ ಸ್ಥಳ ಅಂತಿಮಗೊಳಿಸಲಾಗುವುದು ಎಂದು ಐಟಿಎಲ್‌ಎಫ್ ಹೇಳಿಕೆಯಲ್ಲಿ ತಿಳಿಸಿದೆ.

ಇಂಫಾಲ್‌ನಲ್ಲಿ ಬಿದ್ದಿರುವ ಸಂತ್ರಸ್ತರ ಶವಗಳನ್ನು ಗುರುತಿಸಲು ಮತ್ತು ಅವುಗಳನ್ನು ಅವರ ಸ್ವಗ್ರಾಮಗಳಿಗೆ ಸಾಗಿಸಲು ಅನುಕೂಲವಾಗುವಂತೆ ಅಗತ್ಯ ವ್ಯವಸ್ಥೆಗಳನ್ನು ಮಾಡಲಾಗುವುದು ಎಂದು ಅದು ಹೇಳಿದೆ.

ಸಂತ್ರಸ್ತರ ಶವಗಳ ಸಾಮೂಹಿಕ ಸಮಾಧಿಯ ಉದ್ದೇಶಿತ ಜಾಗದ ವಿಚಾರದಲ್ಲಿ ಕಳೆದವಾರ ಮೈತೇಯಿ ಸಮುದಾಯ ಪ್ರತಿಭಟಿಸಿದ ಕಾರಣ ಅಂತ್ಯಕ್ರಿಯೆ ಮುಂದೂಡಲಾಗಿತ್ತು.

ಕ್ವಿಟ್ ಇಂಡಿಯಾ ಸ್ಮರಣೆ ದಿನದ ರ‍್ಯಾಲಿಗೆ ತೆರಳುವಾಗ ಅಡ್ಡಿ- ಮಹಾತ್ಮ ಗಾಂಧಿ ಮರಿಮೊಮ್ಮಗ

ಪೊಲೀಸರಿಂದ ತಡೆ, ಬಳಿಕ ಅನುಮತಿ: ತುಷಾರ್

ಪ್ರಜಾವಾಣಿ ವಾರ್ತೆ/ಪಿಟಿಐ

ಮುಂಬೈ: 'ನಗರದ ಆಗಸ್ಟ್ ಕ್ರಾಂತಿ ಮೈದಾನದಲ್ಲಿ ನಡೆದ ಕ್ವಿಟ್ ಚಳವಳಿ ಸ್ಮರಣೆ ದಿನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ತೆರಳುವ ವೇಳೆ ನನ್ನನ್ನು ತಡೆದ ಪೊಲೀಸರು, ನಂತರದಲ್ಲಿ ಅವಕಾಶ ನೀಡಿದರು' ಎಂದು ಮಹಾತ್ಮಗಾಂಧಿ ಅವರ ಮರಿಮೊಮ್ಮಗ ತುಷಾರ್ ಗಾಂಧಿ ಬುಧವಾರ ಹೇಳಿದ್ದಾರೆ.

'ಸ್ವತಂತ್ರ ಭಾರತದ ಇತಿಹಾಸದಲ್ಲಿ ಮೊಟ್ಟ ಮೊದಲ ಬಾರಿಗೆ ನಾನು ಇಂತಹ ಪರಿಸ್ಥಿತಿ ಎದುರಿಸಿದೆ. ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಸಲುವಾಗಿ ಮನೆಯಿಂದ ಹೊರಟಾಗ, ಸಾಂತಾಕ್ರೂಜ್ ಪೊಲೀಸ್ ಠಾಣೆ ಬಳಿ ಪೊಲೀಸರು ನನ್ನನ್ನು ತಡೆದರು. ಈ ಐತಿಹಾಸಿಕ ದಿನದಂದೇ ನನ್ನ ಮುತ್ತಜ್ಜ ಬಾಪು, ಮುತ್ತಜ್ಜಿ ಕಸ್ತೂರಬಾ ಅವರನ್ನು ಬ್ರಿಟಿಷ್ ಪೊಲೀಸರು ಬಂಧಿಸಿದ್ದರು. ಈ ಬಗ್ಗೆ ನನಗೆ ಹೆಮ್ಮೆ ಇದೆ' ಎಂದು ಅವರು ಟ್ವೀಟ್ ಮಾಡಿದ್ದಾರೆ.

1942ರಲ್ಲಿ ಗೋವಾಲಿಯಾ ಟ್ಯಾಂಕ್ ಮೈದಾನದಲ್ಲಿ ಮಹಾತ್ಮ ಗಾಂಧಿ ಅವರು 'ಮಾಡು ಇಲ್ಲವೇ ಮಡಿ' ಹೋರಾಟಕ್ಕೆ ಕರೆ ನೀಡಿದ್ದರು. ಸ್ವಾತಂತ್ರ್ಯ ಹೋರಾಟದ ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾಗಿದ್ದ ಈ ಮೈದಾನ ನಂತರ ಆಗಸ್ಟ್ ಕ್ರಾಂತಿ ಮೈದಾನ ಎಂದೇ ಖ್ಯಾತಿ ಪಡೆಯಿತು.

ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಸಂಬಂಧ ತುಷಾರ್ ಗಾಂಧಿ ಅವರು ಬೆಳಿಗ್ಗೆ 7.45ರ ಸುಮಾರಿಗೆ ಮನೆಯಿಂದ ಹೊರಟಾಗ, ಹೊರಗಡೆ ಕಾಯುತ್ತಿದ್ದ ಪೊಲೀಸರು, 'ಕಾನೂನು–ಸುವ್ಯವಸ್ಥೆ ಹಿನ್ನೆಲೆಯಲ್ಲಿ ಕಾರ್ಯಕ್ರಮದ ಅಂಗವಾಗಿ ನಡೆಬೇಕಿದ್ದ ರ‍್ಯಾಲಿಗೆ ಅನುಮತಿ ನೀಡಿಲ್ಲ. ನೀವು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತಿಲ್ಲ' ಎಂಬುದಾಗಿ ತಿಳಿಸಿದರು.

ಹೀಗಾಗಿ ತುಷಾರ್ ಗಾಂಧಿ ಮನೆಗೆ ಮರಳಿದರು. ನಂತರ, ಆಗಸ್ಟ್ ಕ್ರಾಂತಿ ಮೈದಾನಕ್ಕೆ ತೆರಳಿ, ಗೌರವ ಸಲ್ಲಿಸಲು ಅನುಮತಿ ನೀಡಿದ್ದಾಗಿ ಪೊಲೀಸರು ಅವರಿಗೆ ತಿಳಿಸಿದರು.

'ನಮ್ಮ ಸಮಾಜದಲ್ಲಿ ಭಯದ ವಾತಾವರಣ ಇರುವುದು ಸ್ಪಷ್ಟ. ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಅನುಮತಿ ನೀಡಿದ ನಂತರ ಸಾಂತಾಕ್ರೂಜ್ ಪೊಲೀಸ್ ಠಾಣೆ ಬಳಿ ರಿಕ್ಷಾ ಏರಿದೆ. ಬಾಂದ್ರಾ ತಲುಪಿದ ಮೇಲೆ, ಆಗಸ್ಟ್ ಕ್ರಾಂತಿ ಮೈದಾನಕ್ಕೆ ಹೋಗಲು ಟ್ಯಾಕ್ಸಿ ಹಿಡಿದೆ. ಆದರೆ, ದಾರಿ ಮಧ್ಯೆ ಪೊಲೀಸ್ ವಾಹನ ಕಂಡ ಟ್ಯಾಕ್ಸಿಯ ಮುಸ್ಲಿಂ ಚಾಲಕ, ಸಾಹೇಬ್ರೆ, ಸಂಕಷ್ಟಕ್ಕೆ ಸಿಲುಕಲು ನನಗೆ ಇಷ್ಟ ಇಲ್ಲ ಎಂಬುದಾಗಿ ಗಾಬರಿಯಿಂದ ಹೇಳಿದ' ಎಂದು ತುಷಾರ್ ಗಾಂಧಿ ಮತ್ತೊಂದು ಟ್ವೀಟ್ ಮಾಡಿದ್ದಾರೆ.

'ಸಾಕಷ್ಟು ಪ್ರಯತ್ನದ ನಂತರ ಚಾಲಕನ ಮನವೊಲಿಸಿದೆ, ಮೈದಾನ ತಲುಪಿದೆ. ಭಯ ಹುಟ್ಟಿಸುವ ಇಂಥ ಕಾಯಿಲೆ ನಮ್ಮ ಸಮಾಜವನ್ನು ಕಾಡುತ್ತಿದೆ. ಇದಕ್ಕಾಗಿಯೇ, ಭಾರತಕ್ಕೆ ದ್ವೇಷದ ಬದಲು ಪ್ರೀತಿಯ ಅಗತ್ಯವಿದೆ' ಎಂದು ಟ್ವೀಟ್‌ನಲ್ಲಿ ಹೇಳಿದ್ದಾರೆ.

ಗಿರಗಾಂವ ಚೌಪಟ್ಟಿಯಿಂದ ಆಗಸ್ಟ್ ಕ್ರಾಂತಿ ಮೈದಾನದ ವರೆಗೆ ಆಯೋಜಿಸಿದ್ದ 'ಶಾಂತಿ ನಡಿಗೆ'ಯಲ್ಲಿ ತುಷಾರ್ ಗಾಂಧಿ, ಸಾಮಾಜಿಕ ಹೋರಾಟಗಾರ್ತಿ ತೀಸ್ತಾ ಸೆಟಲ್ವಾಡ್ ಹಾಗೂ ಸ್ವಾತಂತ್ರ್ಯ ಹೋರಾಟಗಾರ ಜಿ.ಜಿ.ಪಾರಿಖ್ ಪಾಲ್ಗೊಳ್ಳಬೇಕಿತ್ತು. ರ‍್ಯಾಲಿಗೆ ಅನುಮತಿ ನಿರಾಕರಿಸಿದ್ದರ ಬಗ್ಗೆ ಸಂಘಟಕರಿಗೆ ಲಿಖಿತವಾಗಿ ತಿಳಿಸಲಾಗಿತ್ತು ಎಂದು ಪೊಲೀಸ್ ಅಧಿಕಾರಿ ಹೇಳಿದ್ದಾರೆ.

ತೀಸ್ತಾ ಟ್ವೀಟ್: 'ಸ್ವಾತಂತ್ರ್ಯ ಹೋರಾಟಗಾರ ಜಿ.ಜಿ.ಪಾರಿಕ್ ಹಾಗೂ ನನ್ನನ್ನು ಮನೆಯಿಂದ ಹೊರಹೋಗದಂತೆ ಪೊಲೀಸರು ತಡೆದರು. ಆಗಸ್ಟ್ ಕ್ರಾಂತಿ ಮೈದಾನ ತಲುಪದಂತೆಯೂ ತಡೆ ಒಡ್ಡಿದರು' ಎಂದು ತೀಸ್ತಾ ಸೆಟಲ್ವಾಡ್ ಟ್ವೀಟ್ ಮಾಡಿದ್ದಾರೆ. ತಮ್ಮ ಮನೆ ಹೊರಗಡೆ ಕೆಲ ಪೊಲೀಸ್ ಸಿಬ್ಬಂದಿ ನಿಂತಿದ್ದನ್ನು ತೋರಿಸುವ ಚಿತ್ರಗಳನ್ನು ಟ್ವೀಟ್‌ನಲ್ಲಿ ಹಂಚಿಕೊಂಡಿದ್ದಾರೆ.

'ರ‍್ಯಾಲಿಗೆ ಅನುಮತಿ ಇಲ್ಲ. ಮೈದಾನಕ್ಕೆ ತೆರಳಿ ಗೌರವ ಸಲ್ಲಿಸಬಹುದು ಎಂಬುದಾಗಿ ತೀಸ್ತಾ ಅವರಿಗೆ ತಿಳಿಸಲಾಗಿತ್ತು' ಎಂದು ಪೊಲೀಸ್ ಅಧಿಕಾರಿ ಹೇಳಿದ್ದಾರೆ.

'ಇದಾದ ಬಳಿಕ, ತೀಸ್ತಾ ಅವರು ಮೈದಾನಕ್ಕೆ ತೆರಳಿ, ಗಾಂಧಿ ಸ್ಮೃತಿ ಸ್ತಂಭಕ್ಕೆ ಗೌರವ ಸಲ್ಲಿಸಿದರು. ಪಾರಿಖ್ ಅವರು ಗಿರಗಾಂವ್‌ನಲ್ಲಿರುವ ಲೋಕಮಾನ್ಯ ತಿಲಕರ ಪ್ರತಿಮೆಗೆ ಗೌರವಾರ್ಪಣೆ ಮಾಡಿ, ಮರಳಿದರು' ಎಂದಿದ್ದಾರೆ.

ತಡೆ: ರ‍್ಯಾಲಿಯಲ್ಲಿ ಪಾಲ್ಗೊಳ್ಳಲು ತೆರಳುತ್ತಿದ್ದ 20ಕ್ಕೂ ಹೆಚ್ಚು ಹೋರಾಟಗಾರರನ್ನು ದಕ್ಷಿಣ ಮುಂಬೈನ ಡಿ.ಬಿ.ಮಾರ್ಗ ಠಾಣೆ ಪೊಲೀಸರು ವಶಕ್ಕೆ ಪಡೆದು, ನಂತರ ಬಿಡುಗಡೆ ಮಾಡಿದರು.

'ಮೇರಿ ಮಾಟಿ, ಮೇರಿ ದೇಶ್'ಗೆ ಚಾಲನೆ

'ಮೇರಿ ಮಾಟಿ, ಮೇರಾ ದೇಶ್' ಎಂಬ ಆಂದೋಲನಕ್ಕೆ ಮುಖ್ಯಮಂತ್ರಿ ಏಕನಾಥ ಶಿಂದೆ ಇದೇ ಆಗಸ್ಟ್ ಕ್ರಾಂತಿ ಮೈದಾನದಲ್ಲಿ ಚಾಲನೆ ನೀಡಿದರು.

ಉಪಮುಖ್ಯಮಂತ್ರಿಗಳಾದ ದೇವೇಂದ್ರ ಫಡಣವೀಸ್ ಹಾಗೂ ಅಜಿತ್ ಪವಾರ್ ಪಾಲ್ಗೊಂಡಿದ್ದರು. ಕಾರ್ಯಕ್ರಮದ ಹಿನ್ನೆಲೆಯಲ್ಲಿ ಮೈದಾನದ ಸುತ್ತಮುತ್ತ ಭಾರಿ ಬಂದೋಬಸ್ತ್ ಹಾಕಲಾಗಿತ್ತು.

ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ: ಟೂರ್ನಿಯಿಂದ ಹೊರಬಿದ್ದ ಪಾಕ್, ಚೀನಾ

ಭಾರತಕ್ಕೆ ಮಣಿದ ಪಾಕಿಸ್ತಾನ

ಚೆನ್ನೈ (ಪಿಟಿಐ): ಆತಿಥೇಯ ಭಾರತ ತಂಡವು ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯ ರೌಂಡ್ ರಾಬಿನ್ ಲೀಗ್ ಪಂದ್ಯದಲ್ಲಿ ಪಾಕಿಸ್ತಾನದ ಎದುರು ಜಯಭೇರಿ ಬಾರಿಸಿತು.

ಬದ್ಧ ಎದುರಾಳಿ ತಂಡಗಳ ಹಣಾಹಣಿಯಲ್ಲಿ ಭಾರತ ತಂಡವು 4–0 ಗೋಲುಗಳಿಂದ ಗೆದ್ದಿತು. ಪಂದ್ಯದ ಆರಂಭದಿಂದಲೂ ಭಾರತ ತಂಡವು ಪಾರಮ್ಯ ಮೆರೆಯಿತು. ಇದರೊಂದಿಗೆ ಪಾಕಿಸ್ತಾನದ ಸೆಮಿಫೈನಲ್ ಕನಸು ಕಮರಿತು.

ಚುರುಕಾದ ಆಟವಾಡಿದ ಆತಿಥೇಯರ ವೇಗಕ್ಕೆ ಪಾಕ್ ಆಟಗಾರರು ಸಮಾನ ಪೈಪೋಟಿ ಒಡ್ಡುವಲ್ಲಿ ವಿಫಲವಾದರು. ಈಗಾಗಲೇ ಸೆಮಿಫೈನಲ್ ಪ್ರವೇಶಿಸಿರುವ ಹರ್ಮನ್‌ಪ್ರೀತ್ ಬಳಗದವರು ಅಪಾರ ಆತ್ಮವಿಶ್ವಾಸದಿಂದ ಆಡಿದರು.

ಭಾರತ ತಂಡದ ಹರ್ಮನ್‌ಪ್ರೀತ್ ಸಿಂಗ್ (15ನೇ ನಿಮಿಷ, 23ನೇ ನಿಮಿಷ) ಎರಡು ಗೋಲು ಹೊಡೆದು ತಂಡಕ್ಕೆ ಮಹತ್ವದ ಮುನ್ನಡೆ ನೀಡಿದರು. ತಂಡದ ರಕ್ಷಣಾ ಆಟಗಾರರೂ ಪಾಕ್ ಸ್ಟ್ರೈಕರ್‌ ಗಳ ದಾಳಿಯನ್ನು ತಡೆದರು.

ಮೂರನೇ ಕ್ವಾರ್ಟರ್‌ನಲ್ಲಿ ಜುಗರಾಜ್ ಪೆನಾಲ್ಟಿ ಕಾರ್ನರ್‌ನಲ್ಲಿ (35ನೇ ನಿಮಿಷ) ಗೋಲು ಗಳಿಸುವಲ್ಲಿ ಸಫಲರಾದರು. ಇದರ ನಂತರವೂ ಪಾಕ್ ತಂಡವು ಭಾರತದ ರಕ್ಷಣಾ ಗೋಡೆಯನ್ನು ದಾಟುವಲ್ಲಿ ಯಶಸ್ವಿಯಾಗಲಿಲ್ಲ. ಇದರ ಲಾಭ ಪಡೆದ ಆಕಾಶದೀಪ್ (54ನೇ ನಿ) ಮತ್ತೊಂದು ಗೋಲು ಹೊಡೆದರು.

ಪಾಕಿಸ್ತಾನದ ವಿರುದ್ಧ ಗೋಲು ಗಳಿಸಿದ ಸಂಭ್ರಮದಲ್ಲಿ ಭಾರತ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್ ಮತ್ತು ಆಟಗಾರರು –ಪಿಟಿಐ ಚಿತ್ರ

ಜಪಾನ್‌ಗೆ ಗೆಲುವು: ಮತ್ತೊಂದು ಪಂದ್ಯದಲ್ಲಿ ಜಪಾನ್ ತಂಡವು 2–1ರಿಂದ ಚೀನಾ ಎದುರು ಜಯಿಸಿತು. ಈ ಮೂಲಕ ಸೆಮಿಫೈನಲ್ ಹಾದಿಯನ್ನು ಸುಗಮಗೊಳಿಸಿತು. ಪಂದ್ಯದಲ್ಲಿ ದಾಖಲಾದ ಎಲ್ಲ ಗೋಲುಗಳೂ ಪೆನಾಲ್ಟಿ ಕಾರ್ನರ್‌ನಲ್ಲಿ ಬಂದವು.

ಜಪಾನ್ ತಂಡದ ಶೊಟೊ ಯಮಾಡಾ (8ನೇ ನಿಮಿಷ) ಮತ್ತು ಕೆಂಟಾರೊ ಫುಕುಡಾ (54ನೇ ನಿ) ಗೋಲು ಹೊಡೆದರು. ಚೀನಾದ ಸೂಜೋ ಎವೊ 57ನೇ ನಿಮಿಷದಲ್ಲಿ ಗೋಲು ದಾಖಲಿಸಿದರು.

ಅಬು ಕಮಾಲ್ ಗೋಲು: ಅಬು ಕಮಾಲ್ ಅಝುರೈ ಅವರು ಹೊಡೆದ ಗೋಲಿನಿಂದ ಮಲೇಷ್ಯಾ ತಂಡವು 1–0ಯಿಂದ ದಕ್ಷಿಣ ಕೊರಿಯಾ ತಂಡವನ್ನು ಸೋಲಿಸಿತು.

ಉಭಯ ತಂಡಗಳೂ ಈಗಾಗಲೇ ಸೆಮಿಫೈನಲ್‌ನಲ್ಲಿ ತಮ್ಮ ಸ್ಥಾನ ಖಚಿತಪಡಿಸಿಕೊಂಡಿವೆ. ಈ ಪಂದ್ಯದಲ್ಲಿ ಜಿದ್ದಾಜಿದ್ದಿಯ ಪೈಪೋಟಿ ನಡೆಸಿದವು. 22ನೇ ನಿಮಿಷದಲ್ಲಿ ಅಬು ಕಮಾಲ್ ಹೊಡೆದ ಗೋಲು ಮಲೇಷ್ಯಾ ತಂಡಕ್ಕೆ ಮುನ್ನಡೆ ಒದಗಿಸಿತು.

ಶುಕ್ರವಾರ ನಡೆಯುವ ಸೆಮಿಫೈನಲ್‌ನಲ್ಲಿ ಭಾರತ ತಂಡವು ಜಪಾನ್ ವಿರುದ್ಧ ಹಾಗೂ ಮಲೇಷ್ಯಾವು ಕೊರಿಯಾ ವಿರುದ್ಧ ಸೆಣಸಲಿವೆ.

ಲೀಗ್ ಹಂತದಲ್ಲಿ ತಂಡಗಳ ಸಾಧನೆ

ದೇಶ	ಪಂದ್ಯ	ಜಯ	ಡ್ರಾ	ಸೋಲು	ಅಂಕ
ಭಾರತ	5	4	1	0	13
ಮಲೇಷ್ಯಾ	5	4	0	1	12
ದಕ್ಷಿಣ ಕೊರಿಯಾ	5	1	2	2	5
ಜಪಾನ್	5	1	2	2	5
ಪಾಕಿಸ್ತಾನ	5	1	2	2	5
ಚೀನಾ	5	0	1	4	1

ಮುಖ್ಯಾಂಶಗಳು

- ಭಾರತ ತಂಡದ ಹರ್ಮನ್‌ಪ್ರೀತ್ ಸಿಂಗ್ ಎರಡು ಗೋಲು
- ಕೊರಿಯಾ ವಿರುದ್ಧ ಮಲೇಷ್ಯಾಕ್ಕೆ, ಚೀನಾ ವಿರುದ್ಧ ಜಪಾನ್‌ಗೆ ಗೆಲುವು
- ಸೆಮಿಫೈನಲ್‌ಗೆ ಭಾರತ, ಮಲೇಷ್ಯಾ, ದಕ್ಷಿಣ ಕೊರಿಯಾ ಮತ್ತು ಜಪಾನ್

5 ತಿಂಗಳಲ್ಲಿ 55 ಕ್ರಿಕೆಟಿಗರ ಪರೀಕ್ಷೆ

ನಾಡಾ: ಉದ್ದೀಪನ ಮದ್ದು ಸೇವನೆ ಪತ್ತೆಗೆ ಮಾದರಿ ಸಂಗ್ರಹ

ನವದೆಹಲಿ (ಪಿಟಿಐ): ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಘಟಕವು ಐದು ತಿಂಗಳುಗಳಲ್ಲಿ 55 ಕ್ರಿಕೆಟಿಗರನ್ನು ಪರೀಕ್ಷೆಗೊಳಪಡಿಸಿದೆ. ಆಲ್‌ರೌಂಡರ್ ರವೀಂದ್ರ ಜಡೇಜ ಅವರಿಂದ ಅತಿ ಹೆಚ್ಚು ಮಾದರಿಗಳನ್ನು ಸಂಗ್ರಹಿಸಲಾಗಿದೆ.

ಈ ವರ್ಷದ ಜನವರಿಯಿಂದ ಮೇ ಅಂತ್ಯದವರೆಗೆ ಪುರುಷ ಮತ್ತು ಮಹಿಳಾ ಕ್ರಿಕೆಟಿಗರ ಒಟ್ಟು 58 ಮಾದರಿಗಳನ್ನು ಅದರಲ್ಲಿ ಅರ್ಧದಷ್ಟು ಸಂಖ್ಯೆಯ ಮಾದರಿಗಳನ್ನು ಸ್ಪರ್ಧೆಗಳಿಲ್ಲದ ಸಂದರ್ಭದಲ್ಲಿ ಪಡೆಯಲಾಗಿದೆ. ಆದರೆ, ಪ್ರಮುಖ ಬ್ಯಾಟರ್‌ಗಳಾದ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರಿಂದ ಸ್ಯಾಂಪಲ್ ಪಡೆದಿಲ್ಲ. 2021 ಮತ್ತು 2022ರಲ್ಲಿಯೂ ಅವರ ಮಾದರಿಗಳನ್ನು ಪಡೆದಿರಲಿಲ್ಲ.

ಆದರೆ ಜಡೇಜ ಅವರನ್ನು ಫೆಬ್ರುವರಿ 19, ಮಾರ್ಚ್ 26 ಮತ್ತು ಏಪ್ರಿಲ್ 26ರಂದು ಪರೀಕ್ಷೆಗೊಳಪಡಿಸಲಾಗಿದೆ. ವೇಗದ ಬೌಲರ್ ತಂಗರಸು ನಟರಾಜನ್ ಅವರಿಂದ ಏಪ್ರಿಲ್ 27ರಂದು ಮೂತ್ರ ಹಾಗೂ ರಕ್ತದ ಮಾದರಿಗಳನ್ನು ಪಡೆಯಲಾಗಿದೆ. ಟಿ20 ತಂಡದ ನಾಯಕತ್ವ ವಹಿಸಿರುವ ಹಾರ್ದಿಕ್ ಪಾಂಡ್ಯ ಅವರ ಮೂತ್ರದ ಮಾದರಿಯನ್ನು ಕಳೆದ ಏಪ್ರಿಲ್‌ನಲ್ಲಿ ಪರೀಕ್ಷೆಗಾಗಿ ಸಂಗ್ರಹಿಸಲಾಗಿತ್ತು.



ರವೀಂದ್ರ ಜಡೇಜ

ಸೂರ್ಯಕುಮಾರ್ ಯಾದವ್, ಕೆ.ಎಲ್. ರಾಹುಲ್, ಇಶಾನ್ ಕಿಶನ್, ಮೊಹಮ್ಮದ್ ಸಿರಾಜ್, ದೀಪಕ್ ಚಾಹರ್, ಮಯಂಕ್ ಅಗರವಾಲ್, ರಾಹುಲ್ ತ್ರಿಪಾಠಿ, ಭುವನೇಶ್ವರ್ ಕುಮಾರ್, ವೃದ್ಧಿಮಾನ್ ಸಹಾ, ದಿನೇಶ್ ಕಾರ್ತಿಕ್, ಯಶಸ್ವಿ ಜೈಸ್ವಾಲ್, ಅಂಬಟಿ ರಾಯುಡು, ಪಿಯೂಷ್ ಚಾವ್ಲಾ ಮತ್ತು ಮನೀಷ್ ಪಾಂಡೆ ಅವರಿಂದಲೂ ನಾಡಾ ಸ್ಯಾಂಪಲ್ ಸಂಗ್ರಹಿಸಿದೆ.

ಐಪಿಎಲ್‌ನಲ್ಲಿ ಆಡಿದ ವಿದೇಶಿ ಆಟಗಾರರಾದ ಡೇವಿಡ್ ವೀಸ್, ಡೇವಿಡ್ ಮಿಲ್ಲರ್, ಕ್ಯಾಮರಾನ್ ಗ್ರೀನ್, ಸುನಿಲ್ ನಾರಾಯಣ, ಆ್ಯಂಡ್ರೆ ರಸೆಲ್, ಡೇವಿಡ್ ವಾರ್ನರ್, ರಶೀದ್ ಖಾನ್, ಡೇವಿಡ್ ವಿಲಿ, ಟ್ರೆಂಟ್ ಬೌಲ್ಟ್, ಮಾರ್ಕಸ್ ಸ್ಟೊಯಿನಿಸ್, ಮಾರ್ಕ್ ವುಡ್, ಆ್ಯಡಂ ಜಂಪಾ, ಸ್ಯಾಮ್ ಕರನ್, ಲಿಯಾಮ್ ಲಿವಿಂಗ್‌ಸ್ಟೋನ್ ಮತ್ತು ಜೋಫ್ರಾ ಆರ್ಚರ್ ಅವರನ್ನೂ ಪರೀಕ್ಷಿಸಲಾಗಿದೆ.

ಈ ವರ್ಷದಲ್ಲಿ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಮತ್ತು ಉಪನಾಯಕಿ ಸ್ಮೃತಿ ಮಂದಾನ ಅವರನ್ನೂ ತಲಾ ಒಂದು ಬಾರಿ ಪರೀಕ್ಷೆಗೊಳಪಡಿಸಲಾಗಿದೆ. 2022ರಲ್ಲಿ ಮಹಿಳಾ ಕ್ರಿಕೆಟಿಗರಿಂದ 20 ಸ್ಯಾಂಪಲ್ ಪಡೆಯಲಾಗಿತ್ತು.

ಇದೇ ಅವಧಿಯಲ್ಲಿ ಬೇರೆ ಕ್ರೀಡೆಗಳ ಖ್ಯಾತನಾಮ ಕ್ರೀಡಾಪಟುಗಳಿಂದಲೂ ಸ್ಯಾಂಪಲ್ ಸಂಗ್ರಹ ಮಾಡಲಾಗಿದೆ. ಅವರಲ್ಲಿ ಒಲಿಂಪಿಯನ್ ಮೀರಾಬಾಯಿ ಚಾನು, ಲವ್ಲಿನಾ ಬೊರ್ಗೊಹೈನ್, ಸೈನಾ ನೆಹ್ವಾಲ್, ಕಿದಂಬಿ ಶ್ರೀಕಾಂತ್, ಬಜರಂಗ್ ಪೂನಿಯಾ, ವಿನೇಶಾ ಫೋಗಟ್, ಹರ್ಮನ್‌ಪ್ರೀತ್ ಸಿಂಗ್, ಪಿ.ಆರ್. ಶ್ರೀಜೇಶ್ ಮತ್ತು ಸವಿತಾ ಪೂನಿಯಾ ಪ್ರಮುಖರಾಗಿದ್ದಾರೆ.

ಟ್ರ್ಯಾಕ್ ಮತ್ತು ಫೀಲ್ಡ್ ಅಥ್ಲೀಟ್‌ಗಳಿಂದ 500, ವೇಟ್‌ಲಿಫ್ಟಿಂಗ್ 200, ಬಾಕ್ಸಿಂಗ್ 100, ಶೂಟಿಂಗ್ 70, ಕುಸ್ತಿ 70, ಫುಟ್‌ಬಾಲ್ 50 ಮತ್ತು ಹಾಕಿ ಕ್ರೀಡಾಪಟುಗಳಿಂದ 50 ಮಾದರಿಗಳನ್ನು ಸಂಗ್ರಹಿಸಲಾಗಿದೆ.

ಸಂಕ್ಷಿಪ್ತ ಸುದ್ದಿ

ಕಳೆದುಹೋದ ಬ್ಯಾಗೇಜ್ ಮರಳಿ ಮಣಿಕಾ ಕೈಗೆ

ನವದೆಹಲಿ (ಪಿಟಿಐ): ಭಾರತದ ಟೇಬಲ್ ಟೆನಿಸ್ ತಾರೆ ಮಣಿಕಾ ಬಾತ್ರಾ ಅವರು ವಿಮಾನ ಪ್ರಯಾಣದ ಸಂದರ್ಭದಲ್ಲಿ ಕಳೆದುಕೊಂಡಿದ್ದ ಬ್ಯಾಗೇಜ್ ಪತ್ತೆಯಾಗಿದೆ. ಈ ಬಗ್ಗೆ ಬುಧವಾರ ಮಾಹಿತಿ ನೀಡಿರುವ ಅವರು ಕ್ಷಿಪ್ರಗತಿಯಲ್ಲಿ ಸ್ಪಂದಿಸಿದ್ದಕ್ಕೆ ನಾಗರಿಕ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಮತ್ತು ಸಚಿವಾಲಯಕ್ಕೆ ಧನ್ಯವಾದ ಸಲ್ಲಿಸಿದ್ದಾರೆ.

ಈ ಬಗ್ಗೆ ಜಾಲತಾಣ 'ಎಕ್ಸ್'ನಲ್ಲಿ (ಈ ಮೊದಲು ಟ್ವಿಟರ್) ಅವರು ಬರೆದುಕೊಂಡಿದ್ದಾರೆ. ಅವರು ಪೆರು ದೇಶದಲ್ಲಿ ನಡೆದ ಟೂರ್ನಿಯಲ್ಲಿ ಭಾಗವಹಿಸಿ ಕೆಎಲ್ಎಂ ವಿಮಾನದಲ್ಲಿ ತವರಿಗೆ ಬರುತ್ತಿದ್ದಾಗ ಕ್ರೀಡಾಪರಿಕರಗಳನ್ನು ಹೊಂದಿದ್ದ ಬ್ಯಾಗೇಜ್ ಕಳವಾಗಿತ್ತು. ಪತ್ತೆ ಮಾಡಿಕೊಡುವಂತೆ ಅವರು ಸರ್ಕಾರದ ನೆರವು ಕೇಳಿದ್ದರು. 'ನನ್ನ ಬ್ಯಾಗೇಜ್ ಮರಳಿ ಪಡೆಯಲು ನೆರವಾಗಿದ್ದಕ್ಕೆ ಮತ್ತು ಬೇಗನೇ ಸ್ಪಂದಿಸಿದ್ದಕ್ಕೆ ಧನ್ಯವಾದಗಳು. ಬ್ಯಾಗೇಜ್ ಇವತ್ತು ಬೆಳಿಗ್ಗೆ ಕೈಸೇರಿದೆ' ಎಂದು ಬರೆದಿದ್ದಾರೆ.

ಬ್ಯಾಗ್ ಕಳೆದುಕೊಂಡಿರುವುದು ಗಮನಕ್ಕೆ ಬಂದ ತಕ್ಷಣ ಮಣಿಕಾ ಈ ಬಗ್ಗೆ 'ಎಕ್ಸ್' ಮಾಡಿ 'ಸಿಂಧಿಯಾ ಸರ್ ನೆರವಾಗಿ' ಎಂದು ಕೇಳಿದ್ದರು.

ಚೆಸ್: ಮ್ಯಾಗ್ನಸ್ ಕಾರ್ಲ್‌ಸನ್‌ಗೆ ಹಿನ್ನಡೆ

ಬಾಕು (ಅಜರ್‌ಬೈಜಾನ್): ವಿಶ್ವದ ಅಗ್ರ ಕ್ರಮಾಂಕದ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಅವರು ಚೆಸ್ ವಿಶ್ವಕಪ್‌ನ ನಾಲ್ಕನೇ ಸುತ್ತಿನ ಮೊದಲ ಪಂದ್ಯದಲ್ಲಿ ಜರ್ಮನಿಯ ಯುವ ಪ್ರತಿಭೆ ವಿನ್ಸೆಂಟ್ ಕೀಮರ್ ಎದುರು ಬುಧವಾರ ಅನಿರೀಕ್ಷಿತ ಸೋಲನುಭವಿಸಿದರು.

ಗುರುವಾರ ನಾರ್ವೆಯ ಆಟಗಾರ ಎರಡನೇ ಪಂದ್ಯದಲ್ಲಿ ಬಿಳಿ ಕಾಯಿಯಲ್ಲಿ ಆಡಲಿದ್ದಾರೆ. ಭಾರತದ ವಿದಿತ್ ಎಸ್.ಗುಜರಾತಿ ಮೊದಲ ಪಂದ್ಯ ಗೆದ್ದು ಶುಭಾರಂಭ ಮಾಡಿದ್ದಾರೆ. ಭಾರತದ ಉಳಿದ ಯುವ ಆಟಗಾರರು ಪಾಯಿಂಟ್ ಹಂಚಿಕೊಂಡಿದ್ದಾರೆ.

ಡಿ.ಗುಕೇಶ್, ಆ್ಯಂಡ್ರಿ ಇಸಿಪೆಂಕೊ ಜೊತೆ, ನಿಹಾಲ್ ಸರಿನ್, ಇಯಾನ್ ನೆಪೋಮ್‌ನಿಯಾಷಿ ಜೊತೆ, ಅರ್ಜುನ್ ಎರಿಗೇಶಿ, ಜಾವೊಖಿರ್ ಸಿಂದರೊವ್ ಜೊತೆ, ಆರ್.ಪ್ರಜ್ಞಾನಂದ, ಹಿಕಾರು ನಕಾಮುರಾ ಜೊತೆ ಮೊದಲ ಪಂದ್ಯಗಳನ್ನು ಡ್ರಾ ಮಾಡಿಕೊಂಡಿದ್ದಾರೆ.

ವಿಶ್ವಕಪ್‌ನ ಪ್ರತಿ ಸುತ್ತಿನಲ್ಲಿ ಆಟಗಾರರು ಮೊದಲ ಎರಡು ದಿನ ಒಂದೊಂದು ಪಂದ್ಯಗಳನ್ನು ಆಡುತ್ತಾರೆ. ಒಂದೊಮ್ಮೆ ಪಾಯಿಂಟ್ ಸಮಬಲ ಆದಲ್ಲಿ ಮೂರನೇ ದಿನ ಟೈಬ್ರೇಕರ್ ಪಂದ್ಯಗಳನ್ನು ಆಡಬೇಕಾಗುತ್ತದೆ.

ವರ್ಮಾ ಅರ್ಧಶತಕ ಅವಕಾಶ ಕಸಿದ ಪಾಂಡ್ಯ

ಗೆಲುವಿನ ಸಿಕ್ಸರ್ ಹೊಡೆದ ಭಾರತದ ನಾಯಕನ ವಿರುದ್ಧ ಅಭಿಮಾನಿಗಳ ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ ಟಿ20 ಕ್ರಿಕೆಟ್ ತಂಡದ ನಾಯಕ ಹಾರ್ದಿಕ್ ಪಾಂಡ್ಯ ಮಂಗಳವಾರ ವೆಸ್ಟ್ ಇಂಡೀಸ್ ಎದುರಿನ ಮೂರನೇ ಪಂದ್ಯದಲ್ಲಿ ವಿಜಯದ ಸಿಕ್ಸರ್ ಹೊಡೆದರು. ಆದರೂ ಸಾಮಾಜಿಕ ಜಾಲತಾಣಗಳಲ್ಲಿ ಟೀಕೆಗೊಳಗಾಗಿದ್ದಾರೆ.

ಅದಕ್ಕೆ ಕಾರಣ ಇನ್ನೊಂದು ಬದಿಯಲ್ಲಿದ್ದ ಬ್ಯಾಟರ್ ತಿಲಕ್ ವರ್ಮಾ ಅವರಿಗೆ ಅರ್ಧಶತಕ ಪೂರೈಸಲು ಹಾರ್ದಿಕ್ ಅವಕಾಶ ಕೊಡಲಿಲ್ಲ ಎಂಬುದು. ಗಯಾನದಲ್ಲಿ ನಡೆದ ಮೂರನೇ ಟಿ20 ಪಂದ್ಯದಲ್ಲಿ ಭಾರತ ತಂಡವು 159 ರನ್ ಗುರಿ ಬೆನ್ನಟ್ಟಿತ್ತು. ಹಾರ್ದಿಕ್ ಬಳಗವು 17.5 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 164 ರನ್ ಗಳಿಸಿ, 7 ವಿಕೆಟ್‌ಗಳಿಂದ ಜಯಿಸಿತು. ಸೂರ್ಯಕುಮಾರ್ ಯಾದವ್ (83; 44ಎ, 10X4, 6X4) ಮತ್ತು ತಿಲಕ್ (ಅಜೇಯ 49; 37ಎ, 4X4, 6X1) ಮೂರನೇ ವಿಕೆಟ್ ಜೊತೆಯಾಟದಲ್ಲಿ 87 ರನ್‌ಗಳನ್ನು ಸೇರಿಸಿ ತಂಡವನ್ನು ಜಯದತ್ತ ಮುನ್ನಡೆಸಿದರು. ಆದರೆ 13ನೇ ಓವರ್‌ನಲ್ಲಿ ಸೂರ್ಯ ಔಟಾದಾಗ ಭಾರತ ತಂಡವು ಮೂರು ವಿಕೆಟ್‌ಗಳಿಗೆ 121 ರನ್ ಗಳಿಸಿತ್ತು. ಈ ಹಂತದಲ್ಲಿ ತಿಲಕ್ ಜೊತೆ ಹಾರ್ದಿಕ್ ಸೇರಿಕೊಂಡರು.

18ನೇ ಓವರ್‌ನಲ್ಲಿ ಗೆಲುವಿನ ಕೊನೆಯ ಒಂದು ರನ್ ಮಾತ್ರ ಬೇಕಿದ್ದಾಗ ಹಾರ್ದಿಕ್ ಬ್ಯಾಟಿಂಗ್ ಮಾಡುತ್ತಿದ್ದರು. ನಾನ್‌ಸ್ಟ್ರೈಕರ್‌ನಲ್ಲಿ ತಿಲಕ್ ಇದ್ದರು. ಓವರ್‌ನ ಐದನೇ ಎಸೆತವನ್ನು ಹಾರ್ದಿಕ್ ಸಿಕ್ಸರ್‌ಗೆ ಎತ್ತಿದರು.

'ತಿಲಕ್ ವರ್ಮಾ ಈ ಸರಣಿಯಲ್ಲಿ ಅಮೋಘವಾಗಿ ಆಡುತ್ತಿದ್ದಾರೆ. ತಮ್ಮ ವೃತ್ತಿಜೀವನದ ಮೊದಲ ಮೂರು ಟಿ20 ಪಂದ್ಯಗಳಲ್ಲಿ 30ಕ್ಕೂ ಹೆಚ್ಚು ರನ್ ಗಳಿಸಿದ ಮೊದಲ ಆಟಗಾರ ಎನಿಸಿಕೊಂಡಿದ್ದಾರೆ. ಎರಡನೇ ಪಂದ್ಯದಲ್ಲಿ ಅರ್ಧಶತಕ ದಾಖಲಿಸಿದ್ದರು. ಈ ಪಂದ್ಯದಲ್ಲಿ ಅವರಿಗೆ 50ರ ಗಡಿ ಮುಟ್ಟಲು ಇನ್ನೊಂದು ರನ್ ಬೇಕಿತ್ತು. ಇನಿಂಗ್ಸ್‌ನಲ್ಲಿ ಸೂರ್ಯಕುಮಾರ್ ಜೊತೆಗೆ ಮತ್ತು ನಂತರ ತಂಡದ ಗೆಲುವಿಗೆ ಮಹತ್ವದ ಕಾಣಿಕೆ ನೀಡಿದರು. ಅವರಿಗೆ ಅರ್ಧಶತಕ ಪೂರೈಸುವ ಅವಕಾಶ ಸಿಗಬೇಕಿತ್ತು' ಎಂದು ವೀಕ್ಷಕ ವಿವರಣೆಕಾರ ಆಕಾಶ್ ಚೋಪ್ರಾ ತಮ್ಮ ಯುಟ್ಯೂಬ್ ವಾಹಿನಿಯಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಸಾಮಾಜಿಕ ಜಾಲತಾಣಗಳಲ್ಲಿಯೂ ಕೆಲವು ಕ್ರಿಕೆಟ್ ಅಭಿಮಾನಿಗಳೂ ಹಾರ್ದಿಕ್ ಅವರನ್ನು ಟೀಕೆ ಮಾಡಿದ್ದಾರೆ. ಇನಿಂಗ್ಸ್‌ನಲ್ಲಿ ಇನ್ನೂ 13 ಎಸೆತಗಳು ಬಾಕಿಯಿದ್ದವು. ಉದಯೋನ್ಮುಖ ಆಟಗಾರನಿಗೆ ಅವಕಾಶ ನೀಡಿದ್ದರೆ ಉತ್ತಮ ನಾಯಕ ಎನಿಸಿಕೊಳ್ಳಬಹುದಿತ್ತಲ್ಲವೇ ಎಂದು ಕೆಲವರು ಪ್ರಶ್ನಿಸಿದ್ದಾರೆ.

ಕೆಲವು ವರ್ಷಗಳ ಹಿಂದೆ ಇಂತಹದೇ ಸನ್ನಿವೇಶದಲ್ಲಿ ಆಗಿನ ನಾಯಕ ಮಹೇಂದ್ರಸಿಂಗ್ ಧೋನಿ ಅವರು ದಕ್ಷಿಣ ಆಫ್ರಿಕಾ ಎದುರಿನ ಟಿ20 ಪಂದ್ಯದಲ್ಲಿ ತಮಗೆ ವಿಜಯದ ರನ್ ಹೊಡೆಯುವ ಅವಕಾಶವಿದ್ದ ಎಸೆತವನ್ನು ಪ್ರಜ್ಞಾಪೂರ್ವಕವಾಗಿ ರಕ್ಷಣಾತ್ಮಕವಾಗಿ ಆಡಿದ್ದರು. ಇನ್ನೊಂದು ಬದಿಯಲ್ಲಿದ್ದ ವಿರಾಟ್ ಕೊಹ್ಲಿಗೆ ನಂತರದ ಓವರ್‌ನಲ್ಲಿ ಗೆಲುವಿನ ಹೊಡೆತ ಆಡುವ ಅವಕಾಶ ನೀಡಿದ್ದರು. ಆ ಘಟನೆಯನ್ನೂ ನೆನಪಿಸಿಕೊಂಡಿರುವ ಅಭಿಮಾನಿಗಳು 'ಹಾರ್ದಿಕ್, ಧೋನಿಯ ಮಟ್ಟವನ್ನು ಮುಟ್ಟಲು ಬಹಳ ದೂರ ಕ್ರಮಿಸಬೇಕಿದೆ' ಎಂದು ವ್ಯಂಗ್ಯವಾಡಿದ್ದಾರೆ.

ಭಾರತವು 5 ಪಂದ್ಯ ಗಳ ಸರಣಿಯ ಮೊದಲ ಎರಡು ಪಂದ್ಯಗಳಲ್ಲಿ ಸೋತಿತ್ತು. ಮೂರನೇಯದ್ದರಲ್ಲಿ ಗೆದ್ದಿದೆ. ವಿಂಡೀಸ್ 2–1ರಿಂದ ಮುಂದಿದೆ.

ಗಯಾನದಲ್ಲಿ ಟಿ20 ಪಂದ್ಯ ಗೆದ್ದ ಭಾರತ ತಂಡದ ತಿಲಕ್ ವರ್ಮಾ ಹಾಗೂ ಹಾರ್ದಿಕ್ ಪಾಂಡ್ಯ ಅವರನ್ನು ವೆಸ್ಟ್ ಇಂಡೀಸ್ ಆಟಗಾರರು ಅಭಿನಂದಿಸಿದರು –ಎಎಫ್‌ಪಿ ಚಿತ್ರ

100 ಸಿಕ್ಸರ್: ಸೂರ್ಯ ದಾಖಲೆ

ಸೂರ್ಯಕುಮಾರ್ ಯಾದವ್ ಟ್ವೆಂಟಿ-20 ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಭಾರತದ ಪರ ಅತಿ ವೇಗದ 100 ಸಿಕ್ಸರ್ ಸಿಡಿಸಿದ ದಾಖಲೆಗೆ ಪಾತ್ರರಾಗಿದ್ದಾರೆ.

ವೆಸ್ಟ್ ಇಂಡೀಸ್ ವಿರುದ್ಧದ ಮೂರನೇ ಟ್ವೆಂಟಿ-20 ಪಂದ್ಯದಲ್ಲಿ ನಾಲ್ಕು ಸಿಕ್ಸರ್ ಎತ್ತುವ ಮೂಲಕ ಸೂರ್ಯ ಸ್ಮರಣೀಯ ದಾಖಲೆ ಬರೆದರು. ಈ ಮೂಲಕ ರೋಹಿತ್ ಶರ್ಮಾ ದಾಖಲೆಯನ್ನು ಅವರು ಮುರಿದರು.

49ನೇ ಟಿ20 ಪಂದ್ಯದಲ್ಲಿ ಸೂರ್ಯ 100 ಸಿಕ್ಸರ್‌ಗಳನ್ನು ಬಾರಿಸಿದ್ದಾರೆ. ಇದೇ ಸಾಧನೆಯನ್ನು ರೋಹಿತ್ ಶರ್ಮಾ 84 ಪಂದ್ಯದಲ್ಲಿ ಮಾಡಿದ್ದರು. ಒಟ್ಟಾರೆಯಾಗಿ ಅತಿ ವೇಗದ 100 ಸಿಕ್ಸರ್ ಸಿಡಿಸಿದ ದಾಖಲೆ ವೆಸ್ಟ್ ಇಂಡೀಸ್‌ನ ಎವಿನ್ ಲೂಯಿಸ್ (42 ಇನಿಂಗ್ಸ್) ಅವರ ಹೆಸರಲ್ಲಿದೆ.

ಟಿ20 ಪಂದ್ಯದಲ್ಲಿ ಒಟ್ಟು ಸಿಕ್ಸರ್ ಗಳಿಕೆಯಲ್ಲಿ ಸೂರ್ಯ ಮೂರನೇ ಸ್ಥಾನದಲ್ಲಿದ್ದಾರೆ. ರೋಹಿತ್ ಶರ್ಮಾ 182, ವಿರಾಟ್ ಕೊಹ್ಲಿ 117, ಸೂರ್ಯಕುಮಾರ್ ಯಾದವ್ 101, ಕೆ.ಎಲ್. ರಾಹುಲ್ 99 ಸಿಕ್ಸರ್ ಬಾರಿಸಿದ್ದಾರೆ.

ಶುಭಮನ್ ಗಿಲ್

ರ‍್ಯಾಂಕಿಂಗ್: ಗಿಲ್, ಕಿಶನ್‌ಗೆ ಬಡ್ತಿ

ದುಬೈ (ಪಿಟಿಐ): ವಿಶ್ವಕಪ್ ಆರಂಭಕ್ಕೆ ಸುಮಾರು ಎರಡು ತಿಂಗಳು ಇರುವಂತೆಯೇ ಬುಧವಾರ ಪ್ರಕಟವಾದ ಏಕದಿನ ರ‍್ಯಾಂಕಿಂಗ್ ಪಟ್ಟಿಯಲ್ಲಿ ಭಾರತ ತಂಡದ ಆರಂಭ ಆಟಗಾರರಾದ ಶುಭಮನ್ ಗಿಲ್ ಮತ್ತು ಇಶಾನ್ ಕಿಶನ್ ಅವರು ಜೀವನಶ್ರೇಷ್ಠ ರ‍್ಯಾಂಕಿಂಗ್ ದಾಖಲಿಸಿದ್ದಾರೆ.

ಗಿಲ್ (743 ಅಂಕ) ಎರಡು ಸ್ಥಾನಗಳಷ್ಟು ಬಡ್ತಿ ಕಂಡಿದ್ದು ಐದನೇ ಸ್ಥಾನಕ್ಕೇರಿದ್ದಾರೆ. ಪಾಕ್ ಆಟಗಾರರಾದ ಬಾಬರ್ ಆಜಂ, ಫಖ್ರ್ ಜಮಾನ್ (755) ಮತ್ತು ಇಮಾಂ ಉಲ್ ಹಕ್ (745) ಅವರಿಗೆ ತೀರಾ ಹತ್ತಿರದಲ್ಲಿದ್ದಾರೆ.

ಇಶಾನ್ ಕಿಶನ್ ಒಟ್ಟಾರೆ 36ನೇ ಸ್ಥಾನದಲ್ಲಿದ್ದಾರೆ. ಹಾರ್ದಿಕ್ ಪಾಂಡ್ಯ 10 ಸ್ಥಾನಗಳಷ್ಟು ಸುಧಾರಣೆ ಕಂಡಿದ್ದು 71ನೇ ಸ್ಥಾನದಲ್ಲಿದ್ದಾರೆ.

ಇತ್ತೀಚಿನ ಕೆಲವು ಉತ್ತಮ ಪ್ರದರ್ಶನಗಳ ಕಾರಣ ಸ್ಪಿನ್ನರ್ ಕುಲದೀಪ್ ಯಾದವ್ ಅವರು ಬೌಲರ್‌ಗಳ ಪಟ್ಟಿಯಲ್ಲಿ ಟಾಪ್ ಟೆನ್‌ನಲ್ಲಿ (10ನೇ ಸ್ಥಾನ) ಪಡೆದಿದ್ದಾರೆ. ಶಾರ್ದೂಲ್ ಠಾಕೂರ್ 30ನೇ ಸ್ಥಾನದಲ್ಲಿ ಇದ್ದಾರೆ.

ಪಾಕ್ ಕ್ರಿಕೆಟ್ ತಂಡ: ಫಹೀಂಗೆ ಬುಲಾವ್, ಮಸೂದ್‌ಗೆ ಕೊಕ್

ಲಾಹೋರ್ (ಎಎಫ್‌ಪಿ): ಅಫ್ಗಾನಿಸ್ತಾನ ವಿರುದ್ಧ ಮೂರು ಏಕದಿನ ಪಂದ್ಯಗಳ ಸರಣಿ ಮತ್ತು ಏಷ್ಯಾ ಕಪ್ ಟೂರ್ನಿಗೆ ಪಾಕಿಸ್ತಾನ ಕ್ರಿಕೆಟ್ ತಂಡವನ್ನು ಬುಧವಾರ ಪ್ರಕಟಿಸಲಾಗಿದ್ದು, ಆಲ್‌ರೌಂಡ್ ಆಟಗಾರ ಫಹೀಂ ಅಶ್ರಫ್ ಅವರಿಗೆ ಮತ್ತೆ ಮಣೆ ಹಾಕಲಾಗಿದೆ.

29 ವರ್ಷದ ಫಹೀಂ ಅವರು 31 ಅಂತರರಾಷ್ಟ್ರೀಯ ಏಕದಿನ ಪಂದ್ಯಗಳನ್ನು ಆಡಿದ್ದಾರೆ. 2021ರ ಜುಲೈನಲ್ಲಿ ಇಂಗ್ಲೆಂಡ್ ವಿರುದ್ಧ ಏಕದಿನ ಪಂದ್ಯದಲ್ಲಿ ಕೊನೆಯದಾಗಿ ಆಡಿದ್ದರು.

'ಅಫ್ಗಾನ್ ವಿರುದ್ಧದ ಸರಣಿಗೆ 18 ಆಟಗಾರರನ್ನು ಮತ್ತು ಏಷ್ಯಾ ಕಪ್ ಟೂರ್ನಿಗೆ 17 ಮಂದಿಯಲ್ಲಿ ಆಯ್ಕೆ ಮಾಡಿದ್ದೇವೆ. ಬಾಬರ್ ಅಜಮ್ ತಂಡವನ್ನು ಮುನ್ನಡೆಸಲಿದ್ದಾರೆ' ಎಂದು ಪಾಕಿಸ್ತಾನ ಕ್ರಿಕೆಟ್ ತಂಡದ ಆಯ್ಕೆ ಸಮಿತಿಯ ನೂತನ ಅಧ್ಯಕ್ಷ ಇಂಜಮಾಮ್ ತಿಳಿಸಿದ್ದಾರೆ.

ಶಾನ್ ಮಸೂದ್ ಅವರನ್ನು ತಂಡದಿಂದ ಕೈಬಿಡಲಾಗಿದೆ. ಗಾಯದ ಸಮಸ್ಯೆಯಿಂದಾಗಿ ವೇಗಿ ಇಹ್ಸಾನುಲ್ಲಾ ಅವರನ್ನೂ ಆಯ್ಕೆ ಮಾಡಿಲ್ಲ.

ಪಾಕಿಸ್ತಾನ ತಂಡ: ಬಾಬರ್ ಆಜಂ (ನಾಯಕ), ಫಖ್ರ್ ಜಮಾನ್, ಮೊಹಮ್ಮದ್ ರಿಜ್ವಾನ್, ಶಾದಾಬ್ ಖಾನ್, ಅಬ್ದುಲ್ಲಾ ಶಫೀಕ್, ಫಹೀಂ ಅಶ್ರಫ್, ಹ್ಯಾರಿಸ್ ರವೂಫ್, ಇಫ್ತಿಕಾರ್ ಅಹ್ಮದ್, ಇಮಾಮ್ ಉಲ್ ಹಕ್, ಮೊಹಮ್ಮದ್ ಹ್ಯಾರಿಸ್, ಮೊಹಮ್ಮದ್ ವಸೀಂ, ನಸೀಂ ಶಾ, ಆಘಾ ಸಲ್ಮಾನ್, ಶಾಹೀನ್ ಶಾ ಅಫ್ರಿದಿ, ತಯ್ಯಬ್ ತಾಹೀರ್, ಉಸಾಮ ಮಿರ್, ಮೊಹಮ್ಮದ್ ನವಾಜ್, ಸಾವುದ್ ಶಕೀಲ್ (ಅಫ್ಗಾನ್ ಸರಣಿಗೆ ಮಾತ್ರ)

ಡುರಾಂಡ್: ಗೋಕುಲಂಗೆ ಜಯ

ಕೋಲ್ಕತ್ತ (ಪಿಟಿಐ): ಗೋಕುಲಂ ಕೇರಳ ತಂಡವು ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ 2–0ಯಿಂದ ಇಂಡಿಯನ್ ಏರ್‌ಫೋರ್ಸ್ ತಂಡವನ್ನು ಮಣಿಸಿತು.

ಬುಧವಾರ ನಡೆದ 'ಸಿ' ಗುಂಪಿನ ಪಂದ್ಯದಲ್ಲಿ ಸೌರವ್ 20ನೇ ನಿಮಿಷದಲ್ಲಿ ಮೊದಲ ಗೋಲು ಬಾರಿಸಿ ಕೇರಳ ತಂಡಕ್ಕೆ ಮುನ್ನಡೆ ತಂದುಕೊಟ್ಟರು. ನಂತರ ಶ್ರೀಕುಟ್ಟನ್ ಅವರು ಚೆಂಡನ್ನು ಗುರಿ ಸೇರಿಸಿ, ಗೆಲುವಿನ ಅಂತವನ್ನು ಹೆಚ್ಚಿಸಿದರು.

ಕೊಕ್ರಜಾರ್: ಟೂರ್ನಿಯ ಮತ್ತೊಂದು ಪಂದ್ಯದಲ್ಲಿ ಡೆಲ್ಲಿ ಎಫ್‌ಸಿ ತಂಡದವರು 1–1 ಗೋಲಿನಿಂದ ನೇಪಾಲದ ತ್ರಿಭುವನ್ ಆರ್ಮಿ ತಂಡದೊಂದಿಗೆ ಡ್ರಾ ಸಾಧಿಸಿದರು.

'ಇ' ಗುಂಪಿನ ಪಂದ್ಯದಲ್ಲಿ ದಿನೇಶ್ ಹೆಂಜಾನ್ 39ನೇ ನಿಮಿಷದಲ್ಲಿ ಗೋಲು ಗಳಿಸುವ ಮೂಲಕ ನೇಪಾಲ ತಂಡಕ್ಕೆ ಮುನ್ನಡೆ ತಂದುಕೊಟ್ಟರು. ಪಂದ್ಯದ ಕೊನೆಯ ಹಂತದಲ್ಲಿ ಡೆಲ್ಲಿ ತಂಡದ ಗಿರೀಶ್ ಖೋಸ್ಲಾ (88ನೇ ನಿಮಿಷ) ಅವರು ಚೆಂಡನ್ನು ಗುರಿ ಸೇರಿಸುವ ಮೂಲಕ ಸ್ಕೋರ್ ಸಮಬಲಗೊಳಿಸಿದರು. ಹೀಗಾಗಿ, ಉಭಯ ತಂಡಗಳು ತಲಾ ಒಂದು ಪಾಯಿಂಟ್ ಗಳಿಸಿದವು.

ಏಕದಿನ ಕ್ರಿಕೆಟ್: ಪೃಥ್ವಿ ಶಾ ದ್ವಿಶತಕ

ನಾರ್ಥಾಂಪ್ಟನ್ (ಪಿಟಿಐ): ಕಳೆದ ಹಲವು ದಿನಗಳಿಂದ ಲಯಕ್ಕೆ ಮರಳುವ ಪ್ರಯತ್ನದಲ್ಲಿದ್ದ ಭಾರತದ ಪೃಥ್ವಿ ಶಾ ಅವರು ಇಂಗ್ಲೆಂಡ್‌ನ ಒನ್ ಡೇ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಸೊಮರ್‌ಸೆಟ್ ವಿರುದ್ಧ ದ್ವಿಶತಕ ದಾಖಲಿಸಿದರು.

ಈ ಏಕದಿನ ಕ್ರಿಕೆಟ್ ಟೂರ್ನಿಯಲ್ಲಿ ಪೃಥ್ವಿ ಶಾ ನಾರ್ಥಾಂಪ್ಟನ್‌ಶೈರ್ ತಂಡವನ್ನು ಪ್ರತಿನಿಧಿಸಿದ್ದಾರೆ. ಬುಧವಾರ ನಡೆದ ಪಂದ್ಯದಲ್ಲಿ ಮುಂಬೈನ ಪೃಥ್ವಿ 244 ರನ್ (153 ಎ) ಗಳಿಸಿದರು.

23 ವರ್ಷದ ಪೃಥ್ವಿ ಆಡುತ್ತಿರುವ ಚೊಚ್ಚಲ ಕೌಂಟಿ ಟೂರ್ನಿ ಇದಾಗಿದೆ. 11 ಸಿಕ್ಸರ್ ಮತ್ತು 28 ಬೌಂಡರಿಗಳು ಅದರಲ್ಲಿ ಸೇರಿವೆ. ಲಿಸ್ಟ್ ಎ ಕ್ರಿಕೆಟ್‌ನಲ್ಲಿ ಇದು ಅವರ ಎರಡನೇ ದ್ವಿಶತಕ. 2021ರಲ್ಲಿ ವಿಜಯ್ ಹಜಾರೆ ಟ್ರೋಫಿ ಟೂರ್ನಿಯಲ್ಲಿ ಪುದುಚೇರಿ ವಿರುದ್ಧ ಅಜೇಯ 227 ರನ್ ಗಳಿಸಿದ್ದರು.

ಪೃಥ್ವಿ ಶಾ

ನಾರ್ಥಾಂಪ್ಟನ್ ಶೈರ್ ತಂಡದ ಪರವಾಗಿ ಅವರು ಆಡಿದ ಮೂರನೇ ಪಂದ್ಯ ಇದು. 81 ಎಸೆತಗಳಲ್ಲಿ ಶತಕ ಪೂರೈಸಿದರು. ಒಟ್ಟು 129 ಎಸೆತಗಳಲ್ಲಿ ದ್ವಿಶತಕದ ಗಡಿ ಮುಟ್ಟಿದರು.

ತಂಡವು 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 415 ರನ್ ಗಳಿಸಿತು.

ಮತ್ತಷ್ಟು ಪಂದ್ಯಗಳ ಮರುನಿಗದಿ

ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿ: ವೇಳಾಪಟ್ಟಿ ಪರಿಷ್ಕರಣೆ

ನವದೆಹಲಿ (ಪಿಟಿಐ): ಏಕದಿನ ವಿಶ್ವಕಪ್ ಟೂರ್ನಿಯ ಇನ್ನು ಕೆಲವು ಪಂದ್ಯಗಳ ದಿನಾಂಕ ಮತ್ತು ಸಮಯದಲ್ಲಿ ಬದಲಾವಣೆಯಾಗಿದೆ. ಈ ಹಿಂದಿನ ಬದಲಾವಣೆಯೂ ಸೇರಿ ಒಟ್ಟು 9 ಪಂದ್ಯಗಳ ವೇಳಾಪಟ್ಟಿಯನ್ನು ಪರಿಷ್ಕರಿಸಲಾಗಿದೆ. ಇಂಗ್ಲೆಂಡ್, ಪಾಕಿಸ್ತಾನ ತಂಡಗಳು ಆಡುವ ಮೂರು ಪಂದ್ಯಗಳಲ್ಲಿ ಬದಲಾವಣೆ ಆಗಿದೆ. ಐಸಿಸಿ ಇದನ್ನು ಬುಧವಾರ ಖಚಿತಪಡಿಸಿದೆ.

ಭಾರತ– ಪಾಕಿಸ್ತಾನ ಪಂದ್ಯ ಅಕ್ಟೋಬರ್ 14ರಂದು (ಅ. 15ರ ಬದಲು) ನಡೆಯಲಿದೆ. ಬೆಂಗಳೂರಿನಲ್ಲಿ ಭಾರತ–ನೆದರ್ಲೆಂಡ್ಸ್ ಪಂದ್ಯ ನವೆಂಬರ್ 12ರಂದು (11ರ ಬದಲು) ನಡೆಯಲಿದೆ. ಪಾಕಿಸ್ತಾನ – ಶ್ರೀಲಂಕಾ ನಡುವಣ ಪಂದ್ಯ ಹೈದರಾಬಾದ್‌ನಲ್ಲಿ ಅಕ್ಟೋಬರ್ 11ರ ಬದಲು ಅ.10ರಂದು ನಡೆಯಲಿದೆ. ಅದೇ ದಿನ ಇಂಗ್ಲೆಂಡ್ ತಂಡ ಧರ್ಮಶಾಲಾದಲ್ಲಿ ಬಾಂಗ್ಲಾದೇಶ ವಿರುದ್ಧ ಆಡಲಿದೆ. ಇದು ಹಗಲು–ರಾತ್ರಿ ಬದಲು ಹಗಲು (ಬೆಳಿಗ್ಗೆ 10.30ರಿಂದ) ನಡೆಯಲಿದೆ.

ಇಂಗ್ಲೆಂಡ್– ಅಫ್ಗಾನಿಸ್ತಾನ ನಡುವಣ ಪಂದ್ಯ ನವದೆಹಲಿಯಲ್ಲಿ ಅಕ್ಟೋಬರ್ 14ರ ಬದಲು 15ರಂದು ನಡೆಯಲಿದೆ.

ಇಂಗ್ಲೆಂಡ್–ಪಾಕಿಸ್ತಾನ ನಡುವಣ ಪಂದ್ಯ ಕೋಲ್ಕತ್ತದಲ್ಲಿ ನವೆಂಬರ್ 12ರ ಬದಲು ನವೆಂಬರ್ 11ರಂದು ನಿಗದಿಯಾಗಿದೆ. ನ. 12ರಂದು ಕೋಲ್ಕತ್ತದಲ್ಲಿ ಕಾಳಿಪೂಜೆ ನಡೆಯುವ ಕಾರಣ, ಭದ್ರತೆ ದೃಷ್ಟಿಯಿಂದ ಬದಲಾವಣೆ ನಿರೀಕ್ಷಿಸಲಾಗಿತ್ತು. ನ್ಯೂಜಿಲೆಂಡ್– ಬಾಂಗ್ಲಾದೇಶ ನಡುವಣ ಪಂದ್ಯ ಚೆನ್ನೈನಲ್ಲಿ ಅಕ್ಟೋಬರ್ 14ರ ಬದಲು 13ರಂದು ನಡೆಯಲಿದೆ. ಇದು ಹಗಲು–ರಾತ್ರಿ ಪಂದ್ಯ.

ಭಾರತ ಆಡುವ ಪಂದ್ಯಗಳ ಟಿಕೆಟ್ ಮಾರಾಟ ಆ. 30ರಿಂದ ಸೆಪ್ಟೆಂಬರ್ 3ರವರೆಗೆ ನಡೆಯಲಿದೆ. ಸೆಮಿಫೈನಲ್ ಮತ್ತು ಫೈನಲ್ ಪಂದ್ಯಗಳ ಟಿಕೆಟ್ ಕಾದಿರಿಸುವಿಕೆ ಸೆ. 15ರಂದು ಆರಂಭವಾಗಲಿದೆ.

ಮಹಿಳಾ ವಿಶ್ವಕಪ್ ಫುಟ್‌ಬಾಲ್: ನಾಳೆಯಿಂದ ಕ್ವಾರ್ಟರ್ ಫೈನಲ್ ಪಂದ್ಯಗಳು

ಪ್ರಶಸ್ತಿ ಗೆಲ್ಲುವ ನೆಚ್ಚಿನ ತಂಡದ ಆಯ್ಕೆ ಕಠಿಣ...

ಸಿಡ್ನಿ (ರಾಯಿಟರ್ಸ್): ಮಹಿಳಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿ ಆರಂಭವಾಗಿ ಮೂರು ವಾರಗಳಾಗಿದ್ದು, ಎಂಟು ತಂಡಗಳು ಕ್ವಾರ್ಟರ್‌ಫೈನಲ್ ಮುಖಾಮುಖಿಗೆ ಸಜ್ಜಾಗಿವೆ. ಆದರೆ, ಎಂಟರ ಘಟ್ಟ ತಲುಪಬಹುದೆಂದು ಬಹುತೇಕ ಮಂದಿ ನಿರೀಕ್ಷಿಸಿದ್ದ ಪ್ರಬಲ ತಂಡಗಳಲ್ಲಿ ಕೆಲವು ಟೂರ್ನಿಯಿಂದ ಹೊರಬಿದ್ದಿವೆ.

ಗೆಲ್ಲುವ ತಂಡ ಯಾವುದೆಂದು ಊಹಿಸಲು ಕಷ್ಟವಾಗಿರುವ ವಿಶ್ವಕಪ್ ಇದು. ಏರಿಳಿತಗಳನ್ನು ಕಂಡ ಈ ಟೂರ್ನಿಯ ಕೊನೆಯ ಪ್ರಿಕ್ವಾರ್ಟರ್‌ಫೈನಲ್ ಪಂದ್ಯಗಳಲ್ಲಿ ಕೊಲಂಬಿಯಾ ಮತ್ತು ಫ್ರಾನ್ಸ್ ಜಯಗಳಿಸಿವೆ. ಅಂತಿಮ ಎಂಟರಲ್ಲಿರುವ ಇರುವ ಇತರ ತಂಡಗಳೆಂದರೆ– ಸ್ಪೇನ್, ನೆದರ್ಲೆಂಡ್ಸ್, ಜಪಾನ್, ಸ್ವೀಡನ್, ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್.

32 ತಂಡಗಳು ಭಾಗವಹಿಸಿದ್ದ ಈ ಟೂರ್ನಿಯಲ್ಲಿ ಕೆಳಕ್ರಮಾಂಕದ ತಂಡಗಳು ಗಮನಾರ್ಹ ಸಾಧನೆ ತೋರಿವೆ. ಈ ಹಿಂದೆ ವಿಶ್ವಕಪ್ ಗೆದ್ದ ತಂಡಗಳಲ್ಲಿ ಜಪಾನ್ ಹೊರತುಪಡಿಸಿ ಉಳಿದೆಲ್ಲಾ ತಂಡಗಳು ಗಂಟುಮೂಟೆ ಕಟ್ಟಿವೆ. ಜಪಾನ್ 2011ರಲ್ಲಿ ಚಾಂಪಿಯನ್ ಆಗಿತ್ತು.

ನಾಲ್ಕು ಬಾರಿಯ ಚಾಂಪಿಯನ್ ಹಾಗೂ ಹ್ಯಾಟ್ರಿಕ್ ವಿಶ್ವಕಪ್ ಗೆಲುವಿನ ಕನಸು ಕಂಡಿದ್ದ ಅಮೆರಿಕ, ಈ ಟೂರ್ನಿಯ ಇತಿಹಾಸದಲ್ಲೇ ಮೊದಲ ಬಾರಿ ಸೆಮಿಫೈನಲ್ ಹಂತಕ್ಕಿಂತ ಮೊದಲೇ ಹೊರಬಿದ್ದಿತು.

ಜಪಾನ್ ಫುಟ್‌ಬಾಲ್ ತಂಡದ ಆಟಗಾರ್ತಿಯರು –ಎಎಫ್‌ಪಿ ಚಿತ್ರ

ಎರಡು ಸಲದ ಚಾಪಿಯನ್ ಜರ್ಮನಿ, 1995ರ ಚಾಂಪಿಯನ್ ನಾರ್ವೆ, ಹಾಲಿ ಒಲಿಂಪಿಕ್ ಚಾಂಪಿಯನ್ ಕೆನಡಾ ಮತ್ತು ಬ್ರೆಜಿಲ್ ಹೊರಬಿದ್ದ ಇತರ ಪ್ರಬಲ ತಂಡಗಳು. ಬ್ರೆಜಿಲ್ 1995ರ ನಂತರ ಮೊದಲ ಬಾರಿ ಗ್ರೂಪ್ ಹಂತದಲ್ಲೇ ನಿರ್ಗಮಿಸಿದೆ.

'ಈ ಟೂರ್ನಿಯಲ್ಲಿ ಯಾವುದನ್ನೂ ಹಗುರವಾಗಿ ತೆಗೆದುಕೊಳ್ಳುವಂತಿರಲಿಲ್ಲ' ಎಂದು ಇಂಗ್ಲೆಂಡ್ ಕೋಚ್ ಸರಿನಾ ವೀಗ್ಮನ್ ಹೇಳಿದರು. ಇಂಗ್ಲೆಂಡ್ ತಂಡ, ಪ್ರಿಕ್ವಾರ್ಟರ್ ಫೈನಲ್‌ನಲ್ಲಿ ನೈಜೀರಿಯಾ ವಿರುದ್ಧ ಗೆಲ್ಲಲು 120 ನಿಮಿಷಗಳ ಕಾಲ ಬೆವರು ಹರಿಸಬೇಕಾಯಿತು. ಶೂಟೌಟ್‌ನಲ್ಲಿ ಫಲಿತಾಂಶ ನಿರ್ಧಾರ ಆಯಿತು.

'ಪಂದ್ಯಗಳು ರೋಚಕವಾಗಿದ್ದವು. ಇದರ ಅರ್ಥ ಈ ಆಟದಲ್ಲಿ ಮಹಿಳಾ ತಂಡಗಳೂ ಸಾಕಷ್ಟು ಸುಧಾರಣೆ ಕಂಡಿವೆ ಎಂಬುದು' ಎನ್ನುತ್ತಾರೆ.

ಕೊಲಂಬಿಯಾದ ಮಿಂಚಿನ ವೇಗದ ಆಟಗಾರ್ತಿ ಲಿಂಡಾ ಕೈಸಿಡೊ, ಸ್ಪೇನ್‌ನ ಮಿಡ್‌ಫೀಲ್ಡ್ ಆಟಗಾರ್ತಿ ಐತನಾ ಬೊನ್ಮತಿ ಮತ್ತು ಫ್ರಾನ್ಸ್‌ನ ಕೆ. ಡಿಯಾನಿ ಹೆಚ್ಚು ಗಮನ ಸೆಳೆದ ತಾರೆಗಳಾಗಿದ್ದಾರೆ. ಯಾರು ಗೆಲ್ಲಬಹುದು ಎಂದು ಹೇಳುವುದು ಕಷ್ಟದ ಕೆಲಸ.

16ರ ಘಟ್ಟದಲ್ಲಿ ನಾರ್ವೆಯನ್ನು ಹಿಮ್ಮೆಟ್ಟಿಸಿದ ಜಪಾನ್ ಈಗ ಟೂರ್ನಿಯನ್ನು ಗೆಲ್ಲುವ ನೆಚ್ಚಿನ ತಂಡ ಎನಿಸಿದೆ. ಅದು ಶುಕ್ರವಾರ ಕ್ವಾರ್ಟರ್‌ಫೈನಲ್‌ನಲ್ಲಿ ಸ್ವೀಡನ್ ವಿರುದ್ಧ ಆಡಲಿದೆ. ಅದೇ ದಿನ ಸ್ಪೇನ್ ಮತ್ತೊಂದು ಕ್ವಾರ್ಟರ್‌ಫೈನಲ್‌ನಲ್ಲಿ ನೆದರ್ಲೆಂಡ್ಸ್ ತಂಡವನ್ನು ಎದುರಿಸಲಿದೆ. 9ನೇ ಬಾರಿ ವಿಶ್ವಕಪ್ ಆಡುತ್ತಿರುವ ನೆದರ್ಲೆಂಡ್ಸ್ ತಂಡ ಲೀಗ್ ಹಂತದಲ್ಲಿ ಒಂದೂ ಪಂದ್ಯ ಸೋತಿರಲಿಲ್ಲ.

ಆತಿಥೇಯ ಆಸ್ಟ್ರೇಲಿಯಾ ತಂಡಕ್ಕೆ ಸ್ಯಾಮ್ ಕೆರ್ ಅನುಪಸ್ಥಿತಿ ಕಾಡದಂತೆ, ಮೆಟಿಲ್ಡಾಸ್ ಉತ್ತಮ ಪ್ರದರ್ಶನ ನೀಡಿದ್ದಾರೆ. ಈ ತಂಡ ಶನಿವಾರ ಕ್ವಾರ್ಟರ್‌ಫೈನಲ್‌ನಲ್ಲಿ ಫ್ರಾನ್ಸ್ ಸವಾಲು ಎದುರಿಸಬೇಕಾಗಿದೆ.

ಶನಿವಾರ ನಡೆಯುವ ಇನ್ನೊಂದು ಪಂದ್ಯದಲ್ಲಿ ಇಂಗ್ಲೆಂಡ್, ಕೊಲಂಬಿಯಾ ಎದುರು ಗೆಲ್ಲುವ ನೆಚ್ಚಿನ ತಂಡದಂತೆ ಕಾಣಿಸುತ್ತಿದೆ. ಇಂಗ್ಲೆಂಡ್ ಕೊನೆಯ 37 ಪಂದ್ಯಗಳಲ್ಲಿ 36ರಲ್ಲಿ ಅಜೇಯವಾಗಿದೆ. ಆದರೆ ಎಂಟು ತಂಡಗಳಲ್ಲಿ ಕಡಿಮೆ ರ‍್ಯಾಂಕಿಂಗ್ (25) ಹೊಂದಿರುವ ಕೊಲಂಬಿಯಾಕ್ಕೆ ಆಸ್ಟ್ರೇಲಿಯಾದ ಪ್ರೇಕ್ಷಕರ ಬೆಂಬಲವಂತೂ ಜೋರಾಗಿಯೇ ಇದೆ.